Est. 1906

ಸ್ವದೇಶಾಭಿಮಾನಿ

SWADESHABHIMANI

ಒಬ್ಬರು ಮನೆಯಲ್ಲಿ! ಒಬ್ಬರು ಸೆರೆಯಲ್ಲಿ!!

KANNADA ILLUSTRATED WEEKLY

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ. 325/1939

ಕ್ರಮ ಅಮಲ್ದಾರಿ ಅರ್ಜಿ ನಂಬ್ರ 391/1941

ರುಕ್ಮಿಣಿ ಯಾನೆ ರಮಾಬ್ಯಾ, ಗೋಪಾಳ ಕಂಪ್ಲಿದಾರ ಸ್ಥಿರವ್ಯ, ಮಂಗಳೂರು ತಾಲೂಕು ಬಡಗುಳಿಪಾಡಿ ಗ್ರಾಮದ ಗಂಜಿಮಠದಲ್ಲಿರುವವಳು.

—ಅರ್ಜಿದಾರಳು

ಎದ್ರಿ

ಪಾತುವಣಬಿ ಕೂಡಾ — ರೆಸ್ಪೊಂಡೆಂಟು

2ನೇ ರೆಸ್ಪೊಂಡೆಂಟು: ಮಂಗಳೂರು ತಾಲೂಕು ಮೂಡು ಪೆರ್ಮುರು ಗ್ರಾಮದಲ್ಲಿರುವ ಮಹಮ್ಮದ್ ಸಾಹೇಬರ ಮಗಳು ಜೈನಾಬಿ

ಮೇಲ್ಕಂಡ ವ್ಯಾಜ್ಯದಲ್ಲಿ ಡಿಕ್ರಿಕೊಂಡಿದ ಅರ್ಜಿದಾರಳು ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ದಾಖಲು ಮಾಡಿದ ಸದರಿ ಅರ್ಜಿಯು ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ಇದೇ 1941ನೇ ಇಸವಿ ನವಂಬರ ತಿಂಗಳ 25ನೇ ತಾರೀಕಿಗೆ ಇಟ್ಟಿರುತ್ತದೆ. ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಅದನ್ನು ಸದ್ರಿ ತಾರೀಕು 25-11-1941ಕ್ಕೆ ಪೂರ್ವಾಹ್ನ 10 ಗಂಟೆಗೆ ಸದರಿ ಕೋರ್ಟು ಮುಂದೆ ಖುದ್ದಾಗಿ ಬೇ ಯಾ ಕ್ರಮಬದ್ಧಕಾರ ಅಧಿಕಾರ ಹೊಂದಿದ ಸ್ನೇಹರ ಮೂಲಕವಾಗಲೀ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅರ್ಜಿಯು ನಿಮ್ಮ ಗೈರು ಹಾಜರಿನಲ್ಲೇ ನಿಕಪಕ್ಷವಾಗಿ ಮುಂದುವರಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

ಮಂಗಳೂರು, 5-11-1941. | H. Vasudeva Kamath ಅರ್ಜಿದಾರಳ ಕಡೆ ವಕೀಲ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 452/1941.
O. S. No. 174/1941.

Between:—

G. S. Patrao— *Petitioner*

B. Ramaya Punja son of B. Lakkanna Punja, Pleader Mangalore. } *Respondent*

To the Respondent

ಸದ್ರಿ ಡಿಕ್ರಿಯ ಅಮಲ್ದಾರಿ ಬಗ್ಗೆ ಅರ್ಜಿದಾರನು ಮೇಲಿನ ಕೋರ್ಟಿಗೆ ಅರ್ಜಿನಾದಿಕೊಂಡಿದ್ದಾನೆ. ಆದುದರಿಂದ ಅಮಲ್ದಾರಿಯು ಯಾಕೆ ನಡಿಸಕೂಡದು ಮತ್ತು ನಿಮ್ಮನ್ನು ಸಿವಿಲ್ ಜೈಲಿಗೆ ಯಾಕೆ ರವಾನಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1941ನೇ ನವಂಬರ ತಿಂಗಳು 12ನೇ ತಾರೀಕಿನಲ್ಲಿ ಸದ್ರಿ ಕೋರ್ಟು ಮುಂದೆ ನೀವು ಹಾಜರಾಗಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡೋಹಾಗುತ್ತದೆ.

(By order of the Court)

Mangalore 3-11-1941 | (sd) P. D'Souza B.A.B.L. (sd) L. C. Pais B.A.B.L Vakils for Petitioner.

ಇಂದಿನಿಂದಲೇ ಅವುಗಳಿಗೆ

ಓವಲ್ಟಿನ್

ಕೊಟ್ಟರೆ, ಅವು ಆರೋಗ್ಯವಾಗಿ ಬಲಶಾಲಿಗಳಾಗುವುವು

ಮಕ್ಕಳು ಬೆಳೆಯುವ ಸಮಯದಲ್ಲಿ ಅವುಗಳಿಗೆ ಶಕ್ತಿದಾದ ಮತ್ತು ಸರಿಯಾದ ಪೋಷಣೆಯ ಅವಶ್ಯಕತೆ ಇದೆ. ಈ ಬೆಳವಣಿಗೆಯ ಸಮಯ ಅವುಗಳು ಬೇಗನೇ ತನ್ನ ಶಕ್ತಿಯನ್ನು ವ್ಯಯಮಾಡುವುವು. ಅವು ಆರೋಗ್ಯವಂತರಾಗಿಯೂ ಬಲಶಾಲಿಗಳಾಗಿಯೂ ಇರಬೇಕಾದರೆ ಈ ವ್ಯಯವನ್ನು ಕೂಡಲೇ ಭರ್ತಿಮಾಡಬೇಕು.

ಈ ವ್ಯಯವಾದ ಶಕ್ತಿಯನ್ನು ಭರ್ತಿಮಾಡಿ ಬಲವನ್ನೂ, ಸುಖವನ್ನೂ, ಆರೋಗ್ಯವನ್ನೂ ಕೊಡಲು ದೇಹದಾರ್ಢ್ಯಕ್ಕೆ ಉತ್ತಮ ಪೋಷಣೆಯ ಗುಣವುಳ್ಳ 'ಓವಲ್ಟಿನ್' ಒಂದು ಅಮೂಲ್ಯ ಆಹಾರಪಾನೀಯವಾಗಿರುತ್ತದೆ.

'ಓವಲ್ಟಿನ್' ಒಂದು ಉತ್ತಮವಾದ ನೈಸರ್ಗಿಕ ಆಹಾರ—ನೆನೆಹಾಕಿ ಮಾಗಿದ ಬಾರ್ಲಿ, ಹಸಿಹಾಲಿನ ಕೆನೆ, ಅಮೂಲ್ಯ ನೈಸರ್ಗಿಕ ವಿಟಮಿನ್ನುಗಳು ಮತ್ತು ಇನ್ನಿತರ ಆಹಾರವಸ್ತುಗಳ ತಯಾರಿಕೆಯಾಗಿರುತ್ತದೆ. ಮಕ್ಕಳು ಇದಕ್ಕೆ ರುಚಿಯನ್ನು ಬಹಳವಾಗಿ ಮೆಚ್ಚುತ್ತವೆ. ಇತರ ನಕಲಿ ಪಾನೀಯಗಳನ್ನು ವರ್ಜಿಸಿರಿ. 'ಓವಲ್ಟಿನ್'ನ್ನೇ ಕೊಂಡುಕೊಳ್ಳಿರಿ.

'ಓವಲ್ಟಿನ್' ಒಂದು ಆಹಾರಪಾನೀಯವಾಗಿದ್ದು ಬಿಸಿಯಾ ತಣ್ಣಗಾಗಿ ಸೇವಿಸಬಹುದು. ಇದನ್ನು ತಯಾರಿಸುವ ಕ್ರಮವು ಬಹಳ ಸುಲಭ ಮತ್ತು ಕ್ರಮವು ವ್ಯತೀ ಒಂದು ಟಿನ್ನಿನೊಂದಿಗಿದೆ.

ಎಲ್ಲಾ

ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ

ಮಾರಲ್ಪಡುತ್ತದೆ

'ಓವಲ್ಟಿನ್'

'OVALTINE ಒಂದು ಶುದ್ಧೀಕರಿಸಿದ ಆಹಾರಪಾನೀಯವು"

ಡಿಸ್ಟ್ರಿಬ್ಯೂಟರ್ಸ್:—

ಗ್ರೆಹಮ್ಸ್ ಟ್ರೇಡಿಂಗ್ ಕೋ. [ಇಂಡಿಯಾ] ಲಿಮಿಟೆಡ್,

16 ಬೇಂಕ್ ಸ್ಟ್ರೀಟ್, ಬೊಂಬಾಯಿ, ಹಾಗೂ ಕಲ್ಕತ್ತಾ, ಮದ್ರಾಸು, ಕರಾಚಿ ಮತ್ತು ರಂಗೂನು.

OV/42/40

ಸಾದರ ಸ್ವೀಕಾರ

ಪೋರ್ತು ಆರ್ಯ ಸಮಾಜ

ಮುಂಬಯಿ

ಇದರ ೧೯೪೦ನೆಯ ಇಸವಿಗೆ ಅಂತ್ಯವಾಗುವ ಹದಿನಾಲ್ಕನೆಯ ವಾರ್ಷಿಕ ವರದಿಯನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಆರ್ಯ ಸಮಾಜ ತತ್ವ ಪ್ರಚಾರ ಮತ್ತು ಸಮಾಜ ಸೇವೆಯಲ್ಲಿ ಸರಕಾರ ಮುಂಬಯಿಯಂತಹ ದೂರದ ನಗರದಲ್ಲಿ ವಾಸಿಸುವ ದಕ್ಷಿಣ ಕನ್ನಡದ ಬಂಧುಗಳ ಈ ತರದ ಸಂಘ ಶಕ್ತಿ, ಸಮಾಜ ಸೇವೆ, ಧರ್ಮ ಬುದ್ಧಿಗಳನ್ನು ಕೊಂಡಾಡಲೇ ಬೇಕು. ಸಂಘದಲ್ಲಿ ವಿವಾಹ, ಉಪನಯನ, ಶುದ್ಧಿ ಸಂಸ್ಕಾರ ಮೊದಲಾದವುಗಳು ನಡೆದಿವೆ. ಸಂಘವು ಇದಕ್ಕಿಂತಲೂ ಹೆಚ್ಚಿನ ದೇಶಸೇವೆ ಮಾಡುವಂತೆ ಮಹಾಜನರು ಸೇರಿಸಾನಲೆಂದು ಹಾರೈಸುತ್ತೇವೆ.

ಭದ್ರಾವತಿ ಕಾರ್ಖಾನೆಯಲ್ಲಿ

ಮುಷ್ಕರ

ಭದ್ರಾವತಿಯ ಕಬ್ಬಿಣ ಮತ್ತು ಶಿಗಡ ಕಾರ್ಖಾನೆಗಳ ಸುಮಾರು ಏಳು ಸಾವಿರ ಮಂದಿ ಕೂಲಿಗಾರರು ಸಂಬಳ ಹೆಚ್ಚಿಸಬೇಕೆಂದು ಮುಷ್ಕರ ಹೂಡಿದ್ದಾರೆ.

ಹಿಂದು ಮಹಾಸಭೆಗೆ ಮುಂದಿನ

ಅಧ್ಯಕ್ಷರು

ಭಾಗಲಪುರದಲ್ಲಿ ಈ ವರ್ಷ ಸೇರುವ ಹಿಂದೂ ಮಹಾಸಭೆಯ ಅಧಿವೇಶನಕ್ಕೆ ಶ್ರೀಗಳಾದ ವಿ. ಡಿ. ಸಾವರ್ಕರ್, ಸರ್ ಮನ್ಮಥನಾಥ ಮುಖರ್ಜಿ ಮತ್ತು ಶ್ಯಾಮಪ್ರಸಾದ ಮುಖರ್ಜಿ ಇವರ ಹೆಸರುಗಳು ಸೂಚಿಸಲ್ಪಟ್ಟಿವೆ.

ಬಳ್ಳಾರಿಯಲ್ಲಿ ಕನ್ನಡ ಹೈ

ಸ್ಕೂಲ್

ಬಳ್ಳಾರಿಯಲ್ಲಿ ಕನ್ನಡ ಹೈಸ್ಕೂಲೊಂದನ್ನು ತೆರೆಯಲು ಬಹುದಿನದಿಂದ ಚಳವಳಿ ನಡೆದಿದ್ದು ಈಗ ಅದಕ್ಕೆ ಮುಹೂರ್ತ ಕೊರೆತದೆಯೆಂದು ತಿಂದು ಬರುತ್ತದೆ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

7—11—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೭—೧೧—೧೯೪೧]

ಸಮರಭೂಮಿಯ ಸಂಚಾರ

ಮೋಸ್ಕೋ ರಣಭೂಮಿಯಲ್ಲಿ ಎಲ್ಲಾ ಕಡೆಗೂ ಭೀಕರ ಕಾಳಗ ನಡೆಯುತ್ತಿದೆ. ಮೋಸ್ಕೋಕ್ಕೆ ವಾಯುಮಾರ್ಗದಲ್ಲಿ ಸುಮಾರು ನೂರು ಮೈಲುಗಳ ದೂರದಲ್ಲಿರುವ ಕೌಲಿನಿನ್ ನಗರವನ್ನು ರಶ್ಯನ್ ಸೈನ್ಯಗಳು ಪ್ರವೇಶಿಸಿ ಸಾವಿರಾರು ಜರ್ಮನರು ಸತ್ತುಬಿದ್ದಿರುವುದನ್ನು ನೋಡಿದರಂತೆ. ಮೊಝೈಸ್ಕಾ ಮಕ್ತ ಮಲಯೂರೊಸಾವೆಟ್ಟಗಳಲ್ಲಿಯೂ ರಶ್ಯನರ ಧಾಳಿಯು ಬಹಳ ಭದ್ರವಾಗಿದೆ. ಟೂಲಾದಲ್ಲಿ ಹಗಲಿರುಳು ಕಾಳಗ ನಡೆಯುತ್ತಲಿದೆ.

ದಕ್ಷಿಣದಲ್ಲಿ ಎಂದರೆ ಯುಕ್ರೇನಿನಲ್ಲಿ ಜರ್ಮನ್ನರು ಕಾರ್ಕೋವ್ ಮತ್ತು ಒರೆಲಗಳ ನಡುವೆ ಇರುವ ಕುರ್ಸ ಎಂಬ ಊರನ್ನು ವಶಪಡಿಸಿಕೊಂಡಿರುವರು. ಇದನ್ನು ರಶ್ಯನರು ಒಪ್ಪಿಲ್ಲ. ತಮ್ಮ ಸೈನ್ಯಗಳು ಡೊನೆಟ್ಟ್ ನದಿಯನ್ನು ದಾಟಿರುವುದಾಗಿ ಜರ್ಮನರ ಹೇಳಿಕೆಯಿದೆ. ಆದರೆ ಮುಂದೆ ಆ ಸೈನ್ಯಗಳು ಯಾವ ಕಡೆಗೆ ಹೋಗುವವೆಂದು ತಿಳಿದುಬರಲಿಲ್ಲ. ಬಹುಶಃ ಕ್ರಿಮಿಯದ ಧಾಳಿ ಮುಗಿಯವರೆಗೆ ಅವು ಮುಂದುವರಿಯಲಿಕ್ಕಿಲ್ಲವೆಂದು ಭಾವಿಸಲಾಗಿದೆ.

ಕ್ರಿಮಿಯದ ಪರಿಸ್ಥಿತಿ

ಕ್ರಿಮಿಯದ ಪರಿಸ್ಥಿತಿಯು ಭಯಾನಕವಿರುವುದೆಂದು ರಶ್ಯನರೇ ಒಪ್ಪಿಕೊಂಡಿದ್ದಾರೆ. ಪೆರಿಕೊಪದ ರಶ್ಯನ್ ಸೈನ್ಯಗಳನ್ನು ಛೇದಿಸಿಕೊಂಡು ಜರ್ಮನ್ ಸೈನ್ಯಗಳು ಕ್ರಿಮಿಯದಲ್ಲಿ ನಿರಾಂತಕವಾಗಿ ಮುನ್ನುಗ್ಗುತ್ತಿವೆ. ಇಲ್ಲಿದ್ದ ರಶ್ಯನ್ ಸೈನ್ಯವು ಎರಡು ಭಾಗವಾಗಿ ಹರಿದುಹೋಗಿದೆ. ಒಂದು ರಶ್ಯನ್ ಸೈನ್ಯ ದಕ್ಷಿಣದಲ್ಲಿ ಸೆಬಾಸ್ತಪೋಲಿನ ಕಡೆಗೂ ಇನ್ನೊಂದು ಕರ್ಪದ ಕಡೆಗೂ ಚಲಿಸಿರುವುದಾಗಿ ತಿಳಿಯುತ್ತದೆ. ಕರ್ಪವು ಪೂರ್ವ ಕ್ರಿಮಿಯದ ಒಂದು ಅತ್ಯುತ್ತಮ ಬಂದರು. ಅದನ್ನು ಸ್ವಾಧೀನಪಡಿಸಿಕೊಂಡ ಮೇಲೆ ಜರ್ಮನರು ಈ ಮಾರ್ಗವಾಗಿ ಕಾಕಸಿನ ಕಡೆಗೆ ಚಲಿಸುವರೆಂದು ಊಹಿಸಲಾಗಿದೆ.

ಮರ್ಮನ್‌ಸ್ಕದ ಕಡೆಗೆ

ಒಂದೆಡೆಯಲ್ಲಿ ಜರ್ಮನರು ತಮ್ಮ ಶಕ್ತಿ ಸರ್ವಸ್ವವನ್ನು ವ್ಯಯಿಸಿ ಕ್ರಿಮಿಯವನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿರುವಾಗ ಇನ್ನೊಂದೆಡೆಯಲ್ಲಿ ವಿಸ್ತರವಾದ ಜರ್ಮನರ ಸೈನ್ಯಗಳು ಒಂದೇಸವನೆ ಮರ್ಮನ್‌ಸ್ಕಿನ ಕೆಡೆಗೆ ಸಾಗಿವೆಯೆಂದೂ ಈಗ ಅಲ್ಲಿಂದ ಕೇವಲ ೧೪ ಮೈಲು ದೂರದಲ್ಲಿವೆಯೆಂದೂ ಜರ್ಮನ್ ಸುದ್ದಿ ಹೇಳುತ್ತದೆ. ನಿನ್ನೆಯ ವಿಮಾನಗಳು ಒಮ್ಮೆಲೇ ಮರ್ಮನ್‌ಸ್ಕಿನ ರೈಲ್ವೆಯ ಮೇಲೆ ಧಾಳಿ ನಡೆಸಿದುವು. ಕ್ರಾನ್ಸ್ನೊಡರ್ ಭಾಗದಲ್ಲಿಯೂ ಫಿರಂಗಿಗಳ ಘನಘೋರ ಗರ್ಜನೆಯು ಕೇಳಿ ಬರುತ್ತಿದೆಯೆಂದೂ, ಈಗಾಗಲೇ ಬಾಲ್ಟಿಕ್ ಸಮುದ್ರದಲ್ಲಿರುವ ರಶ್ಯನ್ ನೌಕೆಗಳು ಹ್ಯಾಂಗೊದ ಪತನವಾಗುವ ಮೊದಲೇ ಪಶ್ಚಿಮಕ್ಕೆ ಧಾವಿಸುತ್ತಿವೆಯೆಂದೂ ತಿಳಿದಿದೆ. ಸೆವಸ್ತಪೋಲ ಮತ್ತು ಕೆರ್ಚ್‌ಗಳಲ್ಲಿಯೂ ಜರ್ಮನ್ ಸೈನ್ಯಗಳು ಭರದಿಂದ ಮುನ್ನುಗ್ಗುತ್ತಿವೆಯೆಂದು ಸ್ವೀಡನ್ ಪತ್ರಿಕೆಯು ಹೇಳಿಕೆಯಾಗಿದೆ.

ಯುದ್ಧ ಮುಗಿವುದಿಲ್ಲ

ರಶ್ಯದ ರಣಭೂಮಿಯ ವಸ್ತುಸ್ಥಿತಿಯನ್ನು ಯೋಚಿಸಿದರೆ ಜರ್ಮನರು ಇಂದಿಲ್ಲ ನಾಳೆ ಒಂದು ವಿಜಯವನ್ನೇ ಸಂಪಾದಿಸುತ್ತಾ ಹೋಗುವುದನ್ನು ಪರ್ಯಾಲೋಚಿಸಿದರೆ ಆಶೆಗಿಂತ ನಿರಾಶೆಯೇ ಹೆಚ್ಚುತ್ತಿದೆ. ಕಳೆದ ನಾಲ್ಕು ತಿಂಗಳಲ್ಲಿ ಜರ್ಮನರು ಕೊಟ್ಟ ಹೋರಾಟದಿಂದ ರಶ್ಯವು ಜರ್ಜರಿತವಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಜರ್ಮನರು ಮೋಸ್ಕೋವನ್ನು ಕೈವಶ ಪಡಿಸಿಕೊಳ್ಳಬಲ್ಲರೆಂದು ಊಹಿಸಬಹುದು. ಕಾಕಸಸಿನಲ್ಲಿಯೂ ಮಹತ್ವದ ಪ್ರದೇಶಗಳನ್ನು ಅವರು ಸ್ವಾಧೀನಗೊಳಿಸಬಹುದು. ಯುರಲ್ ಪರ್ವತ ಪ್ರದೇಶದಲ್ಲಿ ರಶ್ಯನರು ಸೈನ್ಯಸಂಗ್ರಹಣೆಯಾಗುತ್ತಿರುವರೆಂದು ಸುದ್ದಿಯಿದೆ. ಸಂಚಿವರ್ಷಿಕ ಯೋಜನೆಯಂತೆ ಅಲ್ಲಿ ಕಾರ್ಖಾನೆಗಳಾಗಿದ್ದು ಹಗಲಿರುಳು ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಿರುವರೆಂದು ತಿಳಿದಿದೆ. ಇದರಿಂದ ಮೋಸ್ಕೋ ರಶ್ಯನರ ಕೈಬಿಟ್ಟರೂ ಯುದ್ಧವು ಬಿಡದೆ ಸಾಗುವುದೆಂಬುದಕ್ಕೆ ಸಂಶಯವಿಲ್ಲ. ಅಂತೂ ರಶ್ಯ ಜರ್ಮನ್ ಯುದ್ಧವು ಬೇಗನೇ ಕೊನೆಗಾಣುವ ಸಂಭವವೇನೂ ತೋರಲಾರದು.

ಶಕ್ತಿ ಮತ್ತು ಆರೋಗ್ಯ

ಬಲ ಸಂವರ್ಧನೆಯ ರಹಸ್ಯ

ಮನುಷ್ಯನ ಜೀವನದಲ್ಲಿ ಶಕ್ತಿ ಆರೋಗ್ಯ ಮತ್ತು ದೀರ್ಘಾಯುಷ್ಯವನ್ನು ಕರುಣಿಸುವ ಔಷಧಿಗಳು ಇವು ಇಂದಿನ ಬೇಕಾದುದು ಅವಶ್ಯ. ಅನೇಕ ವರ್ಷಗಳ ಅನುಭವದಿಂದ ಪಂಡಿತ ವಿ. ಗೋಪಾಲಾಚಾರ್ಯರವರ 'ಜೀವಾಮೃತ' ವು ಶಕ್ತಿ ಆರೋಗ್ಯಗಳನ್ನುಂಟುಮಾಡುವ ಸತ್ವಗಳಿಂದ ಕೂಡಿರುವುದೆಂದು ಪ್ರಸಿದ್ಧಿಯಾಗಿ ಪಡೆದಿದೆ. ಇದು ನರಗಳ ಶಕ್ತಿ ಹೆಚ್ಚಿಸುತ್ತದೆ. ಕಾರ್ಯಶಕ್ತಿ ಮತ್ತು ಮಾನಸಿಕ ಆರೋಗ್ಯವನ್ನು ಇದು ಹೆಚ್ಚಿಸುತ್ತದೆ. ಹೀಗಾಗಿ ಇದು ಆರೋಗ್ಯವನ್ನುಂಟು ಮಾಡಿ ಇದೀ ಶರೀರದಲ್ಲಿ ನವಚೈತನ್ಯವನ್ನು ಕುಂಬುತ್ತದೆ. ಜೀವಾಮೃತವು ಆತ್ಯುಚ್ಚ ವನೌಷಧಿಗಳಿಂದ ಅನೇಕ ವರ್ಷಗಳ ಸಂಶೋಧನೆಯ ಬಳಿಕ ತಯಾರಿಸಿದ ಉತ್ತಮ ದಿವ್ಯೌಷಧಿಯಾಗಿದೆ.

ಜೀವಾಮೃತ

ಚೈತನ್ಯ ಶಕ್ತಿ ಮತ್ತು ಆರೋಗ್ಯಗಳಿಗೆ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುವುದು.

ತಯಾರಿಸುವವರು: ಆಯುರ್ವೇದಾಶ್ರಮಂ, ಮದರಾಸು.

ಸ್ಟಾಕಿಸ್ಟ್: ಪೊಯ್ಯಲ್ ಸ್ಟೋರ್ಸ್, ರಥಬೀದಿ ಮಂಗಳೂರು.

The Canara Industrial & Banking Syndicate, Ltd.

Head Office: UDIPI

NOTICE

Rates of interest on Fixed Deposits which are received on and from 1st Nov. 1941 have been reduced as follows:—

For 3 to 5 months	2% p. a.
for 6 to 11 months	2½% p.a.
for 11 to 23 months	3% p. a.
for 24 months	3½ p.a.
5 years with option to the Syndicate to return the deposits at any time by giving 3 months' notice.	4%.
SHORT TERM: Deposits with-drawable by 15 days' notice at any time.	1½%.

Interest Rates on Current and Savings Bank Accounts have also been reduced by half a percent with effect from 1st November, 1941.

T. M. A. PAI,
Managing Director.

ಸ್ವದೇಶಾಭಿಮಾನಿ

ತಾರೀಕು 7—11—1941

ನಿಶ್ಚಲ ನಿರ್ಧಾರ

ಗಾಂಧಿಜಿಯವರು ಒಂದು ದೀರ್ಘವಾದ ಪ್ರಕಟಣೆ ಕೊಟ್ಟು, ಸಂಶಯಾತ್ಮರ ಸಂದೇಹವನ್ನು ಪರಿಹರಿಸಿದ್ದಾರೆ; ಸತ್ಯಾಗ್ರಹದ ವಿಷಯದಲ್ಲಿ ತಮ್ಮ ನಿಶ್ಚಲ ನಿರ್ಧಾರವನ್ನು ಸಾರಿ ಹೇಳಿದ್ದಾರೆ. ಇತ್ತೀಚೆಗೆ ವರ್ಧಾದಲ್ಲಿ ಸಕ್ಯಮೂರ್ತಿ ರಾಜಾಜಿ ಭೂಲಾಭಾಯಿ ಮೊದಲಾದ ಮುಖಂಡರು ಕೊಡಿದ್ದರಿಂದ ಹಲವರಿಗೆ, ಗಾಂಧಿಜಿಯವರು ಸತ್ಯಾಗ್ರಹವನ್ನು ಏಲ್ಲಿಸಿ ಪಾರ್ಲಿಮೆಂಟರಿ ಕಾರ್ಯಕ್ರಮಕ್ಕೆ ಒಪ್ಪಿಗೆ ಕೊಡುವರೆಂಬ ಆಶೆ ಮೂಡಿದ್ದು ಅಂಥವರಿಗೆ ಇಂದು ಕೇವಲ ನಿರಾಶೆಯುಂಟಾಗಿದೆ.

ಗಾಂಧಿಜಿ ದೂರದರ್ಶಿಯಾದ ರಾಜನೀತಿಜ್ಞ. ಇಂದಿನ ಪರಿಸ್ಥಿತಿಯು, ಸತ್ಯಾಗ್ರಹವನ್ನು ಆರಂಭಿಸುವ ದಿನ ಪರಿಸ್ಥಿತಿಗಿಂತ ಏನೇನೂ ಭಿನ್ನವಾಗಿಲ್ಲ. ಬ್ರಿಟಿಷ್ ಪ್ರಭುತ್ವವಾದಿಗಳ ಮನೋಗತವೂ ಹೊನ್ನೆ ಅಟ್ಲಾಂಟಿಕ್ ಘೋಷಣೆಯ ಕುರಿತು ಚರ್ಚಿಲರು ಮಾಡಿದ ವ್ಯಾಖ್ಯಾನದಿಂದ ಸ್ಪಷ್ಟವಾಗಿದೆ. ಯಾವ ಸತ್ಯಾಗ್ರಹವು ಭಾಷಣ ಸ್ವಾತಂತ್ರ್ಯದ ಸಲುವಾಗಿ ಆರಂಭಿಸಲ್ಪಟ್ಟಿತೋ ಅದು ಭಾಷಣ ಸ್ವಾತಂತ್ರ್ಯ ಮಾತ್ರವಾದರೂ ಸಿಗದೆ ಕೊನೆಗಾಣುವುದರಲ್ಲಿ ಅರ್ಥವಿಲ್ಲವೆಂದು ಗಾಂಧಿಜಿ ಹೇಳುವುದು ಸಂಪೂರ್ಣ ಸತ್ಯವಿದೆ. ಧೀರ ನಿರ್ಧಾರವಾಗಿದೆ!

ಗಾಂಧಿಜಿ ಸತ್ಯಾಗ್ರಹದ ವಿಷಯದಲ್ಲಿ ಇಷ್ಟು ಆಸಕ್ತರಿದ್ದರೂ ಅವರು ಯಾರನ್ನೂ ಆಗ್ರಹ ಪಡಿಸುವುದಿಲ್ಲ. ಸಹಜವಾಗಿ ನೋಡಿದರೆ ಅವರು ಜನರ ಉತ್ಸಾಹವನ್ನು ಪ್ರತಿಬಂಧಿಸುತ್ತಿದ್ದಾರೆ. 'ನಿಯಂತ್ರಿತ ರೀತಿಯಲ್ಲಿಯೇ ಸತ್ಯಾಗ್ರಹವನ್ನು ಸಾಗಿಸುತ್ತಿದ್ದಾರೆ. ಆದ್ದರಿಂದ ಸತ್ಯಾಗ್ರಹವಾದಲಾರದ ಕಾಂಗ್ರೆಸಿನವರು ರಚನಾತ್ಮಕ ಕಾರ್ಯದಲ್ಲಿ ಮಗ್ನರಾಗಿ ದೇಶದ ಅಭ್ಯುದಯ ಸಾಧಿಸಬೇಕೆಂದು ಅವರು ಹಾರೈಸುತ್ತಾರೆ. ಪಾರ್ಲಿಮೆಂಟರಿ ಕಾರ್ಯಕ್ರಮವಾದರೂ ರಚನಾತ್ಮಕ ಕಾರ್ಯಕ್ರಮವಿಲ್ಲದಿದ್ದರೆ ಬರಿಯ ನೈಹಸನವೆಂದು ಗಾಂಧಿಜಿ ತಿಳಿಸಿದ್ದಾರೆ. ಕಾಂಗ್ರೆಸಿನವರು ಇಪ್ಪರಿಂದ ಸ್ವಪ್ನವಾದ ಹಾದಿಯನ್ನು ಹುಡುಕಬಹುದಾಗಿದೆ. ಗಾಂಧಿಜಿ ಅಭಿಪ್ರಾಯ ನಡುವಂತೆ, ಪರಿಸ್ಥಿತಿ ಇದೇ ರೀತಿಯಿದ್ದರೆ ಯುದ್ಧಾನಂತರವಾದರೂ, ಮಹಾ ರೂಪದಿಂದ ಸಾಗಲಿರುವ ಭಾರತದ "ಧರ್ಮ ಯುದ್ಧ"ಕ್ಕೆ ಇಂದಿನ ಕಾರ್ಯಗಳು ಪೂರ್ಣಸಿದ್ಧತೆ ಗಳಾಗುವವು.

ಗಾಂಧಿಜಿ ಲೋಕಕ್ಕೆ ಹೊಸ ಸಂದೇಶ ಸಾರುತ್ತಿದ್ದಾರೆ. ಬ್ರಿಟಿಷರೊಡನೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವಲ್ಲಿಯೂ, ಇಂದು ಬ್ರಿಟಿಷರಿಗೆ ಕೊಂದರೆಯಾಗಬಾರದೆಂದು ಅವರು ಹಾತೊಸಿ ಕೆಲಸ ಮಾಡುತ್ತಾರೆ. ಗಾಂಧಿಜಿಯವರಿಗೆ ಹೇಳಿಕೆಯಲ್ಲಿ ಸಂಶಯಾಕುಲರಾದವರ ಸ್ವಪ್ನವಾದ ಉತ್ತರವಿದೆ. ಗಾಂಧಿಜಿಯನ್ನು ತಿಳಿದುಕೊಳ್ಳ ಬಯಸುವವರಿಗೆ ನೇರವಾದ ದಾರಿಯಿದೆ. ಭಾರತದ ಭವ್ಯ ಭವಿಷತ್ತಿನ ಕುರಿತು ಗಾಂಧಿಜಿ ಕುಂಬಾ ಆಶಾಪೂರ್ಣರಾಗಿರುವರು. ಅವರ ಹಸ್ತಗಳನ್ನು ಬಲಗೊಳಿಸುವುದರಿಂದ ಭಾರತವು ಶಾಂತ ಅಹಿಂಸಾ ಮಾರ್ಗದಿಂದಲೇ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಸಾಧ್ಯವಿದೆ. ಭಾರತದ ಇಂದಿನ ಪರಿಸ್ಥಿತಿಗಳನ್ನು ಚೆನ್ನಾಗಿ ಅರಿತುಕೊಂಡು, ಅಂತರ್ ರಾಷ್ಟ್ರೀಯ ಗೊಂದಲವನ್ನು ಕಣ್ಣಾರೆ ಕಂಡು ಮಹಾತ್ಮರು ಭಾರತೀಯರಿಗೆ ದಿವ್ಯ ಮಾರ್ಗವನ್ನು ತೋರಿಸಿದ್ದಾರೆ: ಶಾಂತಿ ಅಹಿಂಸೆಗಳಿಂದ ಗಳಿಸಿದ ಸ್ವಾತಂತ್ರ್ಯವು ಸಿದ್ಧವಾಗಿ, ಲೋಕ ಕಲ್ಯಾಣ ಸಾಧಕವಾಗುವುದೆಂದು ಅವರು ಹಾರೈಸಿದ್ದಾರೆ.

ಜವಾಹರಲಾಲ ನೆಹರು

ನವೆಂಬರ್ ನಾಲ್ಕನೆಯ ತಾರೀಕಿಗೆ ವೇದಿಕ ಜವಾಹರಲಾಲ ನೆಹರುಗಳ ನಾಲ್ಕು ವರ್ಷಗಳ ಬಂಧನದ ಅವಧಿಯಲ್ಲಿ ಒಂದು ವರ್ಷವು ಸಂದಿತು! ಇಂದಿನ ಭಾರತದ ಹೆಚ್ಚಾಗಿ ತರುಣ ಭಾರತದ ಏಕಮಾತ್ರ ಪ್ರತಿನಿಧಿಯಾಗಿರುವ ನೆಹರು ಇನ್ನು ಮೂರು ವರ್ಷಗಳ ತನಕ ಸೆರೆಮನೆಯ ಕತ್ತಲು ಕೋಣೆಯಲ್ಲಿಯೇ ಮರಿಯಾಗಿರ ಬೇಕಾಗಿದೆ! ನೆಹರುವನ್ನು ಭಾರತದ ಜನತೆಯ ದೃಷ್ಟಿಯಿಂದ ಮರೆ ಮಾಡಿದ್ದರೂ ಜನತೆಯ ಭಾವನೆಯ ಕಣ್ಮನಗಳಲ್ಲಿ ನೆಹರುವಿನ ವೀರ ಧೀರ ಮೂರ್ತಿಯೇ ನೆಲಸಿದೆಯೆಂಬುದನ್ನು ಆಂಗ್ಲೇಯರು ಮಾತ್ರವಲ್ಲ ವಿದೇಶೀಯರೆಲ್ಲರೂ ಅರಿತಿರಬೇಕು.

ನೆಹರುವನ್ನು ಕಳೆದ ಒಂದು ವರ್ಷದ ಹಿಂದೆ ಬಂಧಿಸಿದರೆಂಬ ಸುದ್ದಿ ಹರಡಿದಾಗ ದೇಶ ಸರ್ವತ್ರ ಉಂಟಾದ ಕಳವಳವೇ ಅದರಲ್ಲಿ ಜನತೆಗಿರುವ ಅತ್ಯಂತ ಗೌರವಕ್ಕೆ ಸಾಕ್ಷಿಯಾಗಿದೆ. ಇಂದಿನ ಭಾರತ ಮಂತ್ರಿ ಅಮೆರಿಯವರು ಹುಟ್ಟಿದ ಊರಾದ ಗೋರಖ್‌ಪುರದಲ್ಲಿ ಅವರಿಗೆ ನಾಲ್ಕು ವರ್ಷಗಳ ನಿರ್ದಯ ಶಿಕ್ಷೆಯು ವಿಧಿಸಲ್ಪಟ್ಟಿತು; ಆ ಸುದ್ದಿ ಕೇಳಿದಾಗ ದೇಶಕ್ಕೆ ದೇಶವೇ ಮುಮ್ಮಲ ಮರುಗಿತ್ತು! ಅದರ ಫಲವಾಗಿ ಸತ್ಯಾಗ್ರಹಾಂದೋಲನವೂ ಹೇಗೆಪ್ರಬಲಗೊಂಡಿತೆಂಬುದನ್ನು ರಾಷ್ಟ್ರದ ಹೋರಾಟವನ್ನು ಸರೀಕ್ಷಿಸಿದವರೆಲ್ಲರೂ ಬಲ್ಲರು. ನೆಹರುಗಳ ಬಂಧನವು ಬಹಳ ನಿರ್ದಯವಾದುದೆಂಬ ವಿಷಯ ಪಾರ್ಲಿಮೆಂಟಿನಲ್ಲಿಯೂ ಪ್ರಶ್ನೆಗಳು ಹಾಕಲ್ಪಟ್ಟವು!

ನೆಹರುಗಳನ್ನು ವಿನಾಯಿತಿ ಮಾಡದೆ ಬ್ರಿಟಿಷ್ ಸರಕಾರವು ಭಾರತದ ಸಹಕಾರ ಪಡೆಯುವು ಇಂದಿಗೆ ತೀರಾ ಅಸಾಧ್ಯ. ನೆಹರುವಿನ ಗಂಭೀರ-ಗೌರವ ವ್ಯಕ್ತಿತ್ವ, ಅತುಲ ಸ್ವಾರ್ಥತ್ಯಾಗ, ಎಲ್ಲದಕ್ಕಿಂತಲೂ ಹೆಚ್ಚಾಗಿ ಅವರ ನಿಷ್ಕಲ್ಮಷ ಹೃದಯ, ಅನ್ಯಾಯವನ್ನು ಕಟುವಾಗಿ ಖಂಡಿಸುವ ಗಂಡೆದೆ ಇವುಗಳು ಭಾರತೀಯರ ಮನವನ್ನು ಸೂರೆಗೊಂಡಿವೆ! ನಾಜೀವಾದವನ್ನು ನಿರ್ಮೂಲವಾಗಿ ಎದುರಿಸುವ ನೆಹರುವನ್ನು ಸೆರೆಮನೆಯೊಳಗೆ ಸೇರಿಸುತ್ತಾ ಬ್ರಿಟನು ನಾಜಿಗಳಿದಿರು ಹೋರಾಟ ನಡೆಸುವುದೂ ಭಾರತಕ್ಕೆ ಅರ್ಥವಾಗಿ ಲಾರದ ವಿಷಯ. ಉಜ್ವಲ ಸದೃತಾವಾದಿಯಾದ ನೆಹರುವನ್ನು ಬಂಧನದೊಳಗಿಡುತ್ತ ಸನ್ಮತಾವಾದೀ ರಾಷ್ಟ್ರವಾದರಕ್ಷಣೆಯನ್ನೂ ಬ್ರಿಟನು ಜತೆಗೊಂಡಿದ್ದರೆ ಅದೂ ಭಾರತೀಯರಿಗೆ ಅರ್ಥವಾದಲಾರದಾಗಿದೆ. ನೆಹರುಗಳನ್ನು ಹಾಗೂ ಉಳಿದ ರಾಜಕೀಯ ಕೈದಿಗಳನ್ನು ಬೇಗನೇ ಬಿಡುಗಡೆ ಮಾಡುವುದು ಬ್ರಿಟನಿನ ಹೃದಯ ಪರಿವರ್ತನೆಗೆ ಸಾಕ್ಷಿಯಾಗುವುದು. ಬ್ರಿಟನ್ ತನ್ನ ಯುದ್ಧಕ್ಕೆ ಭಾರತದ ಬೆಂಬಲವನ್ನು ದೊರಕಿಸುವ ದಾರಿಯೂ ಆದಾಗಿದೆ.

ಸಾರ್ವಜನಿಕ ವಿಶ್ವಾಸವೇ
"ಓರಿಯಂಟಲ್"ನ್ನು
ಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಜಾರಿಯಲ್ಲಿರುವ ಪೋಲಿಸಿಗಳು	31-12-39	ರೂ. 79½ ಕೋಟಿಗಿಂತ ಮಿಕ್ಕಿದೆ
ಫಂಡುಗಳು		ರೂ. 25½ ,,
ವಾರ್ಷಿಕ ಆದಾಯ		ಸುಮಾರು ರೂ. 4¾ ಕೋಟಿಗೆ

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವಪ್ರೊಸ್ಪೆಕ್ಟಿಸಿಗೆ ದಯವಾಡಿ ಈ ಕೆಳಗಿನವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್.

ಎ ದ ಇನ್ಸ್‌ಪೈರ್

ಸೌತ್ ಪೆರೇಡ್, ಬೆಂಗಳೂರು. | ಥ ವಾ | ಕಾರ್ನಾರ್ಡ್ ಸದಾಶಿವರಾವ್ ರೋಡ್, ಮಂಗಳೂರು.

ಹೆಡ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

The Canara Banking Corporation Ltd.
(Incorporated in British India)
Estd. 1906.
LOANS, CASH CREDITS & OVERDRAFTS AGAINST APPROVED SECURITIES GRANTED AT EASY RATES OF INTEREST & ATTRACTIVE TERMS.
Banking business of every description transacted.
Full particulars can be had from any of our Branches.

Notice of Holiday
Wednesday, the Nineteenth of November, 1941 being the Founder's Day will be observed as a holiday by our branches in South Kanara.
CANARA BANK LIMITED
Estd: 1906.

"ಸತ್ಯಾಗ್ರಹ ಚಳವಳಿಯು ವ್ಯವಸ್ಥೆಯುಂತೆ ನಡೆಯುತ್ತಿದೆ. ಬದಲಾವಣೆ ಸೂಚಿಸುವ ಅವಶ್ಯವೇನೂ ಇಲ್ಲ. ಯುದ್ಧ ನಡೆಯುತ್ತಿರುವ ಕಾಲದಲ್ಲಿ ಸಾಮೂಹಿಕ ಚಳವಳಿ ನಡೆಸುವ ಪ್ರಶ್ನೆಯೇ ಇಲ್ಲ"

ಎಂದು ಸತ್ಯಾಗ್ರಹದ ಕುರಿತು ಮಹಾತ್ಮಾ ಗಾಂಧಿಯವರು ಒಂದು ದೀರ್ಘ ಹೇಳಿಕೆಯನ್ನು ಪ್ರಕಟಿಸಿರುತ್ತಾರೆ. ಇತ್ತೀಚೆಗೆ ವರ್ಧಾದಲ್ಲಿ ಕಾಂಗ್ರೆಸ್ ನುಖಂಡರು ಗಾಂಧಿಜಿಯೊಡನೆ ನಡೆಸಿದ ಮಾತುಕತೆಗಳ ಪರಿಣಾಮವಾಗಿ ಈ ಹೇಳಿಕೆ ಹೊರಡಿಸಲಾಗಿದೆ

ಅದರ ಸಾರಾಂಶ ಹೀಗಿದೆ.

ಬೊಂಬಾಯಿ ನಿರ್ಣಯವನ್ನು ಮನಃಪೂರ್ವಕವಾಗಿ ಒಪ್ಪದವರು ತಮ್ಮ ಸಂದೇಹಗಳನ್ನು ಹೊರಗೆಡವಿ ಈಗ ಮುಂದೆ ಬಂದಿದ್ದಾರೆ. ಸಾರ್ವಜನಿಕರು ಇದನ್ನು ತಿಳಿಯಬೇಕು. ಸಂದೇಹವಿಲ್ಲದ ಕೆಲವರು ತಾವಿಟ್ಟುಕೊಂಡಿದ್ದ ರಾಜಕೀಯ ಅಭಿಪ್ರಾಯಗಳಲ್ಲಿ ಈಗ ಹೆಚ್ಚಿನ ದೃಢನಂಬಿಕೆಯನ್ನೇ ವ್ಯಕ್ತಗೊಳಿಸಿದ್ದಾರೆ

ಬೊಂಬಾಯಿ ನಿರ್ಣಯವೇ ಸರಿಯೆಂದು ನಾನು ಭಾವಿಸುತ್ತೇನೆ' ಎಲ್ಲದಿದ್ದರೆ ಈ ಸತ್ಯಾಗ್ರಹ ಚಳವಳಿದ ಮುಖಂಡತ್ವವನ್ನು ನಾನು ವಹಿಸುತ್ತಿರಲಿಲ್ಲ. ಅಹಿಂಸಾಯುತ ಚಳವಳಿದ ದೊಡ್ಡ ತತ್ವವೇನೆಂದರೆ ಇನ್ನೊಬ್ಬರಿಗೆ ಹಾನಿಮಾಡದಿರುವುದು. ಚಳವಳಿಕ್ಕೂ ಅದು ಬೆಳೆಯಬಹಾಗುತ್ತದೆ

ಕೆಲವು ಆಕ್ಷೇಪಣೆಗಳು

ನನಗೆ ಕೆಲವು ಆಕ್ಷೇಪಣೆಗಳು ಬಂದಿವೆ.

೧. ಜನರ ಉತ್ಸಾಹ ಕಡಿಮೆಯಾಗಿದೆ. ೨. ಸತ್ಯಾಗ್ರಹಕ್ಕೆ ಕಡಿಮೆ ಜನರು ಮುಂದೆ ಬರುತ್ತಾರೆ. ೩ ಬಿಡುಗಡೆ ಹೊಂದಿದವರು ಮತ್ತೆ ಬಂಧನಕ್ಕೊಳಗಾಗಲು ಇಷ್ಟಪಡುವುದಿಲ್ಲ. ೩. ಸತ್ಯಾಗ್ರಹಿ ಕೈದಿಗಳಲ್ಲಿ ಶಿಸ್ತು ವ್ಯವಸ್ಥೆಗಳಿಲ್ಲ. ಅವರಲ್ಲಿ ಕೆಲವರು ಸತ್ಯ ಅಹಿಂಸೆಗಳನ್ನು ಗಮನಿಸುವುದಿಲ್ಲ . ೫ 'ಎ' ತರಗತಿ ಕೈದಿಗಳ ಕಷ್ಟವು ಅಸಾಧ್ಯವಾದುದು; ಅವರಿಗೆ ಬಹು ಕೆಟ್ಟ ಆಹಾರವನ್ನು ಸೆರೆಮನೆಯಲ್ಲಿ ಮನೆಮಠದಲ್ಲಿ ಕೊಡುತ್ತಾರೆ. ಬಹುಮಂದಿ ಸತ್ಯಾಗ್ರಹಿ ಕೈದಿಗಳ ಆರೋಗ್ಯವು ಕೆಟ್ಟುಹೋಗಿದೆ ೬. ಸತ್ಯಾಗ್ರಹದಿಂದ ಸರಕಾರಕ್ಕೆತ್ತೊಂಭರೆ ಕೊಡುವುದಿಲ್ಲವೆಂದು ಹೇಳಲಾಗಿದೆ. (ಆದರೆ ಸರಕಾರದವರು ಈ ವಿಷಯವನ್ನು ಗಮನಿಸಿಲ್ಲ ಆದ್ದರಿಂದ ಚಳವಳಿವನ್ನು ಜೋರಾಗಿ ನಡೆಸಬೇಕು. ೭. ಕಾಂಗ್ರೆಸಿನಲ್ಲಿ ಹೋರಾಟದ ಸತ್ವವೇ ಇಲ್ಲದಂತಾಗಿದೆ. ಯಾವ ಚಟುವಟಿಕೆಗಳೂ ಕಂಡುಬರುವುದಿಲ್ಲ; ಈ ಕಾರಣಗಳಿಂದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕು. ೮. ಕಾಂಗ್ರೆಸು ಪಾರ್ಲಿಮೆಂಟರಿ ಕಾರ್ಯಕ್ರಮವು ಅನುಸರಿಸಬೇಕು. ಮಂತ್ರಿಮಂಡಲಗಳು ಅಧಿಕಾರ ಅಧಿಕಾರ ಸ್ವೀಕಾರ ಮಾಡಬೇಕು. ಪೂನಾ ನಿರ್ಣಯವನ್ನು ಮತ್ತೆ ಜಾರಿಗೆ ತರಬೇಕು ಎಂದು, ಆಕ್ಷೇಪಣೆ ಮಾಡುವವರು ನನಗೆ ತಿಳಿಸಿದ್ದಾರೆ.

ಆಕ್ಷೇಪಣೆಗಳಿಗೆ ಉತ್ತರ

ಆಕ್ಷೇಪಣೆಗಳಿಗೆ ಉತ್ತರವಾಗಿ ನಾನು ಹೇಳುವುದಿಷ್ಟೆ:—

೧ ಪ್ರದರ್ಶನ ಮತ್ತು ಸಭೆಗಳಿಂದ ಆರಂಭದಲ್ಲಿ ಸ್ವಲ್ಪ ಕಾರ್ಯಸಾಧನೆಯಾಗಬಹುದು ೨. ಹೋರಾಟ ಭಾವನೆಯ ಚಟುವಟಿಕೆಗಳಿಂದ ಹಿಂಸಾ ಮಾರ್ಗವನ್ನು ಹಿಡಿಯುವ ಅಪಾಯವಿದು ೩. ವೈಯಕ್ತಿಕ ಸತ್ಯಾಗ್ರಹವಾದ್ದರಿಂದ ಕಮ್ಮಿಯಾಗಿಯೇ ಸತ್ಯಾಗ್ರಹಿಗಳು ಮುಂದೆ ಭರುತ್ತಾರೆ ೪. ಸಾಮೂಹಿಕ ಸತ್ಯಾಗ್ರಹಕ್ಕೆ ಪರಿಸ್ಥಿತಿ ಅನುಕೂಲವಾಗಿಲ್ಲ ೫ ಸಾಮೂಹಿಕ ಸತ್ಯಾಗ್ರಹ ನಡೆಸಿದರೆ ಈಗ ಬ್ರಿಟಿಷರಿಗೆ ತೊಂದರೆ ಕೊಟ್ಟಂತೆ ಆಗುತ್ತದೆ. ಇದರಿಂದ ಹಿಂಸಾಕಾರ್ಯಗಳು ನಡೆಯುತ್ತವೆ. ೬. ಸಾಮೂಹಿಕ ಸತ್ಯಾಗ್ರಹ ನಡೆಯಬೇಕಾದರೆ ಜಾತೀಯ ಸೌಹಾರ್ದತೆಯೂ ಏಕಮತ್ಯವೂ ಅವಶ್ಯ. ೭. ಕೆಲವು ಸತ್ಯಾಗ್ರಹಿಗಳಿಗೆ ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದನಂತರ ಮತ್ತೆ ಸೆರೆಮನೆಗೆ ಹೋಗಲು ಮನಸ್ಸಿಲ್ಲದಿರಬಹುದು. ತ್ಯಾಗ ಮತ್ತು ಕಷ್ಟಸಹಿಷ್ಣುತೆಗಳಲ್ಲಿ ಬಹು ಕಷ್ಟಪಡದೆ ಸ್ವಾತಂತ್ರ್ಯವು ಸಿಗುವುದಿಲ್ಲ. ೮. ಆದ್ದರಿಂದ ಎಷ್ಟು ಸಾಧ್ಯವಾದರೂ ಸೆರೆಮನೆಗೆ ಹೋಗಲು ಹಿಂಜರಿಯದಿದ್ದರೇ ಈ ಅಹಿಂಸಾ ಸಂಗ್ರಾಮದಲ್ಲಿ ನಮಗೆ ಬೇಕು ಇವರು ಬಹು ಸ್ವಲ್ಪ ಸಂಖ್ಯೆಯಾದರೂ ಚಿಂತೆಯಿಲ್ಲ ೯. ಸತ್ಯಾಗ್ರಹದಲ್ಲಿ ವಂಚನೆ ಮೋಸವೆಂಬುದೇ ಇಲ್ಲ.

ಶಿಸ್ತು ವ್ಯವಸ್ಥೆಗಳನ್ನು ಪಾಲಿಸಿದಡೆ ಯುವವರಿಂದಲೇ ಈ ಹೋರಾಟವು ವಿಜಯಯಶಾಗಿ ನಡೆಯಬೇಕು. ಸತ್ಯಾಗ್ರಹದಲ್ಲಿ ಶ್ರದ್ಧೆ ಮತ್ತು ನಂಬಿಕೆಯಿಲ್ಲದವರಿಗೆ ಚಳವಳಿದಲ್ಲಿರಲು ಸಾಧ್ಯವಿಲ್ಲ. 'ಎ' ತರಗತಿ ಕೈದಿಗಳನ್ನು ಸೆರೆಮನೆಯಲ್ಲಿ ಮನುಷ್ಯಮಾತ್ರದವರಂತೆ ನೋಡಿಕೊಳ್ಳುವುದಿಲ್ಲ. ಆದರೆ ಸತ್ಯಾಗ್ರಹಿಗಳು ಈ ಕಷ್ಟಗಳೆಲ್ಲವನ್ನೂ ಎದುರಿಸಬೇಕು.

ಸತ್ಯಾಗ್ರಹಿಗಳ ಕರ್ತವ್ಯ

ಬಂಧನಕ್ಕೊಳಗಾಗಿ ಸೆರೆಮನೆಗಳಿಗೆ ಹೋಗುವುದೇ ಸ್ವಾತಂತ್ರ್ಯದ ಹೆಬ್ಬಾಗಿಲು, ಸತ್ಯಾಗ್ರಹಿಗಳು ಉಪವಾಸ ಮುಷ್ಕರ ಅಥವಾ ಪ್ರಾಯೋಪವೇಶನ ನಡೆಸಕೂಡದು. ಸತ್ಯಾಗ್ರಹಿಗಳು ಸೆರೆಮನೆಯ ನಿಯಮಗಳನ್ನು ಪಾಲಿಸಬೇಕು.

ಶಾಸನ ಭಂಗವು ಸಹಾ ಅಹಿಂಸಾಯುತವಾದ ಚಳವಳಿ. ಆದ್ದರಿಂದ ಎಷ್ಟು ಕಷ್ಟ ಬಂದರೂ ಅಹಿಂಸೆಯನ್ನು ಬಿಡಬಾರದು. ಕಾಯಿದೆ ಪ್ರಕಾರ ನಮಗೆ ದೊರೆಯಬೇಕಾದ ಹಕ್ಕುಬಾಧ್ಯತೆಗಳು ಇಲ್ಲದಿದ್ದರೆ ನಾವು ಶಾಸನಭಂಗ ಚಳವಳಿಯಿಂದ ದೊರಕಿಸಿಕೊಳ್ಳಬೇಕು. ಇದು ನಮ್ಮ ಹಕ್ಕು. ನಮ್ಮ ಹಕ್ಕು ಬಾಧ್ಯತೆಗಳನ್ನು ಸಾಧನೆಯಿಂದಮತ್ತೊಬ್ಬರಿಗೆ ತೊಂದರೆಯಾದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಶಾಸನಭಂಗವನ್ನು ಬಿಡಬೇಕೆಂಬುದನ್ನೂ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬುದನ್ನೂ ನಾನು ಒಪ್ಪುವುದಿಲ್ಲ. ಶ್ರದ್ಧಾವಂತರಾದ ಕಾಂಗ್ರೆಸ್ ಸದಸ್ಯರುಗಳಿರುವವರೆಗೆ ಕಾಂಗ್ರೆಸು ಸಾಯಲಾರದು. ಕಾಂಗ್ರೆಸ್ ಕಾರ್ಯಕ್ರಮವು ವ್ಯವಸ್ಥೆಗನುಸಾರವಾಗಿ ನಡೆಯತ್ತಲಿದೆ ವೈಯಕ್ತಿಕ ಶಾಸನಭಂಗವು ಮುಂದುವರಿಯಬೇಕು. ಹತ್ತುಮಂದಿಯಿರಲಿ, ಇಬ್ಬರಿರಲಿ ಚಿಂತೆಯಿಲ್ಲ ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಇಂದಿನ ವಿಷಮ ಪರಿಸ್ಥಿತಿಗೆ ಸರಿಯಾಗಿ ನಿಲ್ಲಿಸಲಾಯಿತು

ಕಾಂಗ್ರೆಸ್ಸಿನವರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ನಿರತರಾಗಬೇಕು ಅನಂತರ ಸಾಮೂಹಿಕ ಶಾಸನಭಂಗ ಚಳವಳಿದ ಯೋಚನೆ ಮಾಡಲಾಗುವುದು. ರಚನಾತ್ಮಕ ಕಾರ್ಯಕ್ರಮವಿಲ್ಲದೆ ಪಾರ್ಲಿಮೆಂಟರಿ ಕಾರ್ಯಕ್ರಮವೂ ಕೇವಲ ಪ್ರಹಸನ. ಭಾವಣಸ್ವಾತಂತ್ರ್ಯವು ದೊರೆತರೆ ಸತ್ಯಾಗ್ರಹವನ್ನು ನಿಲ್ಲಿಸಲಾಗುವುದು.

ಯುದ್ಧವು ನುಗಿದನಂತರವಾದರೂ ನನಗೆ ಸ್ವಾತಂತ್ರ್ಯ ದೊರೆಯದಿದ್ದರೆ ಚಳವಳವನ್ನು ಮತ್ತೆ ನಡೆಸಲಾಗುವುದು. ನಾವೀಗ ನಮ್ಮ ಕರ್ತವ್ಯವನ್ನು ಮಾಡದಿರೆ, ಯುದ್ಧಾನಂತರದ ಕಾಲಕ್ಕೆ ಸಿದ್ಧರಾಗುವುದಿಲ್ಲ. ಆದ್ದರಿಂದ ನಾವೀಗ ಕಾಂಗ್ರೆಸ್ ಕಾರ್ಯನೀತಿಯಲ್ಲಿ ಬದಲಾವಣೆ ಯೋಚಿಸುವುದಿಲ್ಲ. ಭಾರತದ ಭವಿಷ್ಯದ ಬಗ್ಗೆ ನನಗೆ ಪೂರ್ಣ ನಂಬಿಕೆಯಿದೆ.

"ನಮ್ಮ ಹೋರಾಟ"

ಮಹಾತ್ಮಾ ಗಾಂಧಿ ಲೇಖನ.

ಗಾಂಧಿಜಿ ಹೇಳಿಕೆ ವಿಷಯ ಪತ್ರಿಕೆಗಳು ಏನುಹೇಳುತ್ತವೆ?

"ಕಾಂಗ್ರೆಸ್ ಸತ್ಯಾಗ್ರಹ ನಿಲ್ಲಿಸಬೇಕು. ಗಾಂಧಿಜಿ ಇದನ್ನು ನಿಲ್ಲಿಸುವುದಿಲ್ಲವೆಂದು ತಿಳಿದಂತಾಯಿತು ಆದ್ದರಿಂದ ಬೇರೆಯವರು ಕಾಂಗ್ರೆಸಿನ ಸೂತ್ರ ಕೈಗೆತ್ತಿಕೊಳ್ಳಬೇಕು. ರಾಜಾಜಿ ಈಗ ಪಾದಿತೋರಿಸಬೇಕು"

ಪಯೋನೀಯರ್ (ಲಕ್ನೋ)

"ಮಹಾತ್ಮರ ಆಜ್ಞೆಯಂತೆ ನಾವು ರಚನಾತ್ಮಕ ಕಾರ್ಯರಂಗಕ್ಕಿಳಿದು ರಾಷ್ಟ್ರದ ಶಕ್ತಿ ಹೆಚ್ಚಿಸುವ. ಈ ಯುದ್ಧ ಮುಗಿದ ಮೇಲೆ ಹೊಡುವ ಭಾರತದ ಸಾತಂತ್ರ್ಯ ಸುಗರದೆ ಧರ್ಮಯುದ್ಧಕ್ಕೆ ನಾವೀಗ ಸಿದ್ಧರಾಗುವ".

ನೇಶನಲ್ ಹೆರಾಲ್ಡ್ (ಲಕ್ನೋ)

"ಸರಕಾರಕ್ಕೆ ತೊಂದರೆ ಕೊಡಬಾರದೆಂಬ ಇಚ್ಛೆಯಿದ್ದರೆ ಅದನ್ನು ಸಂಪೂರ್ಣ ಮಾಡಬೇಕು. ಜಾತೀಯ ಐಕ್ಯಕ್ಕಾಗಿ ರಚನಾತ್ಮಕ ಕಾರ್ಯಕ್ರಮ ವೆಂದು ಗಾಂಧಿಜಿ ಹೇಳುತ್ತಾರೆ. ಆದರೆ ಸಮಾಜಿಕ ಕಾರ್ಯಕ್ರಮದಿಂದ ರಾಜಕೀಯ ಸಮಸ್ಯೆಗಳು ಬಗೆಹರಿಯಲಾರವು."

ಹಿಂದುಸ್ತಾನ ಸ್ಟೆಂಡರ್ಡ್ (ಕಲ್ಕತ್ತ)

"ಪಾರ್ಲಿಮೆಂಟರಿ ಕಾರ್ಯಕ್ರಮವನ್ನು ಕಾಂಗ್ರೆಸು ಬಿಟ್ಟಂದಿನಿಂದ ಕಾಂಗ್ರೆಸ್ ಮತ್ತು ಕಾಂಗ್ರೆಸು ಇತರ ಮತದವರ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ. ಶಾಸನಸಭೆಗಳಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನೂ ನಿಲ್ಲಿಸಿ ಸಾರ್ವಜನಿಕಹಿತಕ್ಕೆ ಧಕ್ಕೆ ತಗಲಿದೆ ಪಾರ್ಲಿಮೆಂಟರಿ ಕಾರ್ಯಕ್ರಮವು ಕೇವಲ 'ಪ್ರಹಸನ'ವೆಂದು ಮಹಾತ್ಮರಂತೆ ಇತರ ಕಾಂಗ್ರೆಸಿನವರಿಗೂ ತೋರುವುದಿದ್ದರೆ ಅದನ್ನು ಬೇರೆಯವರಿಗಾದರೂ ಬಿಟ್ಟುಕೊಡಬಹುದು ಕೆಡೆತನಕ ಕಾಂಗ್ರೆಸು ಸತ್ಯಾಗ್ರಹ ಮತ್ತು ರಚನಾತ್ಮಕ ಕಾರ್ಯಕ್ರಮಗಳಿಗೆ ಅಂಟಿಕೊಂಡಿರುವುದು ಸರಿಯಲ್ಲ'

ಹಿಂದು —(ಮದ್ರಾಸು)

"ಗಾಂಧಿಜಿ ಹೇಳಿಕೆಯಲ್ಲಿ ಸಂಶಯ ಭಾವನೆಯನ್ನು ಪರಿಹರಿಸುವಂತಹ ಮಾತು ಯಾವುದೂ ಇಲ್ಲ"

—ನ್ಯೂಸ್ ಕ್ರಾನಿಕಲ್ (ಮದ್ರಾಸು)

'ಗಾಂಧಿಜಿ ಹೇಳಿಕೆ ರಾಷ್ಟ್ರಕ್ಕೆ ಕೈದೀವಿಗೆಯಾಗಿದೆ ರಾಷ್ಟ್ರೀಯ ಸಮಸ್ಯೆಗಳನ್ನು ಸಂಬಂಧಿಸಿ ಸಾಮರ್ಥ್ಯ ಭಾವನೆಯಿಂದ ಯೋಚಿಸಿ ಕಲಸಬಾರದೆಂಬ ಈ ಹೇಳಿಕೆಯಿಂದ'

—ಫ್ರೀಪ್ರೆಸ್ (ಮದ್ರಾಸು)

'ಗಾಂಧಿಜಿ ತಮ್ಮ ಪದ್ಧತಿಯಂತೆ ರಾಷ್ಟ್ರವನ್ನು ಶಿಸ್ತಾಗಿ ಅಗ್ನಿ ಪರೀಕ್ಷೆಗಳಿಗೆ ಒಳಗಾಗಿಸಿ ಭಾರತವನ್ನು ಬಂಧವಿಮೋಚನೆ ಮಾಡಲು ಬಯಸುತ್ತಾರೆ'

ಇಂಡಿಯನ್ ಫ್ರೆಸ್ಟ್‌ಪ್ರೆಸ್ (ಮದ್ರಾಸು)

"ವಾಕ್ ಸ್ವಾತಂತ್ರ್ಯದ ಬಗ್ಗೆ ಗಾಂಧಿಜಿ ಇದರಲ್ಲಿ ಮಾಡಿದ ಸೂಚನೆಯನ್ನು ಸರಕಾರವು ಅನುಮೋದಿಸಿದರೆ ಕಾಂಗ್ರೆಸಿನವರು ಪ್ರಸ್ತುತ ರಾಜಕೀಯ ಪರಿಸ್ಥಿತಿ ಸಲು ಅನುಕೂಲವಾಗುವುದು"

ಜೋಂಟೀ ಕ್ರಾನಿಕಲ್ (ಬೊಂಬಾಯಿ)

"ಗಾಂಧಿಜಿಯ ಸೌಮ್ಯ ಹೇಳಿಕೆಯಾದರೂ ಎಲ್ಲರೂ ಒಮ್ಮೆಲೇ ವಿರುದ್ಧವಾಗಿ ನಿಲ್ಲಿಸುತ್ತದೆ. ತಮ್ಮ ನಿಷೇಧವನ್ನು ವ್ಯಕ್ತಮಾಡುವುದರಲ್ಲಿ ಗಾಂಧಿಜಿ ಸರಳರು. ತಮ್ಮ ಸತ್ಯಾಗ್ರಹಿಗಳ ಸಂಖ್ಯೆಯನ್ನು ಇನ್ನೂರು ನಿಷ್ಪೇಧವಾಗಿ ಎರಡಕ್ಕೆ ಇಳಿಸಬಹುದು. ಆ ಇಬ್ಬರನ್ನೂ ಸರಕಾರವು ದುರ್ಲಕ್ಷ್ಯ ಮಾಡಿಬಿಟ್ಟ ವಿಚಿತ್ರವಿದು"

ಟ್ರಿಬ್ಯೂನ್ (ಬೊಂಬಾಯಿ)

HALFTONE & LINE
BLOCK MAKING
UNDERTAKEN
Sharada Press.
MANGALORE

ಜರ್ಮನ್ ಸೈನಿಕರು ಕಪ್ಪು ಸಮುದ್ರದ ಕರಾವಳಿ ಮುಟ್ಟಿದರು

ಮೋಸ್ಕೋ ನಗರದ ಮೇಲೆ ಕೊನೆಯ ಮುತ್ತಿಗೆಯ ಯತ್ನ

ಮೋಸ್ಕೊ, ಮೊಝಿಸ್ಕ, ಕಾಲಿನಿನ್ ಮತ್ತು ಕ್ರಿಮಿಯ ಮೊದಲಾದ ಕಡೆಗಳಲ್ಲಿ ಹಗಲಿರುಳು ಕಾಳಗನಡೆಯುತ್ತಿದೆ. ಮೋಸ್ಕೋ ನಗರದ ಮೇಲೆ ಕೊನೆಯ ಮುತ್ತಿಗೆ ಮಾಡಲು ಜರ್ಮನರು ಸಿದ್ಧತೆಮಾಡುತ್ತಾ ರೆ. ಲೆನಿನ್‌ಗ್ರಾಡ್‌ನ ಭಾಗದಲ್ಲಿ ರಷ್ಯನರು ಪ್ರತಿಧಾಳಿಮಾಡುತ್ತಿದ್ದರೂ ಜರ್ಮನರು ಬಗೆಬಗೆಯಿಂದ ತೊಂದರೆ ಕೊಡುತ್ತಿರುವರೆಂದು ತಿಳಿದಿದೆ. ಜರ್ಮನ್ ಸೈನಿಕರು ಯೆಲಾವರ್ಸ್ ತನವನ್ನು ಛೇದಿಸಿ ಕಪ್ಪು ಸಮುದ್ರ ಕರಾವಳಿ ಮುಟ್ಟಿದರೆಂದು ಹೇಳಲಾಗಿದೆ. ಈಗ ಯುದ್ಧ ಮಾಡುತ್ತಿರುವ ರಾಷ್ಟ್ರಗಳ ನಡುವೆ ಸಂಧಾನಮಾಡಲು ಟರ್ಕಿಯು ಯತ್ನಿಸುವುದೆಂದು ಸುದ್ದಿಯಿದೆ ಹಿಟ್ಲರನೊಡನೆ ಒಪ್ಪಂದಮಾಡಿಕೊಳ್ಳಲು ರಷ್ಯನರೂ ಬ್ರಿಟಿಷರೂ ಸಿದ್ಧರೋ ನೋಡಬೇಕು.

ಟರ್ಕಿಯು ಸಂಧಾನ ಪ್ರಯತ್ನ ಮಾಡುವುದು?

ಕ್ರಿಮಿಯಾದ ಭವಿತವ್ಯ ಮತ್ತು ತುರ್ಕಸ್ತಾನ

ಜರ್ಮನ್, ಸೈನ್ಯವು ಕ್ರಿಮಿಯದಲ್ಲಿ ಪ್ರವೇಶಿಸಿದೆಂಬ ಸುದ್ದಿಯನ್ನು ಇನ್ನೂ ರಷ್ಯಾ ಸೇನಾಪತಿಯು ಮಾನ್ಯಮಾಡಿರದಿದ್ದರೂ ರಾಜಕೀಯ ಹಿತಾಗೂ ಸೈನಿಕ ದೃಷ್ಟಿಯಿಂದ ಈ ಘಟನೆಯು ವರಿಣಾಮವು ವಿಚಾರಾರ್ಹವಾಗಿದೆ ಕ್ರಿಮಿಯವು ನಾಝಿಗಳ ಹಸ್ತಗತವಾದರೆ ತುರ್ಕಸ್ತಾನದ ಮೇಳೆ ದಾಳಿಶಾಹಿ ನಡೆಸಲು ಅದರ ಉಪಯೋಗ ಮಾಡಿಕೊಳ್ಳಲಾಗುವುದು ' ತುರ್ಕಸ್ತಾನದ ಪ್ರಜಾಸತ್ತೆಯ ಗಲನೇ ವಾರ್ಷಕೋತ್ಸವದ ದಿನ ಅಧ್ಯಕ್ಷ ಇನೆನ್ನೂ ಕನ್ನ ದೇಶಬಾಂಧವರಿಗೆ ಈ ರೀತಿ ಹೇಳಿದ್ದಾರೆ—"ಅಂಜಿಕೆಯು ಇನ್ನೂ ಇದ್ದೇ ಇದೆ ಅದು ಇನ್ನೂ ನಿವಾರಣೆಯಾಗಿಲ್ಲ " ಆದೇ ಕಾಲಕ್ಕೆ ತುರ್ಕಸ್ತಾನದ ' ಅಧ್ಯಕ್ಷರಿಗೆ ಹಿಟ್ಲರ ಮತ್ತು ಟೋಜೋ ಜಪಾನ್‌ರಿಂದಲೂ ಶುಭಸಂದೇಶಗಳು ಬಂದಿದ್ದವು

ಜರ್ಮನರೆ ಗುಪ್ತ ನಕಾಶೆ

ಗುಪ್ತ ನಕಾಶೆಯ ಸಂಬಂಧದಲ್ಲಿ ಜರ್ಮನ್ ಸರಕಾರವು ಒಂದು ಪ್ರಕಟನೆ ಹೊರಡಿಸಿ ಜರ್ಮನರ ಅಂತೆಯಲ್ಲಿ ದಕ್ಷಿಣ ಅಮೇರಿಕದವನ್ನು ವಿಭಾಗಗಳನ್ನಾಗಿ ಮಾಡಿ ಈಗಿರುವ ಎಲ್ಲ ಧರ್ಮಗಳನ್ನು ಮುರಿದು ಯುದ್ಧಾನಂತರ ಪುನರ್ಸ್ಥಾಪನೆ ಮಾಡುವುದು ನಿರಾಧಾರವಿವೆಂದು ಪ್ರಸಿದ್ಧಿಸಿದ್ದಾರೆ ಇದೇ ನಕಾಶೆಯು ತಮ್ಮ ಕೈಯಲ್ಲಿ ದೊರೆತಿರುವುದಾಗಿ ಕಳೆದ ನುಂಗಳವಾರದ ಭಾಷಣದಲ್ಲಿ ರೂಸುವೆಲ್ಟರು ಹೇಳಿದ್ದರು.

ಮೂರುದಿನಗಳಲ್ಲಿ ಮೂವತ್ತು ಹಡಗಗಳು

ಯುರೋಪದ ಕರಾವಳಿಯ ಲ್ಲಿಯೇ ಸಂಚರಿಸುತ್ತಿದ್ದ ಸಮಾರು ೨೫-೩೦ ವೈರಿ ಹಡಗಗಳನ್ನು ಆರ್ ಎ ಎಫ್ ವಿಮಾನಗಳು ಮೂರು ದಿನಗಳಲ್ಲಿ ಮುಳುಗಿಸಿ ದೆಂದು ಒಂದು ವಿಮಾನ ಖಾತೆಯ ಪ್ರಕಟನೆ ತಿಳಿಸುತ್ತದೆ.

ನೆರಿಬಿದ್ದ ಚರ್ಮ, ಕಾಂತಿಹೀನವಾದ ಕೆನ್ನೆಗಳು, ಶಕ್ತಿಗುಂದಿದ ಶರೀರ, ಹೀಗಾಗಿ ಕುಂದಿಹೋದ ಲೆಕೆಯನ್ನು ನೆಕೆಯಲ್ಲಿರುವ ತೊಲಗಿಬಿಟ್ಟಿವು'

ಅಂತರಂಗ ಶುದ್ಧಿಯೊಂದೇ ಚರ್ಮವನ್ನು ಶುಭ್ರಗೊಳಿಸಿತು;
ಕಳೆದ ಕರೀರಾರೋಗ್ಯವನ್ನೂ ತಂದಿ ಸಂಪಾದಿಸಿಕೊಟ್ಟಿತು

ಮೆದುವಾದ ಶುಚಿಯಾದ ಚರ್ಮವಿರುವುದು, ಶುಭ್ರವಾದ, ಕಾಂತಿಯುಕ್ತವಾದ ಕಣ್ಣುಗಳಿರುವುದು, ತುಂಬಿದ ಕೃಷ್ಣ ಕೊಂತಿಯು ಕೂಡಿಲಿರುವುದು, ಇದೇ ಅಂತರಂಗದ ಶುಚಿತ್ವದ ಚಿಹ್ನೆಗಳು! ನಿಮ್ಮ ಶರೀರದ ಒಳಭಾಗವನ್ನು ಶುಚಿಗೊಳಿಸಿ ಹೊಟ್ಟೆಯಲ್ಲಿ ಅಶುದ್ಧ ವಸ್ತುಗಳು ಬಟ್ಟುಗೂಡದಂತೆ ನೋಡಿಕೊಳ್ಳಿರಿ. ಪ್ರತಿ ದಿನವೂ ಒಂದು ಗ್ಲಾಸು ತಂಪಾದ ಪಾನೀಯ

ಅಂಡ್ರೂಸ್ ಲಿವರ್ ಸಾಲ್ಟನ್ನು

ತೆಗೆದುಕೊಳ್ಳುವುದರಿಂದ ಶರೀರದ ಅಂತರಂಗವು ಶುಚಿಯಾಗುತ್ತದೆ ಮಲಬದ್ಧತೆಯು ನಾಶವಾಗುತ್ತದೆ ಮತ್ತೆ ಅನೇಕ ತರದ ರೋಗಗಳು ಪರಿಹಾರವಾಗುತ್ತವೆ ಇದು ಹೊಟ್ಟೆಯನ್ನು ಬಹಳ ಶುಚಿಯಾಗಿಡುತ್ತದೆ ರಕ್ತವನ್ನು ಶುದ್ಧಗೊಳಿಸುತ್ತವೆ

ನಿಮ್ಮ ಅಂತರಂಗ ಶುಚಿತ್ವಕ್ಕಾಗಿ ದಿನನಿತ್ಯ

ಅಂಡ್ರೂಸ್ ಲಿವರ್ ಸಾಲ್ಟ್

ಈ ಆರೋಗ್ಯ ಪಾನೀಯವನ್ನು ಉಪಯೋಗಿಸಿರಿ



ANDREWS LIVER SALT

ಶುಚಿಗೊಳಿಸುತ್ತದೆ—ತಂಪುಗೊಡುತ್ತದೆ—ಆನಂದವನ್ನೀಯುತ್ತದೆ.

ಸ. ಸೈ. ಳ. 11

ದೊಡ್ಡ ಸೈ ರೂ. 1-4-0

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನೈದೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನನ್ನ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಲಾವಣ್ಯದ ತೇಜಸ್ಸನ್ನೂ ತರುವುದು

½ ಸೇರಿಗೆ ರೂ ೪

ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ ಎ, ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ್ ಕಾಲೇಜಿನ ಮಾಜಿ ಕೆಮಿಸ್ಟರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

ಡಾಕ್ಕಾ, ಬಂಗಾಲ

ಮದ್ರಾಸು ಕೇಂದ್ರ: 17A, ಖ್ವಾಡ್ಜೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲ ಇವೆ.

ಮಂಗಳೂರಿನ ಏಜೆಂಟ್ ಮೆ॥ ಕಂಪನಿ, ಹಂಪನಕಟ್ಟೆ, ಮಂಗಳೂರು

ದೇವಲಿ ಶಿಬಿರದಲ್ಲಿ ರಾಜಕೀಯ ಕೈದಿಗಳ ಅನ್ನಸತ್ಯಾಗ್ರಹ ನಡೆದಿದೆ!

ಹಿಟ್ಲರನು ಹಿಂದುಸ್ತಾನಕ್ಕೆ ಬರದ ಹೆ ಆತನನ್ನು ಗಡಿನಾಡಿನಲ್ಲಿಯೇ ಹಿಂದಕ್ಕಟ್ಟುವೆಂದು ಸೇನಾಪತಿ ವೇ ವಲ್ಲರು ಅಭಯ ವಚನಕೊಡುತ್ತಾ ರೆ. ದೇವಲಿ ಶಿಬಿರದಲ್ಲಿ ಸ್ಥಾನಬದ್ಧ ಕೈದಿಗಳು ೩೦೦ಕ್ಕೆ ವಿುಕ್ಕಿ ಅನ್ನಸತ್ಯಾಗ್ರಹ ಆರಂಭಿಸಿದ್ದು ದೇಶ ಸರ್ವತ್ರ ಕಳವಳ ಹೆಚ್ಚಿದೆ. ಇಂಗ್ಲೆಂಡಿನಲ್ಲಿ ಭಾರತೀಯರ ಪ್ರಚಂಡ ಸಭೆಯೊಂದು ಕೂಡಿ ಕಾಂಗ್ರೆಸಿನೊಡನೆ ಒಪ್ಪಂದ ಮಾಡಿಕೊಳ್ಳಲು ಸರಕಾರಕ್ಕೆ ಸೂಚಿಸಲಾಗಿದೆ. ವೈಸ್‌ರಾಯ್ ಕಾರ್ಯಕಾರೀ ಮಂಡಳದ ಹೊಸ ಮೆಂಬರರು ನೆಹರುಮೊದಲ್ಗೊಂಡು ರಾಜಕೀಯ ಕೈದಿಗಳನ್ನು ಬಿಡುಗಡೆಗೊಳಿಸಲು ಪ್ರಯತ್ನಿಸುವರೆಂದು ಸುದ್ದಿಯಿದೆ. ಹೊಸ ಮೆಂಬರರ ಪ್ರಯತ್ನದ ಫಲಿತಾಂಶವು ೧೨ನೆಯ ತಾರೀಕಿನಲ್ಲಿ ಹೊರಡಿಸುವ ಪ್ರಕಟಣೆಯಿಂದ ತಿಳಿಯುವುದು.

ದೇಶ ಸರ್ವತ್ರ ಕಳವಳ ಹೆಚ್ಚಿರುವುದು.

ಸೇನಾಪತಿ ವೇವಲರ ಅಭಯ ವಚನ

ವೀರಬಾಹು ಪಿಳ್ಳೈಯವರನ್ನು ಕೂಡಲೇ ಕೈದುಮಾಡಿದರು

ತಿನ್ನವೆಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ. ಎಂ. ಪಿ. ವೀರಬಾಹು ಪಿಳ್ಳೆಯವರನ್ನು ತ್ರಿಚುನಾಪಳ್ಳಿ ನೆರೆಮನೆಯಿಂದ ಅವರ ಶಿಕ್ಷೆಯ ಅವಧಿ ಮುಗಿದು ಬಿಡುಗಡೆಯಾದಿ ಕೂಡಲೇ ಕೈದುಮಾಡಿ ನೆಲ್ಲೂರಿಗೆ ಕೊಂಡೊಯ್ದರು.

ಬುಲುಸುಸಾಂಬಮೂರ್ತಿಗಳಿಗೆ ಖಜೇರಿಯ ವ್ಯವಸ್ಥೆ

ಮದ್ರಾಸು ಎಸೆಂಬ್ಲಿ ಸ್ವೀಕರರಾದ, ಶ್ರೀ. ಬುಲುಸು ಸಾಂಬಮೂರ್ತಿಗಳು ಮೊನ್ನೆ ಸೆರೆಮನೆಯಿಂದ ಬಿಡುಗಡೆಯಾಗಿ ಬಂದವರು ಸೆಕ್ರಟರಿಯೇಟಿನಲ್ಲಿ ತಮ್ಮ ಖಜೇರ್ಷಿಯಲ್ಲಿ ತಾ. ೪ರಿಂದ ಹಾಜರಾಗುವುದಾಗಿ ತಿಳಿಸಿರುವರು. ಮೊದಲು ಅವರಿಗೆ ಕೋಡೆಯನ್ನು ಈಗ ಗವರ್ನರರೆ ಸಲಹೆಗಾರರಿಗೆ ಕೊಡಲಾಗಿದ್ದು, ಎಸೆಂಬ್ಲಿ ಸೆಕ್ರಟರಿಯ ಪಾರ್ಶ್ವದ ಕೋಣೆಯನ್ನು ಇವರ ವಾಸಕ್ಕೆಗಾಗಿ ತಯಾರು ಮಾಡಿರುವರು. ಅವರ ಅಪೇಕ್ಷೆಯಂತೆ ಅವರ ಮನೆಗೆ ಟೆಲಿಫೋನ್ ಹಾಕುವ ವ್ಯವಸ್ಥೆಯಾಗಿದೆ.

ಮೈಸೂರನ್ನು ಪ್ರವೇಶಿಸ ಕೂಡದು

ಮೈ. ಕಾಂಗ್ರೆಸ್ ಅಧ್ಯಕ್ಷರು

ಮೈಸೂರು ಸ್ಟೇಟ್ ಕಾಂಗ್ರೆಸ್ ಲಿಖ್ಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಎಚ್. ಸಿದ್ದಯ್ಯನವರ ಮೇಲೆ ಸರಕಾರದವರು ಪ್ರತಿಬಂಧಕಾಜ್ಞೆ ಹೊರಡಿಸಿದ್ದು ಮೈಸೂರು ನಗರವನ್ನು ಎರಡು ತಿಂಗಳ ಅವರಿಗೆ ಪ್ರವೇಶಿಸ ಬಾರದೆಂದು ಹುಕುಂ ಹೊರಡಿಸಿರುವರು. ಮೈಸೂರು ನಗರದಲ್ಲಿ ಕಾಂಗ್ರೆಸ್ ಅಧ್ಯಕ್ಷರಿಗೆ ಮಾನಪತ್ರ ಸಮರ್ಪಣೆಯ ಕಾರ್ಯಕ್ರಮವಿದ್ದು ಅದರಲ್ಲಿ ಅವರು ಭಾಗವಹಿಸಿದರೆ ಶಾಂತಿಭಂಗವಾಗುವುದೆಂದು ಈ ಆಜ್ಞೆ ಹೊರಡಿಸಲಾಗಿದೆಯಂತೆ.

ಬೆಂಗಳೂರ ಸೈನಿಕರ ವರ್ತನೆಯ ಕುರಿತು ಗಾಂಧಿಜಿಯವರ ಕಳವಳ

ಬೆಂಗಳೂರಲ್ಲಿ ಸೈನಿಕರು ನಗರದ ಹೆಂಗುಸರ ಮೇಲೆ ಬಲತ್ಕಾರ ನಡಾವುವರೆಂಬ ವಿಷಯ ಕೇಳಿ ಗಾಂಧಿಜಿಯವರು ಬಹಳ ಕಳವಳಗೊಂಡಿರುವರಂತೆ. ಈ ವಿಷಯವಾಗಿ ವಿಚಾರಣೆ ಮಾಡಲು ಕ. ಪ್ರಾಂ. ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಟಿ. ಪಿ. ಕೆರನುಕರರನ್ನು ನೇಮಿಸಿರುವರೆಂದು ತಿಳಿದಿದೆ.

ಟ್ರೇಡ್‌ಯೂನಿಯನಿಗೆ ರಾಯ್ ಪ್ಪಗಡದ ರಾಜಿನಾಮೆ

ಶ್ರೀಗಳಾದ ಎಂ. ಎನ್. ರಾಯ್, ವಿ. ಬಿ. ಕರ್ನಿಕ್, ಗೋಖಲೆ ಹಾಗೂ ಶ್ರೀಮತಿ ಮಣಿಬೆನ್ ಪಾರಿಖ್ ಇವರು ಅ. ಬಾ. ಟ್ರೇಡ್ ಯೂನಿಯನ್ ಸಭಾ ಸದಸ್ಯತ್ವಕ್ಕೆ ರಾಜಿನಾಮೆಕೊಟ್ಟಿರುವರು. ಯುದ್ಧ ಘೋಷಣೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯದ ಕಲುಹಿಗಾಗಿಯಂತೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಗಾಯಗಳಿಗೆ
ಮತ್ತು ಕಜ್ಜಿಗಳಿಗೆ
ಗೃಹವೈದ್ಯ
ಕೂಡಲೇ ಗುಣಪಡಿಸುತ್ತದೆ.
ಜಾಂಬಕನ್ನು ದಿನನಿತ್ಯವು ಅಗತ್ಯವಾಗಿ ಉಪಯೋಗಿಸಿರಿ

ರೋದರ ಯೂನ ಭಾಗ್ಯಕ್ಕಾದರೂ ಬಂದು ಗಾಯಸ್ಥೋ ಕಜ್ಜಿಯೋ ಆದರೆ ಆದಾವುದ ರಕ್ತವೆ ವಿಷಮಯವಾಗಿ ಅಪಾಯವಾಗುವ ಸಂಭವವಿದೆ. ಆವ್ಯಂದ ನಮ್ಮ ಗಾಯವನ್ನು ವಿಷಹಾರೀ ಜಾಂಬಕಿನಿಂದ ಕೂಡಲೇ ಗುಣಪಡಿಸಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ತೈಲವು ಚರ್ಮದಲ್ಲಿ ಎಳೆಕೊಂಡು, ನೋವನ್ನು ತಗ್ಗಿಸಿ ಗಾಯವನ್ನು ಒಂದು ಕಲೆಯೂ ಉಳಿಯದಂತೆ ಗುಣಪಡಿಸುತ್ತದೆ. ಜಾಂಬಕ್ ಒಂದು ರೂಪಾಯಿಗೆ ಇಪ್ಪವಾ ರೂ. ೨–೪–೦ಕ್ಕೆ ದೊರಕುವುದು. ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಏಜೆಂಟ್ಸ್:—
ಮೆಸರ್ಸ್ ದಾಧಾ ಎಂಡ್ ಕೊ.
ಪಿ. ಟಿ. ಮುದ್ರಾಸು.

ಯಾವಾಗಲೂ ಜಾಂಬಕನ್ನುಪಯೋಗಿಸಿರಿ.

ZAM-BUK

ಪ್ರಾಣಿಗಳ ಚರ್ಬಿಯಿಂದ ವಿರಹಿತವಾದುದು

ಮೆಕ್ಲೀನಿನಿಂದ
ನೀವು-ನಿಮ್ಮ ಹಲ್ಲನ್ನು
ಶಚಿಗೊಳಿಸಿದ್ದೀರಾ?

ಹೌದು! ನಿಜವಾಗಿಯೂ ನಾನು ಶುಚಿಗೊಳಿಸಿದ್ದೇನೆ

ಸುಭ್ರ ಹಲ್ಲುಗಳಿಗೆ, ಆರೋಗ್ಯಕರವಾದ ಪಡಿಗಳಿಗೆ, ತಂಪಾದ ಹೊಸ ಮಾಯಿಗೆ ಮೆಕ್ಲೀನ್ಸ್ ಉಪಯೋಗಿಸಬೇಕು. ಹಲ್ಲಿನ-ಅಶುಚಿಯನ್ನು ಇದು ಕೂಡಲೇ ಇಲ್ಲದೆ ಮಾಡುವುದು. ಹಲ್ಲನ್ನು ಬೆಳ್ಳಗಾಗಿ ಬಣ್ಣ ಕೊಡುವುದು. ಬಿರ್ಚು ಇದಕ್ಕೆ ಕಡಿಮೆ ತಗಲುವುದು.

ಜಿಲ್ಲಾ ಸಮಾಚಾರಗಳು

ಶ್ರೀ ಕೆ. ತೀನ ಶೆಟ್ಟರು ಎರಡನೆಯ ಸಲ ಬಂಧಿತರಾದರು

೬ ತಿಂಗಳು ಕಠಿಣ ಶಿಕ್ಷೆ

ಮಂಗಳೂರಲ್ಲಿ ಎರಡನೆಯ ಸಲ ಸತ್ಯಾಗ್ರಹ ಮಾಡಿ ಡಿಫೆನ್ಸ್ ರೂಲಿನ ಕಲಂ ೩೨(೧) ಪ್ರಕಾರ ಶಿಕ್ಷೆಯನ್ನನುಭವಿಸುತ್ತಿದ್ದ ಪಕ್ಷಿಣ ಕನ್ನಡದ ಸತ್ಯಾಗ್ರಹಿ ಶ್ರೀ ತೀನ ಶೆಟ್ಟರು ಹುಬ್ಬಳ್ಳಿಯಲ್ಲಿ ತಾ. ೧೦ ರಂದು ಬಂಧಿತರಾಗಿ ತಾ. ೧೨ ರಂದು ಆವರ ವಿಚಾರಣೆ ನಡೆದು ನಾಲ್ಕು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು.

ಭಾಷಣ ಸ್ವಾತಂತ್ರ್ಯ ದಿನವನ್ನಾಚರಿಸಿರಿ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಹೀಗೆ ತಿಳಿಸುತ್ತಾರೆ: "ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಭಾಷಣ ಸ್ವಾತಂತ್ರ್ಯದ ಹೋರಾಟವು ಪ್ರಾರಂಭವಾಗಿ ಈಗ ಒಂದು ವರುಷವಾಯಿತು. ೧ ಮಹಾತ್ಮಾ ಗಾಂಧಿಯವರು ತಾ. ೩೦ ನೇ ಅಕ್ಟೋಬರದ ದಿವಸ ಹೊರಡಿಸಿದ ಹೇಳಿಕೆಯಲ್ಲಿ ಈ ಹೋರಾಟದ ಕಾರ್ಯವನ್ನು ತಿಳಿಸಿರುವರು. ಮಹಾತ್ಮರ ಹೇಳಿಕೆಯನ್ನು ಎಲ್ಲರಿಗೂ ತಿಳಿಸುವ ಉದ್ದೇಶದಿಂದ ತಾ. ೧೭-೧೦-೪೧ ನೇ ಬುಧವಾರ ದಿವಸವನ್ನು ಭಾಷಣ ಸ್ವಾತಂತ್ರ್ಯ ದಿನವೆಂದು ಎಲ್ಲ ಕಾಂಗ್ರೆಸ್ ಸಂಸ್ಥೆಗಳೂ, ಕಾಂಗ್ರೆಸಿಗರೂ ಆಚರಿಸುವುದು".

ಮುನ್ಸಿಪಲ್ ಕೌನ್ಸಿಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯು ತಾ. ೩ ರಂದು ಚೇರ್‌ಮೇನ್ ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಿಂದ ಜರಗಿತು. ಪುರೋಹಿತ ವರ್ಗದವರಿಗೆ ವೃತ್ತಿ ತೆರಿಗೆ ವಿಧಿಸುವ ವಿಚಾರವಾಗಿ ಚರ್ಚೆ ನಡೆದು ತೀರ್ಮಾನ ಮುಂದೆ ಬಿತ್ತು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ

ಬಂಟರಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಜಿಲ್ಲಾ ಜಜ್ಜರಾದ ಶ್ರೀ. ಗೋಪಾಲನರವರ ಅಧ್ಯಕ್ಷತೆಯಿಂದ ಜರಗಿತು. ಶ್ರೀ ಕುಶಲಶೆಟ್ಟಿಯ ವರು "ಟೋಸ್ಟ್" ಮಾತನಾಡಿದರು. ವಿವಿಧ ವಿನೋದಾವಳಿಗಳಿದ್ದುವು

ಉಪನ್ಯಾಸ

ಮಂಗಳೂರು ವಿದ್ಯಾರ್ಥಿ ಸಂಘದ "ಉಪನ್ಯಾಸ ಮಾಲೆ"ಯ ಆಶ್ರಯದಲ್ಲಿ ಶ್ರೀ ಎ. ಪಿ. ಮತಾಯಿ, ಇವರು "ಸ್ವಾತಂತ್ರ್ಯ ಮತ್ತು ಸಾಹಿತ್ಯ" ಎಂಬ ವಿಷಯವಾಗಿ, ಗವರ್ನಮೆಂಟ್ ಕಾಲೇಜಿನಲ್ಲಿ ತಾ. ೫ ರಂದು ಸಂಜೆ ಭಾಷಣ ಮಾಡಿದರು.

ಪ್ರಕಟಣೆ

ಆನ್ಮೊಂಬಳ ಸುಬ್ರಾಯ ಪೈ ಸೆಮೋರಿಯಲ್ ಫಂಡಿನ ವಾರ್ಷಿಕ ಸಭೆಯು ಮೊದಲು ಪ್ರಕಟಿಸಿದಂತೆ ತಾ. ೧೬, ನವಂಬರ ೪೧ ನೆಯ ದಿನ ಪೂರ್ವಾಹ್ನವಾಗಿದೆ ಅಪರಾಹ್ನ ೬ ಗಂಟೆಗೆ ಕೆನರಾ ಹೈಸ್ಕೂಲಲ್ಲಿ ಜರಗುವುದೆಂದು ಈ ಮೂಲಕ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಚಿತ್ರ ಕಲಾಭ್ಯಾಸ

ಮೈಸೂರು ಮತ್ತು ಮದ್ರಾಸು ಯೂನಿವರ್ಸಿಟಿಗಳಿರದ ಚಿತ್ರಕಲಾ ಪ್ರವೀಣ್ಯತೆಯ ಬಗೆ ಪಶಸ್ತಿ ಪತ್ರಪಡೆದು, ಬೊಂಬಯಿ ಬೆಂಗಳೂರು ಮೊದಲಾದ ಕಡೆಗಳಲ್ಲಿ ಪ್ರಸಿದ್ಧಿಹೊಂದಿದ ಚಿತ್ರ ಕಲಾಗೃವೀಣ ಶ್ರೀ. ಕ್ಯಾಮಟ್ ಇವರು ಈಗ ತಮ್ಮ ಹುಟ್ಟೂರಾದ ದಕ್ಷಿಣ ಕನ್ನಡಕ್ಕೆ ಬಂದು ಮಂಗಳೂರು ಬಲ್ಮಠ ರೋಡಿನಲ್ಲಿ ಇತ್ತೀಚೆಗೆ ಒಂದು ಚಿತ್ರಕಲಾ ಶಾಲೆಯನ್ನು ತೆರೆದಿರುವರು. ನಮ್ಮಜಿಲ್ಲೆಯ ಹಾಗೂ ನೆಗೆರದಲ್ಲಿರುವ ಚಿತ್ರಕಲಾಭ್ಯಾಸ ಮಾಡಲು ಇಚ್ಛೆಯುಳ್ಳ ವಿದ್ಯಾರ್ಥಿಗಳಿಗೂ ಇತರರಿಗೂ ಇದೊಂದು ಅಪೂರ್ವ ಸಂದರ್ಭವಾಗಿದೆ.

ನೇಮಕ

ಎಕ್ಸ್ಟ್ರಾ ಆರ್ಡಿನರಿ ರಿಕ್ರೂಟಿಂಗ್ ಆಫೀಸರ್ ರಾಗಿ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರಾದ ಶ್ರೀ ಉಚ್ಚಿಲ್ ಕೃಷ್ಣರಾಯರು ನೇಮಕ ಹೊಂದಿರುವರು.

ಪಡುಬಿದ್ರಿ

ಸತ್ಯಾಗ್ರಹಿಗಳಿಗೆ ಸತ್ಕಾರ ಕೂಟ

ಸತ್ಯಾಗ್ರಹ ಹೂಡಿ ಆರು ತಿಂಗಳ ಸೆರೆಮನೆ ವಾಸವನ್ನು ಅನುಭವಿಸಿ ಎರವಾದ ಜೈಲಿನಿಂದ ಬಿಡುಗಡೆ ಹೊಂದಿದ ಶ್ರೀ ಮಟ್ಟಿ ರಂಗನಾಥ ಪ್ರಭುಗಳ ಗೌರವಾರ್ಥವಾಗಿ ಪಂಚಾಯತ್ ಬೋರ್ಡಿನ ಆಫೀಸಿನಲ್ಲಿ ಪಂಚಾಯತ್ ಬೋರ್ಡಿನವರೂ, ಊರ ಪ್ರಮುಖರೂ ಸೇರಿ ಸತ್ಕಾರ ಕೂಟ ಒಂದನ್ನು ನೆರವೇರಿಸಿದರು.

ಕಾಸರಗೋಡು

ಪ್ರಾರ್ಥನಾ ಚೆಳವಳಿ

ಶ್ರೀ ಉಮಾದೇವಿ ಮತ್ತು ಶ್ರೀ. ಕೃಷ್ಣತಾನ ತ್ಯಾಜ್ಜಿ ಎಂಬ ಸ್ತ್ರೀಮಣಿಗಳು ಶ್ರೀ ಸ್ವಾಮಿ ರಾಮದಾಸರ 'The Vision' ಪತ್ರಿಕೆಯಲ್ಲಿ ಲೋಕ ಶಾಂತಿಗಾಗಿ ಒಂದು ಪ್ರಾರ್ಥನಾ ಚಳವಳಿಯನ್ನು ನಡೆಸುವ ಕುರಿತು ಹಕ್ಕೂರ್ವಕವಾದ ವಿನಂತಿಯನ್ನು ಮಾಡಿದ್ದರು; ಶ್ರೀ ಉಮಾ ದೇವಿಯವರು ಪೋಲೆಂಡಿನವರು, ಹುಟ್ಟು ಶ್ರೀತ್ಯಾಜ್ಜಿಯವರು ಮುಸಲ್ಮಾನ ತೆರುನಿಯವರು. ಆವರ ವಿನಂತಿಯು ಲಹರಿಯೋಗ್ಯವಾದುದೆಂದು ಶ್ರೀ ಆನಂದಾಶ್ರಮದ ಸದ್ಗುರು ಸ್ವಾಮಿ ರಾಮದಾಸಜಿಯವರು ಒಂದು ಪ್ರಾರ್ಥನಾ ಚಳವಳನ್ನು ಕೈದ ತಿಂಗಳು ಪ್ರಾರಂಭಿಸಿರುವರು.

ಶ್ರೀ ದರ್ಮಸ್ಥಳ

ಇಲ್ಲಿ ಹರಿಕಥಾ ಕೋವಿದರಾದ ಹರಿದಾಸ ಸಾಮುಗರ ಹರಿಕಥೆಗಳು ಹಲವು ದಿನಗಳಿಂದ ನಡಿಯುತ್ತಿದೆ.

ಸುಬ್ರಹ್ಮಣ್ಯ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂಕಿನ ಪೂಹಕೋ ಥಾರಕಕ್ಕೆ ಶ್ರೀ ಸುಬ್ರಹ್ಮ ದೇವ ಸ್ಥಾನದಲ್ಲಿ ಪೂರ್ವಶಿಷ್ಟ ಸಂಪ್ರದಾಯ ಪ್ರಕಾರ ಇದೇ ಬರುವ ವಿಷು ಸಂಕ್ರಮದ ಕಾರ್ತೀಕ ಬಹುಳ ಯುತಾ ೧೬ ರಲ್ಲು ಉತ್ಸವವು ಪ್ರಾರಂಭವಾಗಿ ಮಾರ್ಗಶಿರ ಶು. ೬ಯು ತಾ. ೩೦ ರಲ್ಲು ಚಂತ್ಸಾಸಸ್ತಿ ಮಹಾರಥೋತ್ಸವ ಆದೇ ಶು. ೨ಯು ತಾ. ೩೫ ರಲ್ಲು ಅವಭೃತೋತ್ಸವ (ನೌಕಾವಿಹಾರ) ಉತ್ಸವಗಳು ಜರಗುವವು.

ಗುರಿಕಂಬಲ

ಸಾಂ ೧೯ ನೇ ಇಸವಿ ನವಂಬರ ತಿಂಗಳ ತಾರೀಕು ೧೩ ನೇ ಗುರುವಾರ ಮತ್ತು ೧೪ ನೇ ಶುಕ್ರವಾರ (ಇದೇವಾಲ್ ತಿಂಗಳ ತಾರೀಕು ೨೯ ಮತ್ತು ೩೪) ದಿನಗಳಲ್ಲಿ ಗುರಿಕಂಬಳ ಹಬ್ಬತ್ ಆಸ್ಸಾರ್ಡಿನ್ ಗುರುಗಳವರ ಸಂದರ್ಶನ ಮತ್ತು ಉರುಸು ಎಂಬ ಕಾರ್ಯವು ನೆರವೇರುವುದಾಗಿ ಸದ್ರಿ ದರ್ಗೆಯ ಆಡಳ್ತೆದಾರರಾದ ಸಬ್ಬುಪ್ ಆದರ ಸಾಹೇಬರು ತಿಳಿಸುತ್ತಾರೆ.

ಇಜ್ಜಂಗೋಡು

ತಾ. ೩೦-೧೦-೪೧ ರಂದು ಇಜ್ಜಂಗೋಡು ನಡೆಟ್ ಎಲಿಮೆಂಟರಿ ಕೂಲಾ ವರ್ಧಂತ್ಯುತ್ಸವವು ಕಾಸರಗೋಡು ರೇಂಜ್ ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಭಾರ್ಗವನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವಿದ್ಯಾರ್ಥಿನಿಯರಿಂದ "ಅಪ ಕುಕ ವಿಜಯ" ನೆಂಬ ನಾಟಕವು ಕೋಲಾಟವು ಮತ್ತು ಲೇಡೀಮ್ಯಗಳೂ ಶ್ರೀ ಅಧ್ಯಾಪಕರ ವಿನೋದಗಳೂ ಆಭಿನಯಿಸಲ್ಪಟ್ಟುವು.

ಶಿರ್ವ

ಶಿರ್ವ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ತಾರೀಕು ೨೦—೧೦—೪೧ ನೇ ದಿವಸ ಪ್ರೆಸಿಡೆಂಟ್, ಶ್ರೀ ಯಸ್. ಅಂತಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಮುಂಚಿಕಲ್ಲು ಪೇಟೆಯ ಮೂರು ಮಾರ್ಗ ಕೂಡುವಲ್ಲಿ ಒಂದು ಬಾವಿ ತೊಡುವಲ್ಲಿ ಮಂಜಕಲ್ಲು ಪೇಟೆಯಲ್ಲಿ ಒಂದು ಪಾಯಖಾನೆ ಕಟ್ಟುವುದಕ್ಕೆ ಮತ್ತು ಒಂದು ಪೆಟ್ರೋಮೆಕ್ಸ್ ದೀಪವನ್ನು ಇಡುವದಕ್ಕೆ ಹಾಗೂ ಮಂಜಕಲ್ಲು ಮಂಜಕಲ್ಲು ಪೂಲೆಯ ಎದುರು ಗಡೆ ರಸ್ತೆಯ ಬಳಿಯಲ್ಲಿ ಒಂದು ಲಾಟಾನು ದೀಪವನ್ನು ಇಡುವ ಬಗ್ಗೆ ಹಣ ಸೆಂಕ್ಸನ್ ಮಾಡಲ್ಪಾತು. ರೂಪಾ ೫೦ ನ್ನು ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ವಿಮರ್ಜನ್ಸಿ ವಾರ್ಡ್ ಕಟ್ಟೋಣದ ಸಹಾಯಾರ್ಥವಾಗಿ ಕೊಡುವ ಅರೋಗ್ಯ ಶಿಬಿಸಶಾಖೆಗಳನ್ನು ಆಚರಿಸುವ ಜುಡಮಾಲೇಗೆ ಸಂಬಳಪಲ್ಲಿ ಬಡ್ತಿ ಕೊಡುವ ನಿರ್ಣಯಗಳೂ ಆದವು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. ನಂಬ್ರ. 562/41

ದಿ ಪ್ಯಾಮಿಲಿ ಬೇಂಕ್ ಲಿಮಿಟೆಡ್ ಮಂಗ್ಳೂರು ಯಿದ್ರ ಮೆನೆಜಿಂಗ್ ಡೈರೆಕ್ಟ್‌ರ್ ಕೆ. ಅಂ. ಗುರು —ವಾದಿ

ಮತ್ತು

ಯೆಂ. ಜ. ಕಾಮತ್, ಗೋವಿಂದ ಕಂಪ್ತರ ಮಗ ಈಗ ಬೊಂಬ್ಯಾ ಗ್ರೆಂಟ್ ರೋಡಿನಲ್ಲಿರುವವ. —ಪ್ರತಿವಾದಿ

ಸದ್ರಿ ಪ್ರತಿವಾದಿಗೆ—

ಮೇಲ್ಕಂಡ ವ್ಯಾಜ್ಯದಲ್ಲಿ (ಸದ್ರಿ ಪ್ರತಿವಾದಿಗೆ ಸಬ್ಸ್ಟ್ಯೂಟೆಡ್ ಸರ್ವಿಸ್ ಹುಕುಂ ಆಗಿ ವ್ಯಾಜ್ಯವು ತಾರೀಕು 18ನೇ ನವಂಬ್ರ 1941ರಲ್ಲು ತನ್ನಿಸಿಕೆ ಇಟ್ಟಿರುತ್ತವೆ. ಸದ್ರಿ ಪ್ರತಿವಾದಿಗೆ ವಿನ್ಸದರೂ ಉದಾಹರಣೆ ಕೊಡುವಕೆ ಯಿದ್ರೆ ಆ ದಿವಸಹಗಲು 10·30 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿಯು ಖುದ್ದಾಗಲೀ ಯಾವಕೀಲರ್ಮುಖಾಂತರವಾಗಲೀ ಹೇಳಿಕೊಳ್ಳದಿದ್ರೆ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಟ್ಟುವುದು ತಿಳಿದುಬರುವುದು.

Mangalore 31-10-1941 } G. Narayana Rao Vakil for Plaintiff

ಮದನಕಳಾ ಶಾಸ್ತ್ರ ಎಂಬ ಸ್ತ್ರೀಪುರುಷ ರಹಸ್ಯಗಳು. ರೂ. 1—4—0

ಈ ಪುಸ್ತಕ ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಪೋಟೋಗಳೊಡನೆ ಮುದ್ರಿಸಿದೆ.

ಇದರ ಎಲ್ಲ ದೇಶದ ದೇಶ್ಯ ಕನ್ನೆಗಳುಮೋಹಿಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು, ಸ್ತ್ರೀಪುರುಷರು ವಿಗಂಬರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವೈಭವಾರಿಗಳ ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ನೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರತಿಯೊಬ್ಬ ಮುತ್ತುವ, ಮಲಗುವ ಶೃಂಗಾರ ರಹಸ್ಯ ಪೋಟೋಗಳು ಆಡಗಿವೆ. ೨೦೦ ಪುಟಗಳು ಆಡಗಿವೆ.

ಪುಸ್ತಕ ಒಂದಕ್ಕೆ ರೂ. 1—4—0

ಅಮೆರಿಕನ್ ಸ್ಪಿಸ್ ಟ್ರೇಡಿಂಗ್ ಕೊ.,
ಪೋಸ್ಟು ಬಾಕ್ಸ ನಂ. 512,
ಕಾರ್ಡ್ ಟೌನ್ ಮದರಾಸು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.—
ಮುಖದ ಮೇಲಿನ ಯಾವತ್ತೂ ಕಲೆ, ಮೃಚ್ಚಿ ಛಿದ್ರ ಮುಂತಾದುವನ್ನು ಗುಣವಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು:—

ಮೆಸರ್ಸ್ ವೆದಲ್ಪಳ್ಳಿ ಬ್ರದರ್ಸ್,
289 ಎಸ್ಪ್ಲಾನಡೆ—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಸಿನೆಮಾ ಸುದ್ದಿ

'ಘರ್ ಕೀ ಲಾಜ್'ನಲ್ಲಿ ಶಾಂತಾಹುಬ್ಲೀಕರ್

ಸೆನ್ ರೈಸ್ ಸಿಸ್ಟರ್ಸಿನವರು ಶಾಂತಾ ಹುಬ್ಲೀಕರ್ ಮತ್ತು ನಾಜೀರರ ಅಭಿನಯವುಳ್ಳ ಈ ಚಿತ್ರವನ್ನು ತಯಾರಿಸಿದ್ದಾರೆ. ಹಿಂದೂ ವೈವಾಹಿಕ ಜೀವನದ ದುರಂತ ಕಥೆಯು ಇದರಲ್ಲಿ ವರ್ಣಿತವಾಗಿದೆ

ಖಜಾಂಚಿ—ಸಿಗನೆಯ ವಾರ

ವಂಜೋಲಿ ಸಿಸ್ಟರ್ಸಿನವರ 'ಖಜಾಂಚಿ' ಚಿತ್ರವು ಮೊಂಬಯಿಯಲ್ಲಿ ಸಿಗನೆಯ ವಾರ ಡ್ಯಾಟಿದೆ. ರೋಮುಲಾ ಇಸ್ಮಾಯಿಲ್, ಮನೋರಮಾ ಇವರು ನಟನಟಿಯರು.

"ಸಂಗಂ" ನವಯುಗ ಚಿತ್ರ

ಮರಾಠೀ ಪ್ರಸಿದ್ಧ ಲೇಖಕರಾದ ಖಾಂಡೇಕಾರರ ಕಥೆ 'ಸಂಗಂ'ನನ್ನು ನವಯುಗ ಚಿತ್ರಪಟದವರು ಸಿನೆಮಾ ತೆಗೆದಿರುವರು ವಿಜಯಾಕ್ಷಿ ವಿನಾಯಕ್ ಸಾಳ್ಸಿ, ಡೋಗ್, ಮೋಲ್ಯಂಕರ್, ವತ್ಸಲಾ ಕುಮಟೇಕರ್, ಮಾಲತಿ, ಗುಪ್ತೆ ಇವರು ನಟನಟಿಯರು.

"ಸ್ವಾಮಿ"

ಸಿಕ್ಕೋ ಪ್ರೋಡಕ್ಷನ್ಸಿನವರ ಸ್ವಾಮಿ ಚಿತ್ರವು ದೀಪಾವಳಿಯಿಂದ ಪ್ರದರ್ಶಿತವಾಗುತ್ತಿದೆ. ಕರ್ದಾರರು ಇದನ್ನು ನಿರ್ದೇಶಿಸಿದವರು. ಸಿತಾರಾ ನಾಯಕಿ ನಟಿಯಾಗಿರುವಳು

"ದರ್ಶನ್"

ಪ್ರಕಾಶ ಚಿತ್ರ ಕಂಪೆನಿಯ ಹೆಸರು 'ನರ್ಸಿಭಗತ್'ನಿಂದ ಪ್ರಸಿದ್ಧವಾಗಿದೆ ಈಚೆಗೆ ಅವರು ತಯಾರಿಸಿದ 'ದರ್ಶನ್' ಚಿತ್ರವೂ ಹೆಸರು ಹೊಂದಿದೆ. ಇದರ ಕಥೆ ವರದಕ್ಷಿಣೆಯ ಸವ ಸೈಯಿಂದ ಕೂಡಿದುದು. ಪ್ರೇಮ ಅದೀಬ್, ಜ್ಯೋತಿ, ಅಮೀರ್ ಕರ್ನಾಟಕಿ, ವಿಠಾಲ, ಕೌಸಲ್ಯ, ಇವರೇ ಮೊದಲಾದವರು ನಟಿಸುವರು

ನಾಸೀಮಳ ವಿಷಯ ಅಪಪ್ರಚಾರ

ಬೊಂಬಯಿಯಲ್ಲಿ ಕಳೆದ ಕೆಲವು ವಾರಗಳಿಂದ ರೂವರಾಣಿಯೆನಿಸಿದ ನಾಸೀಮಳ ವಿಷಯ ಅಪಪ್ರಚಾರ ಪ್ರಾರಂಭಿಸಿದೆ ಮೊತ್ತಮೊದಲು ಬೊಂಬಯಿಯ ಪತ್ರಿಕೆಯೊಂದು ಅವಳ ಕುರಿತು ಟೀಕಿಸಿತು. ಆ ಮೇಲೆ ಬೇರೆಬೇರೆ ರೀತಿಯಲ್ಲಿ ಅವಳ ಹಿಸರು ಕೆಡಿಸುವಂತಹ ಅಪಪ್ರಚಾರಗಳು ಆರಂಭಿಸಲ್ಪಟ್ಟಿವು ಇದು ಯಾರೋ ಸ್ಪರ್ಧಿಗಳಿಂದ ಆರಂಭಿಸಲ್ಪಟ್ಟುದೆಂದು ತಿಳಿಯಲು ಹೆಚ್ಚಿನ ಶ್ರಮವಿಲ್ಲ

ಶಾಂತರಾಮರು ಸಂಬಳ ತೆಕ್ಕೊಳ್ಳುವುದಿಲ್ಲ?

ಸಿಲ್ವರ್ ಎಜ್ಯೆಸರಿ ಬೋರ್ಡಿನ ಪ್ರೊಡ್ಯೂಸರರಾಗಿ ನೇಮಕ ಹೊಂದಿದ ಪ್ರಭಾತದ ಪ್ರಸಿದ್ಧ ನಿರ್ದೇಶಕ ಶಾಂತಾರಾಮರು ಸಂಬಳ ತೆಗೆದುಕೊಳ್ಳದೆ ಅದರಲ್ಲಿ ಕೆಲಸಮಾಡುವರೆಂದು ಸದ್ದಿಯಿದೆ.

ಕನ್ನಡದಲ್ಲಿ ಎರಡು ಚಿತ್ರಗಳು

ಕನ್ನಡದ "ಸುಧಾದ್ಯಾ" ಚಿತ್ರದ ಬಳಿಕ "ವಸಂತಸೇನಾ" ಚಿತ್ರವು ತಯಾರಾಗುವುದಾಗಿ ತಿಳಿದಿದೆ 'ಬಸವೇಶ್ವರ ಚರಿತ್ರೆ' ಯೂ ಸಿನೆಮಾದಲ್ಲಿ ಬರುವ ಏರ್ಪಾಡಾಗುತ್ತಿರುವುದೆಂದು ಸುದ್ದಿ ಕೇಳುತ್ತೇವೆ

ನರ್ಸಿಭಗತ್ ತಮಿಳಿನಲ್ಲಿ

ನರ್ಸಿಭಗತ್ ಚಿತ್ರವನ್ನು ಮದ್ರಾಸಿನ ಚಿತ್ರಕಂಪೆನಿಯವರು ತಮಿಳು ಭಾಷೆಯಲ್ಲಿ ಮಾಡುವರೆಂದು ಸುದ್ದಿ

ಮಹಾತ್ಮಾಗಾಂಧಿ ತೆಲುಗಿನಲ್ಲಿ

ಮಹಾತ್ಮಾಗಾಂಧಿ ಚಿತ್ರವು ತೆಲುಗು ಭಾಷೆಯಲ್ಲಿಯೂ ಆಗಿದೆ

ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ವಿಶಿಷ್ಟ ಯುಕ್ತವಾದ ಗುಣವೇ ಕಾರಣವಾಗಿರುತ್ತದೆ ಮೈಗೆ ತುರಿಗಜ್ಜಿಗಳೆಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ, ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತಾರೆ ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಮುಖಕ್ಕೆರೆದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

ತಿಳಿದುಕೊಳ್ಳಿರಿ
ಎಂದು ಸಂಬಿಗೆಯಿಂದ ಹೇಳಬರುವ
ದಮ್ಮಿಗೆ ಒಂದೇಒಂದು ಉಪಾಯ



ದಮ್ಮು ಒನ್ನುಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ, ಅದರ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಪಡಿಸುವ ಉತ್ಕೃಷ್ಟಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳುವ ಆರಂಭದ ಕೂಡಲೇ ಕೆಮ್ಮು ಜೋಗುವುದು, ತೇಕು ಕಡಿಮೆಯಾಗುವುದು, ಶ್ವಾಸದ ತೊಂದರೆ ಬಿಳಿಯುವುದಿಲ್ಲ ಪಚನಕ್ರಿಯೆಯ ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಸ್ವಚ್ಛಸ್ನಗಟ್ಟಿಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಛೇತಿಗೆ, ಗಂಟಲು ಉಬ್ಬುವಂಥಾ ಮತ್ತೂ ಪ್ರಪ್ಲಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫೈನ್ (ಸೀರಿ ಸ್ಮಾಕಿಂಗ್) ಉಪಯೋಗಿಸಬೇಕು ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ್ (ಕಂಪ್ಲ ಸ್ಮಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ ಸೂ. ತಿಳಿಸಿ ಕೆಮ್ಮಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾಕಡೆ ಸಿಗುವವು ತರಿಸಿಕೊಳ್ಳುವ ವಿಳಾಸ,—

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.
ಇಲ್ಲವೇ ಮೆ॥ ವನಮಾಲೀ ಭೀಖಾ ಮತ್ತು ಕಂ॥ ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

"NACET"
ನೆಸೆಟ್ ಬ್ಲೇಡುಗಳು

ನಿಮ್ಮ ಅತ್ಯುತ್ತಮ ಶೇವಿಂಗ್ ಸಾಧನ

ಕಡಿನೆ ಕ್ರಯದ ಬ್ಲೇಡುಗಳಲ್ಲಿ ಕ್ಷೌರ ಮಾಡಲು ಸರಿಯಾಗುವುದಿಲ್ಲ. ಮತ್ತು ಪೆಳೆಟಿನಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ವಸ್ತುಗಳಿರುತ್ತವೆ. ನೆಸೆಟ್ ಬ್ಲೇಡುಗಳು ಕ್ರಯದಲ್ಲಿಯೂ ಹದವಾಗಿದ್ದು ಪ್ರತಿಯೊಂದೂ ಅತ್ಯುತ್ತಮವಾಗಿರುವುದು, ಹರಿತವಾಗಿ, ಶುಚಿಯಾಗಿ ಕ್ಷೌರ ಹೋಗುವುದು. ಅವು ಬಹುಕಾಲದಿಂದ ಪ್ರಸಿದ್ಧವಾಗಿವೆ ಅದರ ಸಲುವಾಗಿಯೇ ಮೂರು ತೂಕಾಳ್ಳೆ ರೇಜರುಗಳನ್ನು ಉಪಯೋಗಿಸಿ.

ಜಿಲ್ಲಾ ಸಮಾಚಾರಗಳು

ಶ್ರೀ. ಕೆ. ಕೇನ ಶೆಟ್ಟರು ಎರಡನೆಯ ಸಲ ಬಂಧಿತರಾದರು

೪ ತಿಂಗಳು ಕಠಿಣ ಶಿಕ್ಷೆ

ಮಂಗಳೂರಲ್ಲಿ ಎರಡನೆಯ ಸಲ ಸತ್ಯಾಗ್ರಹ ಮಾಡಿ ದಿಲ್ಲಿಯ ಕಡೆ ತರಳುತ್ತಿದ್ದ ದಕ್ಷಿಣ ಕನ್ನಡದ ಸತ್ಯಾಗ್ರಹಿ ಶ್ರೀ ಕೇನ ಶೆಟ್ಟರು ಹುಬ್ಬಳ್ಳಿಯಲ್ಲಿ ತಾ. ೧ ರಂದು ಬಂಧಿತರಾಗಿ ತಾ ೩ ರಂದು ಅವರ ವಿಚಾರಣೆ ನಡೆದು ನಾಲ್ಕು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು

ಭಾಷಣ ಸ್ವಾತಂತ್ರ್ಯ ದಿನವನ್ನಾಚರಿಸಿರಿ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಹೀಗೆ ತಿಳಿಸುತ್ತಾರೆ "ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಭಾಷಣ ಸ್ವಾತಂತ್ರ್ಯದ ಹೋರಾಟವು ಪ್ರಾರಂಭವಾಗಿ ಈಗ ಒಂದು ವರುಷವಾಯಿತು ಮಹಾತ್ಮಾ ಗಾಂಧಿಯವರು ತಾ ೩೧ ನೇ ಆಕ್ಟೋಬರ್‌ದಿವಸ ಹೊರಡಿಸಿದ ಪೇಳಿಕೆಯಲ್ಲಿ ಈ ಹೋರಾಟದ ಉದ್ದೇಶವನ್ನು ತಿಳಿಸಿರುವರು ಮಹಾತ್ಮರ ಪೇಳಿಕೆಯನ್ನು ಎಲ್ಲರಿಗೂ ತಿಳಿಸುವ ಉದ್ದೇಶದಿಂದ ತಾ ೧೨—೧೧—೪೧ ನೇ ಬುಧವಾರ ದಿವಸವನ್ನು 'ಭಾಷಣ ಸ್ವಾತಂತ್ರ್ಯ ದಿನ'ವೆಂದು ಎಲ್ಲ ಕಾಂಗ್ರೆಸ್ ಸಂಸ್ಥೆಗಳೂ, ಕಾಂಗ್ರೆಸಿಗರೂ ಆಚರಿಸುವುದು"

ಮುನ್ಸಿಪಲ್ ಕೌನ್ಸಿಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯು ತಾ ೩ ರಂದು ಚ್ಯಾರ್‌ಮೇನ್ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಿಂದ ಜರಗಿತು ಪ್ರಮೋಹಿತ ವರ್ಗದವರಿಗೆ ವೃತ್ತಿ ತೆರಿಗೆ ವಿಧಿಸುವ ವಿಚಾರವಾಗಿ ಚರ್ಚೆ ನಡೆದು ತೀರ್ಮಾನ ಮುಂದೆ ಬಿತ್ತು

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ

ಬಂಟ್ವರಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಜಲ್ಲಾ ಜಡ್ಜರಾದ ಶ್ರೀ ಗೋಪಾಲನವರ ಅಧ್ಯಕ್ಷತೆಯಿಂದ ಜರಗಿತು ಶ್ರೀ ಕುಶಲಶೆಟ್ಟಿಯವರು 'ಟೋಸ್ಟ್' ಮಾತನಾಡಿದರು. ವಿವಿಧ ಪಿನೋದಾವಳಿಗಳಿದ್ದುವು

ಉಪನ್ಯಾಸ

ಮಂಗಳೂರು ವಿದ್ಯಾರ್ಥಿ ಸಂಘದ "ಉಪನ್ಯಾಸ ಮಾಲೆ"ಯ ಆಶ್ರಯದಲ್ಲಿ ಶ್ರೀ ಎ ಪಿ ಮಾಯಿ, ಇವರು 'ಸ್ವಾತಂತ್ರ್ಯ ಮತ್ತು ಸಾಹಿತ್ಯ" ಎಂಬ ವಿಷಯವಾಗಿ ಗವರ್ನಮೆಂಟ್ ಕಾಲೇಜಿನಲ್ಲಿ ತಾ ೫ ರಂದು ಸಂಜೆ ಭಾಷಣ ಮಾಡಿದರು.

ಪ್ರಕಟಣೆ

ಅಮ್ಮೆಂಬಳ ಸುಬ್ರಾಯ ಪೈ ಮೆಮೋರಿಯಲ್ ಫಂಡಿನ ವಾರ್ಷಿಕ ಸಭೆಯು ಮೊದಲು ಪ್ರಕಟಿಸಿದಂತೆ ತಾ ೧೬ ನವೆಂಬರ ೪೧ ನೆಯ ದಿನ ಪೂರ್ವಾಹ್ನವಾಗಿರದೆ ಅಪರಾಹ್ನ ೬ ಗಂಟೆಗೆ ಕೆನರಾ ಹೈಸ್ಕೂಲಲ್ಲಿ ಜರಗುವುದೆಂದು ಈ ಮೂಲಕ ಕಾರ್ಯದರ್ಶಿಗಳು ತಿಳಿಸುತ್ತಾರೆ

ಚಿತ್ರ ಕಲಾಭ್ಯಾಸ

ಮೈಸೂರು ಮತ್ತು ಮದ್ರಾಸು ಯುನಿವರ್ಸಿಟಿಗಳಿಂದ ಚಿತ್ರಕಲಾ ಪ್ರಾವೀಣ್ಯತೆಯ ಬಗ್ಗೆ ಪಶಸ್ತಿ ಪತ್ರಪಡೆದು, ಬೊಂಬಾಯಿ ಬೆಂಗಳೂರು ಮೊದಲಾದ ಕಡೆಗಳಲ್ಲಿ ಪ್ರಸಿದ್ಧಿಹೊಂದಿದ ಚಿತ್ರ ಕಲಾಭ್ಯಾವೀಣ ಶ್ರೀ. ಶ್ಯಾಮಭಟ್ ಇವರು ಈಗ ತಮ್ಮ ಹುಟ್ಟೂರಾದ ದಕ್ಷಿಣ ಕನ್ನಡಕ್ಕೆ ಬಂದು ಮಂಗಳೂರು ಬಲ್ಮಠ ರೋಡಿನಲ್ಲಿ ಇತ್ತೀಚೆಗೆ ಒಂದು ಚಿತ್ರಕಲಾ ಶಾಲೆಯನ್ನು ತೆರೆದಿರುವರು. ನಮ್ಮಚಿಲ್ಲೆಯ ಹಾಗೂ ನಗರದಲ್ಲಿರುವ ಚಿತ್ರಕಲಾಭ್ಯಾಸ ಮಾಡಲು ಇಚ್ಛೆಯುಳ್ಳ ವಿದ್ಯಾರ್ಥಿಗಳಿಗೂ ಇತರರಿಗೂ ಇದೊಂದು ಅಪೂರ್ವ ಸಂದರ್ಭವಾಗಿದೆ

ನೇಮಕ

ಎಕ್ಸ್ಟ್ರಾ ಅಸಿ. ರಿಕ್ರೂಟಿಂಗ್ ಅಧಿಕಾರಿಯಾಗಿ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರರಾದ ಶ್ರೀ ಉಚ್ಚಿಲ್ ಕೃಷ್ಣರಾಯರು-ನೇಮಕ ಹೊಂದಿರುವರು.

ಪಡುಬಿದ್ರಿ

ಸತ್ಯಾಗ್ರಹಿಗಳಿಗೆ ಸತ್ಕಾರ ಕೂಟ

ಸತ್ಯಾಗ್ರಹ ಹೂಡಿ ಆರು ತಿಂಗಳ ಸೆರೆವಾಸವನ್ನು ಅನುಭವಿಸಿ ಎರವಾಡ ಜೈಲಿನಿಂದ ಬಿಡುಗಡೆ ಹೊಂದಿದ ಶ್ರೀ ಮಟ್ಟು ರಂಗನಾಥ ಪ್ರಭುಗಳ ಗೌರವಾರ್ಥವಾಗಿ ಪಂಚಾಯತ್ ಬೋರ್ಡಿನ ಆಫೀಸಿನಲ್ಲಿ ಪಂಚಾಯತ ಬೋರ್ಡಿನವರೂ, ಊರ ಪ್ರಮುಖರೂ ಸೇರಿ ಸತ್ಕಾರ ಕೂಟವೊಂದನ್ನು ನೆರವೇರಿಸಿದರು.

ಕಾಸರಗೋಡು

ಪ್ರಾರ್ಥನಾ ಚಳವಳಿ

ಶ್ರೀ ಉಮಾದೇವಿ ಮತ್ತು ಶ್ರೀ ರೈಹತಾನ ತ್ಯಾಬ್ಜಿ ಎಂಬ ಸ್ತ್ರೀಮಣಿಗಳು ಶ್ರೀ ಸ್ವಾಮಿ ರಾಮದಾಸರ 'The Vision' ಪತ್ರಿಕೆಯಲ್ಲಿ ಲೋಕ ಶಾಂತಿಗಾಗಿ ಒಂದು ಪ್ರಾರ್ಥನಾ ಚಳವಳವನ್ನು ನಡೆಸುವ ಕುರಿತು ಹತ್ತೂವರ್ಕಮದಿನಂತೆಯನ್ನು ಮಾಡಿದ್ದರು, ಶ್ರೀ ಉಮಾದೇವಿಯವರು ಪೋಲೆಂಡಿನವರು, ಮತ್ತು ಶ್ರೀಕ್ಯಾಬ್ಜಿಯವರು ಮಾಸಲ್ಮಾನ ತರುಣಿಯವರು ಅವರ ವಿನಂತಿಯು ಬಹಳ ಯೋಗ್ಯವಾದುದೆಂದು ಶ್ರೀ ಆನಂದಾಶ್ರಮದ ಸದ್ಗುರು ಸ್ವಾಮಿ ರಾಮದಾಸಜಿಯವರು ಒಂದು ಪ್ರಾರ್ಥನಾ ಚಳವಳವನ್ನು ಕೈದ ತಿಂಗಳು ಪ್ರಾರಂಭಿಸಿರುವರು

ಶ್ರೀ ದರ್ಮಸ್ಥಳ

ಇಲ್ಲಿ ಹರಿಕಥಾ ಕೋವಿದರಾದ ಹರಿದಾಸ ಸಾಮುಗರ ಹರಿಕಥೆಗಳು ಹಲವು ದಿನಗಳಿಂದ ನಡಿಯುತ್ತಿದೆ.

ಸುಬ್ರಹ್ಮಣ್ಯ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂಕು ಮಹಜೆಸ್ಟ್ ಧಾರೆಯಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವಶಿಷ್ಟ ಸಂಪ್ರದಾಯ ಪ್ರಕಾರ ಇದೇ ಬರುವ ವಿಷು ಸಂಕ್ರಮದ ಕಾರ್ತೀಕ ಬಹುಳ ಯುತಾ ೧೬ ರಲ್ಲು ಉತ್ಸವವು ಪ್ರಾರಂಭವಾಗಿ ಮಾರ್ಗಶಿರ ಶು. ೬ಯು ತಾ. ೩೪ ರಲ್ಲು ಚಂತಾಷಷ್ಠಿ ಮಹಾ ರಥೋತ್ಸವ ಅದೇ ಶು. ೨ ಯು ತಾ ೩೫ ರಲ್ಲು ಅವಭೃತೋತ್ಸವ (ನೌಕಾವಿಹಾರ) ಉತ್ಸವಗಳು ಜರಗುವವು.

ಗುರುಕಂಬಳ

ಸಾಂಗ್ಯಳಿಂ ನೇ ಇಸವಿ ನವಂಬರ ತಿಂಗಳ ತಾರೀಕು ೧೩ ನೇ ಗುರುವಾರ ಮತ್ತು ೧೫ ನೇ ಶುಕ್ರವಾರ (ಇದೇವ್ಯಾಲ್ ತಿಂಗಳ ತಾರೀಕ್ಕು ೨೩ ಮತ್ತು ೨೪) ದಿವ್ಸಗಳಲ್ಲಿ ಗುರುಕೂಟಳಿ ಹಬ್ಬತ್ ಆಸ್ಪಾರಡ್ಡಿನ್ ಗುರುಗಳವರ ಸಂದರ್ಶನ ಮತ್ತು ಉರುಸು ಎಂಬ ಕಾರ್ಯವು ನೆರವೇರುವುದಾಗಿ ಸದ್ರಿ ದರ್ಗೆಯ ಆಡಳ್ತೆದಾರರಾದ ಸಬ್ಬುಬ್ ಆದಂ ಸಾಹೇಬರು ತಿಳಿಸಿರುತ್ತಾರೆ.

ಇಚ್ಲಂಗೋಡು

ತಾ ೩೦—೧೦—೪೧ ರಂದು ಇಚ್ಲಂಗೋಡು ಜಿಡೆಡ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಡಿಸ್ಟಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಭಾರ್ಗವನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ವಿದ್ಯಾರ್ಥಿನಿಯಿಂದ 'ಲವ ಕುಶ ವಿಜಯ' ವೆಂಬ ನಾಟಕವು, ಕೋಲಾಟವು ಮತ್ತು ಲೇಜೀಮ್‌ಗಳೂ ಶ್ರೀ ಆಸ್ಪಣ್ಣನವರ ವಿನೋದಗಳೂ ಆಭಿನಯಿಸಲ್ಪಟ್ಟುವು

ಶಿರ್ವ

ಶಿರ್ವ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ತಾರೀಕು ೩೧—೧೦—೪೧ ನೇ ದಿವಸ ಪ್ರೆಸಿಡೆಂಟ್, ಶ್ರೀ ಎಸ್. ಅಂಣಯ್ಯ ಹೆಗ್ಡೇರವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಮಂಜಕಲ್ಲು ಪೇಟೆಯ ಮೂರು ಸುಗ್ಗಿ ಕೂಡುವಲ್ಲಿ ಒಂದು ಬಾವಿ ತೊಡುವರೆ, ಮಂಜಕಲ್ಲು ಪೇಟೆಯಲ್ಲಿ ಒಂದು ಪಾಯಿಖಾನೆ ಕಟ್ಟಿಸುವರೆ, ಮತ್ತು ಒಂದು ಪೆಟ್ರೊಮೆಕ್ಸ್ ದೀಪವನ್ನು ಇಡುವರೆ ಹಾಗೂ ಮಂಜಕಲ್ಲು ಹಿಂದೂ ಶಾಲೆಯ ಎದುರು ಗಜೆ ರಸ್ತೆಯ ಒಳಿಯಲ್ಲಿ ಒಂದು ಲಂಪಾಸು ದೀಪವನ್ನು ಇಡುವ ಬಗ್ಗೆ ಹಣ ಸಂಗ್ರಹ ಮಾಡಲ್ಯಾತು ರೂಪ್ಯ ೫೦ ನ್ನು ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯ ಎಮರ್ಜನ್ಸಿ ವಾರ್ಡು ಕಟ್ಟಿಸೋದಕ್ಕೆ ಸಹಾಯಾರ್ಥವಾಗಿ ಕೊಡುವ ಅರೋಗ್ಯ ಶಿಬಿರಸಾಹಾಗಳನ್ನು ಆಚರಿಸುವ, ಜಾಡಮಾಲಿಗಳಿಗೆ ಸಂಬಳದಲ್ಲಿ ಬಡ್ತಿ ಕೊಡುವ ನಿರ್ಣಯಗಳೂ ಆದವು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C ನಂಬ್ರ 562/41

ದಿ ಪ್ಯಾಮಸಿ ಬೇಂಕ್ ಲಿಮಿಟೆಡ್ ಮಂಗ್ಳೂರು ಛಿದ್ರ ಮೆನೆಜಿಂಗ್ ಡೈರೆಕ್ಟ್ ಕೆ ಅಂ ಸುಬ್ರಾಯ —ವಾದಿ

ಮತ್ತು

ಯಂ ಜಿ ಕಾಮತ್, ಗೋವಿಂದ ಕಂಪ್ತಿರ ಮಗ ಈಗ ಬೊಂಬ್ಯಾ ಗ್ರೆಂಟ್ ರೋಡಿನಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ—

ಮೇಲ್ಕಂಡ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿಗೆ ಸಬ್ಸ್‌ಟ್ಯೂಟೆಡ್ ಸರ್ವಿಸ್ ಹುಕುಂ ಆಗಿ ವ್ಯಾಜ್ಯವು ತಾರೀಕು 18ನೇ ನವಂಬ್ರ 1941ರಲ್ಲು ತನ್ನಿಗೆ ಇಟ್ಟಿರುತ್ತದೆ ಸದ್ರಿ ಪ್ರತಿವಾದಿಂಗೆ ವಿನಾಪರೂ ಉದಾಹರಣೆ ಕೊಡುವೆ ಬಿದ್ರೆ ೬ ದಿವಸ ಹಗಲು 10 30 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿಯು ಹಿಜ್ವಾಗಲೀ ಯಾ ವಕೀಲರ್ವಾರವಾಗಲೀ ಹೇಳಿಕೊಳ್ಳದಿದ್ರೆ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ತಿಳಿದಿರುವುದು.

Mangalore 31 10 1941 } G Narayana Rao Vakil for Plaintiff

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಇಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣವಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮದ್ರಾಸು ಮತ್ತು ಆಂಧ್ರ ದೇಶದ ವಿತರಣಾಕಾರರು—

ಮೆಸರ್ಸ್ ವೆದಲ್ಪಳ್ಳಿ ಬ್ರದರ್ಸ್,

389 ಎಸ್ಪ್ಲನೇಡ್—ಮದರಾಸು.

ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು:— ಕೊರನೇವನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

ಮದನಕಳಾ ಶಾಸ್ತ್ರ ಎಂಬ ಪ್ರೇಮ ರಹಸ್ಯಗಳು ರೂ 1—4—0

ಈ ಪುಸ್ತಕ ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಪ್ರೀತಿಯ ಫೋಟೋಸಹಿತ ಮುದ್ರಿಸಿದೆ

ಇವರ ಎಲ್ಲ ದೇಶದ ವೇಶ್ಯ ಕನ್ನೆಗರುನೋಟ್ಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು, ಸ್ತ್ರೀಪುರುಷರು ದಿಗಂಬರರಾಗಿರುವ ನಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವೈಭಿಚಾರಗಳ ಪ್ರೀತಿಸುವ ರಹಸ್ಯಗಳು, ಮುತ್ತಿರುವ ವಿಧಗಳು ಕನ್ನಿಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳ್ಳ, ಇನ್ನೂ ಅನೇಕ ಪ್ರೀತಿಯ, ಮುತ್ತಿರುವ, ಮಲಗಿರುವ ಶೃಂಗಾರ ರಹಸ್ಯ ಫೋಟೋಗಳು ಆಡಗಿವೆ. ೪೦೦ ಪುಟಗಳು ಆಡಗಿವೆ.

ಪುಸ್ತಕ ಒಂದಕ್ಕೆ ರೂ. 1—4—0

ಅಮೆರಿಕನ್ ಸ್ಪಿಸ್ ಟ್ರೇಡಿಂಗ್-ಕೊ.

ಪೋಸ್ಟ್ ಬಾಕ್ಸ್ ನಂ 512.

ಪಾರ್ಕ್ ಟೌನ್ ಮದರಾಸು.

ಸಿನೆಮಾ ಸುದ್ದಿ

'ಫೂರ್ ಕೀ ಲಾಜ್'ನಲ್ಲಿ ಶಾಂತಾಹುಬ್ಲೀಕರ್

ಸನ್ ರೈಸ್ ಪಿಕ್ಚರ್ಸಿನವರು ಶಾಂತಾ ಹುಬ್ಳೀಕರ್ ಮತ್ತು ನಾಜೀರರ ಅಭಿನಯವುಳ್ಳ ಈ ಚಿತ್ರವನ್ನು ತಯಾರಿಸುತ್ತಿದ್ದಾರೆ. ಹಿಂದೂ ವೈನಾಹಿಕ ಜೀವನದ ದುರಂತ ಕಥೆಯು ಇದರಲ್ಲಿ ವರ್ಣಿತವಾಗಿದೆ.

ಪಿಜಾಂಚಿ—ಹಿಗನೆಯ ವಾರ

ಪಂಚೋಲಿ ಪಿಕ್ಚರ್ಸಿನವರ 'ಪಿಜಾಂಚಿ' ಚಿತ್ರವು ಮುಂಬಯ್ಯಿಯಲ್ಲಿ ಹಿಗನೆಯ ವಾರ ಡಾಟಿದೆ. ರೋಮಿಲಾ ಇಸ್ರಾಯಿಲ್, ಮನೋಹರವಾ ಇವರು ನಟನಟಿಯರು.

"ಸಂಗಂ" ನವಯುಗ ಚಿತ್ರ

ಮರಾಠೀ ಪ್ರಸಿದ್ಧ ಲೇಖಕರಾದ ಖಾಂಡೇಕಾರರ ಕಥೆ 'ಸಂಗಂ'ವನ್ನು ನವಯುಗ ಚಿತ್ರನಟದವರು ಸಿನೆಮಾ ತೆಗೆದಿರುವರು. ವಿಜಯಾಲಕ್ಷ್ಮಿ ವಿನಾಯಕ್ ಸಾಳ್ವಿ, ಜೋಗ್, ಮಾಲ್ವಣಕರ್, ವತ್ಸಲಾ ಕುಮಟೇಕರ್, ಮಾಲತಿ, ಗುಪ್ತೆ, ಇವರು ನಟನಟಿಯರು.

"ಸಾವಿತ್ರಿ"

ಸಿಕ್ಕೋ ಪ್ರೊಡಕ್ಷನಿನವರ ಸಾವಿತ್ರಿ ಚಿತ್ರವು ದೀಪಾವಳಿಯಿಂದ ಪ್ರದರ್ಶಿತವಾಗುತ್ತಿದೆ. ಕರ್ದಾರರು ಇದನ್ನು ನಿರ್ದೇಶಿಸಿದವರು. ಸಿತಾರಾ ನಾಯಕ ನಟಿಯಾಗಿರುವಳು

"ಪ್ರದರ್ಶನ"

ಪ್ರಕಾಶ ಚಿತ್ರ ಕಂಪೆನಿಯ ಹೆಸರು 'ನರ್ಸಿಭಗತ್'ನಿಂದ ಪ್ರಸಿದ್ಧವಾಗಿದೆ ಈಚೆಗೆ ಅವರು ತಯಾರಿಸಿದ 'ಪ್ರದರ್ಶನ' ಚಿತ್ರವೂ ಹೆಸರು ಹೊಂದಿದೆ. ಇದರ ಕಥೆ ವರದಕ್ಷಿಣೆಯ ಸಮಸ್ಯೆಯಿಂದ ಕೂಡಿದುದು. ಪ್ರೇಮ ಅದೀಬ್, ಜ್ಯೋತಿ, ಅಮೀರ್ ಕರ್ನಾಟಕಿ, ವಿಜಾ, ಕೌಸಲ್ಯ, ಇವರೇ ಮೊದಲಾದವರು ನಟಿಸುವರು.

ನಾಸೇವಳ ವಿಷಯ ಅಪಪ್ರಚಾರ

ಬೊಂಬಯಿಯಲ್ಲಿ ಕಳೆದ ಕೆಲವು ವಾರಗಳಿಂದ ರೂವರಾಣಿಯೆಸಿಸಿದ ನಾಸೀಮಳ ವಿಷಯ ಅಪವ್ರಚಾರ ಪ್ರಾರಂಭಿಸಿದೆ ನೊತ್ತನೊದಲು ಬೊಂಬಯಿಯ ಪತ್ರಿಕೆಯೊಂದು ಅವಳ ಕುರಿತು ಟೀಕೆ ಸಿತು. ಆ ಮೇಲೆ ಬೇರೆಬೇರೆ ರೀತಿಯಲ್ಲಿ ಅವಳ ಹೆಸರನ್ನು ಕೆಡಿಸುವಂತಹ ಅಪಪ್ರಚಾರಗಳು ಆರಂಭಿಸಲ್ಪಟ್ಟವು. ಇದು ಯಾರೋ ಸ್ಪಾರ್ಧಿಗಳಿಂದ ಆರಂಭಿಸಲ್ಪಟ್ಟುದೆಂದು ತೀರ್ಮಾನ. ಹೆಚ್ಚಿನ ಶ್ರಮವಿಲ್ಲ

ಶಾಂತಕುಮಾರು ಸಂಬಳ ತೆಕ್ಕೊಳ್ಳುವುದಿಲ್ಲ?

ಸಿಲ್ಕ್ ಎಡ್ವೈಸರಿ ಬೋರ್ಡಿನ ಪ್ರೊಡ್ಯೂಸರರಾಗಿ ನೇಮಕ ಹೊಂದಿದ ಪ್ರಭಾತದ ಪ್ರಸಿದ್ಧ ನರ್ದೇಶಕ ಶಾಂತಾರಾಮರು ಸಂಬಳ ಪೆಗೆದುಕೊಳ್ಳದೆ ಅದರಲ್ಲಿ ಕೆಲಸನಾಡುವರೆಂದು ಸುದ್ದಿಯಿದೆ.

ಕನ್ನಡದಲ್ಲಿ ಎರಡು ಚಿತ್ರಗಳು

ಕನ್ನಡ "ಸುಭದ್ರಾ" ಚಿತ್ರದ ಬಳಿಕ "ನಸಂತಸೇನಾ" ಚಿತ್ರವು ತಯಾರಾಗುವುದಾಗಿ ತಿಳಿದಿದೆ 'ಬಸವೇಶ್ವರ ಚರಿತ್ರೆ' ಯೂ ಸಿನೆಮಾದಲ್ಲಿ ಬರುವ ಏರ್ಪಾಡಾಗುತ್ತಿರುವುದೆಂದು ಸುದ್ದಿ ಕೇಳುತ್ತೇವೆ

ನರ್ಸಿಭಗತ್ ತಮಿಳಿನಲ್ಲಿ

ನರ್ಸಿಭಗತ್ ಚಿತ್ರವನ್ನು ಮದ್ರಾಸಿನ ಚಿತ್ರಕಂಪೆನಿಯವರು ತಮಿಳು ಭಾಷೆಯಲ್ಲಿ ಮಾಡುವರೆಂದು ಸುದ್ದಿ.

ಮಹಾತ್ಮಾಗಾಂಧಿ ತೆಲುಗಿನಲ್ಲಿ

ಮಹಾತ್ಮಾ ಗಾಂಧಿ ಚಿತ್ರವು ತೆಲುಗು ಭಾಷೆಯಲ್ಲಿಯೂ ಆಗಿದೆ.

ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ಕೆಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡ್ತುತ್ತದೆ ಇದಕ್ಕೆ ಇದರ ವಿಷಭಿಯೋಕ್ತವಾದ ಗುಣವೇ ಕಾರಣವಾಗಿರುತ್ತದೆ ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣವಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ವಿವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು

ನಿನ್ನ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕೊಂಡುಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಮುಖಕ್ಕೆಪ್ಪರಿದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ
ಕುಟಿಕೂರಾ ಟಾಲ್ಕಮ್ ಪೌಡರ್
CUTICURA TALCUM POWDER

"NACET"
ನೆಸೆಟ್ ಬ್ಲೇಡುಗಳು

ನಿಮ್ಮ ಅತ್ಯುತ್ತಮ ಶೇವಿಂಗ್ ಸಾಧನ.

ಕಡಿಮೆ ಕ್ರಯದ ಬ್ಲೇಡುಗಳಲ್ಲಿ ಕ್ಷೌರ ಮಾಡಲು ಸರಿಯಾಗುವುದಿಲ್ಲ. ಮತ್ತು ಪೆಕೆಟಿನಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಪನ್ನುಗಳಿರುತ್ತವೆ. ನೆಸೆಟ್ ಬ್ಲೇಡುಗಳು ಕ್ರಯದಲ್ಲಿಯೂ ಹದವಾಗಿದ್ದು ಪ್ರತಿಯೊಂದೂ ಅತ್ಯುತ್ತಮವಾಗಿರುವುದು, ಸರಿಯಾಗಿ ಶುಚಿಯನ್ನಿಸ್ಪಾರ ಹೋಗುವುದು. ಅವು ಬಹುಕಾಲದಿಂದ ಪ್ರಸಿದ್ಧಿಯವೆ. ಅದರಲುವಾಗಿಯೇ ಮಾರಾ ತಾತಕಳ್ಳರೇಷ ರುಗಳನ್ನು ಉಪಯೋಗಿಸಿರಿ.

INB4

ತೆಗೆದುಕೊಳ್ಳಿರಿ
ಎಂದು ನಂಬಿರೆಯಿಂದ ಹೇಳಬರುವ
ದಮ್ಮಿಗೆ ಒಂದೇಒಂದು ಉಪಾಯ

ನಮ್ಮು ಒನ್ನುಲೇ ನೆಟ್ಟಗಾಗ್ತಲೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ವಿಷಧತೆಗೆದುಕೊಂಸಿ ಸೆತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥವರಲ್ಲ; ಅದರೆ ದಮ್ಮನ್ನು ಒಂದೆರಡು ದಿನ ನೊಂದಿಸಿದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಪಡಿಸುವ ಉತ್ಕೃಷ್ಟವೈದ್ಯಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳಲು ಅರಂಭಿಸಿದ ಕೂಡಲೇ ಕೆಮ್ಮು ಜೋಗುವುದು, ತೇಕು ಕ್ಷೀಣಿಸುವುದು, ಶ್ವಾಸಕ್ಕೆ ತೊಂದರೆ ಉಂಟಾವುದಲ್ಲ. ಪೆಚ್ಚಿನಕ್ರಿಯೆಯೂ ತಪ್ಪುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಷ್ಟಿಸಿ ಸ್ವಾಮುಖ್ಯಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಕ್ಷೀಣಕಾಸಿ, ಗಂಟಲು ಉರಿಯುವಂಥದು ಮತ್ತೂ ಪುಷ್ಟಿಸದ ಎಲ್ಲಾ ನಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫ್ಲೂಯಿಡ್ (ಲಿಕ್ವಿಡ್ ಎಕ್ಸ್ಟ್ರಾಕ್ಟ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಆಮ್ಲಪಿತ್ತ ಕೆಜ್ಜಾಗಿ ದಮ್ಮು ಪತ್ತಿದವರು ಶ್ವಾಸಹಾರಿ ಕೆಂಪೌಂಡ್ (ಕೆಂಪು ಪ್ಯಾಕಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. ೩.೨, ರೂ; ೬-೮ ಕೆಮ್ಮುಸ್ಥಿಗಳಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆ ಸಿಗುವವು. ತಂಡಿಕೊಳ್ಳುವಿಳಾಸ

ಡಾ॥ ಪುರೋಹಿತ ಫಾರ್ಮಸ್ಯಿ ಕೊಲ್ಲಾಪುರ.

ಇಲ್ಲವೇ ಮೆ॥ ವನಮಾಳೀ ಭಟ್ಟಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ವಿಜ್ಞಾನಯುಗ

ಟೆಲ್ಲಿಶನಿನಿಂದ ಬಾಂಬಿನೆವುದು

ಟೆಲ್ಲಿಶನ್ ಎಂದು ದೂರದ ಸಂಗೀತ, ನಾಟಕ ಆಟ ಮೊದಲಾದವುಗಳನ್ನು ಕಾಣುವ ಕೇಳುವ ಹೊಸ ಯಂತ್ರವು ಈಗ ನಿರ್ಮಿತನಾಗಿದೆಯಷ್ಟೆ? ಅದರ ಮೂಲಕ ಬಾಂಬಿನೆಯುವ ಹೊಸ ವಿಧಾನವೊಂದನ್ನು ಅಮೆರಿಕನ್ ವಿಜ್ಞಾನಿ ಡಾ. ಲೀಡೇ ಫೋರೆಸ್ಟ್ ಎಂಬವರು ಸೂಚಿಸುತ್ತಾರೆ. ಬಾಂಬುಗಳಿಂದ ತುಂಬಿದ ಡ್ರೈವರ್ ಇಲ್ಲದೆ ಬೇರೆ ಮನುಷ್ಯ ನಿವಾಸವಿಲ್ಲದ ಒಂದು ವಿಮಾನವನ್ನು ಹಿಡಿತದಲ್ಲಿಟ್ಟುಕೊಂಡು ೧೦ ಮೈಲು ದೂರದ ತನಕ ಬಾಂಬಿನೆಯಬಹುದೆಂದು ಅವರ ಹಂಚಿಕೆಯಿದೆ. ವಿಮಾನದಲ್ಲಿ ಟೆಲ್ಲಿಶನ್ ಯಂತ್ರವಿಟ್ಟುಕೊಂಡ ಅದರ ಮೂಲಕ ವಿಮಾನದ ಗತಿಯನ್ನು ಹಿಡಿತದಲ್ಲಿಡುವುದಾಗಿ ತಿಳಿದಿದೆ. ಇದರಲ್ಲಿ ಇಡುವ ಎಲ್ಲಾ ಉಪಕರಣಗಳೂ ಬಹಳ ಕಡಿಮೆ ಕ್ರಯದ್ದಾಗಿರುವುದರಿಂದ ಈ ವಿಮಾನವು ನಾಶವಾದರೂ ಬಹಳ ಕಡಿಮೆ ನಷ್ಟವೊದಗುವುದು. ಯುದ್ಧದಲ್ಲಿ ಮಿತ ವ್ಯರ್ಚಿಗೆ ಇದೊಂದು ಉಪಾಯವಾಗಿದೆ.

◆ ◆

ಹೊಗೆ ಕ್ರಿಮಿಗಳನ್ನು ಕೊಲ್ಲುತ್ತದೆ.

ಹೊಗೆಯಿಂದ ಮನುಷ್ಯನಿಗೆ ಬಹಳ ಅಪಾಯವಿದೆಯೆಂದು ಬಹುಕಾಲದಿಂದ ಪ್ರಸಿದ್ಧವಾಗಿರುವ ಹಂದು ವಿಷಯವಷ್ಟೆ? ಹಾಗಾಗಿ ದೊಡ್ಡ ದೊಡ್ಡ ನಗರಗಳಲ್ಲಿ ಹೊಗೆಬು ವಿಷಯ ಫೆಚ್ಚಿನ ಜಾಗರೂಕತೆ ತೆಗೆದು ಕೊಳ್ಳುವರು. ಆದರೆ ಇತ್ತೀಚೆಗೆ ಲಂಡನ್ನಿನಲ್ಲಿ ಕೆಲವು ವಿಜ್ಞಾನಿಗಳು ಶೋಧನೆ ಮಾಡಿ ಹೊಗೆಯು ಕ್ರಿಮಿಗಳನ್ನು ಕೊಲ್ಲುವುದೆಂದು ಕಂಡುಹಿಡಿದಿರುವರು. ಹೊಗೆಬತ್ತಿ ಸೇದುವುದರಿಂದ ಇಂತಹ ಗುಣವೂ ಉಂಟೆಂದು ತಿಳಿದಿದೆ. ಆದರೆ ನಮಗೆ ಭೇಕಾದಷ್ಟು ಹೊಗೆ ಒಂದು ಅಥವಾ ಎರಡು ಸಿಗರೇಟು ಸೇದುವುದರಿಂದಲೇ ಒದಗುವುದೆಂದು ತಿಳಿದಿದೆ.

◆ ◆

ಹುಚ್ಚರ ಶರೀರದಲ್ಲಿ ರಕ್ತದ ಒತ್ತಾಟ ಕಡಿಮೆ!

ಹುಚ್ಚರನ್ನು ಪರೀಕ್ಷಿಸುವ ಒಂದು ಹೊಸ ವೆದ್ಯಕೀ ಕಂಡುಹಿಡಿಯಲಾಗಿದೆ. ಬುದ್ಧಿ ಸ್ವಾಸ್ಥ್ಯವಿರುವವನು; ಯಾವುದಾದರೂ ಒಂದು ವಿಷಯದಲ್ಲಿ ಗಾಬರಿಗೊಂಡಾಗ ಆತನ ರಕ್ತದ ಒತ್ತಾಟ ಹೆಚ್ಚುವುದು; ಬುದ್ಧಿ ಭ್ರಮಿಸಿರುವವನು ಗಾಬರಿಗೊಂಡಾಗ ಆತನ ರಕ್ತದ ಒತ್ತಾಟ ಕಡಿಮೆಯಾಗುವುದು.

ವಿಚಿತ್ರ ಪ್ರಪಂಚ

ಒಂದೇ ಹೆಂಗುಸಿರುವ ದ್ವೀಪ

ಸಿಂಗಾಪುರದ ಬಳಿಯಿರುವ ಪಾಲು ವಾಸಾ ಬಾರೋಕ್ ಎಂಬ ದ್ವೀಪದಲ್ಲಿ ಕೇವಲ ಐವತ್ತು ಮಂದಿ ನಾಕ್ರ ನಿವಾಸಿಕರಿದ್ದಾರೆ. ಇವರಲ್ಲಿ ಮಲಯಿಗಳು, ಲಾಸ್ಯರಲ್ಲು ಬರ್ಮಿಗಳು ಮತ್ತು ಚೀನೀಯರೂ ಕೂಡಿರುವರು. ಪಾಲುವಾಸಾ ಬಾರೋಕ್ ಎಂಬುದು ಎಣ್ಣೆ ತುಂಬಿಸಿಡುವ ಸ್ಥಳ. ಹಡಗಗಳಿಗೆ ಅಲ್ಲಿ ಎಣ್ಣೆ ತುಂಬಿಸುತ್ತಾರೆ. ಏನತ್ಯಕ್ಕೆಷ್ಟ ಹೆಚ್ಚು ಮಂದಿ ಅಲ್ಲಿಂಲು ಸಾಧ್ಯವಿಲ್ಲ. ಅಲ್ಲಿನ ಗವರ್ನರರ ಹೆಂಡತಿ ಒಬ್ಬಳೇ ಆ ದ್ವೀಪದಲ್ಲಿರುವ ಹೆಂಗುಸು ಜಾತಿ. ಆಕೆ ಮೋಟರು ಬೋಂಟಿನಲ್ಲಿ ಒಮ್ಮೊಮ್ಮೆ ಸಿಂಗಾಪುರಕ್ಕೂ ಬರುತ್ತಾಳೆ.

ಮಾರ್ಗದ ಅಗಲವನ್ನು ಬೇಕಾದಂತೆ ಹೆಚ್ಚು ಕಡಿಮೆ ಮಾಡುವುದು

ನಮಗೆ ಏನ್ನು ಅಗಲ ಬೇಕೋ ಅಷ್ಟು ಕೈ ಹೊಂದಿಸಿಕೊಳ್ಳುವಂತಹ ಒಂದು ಹೊಸ ತರದ ಮಾರ್ಗ ಪದ್ಧತಿಯನ್ನು ಚಿಕಾಗೋದಲ್ಲಿ ಪ್ರಯೋಗಿಸಿದ್ದಾರೆ. ಇದರಿಂದ ಬೆಳಗ್ಗೆ ಸಂಜೆ ಕಾಲದಲ್ಲಿ ಜನ ಸಂಚಾರ ಹೆಚ್ಚಿರುವಾಗ ವಾಹನ ಸಂಚಾರ ಹೆಚ್ಚಿರುವಾಗ ಮಾರ್ಗವನ್ನು ಹೆಚ್ಚುಕಡಿಮೆ ಅಗಲ ಮಾಡಿಕೊಳ್ಳಲಾಗುವುದು. ಮಾರ್ಗದ ಮಧ್ಯದಲ್ಲಿ ಒಂದು ಪಟ್ಟಿ ಹಾಕಿದ್ದು ಅದನ್ನು ವಿದ್ಯುಚ್ಛಕ್ತಿಯಿಂದ ದೂರ ಸರಿಸುವ ಮಾಡಿ ಹೀಗೆ ಉದ್ದಗಲ ಹೆಚ್ಚುಕಡಿಮೆ ಮಾಡಿಕೊಳ್ಳುವುದಾಗಿದೆ.

ವ್ಯವಹಾರವಿವೇಕಕ್ಕೆ ಒಂದು ವಿನಂತಿ

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ.

ಪೆರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು
ಇಂಡಿಯಾ ದೇಶವು ಬಲಿಷ್ಠವಾಗಬೇಕು....ಪ್ರತಿಯೊಬ್ಬ ವ್ಯಕ್ತಿಯೂ ...ತನ್ನ ಪ್ರಾಣ



ಇವನ್ನು ರಕ್ಷಿಸಿಕೊಳ್ಳಲೇಬೇಕು
ಈಗಲೇ ಆ ಕೆಲಸವನ್ನು ಕೈಗೊಳ್ಳಿರಿ! ನಿಮ್ಮಲ್ಲಿ ನೀನೇ ಯೋಜಿಸಿಕೊಂಡಿರಿ. ನಿಮ್ಮ ರಕ್ಷಣೆಗಾಗಿ ನೀನೇ ಸಹಾಯ ಮಾಡಿರಿ.

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಆದಕ್ಕಾಗಿ ನಾವು ನಿನಿಯೋಗಿಸುವ ಪ್ರತಿಯೊಂದು ಆಣೆಯೂ ಇಂಡಿಯಾದ ಸೇನೆ, ನೌಕಾ, ವಿಮಾನದಳಗಳ ರಕ್ಷಣೆಗೆ ಸಹಾಯಕವಾಗಿ ಪರಕೀಯರ ಆಕ್ರಮಣ ಧಾಳಿಯನ್ನು ನಿರೋಧಿಸಲು ಇಂಡಿಯಾದ ಬಲವನ್ನು ಬೆಳೆಸುತ್ತದೆ.

G.I.Ka.Ad. No. 43-A

ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ.

BHUVANENDRA PRODUCTS LTD.,

Head Office and Factory: KATAPADI S Kanara.

Depots: 1 Maharatha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಆಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟಿಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕಿಸ್ಟರು —
ಯು ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಷೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. b. B S ಸಿ ಸಿ ಸಿ ಬಿಲ್ಡಿಂಗ್.

THE PIE-MONEY BANK, LTD.
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs 5000 run regularly on systematic lines. Unique Banking facilities to Businessmen and interested Public
Apply for particulars-
K R. GURU, *Managing Director*

The Bank of Mangalore Limited.
Branches —MOODABIDRI & PADUBIDRI
HEAD OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3% to 5%.
INTEREST PAYABLE QUARTERLY
Interest on Savings Bank Deposits allowed at at 2½%.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ಜೊಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕುಳಗುಂದ ಜಾನುವಾರ ಸಂತೆ
4-11-1941 ರಿಂದ 17-11-1941

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ. 18-11-1941
ಶ್ರೀ ಸುಬ್ರಹ್ಮಣ್ಯ ಷಷ್ಠಿ ಮಹೋತ್ಸವ. 24-11-1941

ಪ್ರಯಾಣಿಕರ ಮತ್ತು ಯಾತ್ರಾ ಸ್ಥಳಗಳಿಗೆ ಜೋಗಲಿಬ್ಬಿಸುವ ಯಾತ್ರಾರ್ಥಿಗಳ

ಅನುಕೂಲತೆಗಾಗಿ ಇದೇ ಬರುವ 1-11-1941 ರಿಂದ 30-11-1941 ರ ವರೆಗೆ ಮೇಲ್ಕಂಡ ಸ್ಥಳಗಳಿಗೆ

ಅಗತ್ಯವಿದ್ದಲ್ಲಿ

ಸ್ಪೆಶಲ್ಲು ಸರ್ವಿಸುಗಳನ್ನು ಚ್ಹಾಲುಮಾಡುವ ಏರ್ಪಾಡನ್ನು ಮಾಡಲಾಗುವುದು

ಹೆಚ್ಚಿನ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಃ ಕೇಳಿ ತಿಳಿಕೊಳ್ಳಬಹುದು

THE JOINT MANAGERS,
The Combined Booking Agency, Mangalore.

ವಿದೇಶಕ್ಕೆ ವಾರ್ಷಿಕ ಚಂದಾ ರೂ. 2-0-0 | ಕಳಿಸಿದ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0 | Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 7-11-1941 [ಸಂಚಿಕೆ 44]

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಪ್ರಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ನಕ್ಕನಾಕೆ, ಬೊಮ್ಮೆ ನೊವಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ಕುರಕೆ, ಕುರಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ನೊವಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಎಲ್ಲಾ ಔಷಧಿ ಅಂಗಡಿಗಳಲ್ಲಿ ಮತ್ತು ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI, —MANGALORE, —CALICUT —MADRAS,
TRIVANDRUM, BANGALORE City, and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೊಂದರ

ನರಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906



ರಾವಣ 'ಸನ್ಯಾಸಿ'ಯಲ್ಲ; 'ಅರ್ಜುನ ಸನ್ಯಾಸಿ'!

'ಸುಭದ್ರಾ' ಚಿತ್ರದಲ್ಲಿ ಒಂದು ದೃಶ್ಯ.

KANNADA ILLUSTRATED WEEKLY



ನರನಾಡಿಗಳ ದೌರ್ಬಲ್ಯತೆಯಿಂದ ಜೀವವು ಕೆಡದಂತೆ ನೋಡಿಕೊಳ್ಳಿರಿ.

ಅಧಿಕ ಜನರು ಮೊದಲಾಗಲೀ ಕಡೆಗಾಗಲಿ, ನಂ [illegible] ನರಳಿ ಆರೋಗ್ಯವನ್ನು ಕಳೆದುಕೊಂಡು ವಿನ್ನಚಿತ್ತರಾಗುತ್ತಾರೆ ಈ ಪ್ರಕಾರವಾಗಿ ನೀವು ನರಳುವಿರಾದರೆ, ಅಮೂಲ್ಯ ಆಹಾರಪಾನೀಯವಾದ 'ಓವಲ್ಟಿನ್' ನ್ನು ಸ್ವಲ್ಪದಿನಗಳ ತನಕ ಕುಡಿದುನೋಡಿರಿ. ಆಗ ಪುನಃ ಎಷ್ಟು ಉತ್ತಮ ಆರೋಗ್ಯವಿರುತ್ತಿರೆಂಬುದು ನಿಮಗೆ ತಿಳಿಯುವದು. ನಿಮ್ಮ ನರನಾಡಿಗಳು ಹೊಸತಾಗಿ ಕಾಣುವವು ಚಿನ್ನತೆಯು ಮಾಯವಾಗುವುದು ಸುಖನಿದ್ರೆಯು ಬೀಳುವುದು

'ಓವಲ್ಟಿನ್' ನರನಾಡಿಗಳಿಗೆ ಪೋಷಣೆಯನ್ನೀಯುವುದು, ಜೀರ್ಣಶಕ್ತಿಯನ್ನುವೃದ್ಧಿಗೊಳಿಸುವುದು, ಮತ್ತು ಅದೇ ಸಮಯದಲ್ಲಿ ಮೇಕವನ್ನೂ, ನಿದ್ರೆಯನ್ನೂ ಬಲಗೊಳಿಸುವುದು. ಓವಲ್ಟಿನ್ ನ್ನು ಯಾವಾಗಲೂ ಕುಡಿದು ನಿನ್ನ ಆರೋಗ್ಯವನ್ನು ಸರಿಯಾಗಿರಿಸಿರಿ

ನಿನೆಯಹಾಕುವಾಗಿದ ಬಾರ್ಲಿ ಮನದ ಹಸಿಹಾಲಿನಿಂದ ಇತರ ನೈಸರ್ಗಿಕ ವಸ್ತುಗಳಿಂದ ತಯಾರಿಸಲ್ಪಟ್ಟಿದೆ ಓವಲ್ಟಿನ್ ಜಗತ್ತಿನ ಎಂದು ಉತ್ತಮ ಆಹಾರಪಾನೀಯ ಇತರ ಎಲ್ಲಾ ನಕಲಿಯನ್ನು ತ್ಯಜಿಸಿರಿ

ಓವಲ್ಟಿನ್ ಎಂಬುದು ಅತಿಶಕ್ತಿಯವರ ದ ಆಹಾರ ಪಾನೀಯವಾಗಿದ್ದು ಇದನ್ನು ತಣ್ಣಗೆಯೂ ಬಿಸಿಯಾಗಿಯೂ ಸೇವಿಸಬಹುದು. ಅದಲ್ಲದೆ ಇದನ್ನು ತಯಾರಿಸುವುದು ಬಹಳ ಸುಲಭ ಮತ್ತು ತಯಾರಿಸುವ ವಿಧಾನವು ಟಿನ್ನಿನಲ್ಲಿದೆ

ಎಲ್ಲಾ ಕೆಮ್ಮುಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್ಟಿನ್'

OVALTINE [illegible]

ಏಜೆಂಟರು—

ಗ್ರೇಹಮ್ಸ್ ಟ್ರೇಡಿಂಗ್ ಕೋ. (ಇಂಡಿಯಾ) ಲಿಮಿಟೆಡ್.

ಕೈಥನಸ್ ಹೌಸ್, 3/10/811, ಲಿಂಗಿಚೆಟ್ಟಿಸ್ಟ್ರೀಟ್, ಮದ್ರಾಸು, ಹಾಗೂ ಕಲ್ಕತ್ತಾ, ಬೊಂಬಾಯಿ ಕರಾಚಿ ಮತ್ತು ರಂಗೂನ್.

OV./10/40

ಸಾದರ ಸ್ವೀಕಾರ

ಪುಷ್ಪಾಂಜಲಿ(ಹೈಲರಹದ ಮಾಸ ಪತ್ರಿಕೆ ಕ ಸಂಪುಟ ೧೧ ಸಂ ೨ ನುಂಗಳೂರು ಶ್ರೀನಿವಾಸ ಸಾರಶಾಲೆಯಿಂದ ಪ್ರತಿ ತಿಂಗಳು ಹೊರಬೀಳುವ ಸಂಸ್ಕೃತ ಕನ್ನಡ ಭಾಷೆಗಳ ಲೇಖನಗಳುಳ್ಳ ವಿವಿಧ ಚಿತ್ರ ರಂಜಕವಾದ ಈ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದರ ಕನ್ನಡ ವಿಭಾಗದಲ್ಲಿ 18 ಕತೆ, ಕವಿತೆ ಪ್ರಬಂಧ ಲೇಖನಗಳು, ಸಂಸ್ಕೃತ ವಿಭಾಗದಲ್ಲಿ ಎರಡು ಲೇಖನಗಳೂ ಇವೆ. ತಾಲೆಯ ಉಪಾಧ್ಯಾಯರಿಗೆ ಇದರಲ್ಲಿ ಲೇಖನ ಮತ್ತು ಚಿತ್ರಗಳನ್ನು ಬರೆದಿದ್ದಾರೆ. ಇದರಲ್ಲಿ ಕೊಟ್ಟಿರುವ ಕೆಲವು ಚಿತ್ರಗಳು ಬಹಳ ಸುಂದರವಿದೆ ಪ್ರತಿಯೊಬ್ಬರೂ ಒಬ್ಬರು ಸುಂದರವಾದ ಕೈಬರಹವುಳ್ಳವರು ಇದೇ ಸಂಚಿಕೆಯನ್ನು ಬರೆದರೆ ಚೆನ್ನಾಗಿರುತ್ತದೆ. ಅಂತೂ ಶ್ರೀನಿವಾಸ ಸಾರಶಾಲೆಯ ವ್ಯಯಸ್ಥೆಯು ಸ್ತುತ್ಯವಿದೆ

ರಾಷ್ಟ್ರೀಯ ನಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

"ನ ನಶ್ಯತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

14—11—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೪—೧೧—೧೯೪೧]

ಸಮರಭೂಮಿಯ ಸಂಚಾರ

ರಶ್ಯಾ ರಣಭೂಮಿಯಲ್ಲಿ ಜರ್ಮನ ಮುಂದೊತ್ತುವ ವೇಗವು ಗಣ್ಯ ಕಡಿಮೆಯಾಗಿದೆ. ಪೊಲೊ ಕೊಅಾ ಮಾಸ್ಕವ ಬಳಿಯಲ್ಲಿರುವ 'ಎಸ್' ಎಂಬ ಸ್ಥಳದ ಸಮೀಪದಲ್ಲಿ ಜರ್ಮನರನ್ನು ಹಿಡಿದು ಗೆದಿಸಲು ರಶ್ಯನ್ ಸೈನ್ಯಗಳು ಯತ್ನಿಸಿದವೆಂದು ತಿಳಿದಿದೆ. ಇದನ್ನು ಸ್ವಾಧೀನ ಪಡಿಸಲು ಇತ್ತಂಡದವರೂ ತೀವ್ರ ಹೋರಾಟ ನಡೆಸುತ್ತಿರುವರು. ಮೊಝೈಯಿಸ್ಕಿನ ಜಲಭಾಗದಲ್ಲಿ ಒಂದು ಬದಿ ರಶ್ಯನ್ ಆಕ್ರಮಣ ನಡೆದಿದ್ದು ಜರ್ಮನರು ಬಹಳ ತೀವ್ರವಾಗಿ ಪ್ರತಿಭಟಿಸಿರುವರು. ಜರ್ಮನರನ್ನು ರಶ್ಯನರು ಎಲ್ಲ ವ್ಯೂಹಗಳಲ್ಲಿಯೂ ಎದುರಿಸುತ್ತಿದ್ದಾರೆ. ಮುಖ್ಯವಾಗಿ ಕ್ರಿಮಿಯಾ ಮತ್ತು ಟೂಲಾಗಳಲ್ಲಿ ವೀರಾವೇಶದ ಪ್ರತಿಭಟನೆ ನಡೆದಿದೆ.

ಓಕಾ ನದಿಯನ್ನು ದಾಟಲು

ಸೆವಾಸ್ತಪೋಲ್ ನುತ್ತು ಕರ್ಚ್‌ನ ಬಳಿ ಜರ್ಮನ್ ರುಮೇನಿಯನ್ ಸೈನಿಕರು ಮುಂದೊತ್ತುತ್ತಿರುವರೆಂದು ಸುದ್ದಿಯಿದೆ. ಮೋಸ್ಕೋ ರಣಭೂಮಿಯಲ್ಲಿಯೂ ಜರ್ಮನ್ ದಾಳಿಯನ್ನು ಬಲಪಡಿಸುವ ಯೋಜನೆಗಳಾಗುತ್ತಿವೆಯೆಂದು ಟಾಸ್ ಏಜನ್ಸಿಯ ವಾರ್ತೆ. ಮೋಸ್ಕೋ ನಗರದಿಂದ ದಕ್ಷಿಣಕ್ಕಿರುವ ಓಕಾ ನದೀ ತೀರದಲ್ಲಿ ದೊಡ್ಡ ಕಾಳಗ ನಡೆಯುತ್ತಿದೆ. ಓಕಾ ಮತ್ತು ನಾರಾ ನದಿಗಳ ಸಂಗಮ ಸ್ಥಳದಲ್ಲಿ ಈ ಯುದ್ಧವು ಆಗುತ್ತಿದೆಯಂತೆ. ಓಕಾ ನದಿಯನ್ನು ದಾಟಬೇಕೆಂದು ಜರ್ಮನರು ಹೋರಾಡುತ್ತಾರೆ. ಅವರನ್ನು ರಶ್ಯನರು ಹಿಂದೊಡಿದರು.

ಶಾಂತಿ ಸಾಗರದ ಹೋರಾಟ

ಶಾಂತಿಸಾಗರದಲ್ಲಿ ಹೋರಾಟವಾದರೆ ಬ್ರಿಟನೂ ಯುದ್ಧಕೆಹಳೆಯನ್ನೂದುವುದೆಂದು ಚರ್ಚಿಲರು ಒಂದು ವೀರಾವೇಶದ ಭಾಷಣವಿತ್ತರು. ಶಾಂತಿಸಾಗರದ ಶಾಂತತೆಯನ್ನು ರಕ್ಷಿಸುವುದಕ್ಕೋಸ್ಕರ ಅಮೆರಿಕವು ಜಪಾನಿನೊಡನೆ ವ್ಯವಹರಿಸುತ್ತಿರುವುದು ಒಂದು ವೇಳೆ ಅದು ಸಾಧ್ಯವಾಗದೆ ಹೋರಾಟ ಮಾಡಬೇಕಾದ ಸಂದರ್ಭ ಬಂದರೆ ಬ್ರಿಟನು ಕೂಡಲೇ ಜಪಾನಿನ ವಿರುದ್ಧ ಕತ್ತಿ ಕಟ್ಟುವುದೆಂದು ಅವರು ಸಾರಿ ಹೇಳಿದರು. ಹಿಟ್ಲರನು ಆರಂಭಿಸಿದ ಯುದ್ಧವು ಯೂರೋಪನ್ನು ಮಾತ್ರ ಸಲ್ಲದೆ ಏಷ್ಯಾ ಖಂಡವನ್ನೂ ಹೆಚ್ಚುಬಾಧಿಸುವುದೆಂದು ಅವರು ಎಚ್ಚರಿಸಿದ್ದರೆ. ಜಪಾನು ಸರಕಾರೀ ಪ್ರಕಟಣೆಗಾಗಲು ಚರ್ಚಿಲರ ಭಾಷಣದ ವಿಷಯ ಹೇಳುತ್ತಾ ಅವರು ಅದರ ನೈತಿಕಿಕವಾಗಿ ಹೇಳಿದ್ದರೆ ಮಾತ್ರ ಜನರಿಗೆ ಆಶ್ಚರ್ಯವಾಗುತ್ತಿತ್ತು ಎಂದನು.

ಜಪಾನ್ ಅಮೆರಿಕ

ಜರ್ಮನಿಯಲ್ಲಿ ಮೊದಲು ತನ್ನ ರಾಯಭಾರಿಯಾಗಿದ್ದ ಕುರುಸುವನ್ನು ಜಪಾನು ಇಂದು ಅಮೆರಿಕಕ್ಕೆ ವಿಶೇಷ ರಾಯಭಾರಿಯಾಗಿ ಕಳುಹಿಸಿದೆ. ಅಲ್ಲಿ ರುವ ಜಪಾನೀ ರಾಯಭಾರಿಗೆ ಜಪಾನು ಅಮೆರಿಕೆಗಳೆಳಗೆ ಸಂಧಾನ ಮಾಡಲು ಇಪನ್ನುಹಾಯ ಮಾಡುವರೆಹೊಗಿರುವ ನೆಂದು ತಿಳಿದಿದೆ. ಜಪಾನರು ಅಮೆರಿಕದೊಡನೆ ಯಾವುದಾದರೊಂದು ಕೊನೆಯ ತೀರ್ಮಾನಕ್ಕೆ ಬರುವರೆಂದೂ ಇದರಿಂದ ಎಲ್ಲಾ ಕಡೆಗೂ ಮೂಕೆದ್ದಿದೆ. ಪೂರ್ವ ದೇಶದಲ್ಲಿ ಶಾಂತಿಯಾಗಲಿ, ಕ್ರಾಂತಿಯಾಗಲಿ ಇದರಿಂದ ನಿಶ್ಚಯವಾಗಿ ಬಹುದು. ಆದರೆ ಜಪಾನಿನವರು ಜಯಶೀಲರಾದ ಕೆರ್ಕ್ ಗಳಿಗೆ ಅಮೆರಿಕದವರು -ಒಪ್ಪುವುದು ಅಸಾಧ್ಯವೆನ್ನುವವರೂ ಹಲವರಿದ್ದಾರೆ.

ಈ ಸಂಧಾನ ಕಾರ್ಯವು ಬಹಳ ಸ್ವಾರಸ್ಯದ್ದಾಗಿದೆ. ಕಳೆದ ಮೂರು ತಿಂಗಳುಗಳಿಂದ ಯಾವುದೋ ಗುಪ್ತ ವ್ಯವಹಾರಗಳು ನಡೆಯುತ್ತಲೇ ಇದ್ದುವು. ಅದೇ ಈಗ ಆರಂಭವಾಗಿದೆ ಒಟ್ಟಿನಿಂದ ಈ ಉಭಯರಿಗಳಿಗೂ ಮನಸಿದು ಹೋರಾಟಕ್ಕಿಳಿಯಲು ಮನಸ್ಸಿಲ್ಲ. ನಿರ್ವಾಹವಿಲ್ಲದಿದ್ದರೆ ಎರಡು ರಾಷ್ಟ್ರಗಳೂ ಬಿಲ್ಲರಿಯುವುಗಳಲ್ಲ. ಜಪಾನಿಗೆ ಹಿಟ್ಲರನ ಮಿತ್ರತ್ವದಿಂದ ತಪ್ಪಬೇಕಾಗಿದೆ, ಪೂರ್ವದಲ್ಲಿ ಸಾಮ್ರಾಜ್ಯ ಬೆಳೆಸುವ ಮಹತ್ವಾಕಾಂಕ್ಷೆಯೂ ಇದೆ ಅಮೆರಿಕಕ್ಕಾದರೂ ಪೂರ್ವ ದೇಶದಲ್ಲಿ ಶಾಂತಿ ಕಾವಾದಿ ಕೊಳ್ಳಬೇಕಾಗಿದೆ. ಇವು ಎರಡೂ ಈ ಮಾತ ಕತೆಗಳಿಂದ ಸಾಧಿಸುವವೇ ನೋಡಬೇಕಾಗಿದೆ.

ಟರ್ಕಿ ಜರ್ಮನಿ ಸಂಧಾನ

ಟರ್ಕಿ ಬಲ್ಗೇರಿಯಾ ಗಡಿಗಳಲ್ಲಿ ಬಹಳ ಮುಂದಿ ಜರ್ಮನ್ ಸೈನಿಕರು ಬಂದು ನಿಂತಿದ್ದರೆಂದು ತಿಳಿದುಬಂದಿತ್ತು. ಇದರಿಂದ ಟರ್ಕಿಗೆ ಬೇಗನೇ ಅಪಾಯವೊದಗುವುದೇ ಎಂದು ಊಹಿಸುವಂತಾಗಿತ್ತು. ಆದರೆ ಈಗ ಕೇಳುತ್ತಿದೆ, ಟರ್ಕಿ-ಜರ್ಮನಿಗಳೊಳಗೆ ವ್ಯಾಪಾರ ಸಂಧಾನ ನಡೆಯಿತೆಂದು.

ಇದರಿಂದ ಈಗ ಜರ್ಮನಿ ಮೌನ ಹಿಡಿದಿದೆ. ಟರ್ಕಿಗೆ ಗಂಡಾಂತರ ಕಪ್ಪಿ ಕಂದು ಇದರ ಅರ್ಥವೆ? ಜರ್ಮನಿಯು ಸಂಪ್ರದ್ಯಾಯದಂತೆ ಅದಕ್ಕೆಬಾಸ್ಯಂದವಾಗಲಿ ಸಖ್ಯವಾಗಲಿ ಇಲ್ಲ. ಅದು ಯಾವುದರ ಕುರಿತು ಮಾತನಾಡದಿರುವುದೋ ಹೆಚ್ಚಾಗಿ ಅದರ ಮೇಲೆಯೇ ಲಕ್ಷ್ಯ ಮೆಣ ಮಾಡುತ್ತದೆ. ಟರ್ಕಿಯ ವಿಚಾರದಲ್ಲಿಯೂ ಜರ್ಮನಿ ಈ ಸಂಪ್ರದಾಯವನ್ನು ಬಿಡಬಹುದೆಂದು ಹೇಗೆಹೇಳುವುದು?

ಟರ್ಕಿಯು, ಈಗ ಅಸ್ಕೋಸ್ಯ ಯುದ್ಧ ಮಾಡುತ್ತಿರುವ ಜರ್ಮನಿ ಬ್ರಿಟನು ಎರಡು ರಾಷ್ಟ್ರಗಳೊಡನೆಯೂ ಸಂಧಿ ಮಾಡಿಕೊಂಡಿದೆ ವ್ಯಾಸ್ಸಿನ ಪತನದಿಂದ ಟರ್ಕಿ ದುರ್ಬಲವಾಗಿದೆ, ಅಂತೆಯೇ ಗ್ರೀಸು ಬಲ್ಕೇರಿಯಾಗಳಲ್ಲಿ ನಾಜಿ ಆಕ್ರಮಣವಾದ ಮೇಲೆ ಟರ್ಕಿಯು ಏದಿಗುಂದಿ ಬಂತಾಗಿದೆ. ಯುಕ್ರೇನಿನಲ್ಲಿ ಜರ್ಮನಿ ಮುಂಧಡಿಯಿಡುತ್ತಾ ಬಂದಂತೆ ಟರ್ಕಿ ಕೈಕೊಲು ಬಿಡುತ್ತಿದೆ. ಜರ್ಮನ್ ಸೇನೆಗಳು ಟರ್ಕಿಯ ಮೂಲಕ ಹಾದುಹೋಗುವಂತೆಯೂ ಆ ಸೇನೆಗಳು ಇರಾಕ್ ಮೆತ್ತ ಇರಾನ್‌ಗಳನ್ನು ನಿವೇಶಿಸುವಂತೆಯೂ, ಜರ್ಮನಿ ಬೆಡಿದೆ ಒತ್ತಾಯ ಮಾಡುತ್ತಿದೆ "ಳಕ್ತ ಹರಿ, ಇತ್ತ ಹುಲಿ" ಎಂಬಂತಾಗಿದೆ ಈಗ ಟರ್ಕಿಯ ಪರಿಸ್ಥಿತಿ. ಟರ್ಕಿ ಉಭಯ ಸಂಕಟದಲ್ಲಿ ಬಿದ್ದಿದೆ



ಸ್ವದೇಶಾಭಿಮಾನಿ

ಕಾರೇಕು 7—11—1941

ಜಪಾನಿನ ಧೋರಣವೇನು?

ಜಪಾನು ಇತ್ತೀಚೆಗೆ ಕೆಲಸಮಯದಿಂದ ಮೌನವ್ರತವನ್ನು ಅವಲಂಬಿಸಿದೆ. ಆದರೂ ಅದರ ವಿಷಯ ಎಲ್ಲರಿಗೂ ಸಂಶಯಗಳು ಇದ್ದೇ ಇವೆ. ಯಾವ ದಕ್ಕೋ ಹೊಂಚು ಹಾಕಿ ಜಪಾನು ಕುಳಿತಿದ್ದು, ಸಮಯ ಸಾಧಿಸಿ ಯಾವುದಾದ ಕೊಂದು ರಾಷ್ಟ್ರದ ಮೇಲೆ ಅದು ಆಕ್ರಮಿಸಲಿದೆಯೆಂದು ಹಲವರು ತರ್ಕಿಸುತ್ತಾರೆ. ಚರ್ಚಿಲರು ಇತ್ತೀಚೆಗೆ ಒಂದು ಭಾಷಣದಲ್ಲಿ ಜಪಾನನ್ನು ಎಚ್ಚರಿಸಿದ್ದು ನೋಡಿದರೆ ಜಪಾನಿನ ಅಂತರಂಗದಲ್ಲಿರುವ ಮಹತ್ವಾಕಾಂಕ್ಷೆಯ ಬಗ್ಗೆ ಬ್ರಿಟನೂ ಕಳವಳಗೊಂಡಂತೆ ತೋರುತ್ತದೆ. ಶಾಂಕಾಯಿಗಾರದಲ್ಲಿ ಜಪಾನು ಆಶಾಂತಿಯನ್ನುಂಟುಮಾಡುವಂತಹ ಕೋಲಾಹಲದ ಸಂದರ್ಭವನ್ನು ಚರ್ಚಿಲರು ಮುಂಗಂಡಂತೆ ಅರ್ಥವಾಗುತ್ತದೆ. ವಿನ್ಸ್ ಕೊನೊಯಿ ಮಂತ್ರಿಮಂಡಳವು ರಾಜೀನಾಮೆಯಿತ್ತು ಟೋಜೋರ ಮಿಲಿಟರಿ ಮಂತ್ರಿಮಂಡಳವು ಅಧಿಕಾರಕ್ಕೇರಿದ ಮೇಲೆ ಜಪಾನು ಕೂಡಲೇ ಯುದ್ಧಕ್ಕೆ ಇಳಿಯುವುದೆಂದು ಹಲವರು ಊಹಿಸಿದ್ದರು. ಆದರೆ ಟೋಜೋ ಸರಕಾರವು ಇನ್ನು ಕೂಡಾ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿರುವುದಿಲ್ಲ. ಮೂತ್ಸವಲ್ಲದೆ ಜಪಾನು ಅಮೆರಿಕದೊಡನೆ ಸಂಧಾನ ಬೆಳೆಸುತ್ತಲೇ ಇದೆ. ಅಮೆರಿಕವಲ್ಲಿರುವ ರಾಯಭಾರಿಗೆ ಸಹಾಯ ಮಾಡಲು ಕುರುಸು ಇವರನ್ನು ವಿಶೇಷ ರಾಯಭಾರಿಯಾಗಿ ಜಪಾನು ಈಗ ಅಮೆರಿಕಕ್ಕೆ ಕಳುಹಿಸಿದೆ. ಅತ್ತ ಅಮೆರಿಕದಲ್ಲಿ ಸಂಧಾನದ ಮಾತುಕತೆಗಳು ನಡೆದಂತೆ ಇತ್ತ ಜಪಾನು ಯುದ್ಧಸನ್ನದ್ಧತೆ ಮಾಡುತ್ತದೆಯೆಂದೂ ಹೇಳಿಕೆಯುಂಟು. ಚರ್ಚಿಲರ ಎಚ್ಚರಿಕೆಯ ಭಾಷಣವಾದರೂ ಈ ಅಭಿಪ್ರಾಯವನ್ನು ದೃಢಪಡಿಸುವಂತಿದೆ.

ಜಪಾನು ಅಮೆರಿಕದೊಡನೆ ಸಂಧಾನದ ವಿಷಯ ಕೆಲವು ಶರ್ತಗಳನ್ನು ಹಾಕಿದೆ. ಚೀನಕ್ಕೆ ಆರ್ಥಿಕ ಹಾಗೂ ಸೈನಿಕ ಸಹಾಯಕೊಡಬಾರದು, ಚೀನದ ವಿಷಯದಲ್ಲಿ ಜಪಾನಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು, ಸೈನಿಕ, ನೌಕಾ, ವಾಣಿಗರಿಂದ ಜಪಾನ್ನನ್ನು ಸುತ್ತುಗಟ್ಟಬಾರದು, ಪೂರ್ವ ಏಷಿಯಾದಲ್ಲಿ ಜಪಾನಿನ ಕಾರ್ಯಕ್ಷೇತ್ರವನ್ನು ವಿಸ್ತರಿಸಬೇಕು, ಚೀನ ಮತ್ತು ಜಪಾನಿನ ಆಸ್ತಿಯನ್ನು ಕರಗಿಸಕೂಡದು, ವ್ಯಾಪಾರವನ್ನು ಪುನಃ ಪ್ರಾರಂಭಿಸಬೇಕು, ಮಂಚುಕೋಗೆ ಮಾನ್ಯತೆ ಕೊಡಬೇಕು ಎಂಬೀ ಬಗೆಯ ಶರ್ತಗಳನ್ನು ಜಪಾನು ಅಮೆರಿಕದ ಮುಂದಿಟ್ಟಿರುವುದಾಗಿ ತಿಳಿದು ಬಂದಿದೆ.

ಅಮೆರಿಕವು ಈ ಮೇಲಿನ ಶರ್ತಗಳನ್ನು ಒಪ್ಪಿಕೊಳ್ಳುವುದೋ ಇಲ್ಲವೋ ಎಂದು ಈಗ ಹೇಳಲು ಬರುವಂತಿಲ್ಲ. ಅಮೆರಿಕವು ಈ ಶರ್ತಗಳಿಗೆ ಒಪ್ಪಿದರೆ ಜಪಾನಿಗೆ ಜಯ ದೊರೆತಂತೆಯೇ ಆಯಿತು. ಕಳೆದ ನಾಲ್ಕು ವರ್ಷಗಳಿಂದ ಚೀನದೊಡನೆ ಕಾದಾಡಿ ಬಳಲಿದ ಜಪಾನವು ಮತ್ತೊಮ್ಮೆ ಧೈರ್ಯದಿಂದ ಮುಂದೊತ್ತಬಹುದು. ವಿಷಯದಲ್ಲಿ ತನ್ನ ಸಾಮ್ರಾಜ್ಯ ಕಟ್ಟುವ ಇಚ್ಛೆಯನ್ನು ಕಾರ್ಯರೂಪಕ್ಕೆ ತರಬಹುದು. ಏಂತೂ ಒಂದು ಕಡೆಯಿಂದ ಜಪಾನಿನ ಮೇಲೆ ಜರ್ಮನಿಯ ಒತ್ತಾಯವೂ ಇದೆಯೆಂದೂ, ಥಾಯ್‌ಲೆಂಡ್ ಮತ್ತು ಬರ್ಮಾ ದೇಶಗಳ ಮೇಲೆ ಬೀಳಲು ಹಿಟ್ಲರನು ಹೇಳುತ್ತಿರುವನೆಂದೂ ವಾರ್ತೆಯಿದೆ. ಹೀಗೆಲ್ಲಾ ಇದ್ದರೂ ಜಪಾನು ಈಗ ಮೌನವ್ರತವನ್ನೇ ಅವಲಂಬಿಸಿ ಪರಿಸ್ಥಿತಿಯನ್ನು ವರ್ಯಾಲೋಚಿಸುತ್ತಲಿದೆ. ಜಪಾನಿನ ಅಂತರಂಗದಲ್ಲಿ ಇಂದು ನಿರ್ಧಾರಕ್ಕಿಂತ ಗೊಂದಲಗಳೇ ಹೆಚ್ಚಾಗಿದೆಯೆನ್ನಬಹುದು.

ನಿರರ್ಥಕವಾಯಿತು

ಬರ್ಮದ ಸ್ವಧಾನ ಮಂತ್ರಿ ಯೂಸಾರವರು ಇತ್ತೀಚೆಗೆ ಬ್ರಿಟನಿಗೆ ಹೋದುದು ನಿರರ್ಥಕವಾಗಿ ಅವರು ನಿರಾಶೆ ಹೊಂದಿ ಹಿಂತಿರಬೇಕಾಯಿತು. ಬರ್ಮಕ್ಕೆ ಸಾಮಂತಸ್ವರಾಜ್ಯದ ಗಂಟನ್ನು ಬ್ರಿಟಿವ್ ಪ್ರಭುತ್ವದವರಿಂದ ಬೇಡಿ ತರುವೆನೆಂದು ಬಗೆದು ಅವರು ಮಾಡಿದ ಸಾಹಸವು ಹೀಗೆ ನೀರಮೇಲೆಳ್ಳು ಹೋಮವಾಯಿತು!

ಬರ್ಮಕ್ಕೆ ಬೇಗನೇ ಸಾಮಂತ ಸ್ವರಾಜ್ಯ ಕೊಡಬೇಕೆಂದು ಕೇಳಲು ಅವರು ಬ್ರಿಟನಿಗೆ ತೆರಳಿದ್ದರು. ಅಲ್ಲಿ ಅಮೆರಿಯವರನ್ನು ಕಂಡರು; ಪ್ರಧಾನ ಮಂತ್ರಿ ಚರ್ಚಿಲ್ಲರನ್ನೂ ಕಂಡು ಮಾತನಾಡಿದರು. ಆದರೆ ಆ ಮಾತುಕತೆಗಳಿಂದೇನೂ ಪ್ರಯೋಜನ ಆಗಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ಯೂಸಾರವರು ಬರ್ಮಕ್ಕೆ ಈಗ ಹಿಂತಿರಿಗಿದ್ದಾರೆ.

"ನನ್ನ ದೇಶೀಯರು ಮತ್ತು ನಾನು ಯಾವ ಉಚ್ಚ ಆಕಾಂಕ್ಷೆಯಿಟ್ಟಿದ್ದೆವೋ ಆ ಆಕಾಂಕ್ಷೆಯು ನನ್ನ ಪ್ರಯಾಣದಿಂದ ಕೈಗೂಡಲಿಲ್ಲವಾದರೂ ನಾನು ಬ್ರಿಟನನ್ನು ಬಿಟ್ಟು ತೆರಳುವಾಗ ಸಿಟ್ಟುಗೊಂಡು ಹೋಗುವುದಿಲ್ಲ" ಹೀಗೆಂದು ಯೂಸಾರವರು ಈಸ್ಟ್ ಇಂಡಿಯಾ ಎಸೋಸಿಯೇಶನ್ನವರು ತಮಗೆ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಹೇಳಿದರು. ಸಿಟ್ಟುಗೊಳ್ಳುವ ತಕ್ಕ ಸಂದರ್ಭವಿದ್ದರೂ ತಾನು ಸಿಟ್ಟುಗೊಳ್ಳುವುದಿಲ್ಲವೆಂದು ಯೂಸಾರವರ ಇಂಗಿತವಿದ್ದಂತೆ ಇದರಿಂದ ವ್ಯಕ್ತವಾಗುತ್ತದೆ.

ಯೂಸಾರವರ ಪ್ರಯತ್ನವು ಹೀಗೆ ನಿರರ್ಥಕವಾಯಿತು. "ಯುದ್ಧ ಮುಗಿದ ಬಳಿಕ ಸಾಮಂತ ಸ್ವರಾಜ್ಯದ ಹಾದಿಯಲ್ಲಿ ಹೋಗಲು ಬೇಕಾದ ಅನುಕೂಲತೆಗಳನ್ನು ನಾವು ಒದಗಿಸುವೆವು" ಎಂದು ಹಿಂದೆ ಅಮೆರಿಬರ್ಮಕ್ಕೆ ಕೊಟ್ಟಿದ್ದ ಅಭಯ ವಚನಕ್ಕಿಂತ ಹೆಚ್ಚಿನ ಭರವಸೆಯೇನೂ ದೊರಕಲಿಲ್ಲ. ಯೂಸಾರವರು ಮರಳಿ ಬರುವಾಗ, ಅಮೆರಿಕದ ದಾರಿಯಾಗಿ ಬಂದು, ರೂಸ್‌ವೆಲ್ಟರನ್ನು ಭೇಟಿಯಾಗಿ 'ಅತ್ಲಾಂಟಿಕ್ ಶಾಸನ'ದ ವಿಷಯ ವಿಷಯ, ಅವರ ಸ್ಪಷ್ಟೀಕರಣ ಕೇಳಿರುವರೆಂದು ಸುದ್ದಿ ಹರಡಿದೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

The Canara Banking Corporation Ltd.
(Incorporated in British India)
Estd. 1906.

With effect from 1—11—1941 the following will be rates of interest on Deposits:

FIXED

3 MONTHS	2¼% P. A.
6 - do -	2½% "
9 - do -	3% "
12 - do	3% "
24 - do -	3½% "
SHORT TERM	2% "

ನೋಟಗಳು.....

ಅಮೆರಿಕದ 'ಸಂಡೇ ನ್ಯೂಸ್' ಎಂಬ ಪತ್ರಿಕೆಯು ಹಿಟ್ಲರನನ್ನು ಮಹಮ್ಮದ್ ಸೈಗಂಬರರಿಗೆ ಹೋಲಿಸಿ ಒಂದು ಲೇಖನ ವಿಶೇಷ ವಿಷಯದಲ್ಲಿ ಮುಸಲ್ಮಾನರನ್ನೇ ಕೆರಳಿಸಿಕೊಂಡಿದ್ದಾರೆ.

❀ ❀ ❀

ಹೀಗೆ ಮುಸಲ್ಮಾನರ ಪವಿತ್ರ ಭಾವನೆಗೆ ನೋವನ್ನುಂಟುಮಾಡಿದ ಬಗ್ಗೆ ಇಂಡಿಯಾ ಸರಕಾರವು ತನ್ನ ನಿಷ್ಠೇವನ್ನು ವ್ಯಕ್ತಪಡಿಸಬೇಕೆಂದು ಕೇಂದ್ರ ಅಸೆಂಬ್ಲಿಯಲ್ಲಿ ಸರ್ ವಿ. ಎಚ್. ಗಜನಿಯವರು ಒಂದು ಸೂಚನೆ ತಂದರು.

❀ ❀ ❀

ಹಿಟ್ಲರನನ್ನು ಪೈಗಂಬರರಿಗೆ ಹೋಲಿಸಿ ಹೀಗೆ ಮುಸಲ್ಮಾನರನ್ನು ರೇಗಿಸುವೇಕಾದರೆ 'ಸಂಡೇ ನ್ಯೂಸ್' ಪತ್ರಿಕೆಗೆ ಸೈಗಂಬರರಾಗಲಿ, ಅವರ ಅನುಯಾಯಿಗಳಾಗಲಿ ಮಾಡಿದ ಅನ್ಯಾಯವೇನೋ?

❀ ❀ ❀

'ಅಮೆರಿಕದಲ್ಲಿ 'ಸಂಡೇ ನ್ಯೂಸ್' ಹೆಸರಿನ ಪತ್ರಿಕೆಗಳು ಹಲವಿವೆ. ಆದ್ದರಿಂದ ಯಾವ ಪತ್ರಿಕೆ ಎಂದು ಬರೆದುದು ಎಂಬೀ ವಿಚಾರಗಳ ವಿವರಕ್ಕಾಗಿ ಇಂಡಿಯಾ ಸರಕಾರವು, ಅಮೆರಿಕಕ್ಕೆ ಬರೆದು ತಿಳಿಯುವುದು' ಎಂದು ವಿದೇಶ ಖಾತೆಯ ಸೆಕ್ರೆಟರಿ ಕ್ಯಾರೋಯಿಯವರು ಸರ್ ಗಜನಿಯವರಿಗೆ ಆಶ್ವಾಸನವಿತ್ತರು.

❀ ❀ ❀

ಅಮೆರಿಕಕ್ಕೆ ಇಂಡಿಯಾ ಸರಕಾರದ ಏಜೆಂಟ ಜನರಲರಾಗಿ ಹೋದ ಸರ್ ಗಿರಿಜಾಶಂಕರರಿಗೆ ಈ ವಿಷಯವನ್ನು ವರಿತೀಲಿಸುವರೆ ಬರೆಯಲಾಗುವುದಂತೆ.

❀ ❀ ❀

ಸರ್ ಗಿರಿಜಾಶಂಕರರು 'ಸಂಡೇ ನ್ಯೂಸ್' ಹೆಸರಿನ ಪತ್ರಿಕೆಗಳ ಕಚೇರಿಗಳನ್ನೆಲ್ಲ ಹುಡುಕುತ್ತಾ ಅಮೇರಿಕದಲ್ಲುತ್ತಾ ತಿರುಗಾಡಬೇಕಾಯಿತ್ತು. ಅಂತೂ ಸರ್ ಗಿರಿಜಾಶಂಕರರಿಗೆ ಅಲ್ಲಿಯೂ ಒಂದು ಒಳ್ಳೆಯ ಉದ್ಯೋಗವೇ ದೊರಕಿತು.

ಭಾಷಣ ಸ್ವಾತಂತ್ರ್ಯ ದಿನ

ಮಹತ್ಮಾಜಿಯವರ ನುಂಡಾಳು ತಪದಿಂದ ಸ್ವಾರಂಭವಾದ ಭಾಷಣ ಸ್ವಾತಂತ್ರ್ಯ ಸತ್ಯಾಗ್ರಹದ ವಾರ್ಷಿಕ ದಿನವನ್ನು ತಾ ೧೫ ರಂದು ಮಂಗಳೂರು ಮೈದಾನಿನಲ್ಲಿ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಜರಗಿಸಲಾಯಿತು. ಜಿಲ್ಲೆಯ ಪ್ರಥಮ ಸತ್ಯಾಗ್ರಹಿ ಶ್ರೀ ಕೆ ಈಶ್ವರ ಎಂ ಎಲ್ ಎ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಚ್ ಕೆ ತಿಂಗಳಾಯ, ಕು ಶಿವರಾವ್ ಮತ್ತು ಬಿ ದಾಮೋದರ ಬಾಳಿಗರು ಮಾತನಾಡಿದರು.

ದಿಯೊಳ್ಳಿ ದಿನಾಚರಣೆ

ಕಳದ ಆದಿತ್ಯವಾರ ಮಜೂರ ಸಂಘಗಳ ಆಶ್ರಯದಲ್ಲಿ ದಿಯೋಳಿಯಲ್ಲಿ ಅನ್ನ ಸತ್ಯಾಗ್ರಹ ಮಾಡಿದ ರಾಜಕೀಯ ಕೈದಿಗಳ ವಿಷಯ ಸಹ ಸಂತಾಪ ಸೂಚಿಸುವ ಸಭೆಯೊಂದು ಸಾರ್ವಜನಿಕ ಮೈದಾನಿನಲ್ಲಿ ಶ್ರೀ ವೆಂಕಣ್ಣನವರ ಅಧ್ಯಕ್ಷತೆಯಿಂದ ಕೂಡಿತು. ಶ್ರೀ ಕೇಶವ ಶೆಣೈ ತರ ಭಾಷಣವಾಯಿತು. ಅನ್ನ ಸತ್ಯಾಗ್ರಹ ಮಾಡಿದವರಿಗೆ ಸಹ ಸಂತಾಪ ಸೂಚಿಸುವ ಸರಕಾರದ ಧೋರಣೆ ಖಂಡಿಸುವ ನಿರ್ಣಯವಾಯಿತು.

ಕೆನರಾ ಹೈಸ್ಕೂಲ್ ಸುವರ್ಣೋತ್ಸವ

ಕಾರ್ಯಕ್ರಮ

ದಕಂಬರ ೧೯೪೧ ತಾ ೨೬ ನೆಯ ಶುಕ್ರವಾರ ಕೆನರಾ ಗರ್ಲ್ಸ್ ಸ್ಕೂಲ್ ಹಳೆಯ ವಿದ್ಯಾರ್ಥಿ ಸಭೆಯ ವಾರ್ಷಿಕೋತ್ಸವ, ಶ್ರೀ ಎ ಶ್ರೀನಿವಾಸ ಪೈಗಳ ಕರೆಸ್ಪೊಂಡೆಂಟ್ ಷಿಪ್ಪಿನ ರಜತೋತ್ಸವ ತಾ ೨೭ನೆಯ ಶನಿವಾರ, ಕೆನರಾ ಹೈಸ್ಕೂಲ್ ವಾರ್ಷಿಕೋತ್ಸವ ತಾ ೨೮ ನೆಯ ಆದಿತ್ಯವಾರ ವ್ಯಾಪಾರಿಗಳ ದಿನ, ಕೆನರಾ ಚೇಂಬರ್ ಆಫ್ ಕಾಮರ್ಸಿನವರ ಆಶ್ರಯದಲ್ಲಿ ತಾ ೨೯ ನೆಯ ಸೋಮವಾರ ಕೆನರಾ ಹೈಸ್ಕೂಲ್ ವಾರ್ಷಿಕೋತ್ಸವ ತಾ ೩೦ ನೆಯ ಮಂಗಳವಾರ ಕೆನರಾ ಹೈಸ್ಕೂಲ್ ಸುವರ್ಣೋತ್ಸವ ದಿನ ತಾ ೩೧ ನೆಯ ಬುಧವಾರ ಕೆನರಾ ಹೈಸ್ಕೂಲ್ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಪ್ರದರ್ಶನ

ಕೆನರಾ ಹೈಸ್ಕೂಲ್ ಸುವರ್ಣೋತ್ಸವ ಸಮಾರಂಭದ ಕಾಲದಲ್ಲಿ ಕೆನರಾ ಹೈಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲ್‌ಗಳ ಹಳೆ ವಿದ್ಯಾರ್ಥಿಗಳ ಕೈಗಾರಿಕೆ ಪ್ರದರ್ಶನವೊಂದು ಏರ್ಪಡಿಸಲಾಗುವುದು ಹಳೆ ವಿದ್ಯಾರ್ಥಿಗಳು ತಮ್ಮ ಕೈಗಾರಿಕೆಗಳನ್ನು ಪ್ರದರ್ಶನ ಬಹುದು ಸ್ಥಳದ ವ್ಯವಸ್ಥೆ ಬಾಡಿಗೆ ಕೊಡಬೇಕಾಗುವುದು ದಕಂಬರ ೨೦ ರ ಒಳಗೆ ಪ್ರದರ್ಶನಕ್ಕೆ ಕಳುಹಿಸುವವರು ಹೆಡ್ ಮಾಸ್ತರರಿಗೆ ಬರೆದು ತಿಳಿಸತಕ್ಕದ್ದು. ಪ್ರದರ್ಶನದ ವಸ್ತುಗಳಿಗೆ ವ್ಯವಸ್ಥೆ ಕೊಡಲಾಗುವುದು

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R I A. 1443 1941
O. S. 628/1940

ರಾಮ ಪೆಟ್ಟರ ವಾದಿ ಅರ್ಜಿದಾರ
ಮತ್ತು
1 ವೆಂಕಟ್ರಾಯ ಅಧಿಕಾರಿ 2 ನಾಗಪ್ಪ ಅಧಿಕಾರಿ 3 ಮಂಜುನಾಥ ಅಧಿಕಾರಿ 1ನೇ ಪ್ರತಿವಾದಿಯ ಮಗಂದಿರು. ಹಾಲಿ ಮೈಸೂರಲ್ಲಿರುವವರು
ಪ್ರತಿವಾದಿರು. ಎದ್ರಿರು ಇವರೊಳಗೆ

ಎದ್ರಿಗೆ ತಿಳಿಯಪಡಿಸ್ಸುದ್ದು.

ಮೇಲಿನ ದಾವೆಯ ಕೈಬೇತು ಮತ್ತು ಪ್ರಲಿಮಿನರಿ ಡಿಕ್ರಿಯ A ಶೆಡ್ಯೂಲಿನಲ್ಲಿ ಜಂಬ್ರಿ ಸ್ಥಿತಿ ಆಗಿ ಸ ನಂ 91/27 ನೇ ಜಾಗ 16 ಎಂಕ್ಯೂ. ಜಂ 3ನೇ ಸ್ಥಳಕ್ಕೆ ವಿಸ್ತೀರ್ಣ 21 ಸೆಂಟ್ಸು ಎಂಕ್ಯೂ. ದುಬಾಸ್ತಿಗಡೀತಾಗಿ ಜಪ್ತಿಮಾಡಿ ನು ದಾಖಲುಮಾಡಿದ ಮೇರಿನ ಆರ್ಜಿಯನ್ನು ತಾ 18=11=41 ನೇ ದಿವ್ಸ ಹಗ್ಗು 11 ಘಂಟೆಗೆ ಈ ಕೋರ್ಟಿನಲ್ಲಿ ತನಗೆ ತಿಳುವಳಿಕೆ ಇದುವಹಾಗಿ ಯಾದೆ. ಆಕ್ಷೇಪಣೆಯಿದ್ದರೆ ಜ್ಞಾಪಿಸಿಕೊಳ್ಳುವ ಬಹುದು.

(By order of the Court)
Kundapur, } S/d A. V. N Hebbar,
30-10-'41 } Pleader for Petitioner

ಜಿಲ್ಲಾ ಸಮಾಚಾರಗಳು

ಲೇಬರ್ ಅಧ್ಯಾಪಕ ಪರಿಷತ್ತು

ಇದೇ ಬರುವ ದಕಂಬರದಲ್ಲಿ ಹಿಂದು ಜಿಲ್ಲಾ ಲೇಬರ್ ಅಧ್ಯಾಪಕರ ಪರಿಷತ್ತನ್ನು ಕರೆಯ ಬೇಕೆಂಬ ಉದ್ದೇಶದಿಂದ ಒಂದು ಸಾಧಾರಣ ಸಭೆಯನ್ನು ಕರೆಯುವ ಆಲೋಚನೆ ನುಡಿದಿದೆ ಇದೇ ತಿಂಗಳ ತಾ ೧೬ ನೇ ಆದಿತ್ಯವಾರ ಪಗಲು ಘಂಟೆ ೧೦ಕ್ಕೆ ಸರಿಯಾಗಿ, ಡಿ ಸಿ ಎಮ್ ಶಾಲೆಯಲ್ಲಿ ಸಭೆ ಜರಗಲಿಕ್ಕಿರುವುದರಿಂದ ಲೇಬರ್ ಶಾಲಾ ಉಪಾಧ್ಯಾಯರು ಪ್ರತಿ ಒಬ್ಬರೂ ತಮ್ಮ ತಮ್ಮ ಅಸುಪಾಸಿನಲ್ಲಿರುವ ಲೇಬರ್ ಉಪಾಧ್ಯಾಯರಿಗೆ ತಿಳಿಸಿ ಈ ಸಭೆಗೆ ತಪ್ಪದೇ ಬರಬೇಕಾಗಿ ಶ್ರೀ ಕೆ ಈಶ್ವರ್, ಎಂ ಎಲ್ ಎ ಇವರ ವಿನಂತಿಯಿದೆ

ಸತ್ಕಾರ ಕೂಟ

ಕಳದ ಸೋಮವಾರ ಸಂಜೆ ಥಿಯಾಸಫಿಕಲ್ ಲಾಜಿನಲ್ಲಿ ಮಿತ್ರ ನುಂಡಳಿಯ ಆಶ್ರಯದಿಂದ ಫುದ್ದಾಸು ಯುನಿವರ್ಸಿಟಿ ಕನ್ನಡ ಲೆಕ್ಚರರಾದ ಶ್ರೀ ಎಂ ಗುರಿಯಪ್ಪ ಭಟ್ಟರ ಗೌರವಾರ್ಥ ಒಂದು ಸತ್ಕಾರ ಕೂಟವಿತ್ತು ಪಲವರು ಕನ್ನಡದ ಸಾಹಿತ್ಯ ಭಕ್ತರು ಆ ಮಂತ್ರಿತರಾಗಿದ್ದರು ಶ್ರೀ ಜಿ ವಾಮನ ಭಟ್ಟರು ಸಭೆಯ ಉದ್ದೇಶ ಹೇಳಿದ ಮೇಲೆ ಶ್ರೀ ಎಂ ತಿಮ್ಮಪ್ಪಯ್ಯನವರು ಅತಿಥಿಗಳ ಪರಿಚಯ ನುಡಿ ಕೊಟ್ಟರು ಬಳಕ ಶ್ರೀ ಭಟ್ಟರು ಸತ್ಕಾರ ಕೂಟವನ್ನೇರ್ಪಡಿಸಿದವರನ್ನು ಅಭಿನಂದಿಸಿ, ತಮ್ಮ ಶಾಲೆಯ ಕೆಲಸಗಳ ವಿಚಾರ ಸ್ವಲ್ಪ ಮಾತು ಹೇಳಿದರು ಡಾ ಎಸ್ ಪಿ ಭಟ್ಟರು ಕೃತಜ್ಞತಾ ಸಮರ್ಪಣೆ ಮಾಡಿದರು ಸಭಾ ರಂಭದಲ್ಲಿ ಟೀಪಾರ್ಟಿಯಿತ್ತು.

ಹೊಸ ಜಡ್ಜರು

ಈಗಿನ ಫೆಲ್ಲಾ ಜಡ್ಜಾದ ಶ್ರೀ ಕೆ ಎನ್ ಗೋಪಾಲನ್ ಇವರು ತಮ್ಮ ಉದ್ಯೋಗದ ನಿವೃತ್ತಿಗೆ ಪೂರ್ವ ತಾ ೨೪ ರಿಂದ ರಜೆ ಪಡೆವರು ಅವರ ಸ್ಥಾನಕ್ಕೆ ಕತಲೂರಿನ ಸಬ್ ಜಡ್ಜರಾಗಿರುವ ಶ್ರೀ ಎಲ್ ಎಸ್ ಪಾರ್ಥಸಾರಥಿ ಬಿ ಎ ಬಿ ಎಲ್ ಇವರು ನಮ್ಮ ಜಿಲ್ಲಾ ಜಡ್ಜರಾಗಿ ಬರುವರು

ಗೀತಾ ಸ್ಪರ್ಧೆ

ತಾ ೨೯—೧೨—೪೧ ರಂದು ಶ್ರೀ ವೆಂಕಟ್ರಮಣ ದೇವಾಲಯದ ಆಶ್ರಯದಲ್ಲಿ ಗೀತಾ ಸ್ಪರ್ಧೆಯೊಂದು ಜರಗಲಿದೆ ಇದಕ್ಕೆ ಉಮೇದ್ವಾರರಾಗುವವರು ಗೌಡಸಾರಸ್ವತ ಬ್ರಾಹ್ಮಣ ಜಾತಿಯವರಾಗಿದ್ದು ೧೪ ರಿಂದ ೨೫ ವರ್ಷ ಪ್ರಾಯದೊಳಗಿನ ಶ್ರೀ ಪುರುಷರಾಗಬಹುದು ಗೀತೆಯಲ್ಲಿ ನೂರು ಅಧ್ಯಾಯಗಳನ್ನು ಮುಖಪಾಠ ಹೇಳಲು ಉಮೇದ್ವಾರರು ಸಿದ್ಧರಿರಬೇಕು. ಸ್ಪರ್ಧೆಗೆ ೧೦ ದಿನಗಳ ಮೊದಲು ಹೆಸರು ಕೊಡಬೇಕು ಎಂದು ಸಾ। ಕಾರ್ಯದರ್ಶಿಗಳು ತಿಳಿಸುತ್ತಾರೆ

"ಶ್ರೀ ಪ್ರಭಾಕರ ಸಂಘ ನೀರೇಶ್ವಾಲ್ಯ"

ನೀರೇಶ್ವಾಲ್ಯ ಗ್ರಾಮದ ಹರಿಜನರಲ್ಲಿ ಬಾಕುಡ ಜಾತಿಯ ಕೆಲವು ಯುವಕರು ಕೂಡಿ ಪ್ರಾರಂಭಿಸಿದ ಭಜನೆ ಸಂಘಕ್ಕೆ ಬೇಕಾದ ಕವಿಟಿಯೊಂದನ್ನು ರಚಿಸುವಂತೆ ಇದೇ ತಾ ೯ ೧೧ ೪೧ ರಂದು ಶ್ರೀ ಯಸ್ ಸಂಜೀವ ಕೋಟ್ಯನವರಿಗೆ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಜರಗಿ, ಸಂಘಕ್ಕೆ ಯೋಗ್ಯ ಹೆಸರನ್ನಿಟ್ಟಿದ್ದಲ್ಲದೆ ಸಂಘದ ಆವಶ್ಯಕತೆಯ ಉದ್ದೇಶವನ್ನೂ, ಸಂಘದ ಸಾಮಾನ್ಯ ಮೆಂಬರನಿಗೂ ಆಚರಿಸುವರೀತಿಕಾದ ಕೆಲವು ನಿಯಮಗಳನ್ನೂ ಓದಿ ವಿವರಿಸಿ ಸಭೆಯ ಮುಂದಿಡಲು ಎಲ್ಲರನ್ನೂ ಅನುಮೋದನೆಯಿರಿಂದಾಗಿ ಮಂಜೂರಾಯಿತು ಏಳು ನುಂದಿಯುಳ್ಳ ಒಂದು ಕಮಿಟಿಗೆ, ಯಸ್ ವೆಂಕಟರವನ್ನು ಅಧ್ಯಕ್ಷರನ್ನಾಗಿಯೂ, ಕಾರ್ಪೆಂಟರ್, ಯೆನ್ ಕೋಮರುರವರನ್ನು ಉಪಾಧ್ಯಕ್ಷರನ್ನಾಗಿಯೂ, ಎ ಸುಂದರ, ಹಾಗೂ, ಬಿ ಯಮ್ಮ್ ಹರ್ಷ ಇವರಿಬ್ಬರನ್ನು ಜತೆ ಕಾರ್ಯದರ್ಶಿಯರನ್ನಾಗಿಯೂ, ಮತ್ತು ಕೆ ಸಂಜೀವನವರನ್ನು ಖಜಾನ್ಜಿಯನ್ನಾಗಿಯೂ ನೇಮಿಸಲಾಯಿತು

ಕಾಪು

ಯುವಕ ಸಮಾಜ

ಕಾಪು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪಲವು ಗೌಡ ಸಾರಸ್ವತ ತರುಣರು ಸೇರಿ, ಊರಿನ ಅಭಿವೃದ್ಧಿಗೋಸ್ಕರ ಒಂದು ಯುವಕ ಸಮಾಜವನ್ನು ತೆರೆದು ಅದಕ್ಕೆ "ಆಂಜನೇಯ ಯುವಕ ಸಮಾಜವೆಂದು" ನಾಮಕರಣ ಮಾಡಿದರು

ಬೆಂಗಳೂರು

ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳು ಸಾಹಿತ್ಯ ಸಮ್ಮೇಳನಾಧ್ಯಕ್ಷರು

ದಕಂಬರದಲ್ಲಿ ಹೈದರಾ ಬಾದಿನಲ್ಲಿ ಜರಗುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಎ. ಆರ್. ಕೃಷ್ಣ ಶಾಸ್ತ್ರಿಗಳನ್ನು ಅಧ್ಯಕ್ಷರಾಗಿ ಆರಿಸಲಾಗಿದೆಯೆಂದು ಸುದ್ದಿಯಿದೆ

ಕೆಟ್ಟ ಶೀತ ಮತ್ತು ಹಿಮ ಬಾಧೆಗಳನ್ನು ಹೋಗ ಲಾಡಿಸಿರಿ.

ನಿಮ್ಮ ಗಂಟಲು ತುರಿಕೆಯಾವಾಗ, ನಿಮ್ಮ ಕಣ್ಣುಗಳಲ್ಲಿ ನೀರು ಬಂದಾಗ, ನಿಮ್ಮನ್ನೆ ನಡುಕವುಂಟಾಗಿ ನೀವುಗಳು ಬಂದ ನೀವು ಹಿಂದಿನಾಗಿ ಶೀತಭಾವೆ ಗೊಂದಿದ್ದೀರೆಂದು ತಿಳಿಕೊಳ್ಳತಕ್ಕದ್ದು ಇದಕ್ಕೆ ಪೆಪ್ಸ್‌ಗಳು ಯೋಗ್ಯವಾದ ನಿವಾರಣೆಯನ್ನು ಕೊಡುವವು

ಬಾಯಲ್ಲಿ ಹಾಕಿದ ಕೂಡಲೇ ಕರಗುವುದಾಗಿ, ಪೆಪ್ಸ್ ಬಾಯಿಯಲ್ಲಿ ಒಳ್ಳೆಯ ಔಷಧಿ ಕಾರಕವಾದ ಸತ್ವವನ್ನು ಹೊರಗೆಡಹುತ್ತವೆ ಇದು ಶ್ವಾಸವಾಯುವಿನೊಡನೆ ಶ್ವಾಸಕೋಶ ನನ್ನು ಸೇರಿ ಅಲ್ಲಿರುವ ಶೀತವನ್ನು ಹೊರಹಾಕುತ್ತದೆ ಮತ್ತೆವೆಲ್ಲವೆ ಶೀತಾಣುಗಳನ್ನೂ ಕೊಲ್ಲುತ್ತದೆ ಶ್ವಾಸಕೋಶವನ್ನು ಅವುಗಳು ಬಲಪಡಿಸುತ್ತವೆ



ಸಾಪುಣ್ಣವಾದ ಮತ್ತು ಶಾಶ್ವತವಾದ ಗುಣವನ್ನು ಕೊಡುತ್ತದೆ ಮತ್ತೆ ಶೀತಬಾಧೆಯಾಗದಂತೆಯೂ ಮಾಡುತ್ತದೆ ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇದು ಒಂದು ರೂಪಾಯಿಗೆ ಸಿಕ್ಕುತ್ತದೆ.

ಪಬ್ಲಿಷರ್ಸ್:—

ಜೇಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ ಟಿ ಮದರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ನಿಷಹಾರಿ ಶ್ವಾಸನೀಯ ಗುಳಿಗೆಗಳು

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No 29/1941

ಆನಸ್ತಾಶಿಯಾ ಕುತಿಂಞ ವಾದಿಳು.
ಮತ್ತು
J S. ಕುತಿಂಞ ಸಹಾ ಪ್ರತಿವಾದಿರು
ಇವರೊಳಗೆ

2ನೇ ಪ್ರತಿವಾದಿ J B ಪಿಂಟ್ಯೊ ಪಾವಲು ಪಿಂಟ್ಯರ ಮಗ ಹಾಲಿ ಮಂಗಳೂರು ತಾಲ್ಲೂ ಮೆಂಗಪಟ್ಟು ಗ್ರಾಮದಲ್ಲಿರುವಿಕೆವ ಇವರಿಗೆ—

ತಾರೀಕು 21-೨-1941ನೆ ದ್ದು 1000 ರೂ ಪಾದಿಳು 1ನೆ ಪ್ರತಿವಾದಿಗೆ ಒರಕೊಟ್ಟಿದ್ದಂಬ ರಿಂದೀಜು ನಿಜವಾದದ್ದಲ್ಲ, ಸಿಂಧುವಾದದ್ದಲ್ಲ ಪ್ರತಿಫಲಕ್ಕಾದದ್ದಲ್ಲವೆಂತ ವಗೈರೆ ದಿಕ್ಲರೇಷನ್ ಕೇಳಿ ವಾದಿಳು ವಾಡಿದ ಸದ್ರಿ ಪಾಲಿಯು ತಾರೀಕು 1-12-1941ನೆ ಇಟ್ಟಿರುವುದಂದು ಸದ್ರಿ ಪಾವೆಯ ಕುರಿತು ನಿಮಗೆ ಆಕ್ಷೇಪಣೆಗೇನಾದರೂ ಇದ್ದರೆ ನೀವು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ನೀಲ್ಲಂತ ಕೋರ್ಟು ಮುಂದೆ ಹಾಜರಾಗಿ ಜಾಹೀರುವಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಸ್ಸಾನಾದಿ ನಿಮ್ಮ ಗೈರಹಾಜರಿಯಲ್ಲಿ ದಾನೆಯು ತೀರ್ಮಾನಿಸಲ್ಪಡುವುದು ಎಂಬುದನ್ನು ಕೋರ್ಟಿ ಹುಕ್ಕಂ ಪ್ರಕಾರ ಈ ಮೂಲಕ ಪ್ರಕಟನೋಟೀಸು ಗಿಯಂದೆ

ಕಾರ್ಕಳ } P Ramachandra Rao,
ತಾ ೦ 11-'41 } Pleader for Plaintiff.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S 425/1941

ಪದ್ಮನಾಭ ಶ್ಯಾನಭೋಗ ವಾದಿ.
ಮತ್ತು
ನರಸಪ್ಪ ಭಟ್ಟ ಕೂಡ ಪ್ರತಿವಾದಿರು.
ಇವರೊಳಗೆ

೨ ಹಾಲಿ ಬೊಬ್ಬರ್ಯಲ್ಲಿಯೆರುವ ಭಗವಂತ ಪೈಯವರ 2ನೇ ಪ್ರತಿವಾದಿ ಬ್ಯಾಂಕಿನವ್ವ ಪೈಗಳಿಗೆ ಕೊಡುವ ನೋಟೀಸು.

ಈ ಕೋರ್ಟು R E P 1010/1940 ನೇ ಆಮ್ಜಾಯಿಯಲ್ಲಿ ವಾದಿಯು ತಾರೀಕು 14-7-41ರಲ್ಲಿ ಸಂದಾಯವಾಗಿದ್ದ ರೂ. 186-1 0ರ ಬಾಕಿಸಲ್ಲಿ ಪ ವಿಗೆ ಪಾಮ್ಸಾ ಸ್ಟಾ ನುಲೆ ಒಳಪ್ಪಡಾಗುವ ರೂ 155 ಪ ಒಡ್ಡಿ 0-9-2 ಸಹಾ ರೂ 155-9-2ನ್ನು 2ನೇ ಪ್ರತಿವಾದಿಯ ಪ ರಾಧೀನವಿ ಉಜುರು ಶಿವ್ಯಾ 1, ೨ನೇ ಪ್ರತಿವಾದಿರು ಹಕ್ಕಿನ ಹೊಸ ಳ ಗ್ರಾಮದ ಆಸ್ತಿ ವಾಸ್ತಾಟಿದಿಂದ ಕೂಡಾ ಒಳ ವಾಡಿಕೆಕೊಳ್ಳುವ ಬಗ್ಗೆ ವಾದಿಯು ಮಾಜಲು ಮಾಡಿದ ಮೇರಿನ ದಾವೆಯನ್ನು ತಾರೀಕು 24-11-1941ನೆ ಹಗಲು 11 ಘಂಟೆಗೆ ಈ ಕೋರ್ಟಿನಲ್ಲಿ ತನಗೆ ತಿಳುವಳಿಕೆ ಇದುವಹಾಗಿ ಆಜ್ಞಾಪಿಸಲಾಗಿದೆ. ಆ ದಿವ್ಸ ನಿಮ್ಮ ಉಪೇಕ್ಷೆಗೆ ಇದುವುದಾದಲ್ಲಿ ಜ್ಞಾಪಿಸಿಕೊಳ್ಳುವ ಬಹುದು.

By order of the Court
Kundapur, } S/d A. V. N. Hebbar,
3-11-1941 } Pleader for Plaintiff

ನಿಮ್ಮ ಜಾಹಿರಾತುಗಳನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ.

ರಶ್ಯನರನ್ನು ಸೋಲಿಸಲು ಜರ್ಮನರು ವಿಶ್ವಪ್ರಯತ್ನ ಮಾಡುತ್ತಾರೆ

ರಷ್ಯದಲ್ಲಿ ಈಗ ಕೆಲದಿನಗಳಿಂದ ಜರ್ಮನರ ಭಯಂಕರ ಮುನ್ನಡೆ ಕಡಿಮೆಯಾಗಿದೆ. ಆದರೂ ರಶ್ಯನರನ್ನು ಸೋಲಿಸಲು ಜರ್ಮನರು ವಿಶ್ವ ಪ್ರಯತ್ನ ಮಾಡುತ್ತಿದ್ದಾರೆ. ಕ್ರಿಮಿಯದಲ್ಲಿ ಘೋರ ಕಾಳಗವಾಗುತ್ತಿದೆ. ಅಮೆರಿಕದ ವಿರುದ್ಧ ಜಪಾನು ಯುದ್ಧಕ್ಕಿಳಿದರೆ ಜಪಾನನ್ನು ನಾವು ಎದುರಿಸಬೇಕಾಗುವುದೆಂದು ಚರ್ಚಿಲರು ಜಪಾನನ್ನು ಎಚ್ಚರಿಸಿರುವರು. 'ಅಮೆರಿಕನರಿಗೆ ಸ್ವಾತಂತ್ರ್ಯದಲ್ಲಿ ವಿಶ್ವಾಸವಿದೆ; ಅದಕ್ಕಾಗಿ ಹೋರಾಡುವುದು ಅಮೌಲ್ಯವಾಗಿದೆ'ಯೆಂದು ರೂಸ್‌ವೆಲ್ಟರು ಒಂದು ಭಾಷಣದಲ್ಲಿ ಹೇಳಿದರು. ಮೋಸ್ಕೋದ ಮೇಲೆ ಈಗಲೂ ಹಗಲಿರುಳು ಜರ್ಮನ್ ಧಾಳಿ ನಡೆಯುತ್ತಲೇ ಇದೆ.

ಕ್ರೀಮಿಯಾದಲ್ಲಿ ಘನಘೋರ ಸಂಗ್ರಾಮ!

ಜಪಾನನ್ನು ಚರ್ಚಿಲರು ಎಚ್ಚರಿಸಿದರು
ಸ್ವಾತಂತ್ರ್ಯದಲ್ಲಿ ಅಮೆರಿಕನರಿಗೆ ವಿಶ್ವಾಸವಿದೆ

ಇದಕ್ಕೆ ಪ್ರತಿಯಾಗಿ ಸುಲಿಗೆಗಾರರಾದ ಜರ್ಮನರನ್ನು ಕಪ್ಪದ ಕಂಡಲ್ಲಿ ಕೊಲ್ಲುವುದು. ಪ್ರಾಮಾಣಿಕರಾದವರಿಲ್ಲರೂ, ನಾಜೀವಾದವನ್ನು ನಾಶ ಪಡಿಸಲು ನಮಗೆ ನೆರವಾಗಬೇಕು ಎಂದು ಸ್ಟಾಲಿನ್ ರಶ್ಯನ್ ಕ್ರಾಂತಿಯಿಪ್ಪತ್ತೊಂದನೆಯ ವಾರ್ಷಿಕೋತ್ಸವದ ಭಾಷಣ ಮಾಡುತ್ತಾ ಹೇಳಿದನು. ಇಪ್ಪತ್ತು ಲಕ್ಷ ಜರ್ಮನರಿಗೆ ಹಾನಿಯಾಗಿದೆಯೆಂದನು.

ಹಿಟ್ಲರನ ಭಾಷಣ
ಯುದ್ಧ ವಿಮರ್ಶೆ

ಹಿಟ್ಲರನು ಮುನಿಕಿನಲ್ಲಿ ಒಂದು ಭಾಷಣ ಮಾಡುತ್ತಾ ಅದರಲ್ಲಿ ಸದ್ಯದ ಯುದ್ಧದ ವಿಮರ್ಶೆ ಮಾಡಿದ್ದಾನೆ. ತಾವು ಪೂರ್ವ ರಣಭೂಮಿಯಲ್ಲಿ ಹೋರಾಡಲು ಆರಂಭಿಸಿದ್ದೇಕೆ ತಮ್ಮ ಗೊತ್ತುಗುರಿಗಳೇನೆಂಬುದನ್ನು ಅದರಲ್ಲಿ ತಿಳಿಸಿರುವನು. ಪೂರ್ವದಲ್ಲಿ ರಶ್ಯನರ ಕೈಗಾರಿಕಾ ಕೇಂದ್ರಗಳನ್ನು ನಾಶಮಾಡಿ ಅವರ ಸರ್ವನಾಶ ಮಾಡುವುದೇ ತಮ್ಮ ಧ್ಯೇಯವೆಂದು ಹೇಳಿರುವನು. ಜರ್ಮನರು ಈಗಲೆ ೩೬ ಲಕ್ಷ ರಶ್ಯನರನ್ನು ಕೈಸೆರೆ ಹಿಡಿದಿರುವುದಾಗಿ ಹೇಳಿಕೊತ್ತಾ, ಸತ್ತ ರಶ್ಯನರ ಸಂಖ್ಯೆಯು ೨೦ ಲಕ್ಷಕ್ಕೆ ಏರಿರುವುದೆಂದನು. ರಶ್ಯನರ ೧೫ ಸಾವಿರ ವಿಮಾನ, ೨೦ ಸಾವಿರ ಟೇಂಕ್, ೨೭ ಸಾವಿರ ಪಿರಂಗಿಗಳನ್ನು ಕೈವಶ ಪಡಿಸಲಾಗಿದೆಯೆಂದನು. ಲೆನಿನ್ ಗ್ರಾಡಿನ ವಿಷಯವು ಹೇಳುತ್ತಾ, ಆ ಕೋಟೆಯನ್ನು ನಾವು ಸುತ್ತುಗಟ್ಟಿರುವೆವೆಂದೂ, ಶತ್ರುಗಳು ಉಸಿರಾಡಲು ಬಿಡದ್ದು ಸಾಯುವೇಕಾಗುವುದೆಂದೂ ಹೇಳಿದನು. ರಶ್ಯನರು ನಾಗರಿಕತೆಗೆ ಶತ್ರುಗಳಿಂದನು ಹಿಟ್ಲರ್. ನಾನು ಶಾಂತಿಗಾಗಿ ಯತ್ನಿಸಿದೆ; ಆದರೆ ಜರ್ಮನ್ ವಿರೋಧಿಗಳು ಶಾಂತಿಯಾಗಲಿ ಬಿಡಲಿಲ್ಲ. ಕೊನೆಗೆ ಉಪಾಯವಿಲ್ಲದೆ ಯುದ್ಧ ಮಾಡಬೇಕಾಯಿತು ಎಂದು ಹಿಟ್ಲರ್ ಹೇಳಿದನು.

ಯಾಲ್ಟಾ ಜರ್ಮನ್ ವಶವಾಯಿತು

ಕ್ರಿಮಿಯದ ದಕ್ಷಿಣಭಾಗದಲ್ಲಿರುವ 'ಯಾಲ್ಟಾ' ಜರ್ಮನರ ವಶವಾಗಿದೆ. ಇದು ಪರ್ವತದ ತಪ್ಪಲಿನಲ್ಲಿರುವ ಒಳ್ಳೆಯ ವಾತಾವರಣದ ಪ್ರದೇಶವಿದ್ದು ಉತ್ತಮ ಆರೋಗ್ಯಕರವಾದ ಸ್ಥಳ.

ಟೆಹರಾನಿನಲ್ಲಿ ಲಂಡನ್ ಮೋಸ್ಕೋ ಪರಿಷತ್ತು

ಕಾಕಸಸ್ ಸಂರಕ್ಷಣೆಯ ಬಗ್ಗೆ ತಾವು ಇತ್ತೆಂಡದವರೂ ಕೂಡಿ ಒಟ್ಟಾಗಿ ಕೆಲಸ ಮಾಡಬೇಕೆಂದು ಟೆಹರಾನಿನಲ್ಲಿ ಸೇರಿದ ಲಂಡನ್ ಮೋಸ್ಕೋ ಪರಿಷತ್ತಿನಲ್ಲಿ ನಿರ್ಣಯವಾಗಿದೆಯೆಂದು ತಿಳಿಯುತ್ತದೆ.

ಜರ್ಮನರ ಛಳಿಗಾಲದ ಯೋಜನೆಗಳು
ಕೆಲವು ಊಹನೆಗಳು

೧. ಮೋಸ್ಕೋವನ್ನು ಸುತ್ತುಗಟ್ಟಿ ರಾಜಧಾನಿಗೆ ಪೂರ್ವ ದಿಕ್ಕಿನಿಂದ ಹೊಸ ಧಾಳಿ ಸೈನ್ಯ ಬರದಂತೆ ಮಾಡುವುದು. ೨. ಡಾನೆಟ್ಜನ್ನು ಏದುರು ಭಾಗದಲ್ಲಿ ದಾಟಿ ಪೂರ್ ಕೋವಿನಂದ ರಶ್ಯನರನ್ನು ಎದುರಿಸುವುದು. ೩. ರೇಸ್ಟೋವಿನಿಂದ ಉಸ್ಕಾಜಾನಕ್ಕೆ ಸೈನ್ಯವನ್ನು ಕಳಿಸಿ ಕೊಂಡು ಹೋಗಿ ಕಾಕಸ್ ಮಾರ್ಗಗಳನ್ನು ಕುಂಡು ಮಾಡುವುದು. ೪. ರೇಸ್ಟೋವ್ ಮತ್ತು ಡೇನಪ್ರ ರಕ್ಷಣೆಯ ಬಗ್ಗೆ ರಶ್ಯನರು ಉತ್ತರ ದಿಕ್ಕಿಗೆ ಹೋಗುವಂತೆ ಮಾಡುವುದು. ೫. ಕ್ರಿಮಿಯಾದ ಭಾಗದಿಂದ ಉತ್ತರಸಾಕಸವನ್ನು ಪ್ರವೇಶಿಸಲು ಯತ್ನಿಸುವುದು ೬. ಇರಾನ್ ಮಾರ್ಗವಾಗಿ ರಶ್ಯಕ್ಕೆ ಬರುವ ಸಹಾಯವನ್ನು ಸಲ್ಲಿಸುವಂತೆ ಕ್ರಸನೋದಾರ್‌ನಿಂದ ಗೋಜನಿಯ ವರೆಗೆ ರಸ್ತೆ ಕಟ್ಟುವುದು.

'ನಮಗೆ ಕಲಂಕ ಹತ್ತಲಾರದು'
ನಾವು ಯಶಸ್ವಿಯಾಗುವೆವು
ಚರ್ಚಿಲರ ಹೇಳಿಕೆ

"ಯುದ್ಧ ನಿಲ್ಲುವುದೆಂದು ಈಗ ಯಾರಿಗೂ ಹೇಳಿಬರುವಂತಿಲ್ಲ. ಎಷ್ಟು ಕಾಲದ ವರೆಗೆ ಯುದ್ಧ ಸಾಗಿದರೂ, ಎಂತಹ ಕಠಿಣ ಪ್ರಸಂಗ ಬಂದೊದಗಿದರೂ ಬ್ರಿಟಿಷ್ ಕಾಮನ್ ವೆಲ್ತಿನ ರಾಷ್ಟ್ರಗಳು ಕಲಂಕಕ್ಕೆ ಗುರಿಯಾಗಲಾರವು. ೧೫ ತಿಂಗಳ ಹಿಂದೆ ಬ್ರಿಟನು ಏಕಾಂಗಿಯಾಗಿ ಹಿಟ್ಲರನ್ನು ದಿಗಿಸಬೇಕಾಗಿತ್ತು; ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಅಂದು ನನ್ನ ಕೈಯ್ಯಲ್ಲಿ ಆಯುಧಗಳಿರಲಿಲ್ಲ. ಇಂದು ಸಜ್ಜಿತರಾಗಿದ್ದೇನೆ. ಕಡೆಗೆ ಜಯ ನಮಗೆ ದೊರಕುವುದು" ಎಂದು ಚರ್ಚಿಲರು ಹೇಳಿದರು.

ರೂಬೆನ್‌ಜೇಮ್ಸ್ ದುರಂತ

"ರೂಬೆನ್ ಜೇಮ್ಸ್" ದುರಂತದ ಹೊಣೆಯನ್ನು ಜರ್ಮನ್ನಿಯು ಈ ವರೆಗೆ ಒಪ್ಪಿಕೊಂಡಿಲ್ಲ. ಅಥವಾ ನಿರಾಕರಿಸಿಲ್ಲ. ಬರ್ಲಿನ್ ಪ್ರಕಟಣೆಯಲ್ಲಿ ಮುಳುಗಿಸಲಾಯಿತೆಂದು ಹೇಳಲಾದ ಅಮೇರಿಕನ್ ವಿನಾಶಕಾರಿಯು ರೂಬೆನ್‌ಜೇಮ್ಸ್‌ವಾಗಿರಬೇಕೆಂದು ಜರ್ಮನ್ ಅಧಿಕಾರಿಗಳ ಅಭಿಪ್ರಾಯವಿದೆ.

ಕ್ರಮೇಲಿಯನ್ ಯುದ್ಧ ಮುಗಿಯಿತು

ಕರೇಲಿಯನ್ ಭೂಕಂಠ ಹಾಗೂ ಲಾಡೋಗಾ ಸರೋವರದ ಬಳಿಯ ಯುದ್ಧವು ಮುಗಿದು ಇನ್ನು ಮೇಲೆ ಮರ್ಮನಸ್ಕಿನ ಕಡೆಗೆ ಧಾಳಿ ಮಾಡಲಾಗುವುದೆಂದು ಗೊತ್ತಾಗಿದೆ.

೭ ನೆಯ ಎಡ್ವರ್ಡ್ ರೂಪಾಯಿ ಮತ್ತು ೮ ಆಣೆ ನಾಣ್ಯಗಳು ೩೧-೩-'೪೨ ರ ನಂತರ ಚಲಾವಣೆಯಿಲ್ಲ

ಹಿಂದುಸ್ತಾನ ಸರಕಾರವು ಮೇಲಿನ ತಿಳಿವಳಿಕೆಯ ಪ್ರಕಟಣೆಯೊಂದನ್ನು ಹೊರಡಿಸಿರುತ್ತದೆ. ಈಗಿನ ಬೆಳ್ಳಿ ನಾಣ್ಯಗಳ ಬದಲು ೭ ನೆ ಜಾರ್ಜರ ನಾಣ್ಯಗಳನ್ನು ಜಾರಿಗೆ ತರಲಾಗುವುದು. ೭ ನೆಯ ಎಡ್ವರ್ಡರ ನಾಣ್ಯಗಳು ೧೯೪೨ ಸಪ್ಟಂಬರವರೆಗೆ ಸರಕಾರಿ ಟ್ರಜರಿ, ಪೋಸ್ಟ್ ಆಪೀಸ್ ಮತ್ತು ರೈಲ್ವೆ ಸ್ಟೇಶನುಗಳಲ್ಲಿ ಕೊಳ್ಳಲ್ಪಡುವವು. ಅನಂತರ ಅವು ಮುಂದಿನ ಪ್ರಕಟಣೆ ವರೆಗೆ ಮುಂಬಯಿ, ಕಲ್ಕತ್ತ ಮದ್ರಾಸು ರಿಜರ್ವ್ ಬ್ಯಾಂಕ್‌ಗಳ ಇಸ್ಯೂ ಕಚೇರಿಗಳಲ್ಲಿ ಹಿಡಿಯಲ್ಪಡುವವು.

ನಾಜೀವಾದವನ್ನು ನಾಶ ಪಡಿಸುವುದು ರಶ್ಯನರ ಗುರಿ
ಸ್ಟಾಲಿನ್ ಹೇಳಿಕೆ

ಜರ್ಮನರಿಗೆ ತಾತ್ಕಾಲಿಕ ಜಯ ದೊರಕಲು, ನಮ್ಮಲ್ಲಿ ಟೇಂಕ್ -ನಿರೋಧಕ ಸಳ್ಳ ಕೊರತೆಯಿದ್ದುದ್ದರ ಕಾರಣ, ಆದ್ದರಿಂದ ಬ್ರಿಟನ್ನು, ಅಮೆರಿಕ, ರಶ್ಯಗಳಲ್ಲಿ ಈ ಟೇಂಕ್ ನಿರೋಧಕಗಳನ್ನು ಸಿದ್ಧ ಪಡಿಸಿ ಜರ್ಮನರನ್ನು ನಾಶ ಪಡಿಸುವುದು ನಮ್ಮ ಗುರಿ. ಕೈಗೆ ಸಿಕ್ಕಿದ ರಶ್ಯನರೆಲ್ಲರನ್ನೂ ಕೊಲ್ಲಬೇಕಾಗಿ ಹಿಟ್ಲರನು ಆಜ್ಞೆ ಕೊಟ್ಟಿರುವನೆಂದು ತಿಳಿದಿದೆ.

ಜರೂರಾಗಿ ಬೇಕಾಗಿದೆ

ಸಮುದ್ರದಾಚೆಯಿರುವ ನಮ್ಮ ಸೈನಿಕರಿಗೆ
ಪುಸ್ತಕಗಳು, ಪತ್ರಿಕೆಗಳು ಬೇಕಾಗಿವೆ

ಹೊಸತು ಅಥವಾ ಹಳೆಯ ಇಂಗ್ಲಿಷು ಅಥವಾ
ದೇಶೀಯ ಭಾಷೆಗಳ ಸಾಹಿತ್ಯಗಳನ್ನು
ಅಂಗೀಕರಿಸಲಾಗುವುದು

ನಿಮ್ಮ ಸಹಾಯವನ್ನು ಸ್ಥಳೀಯ ಯುದ್ಧ ಕಮಿಟಿಗೆ ಕಳುಹಿಸಿರಿ

NOTICE

In the Court of the District Munsiff of Mangalore

R. E. P. 209/41 S. C. 296/39

Hassanabba *Petitioner Plaitiff*
and
Moidin Kunhi & others
Respondent

To 1st Respondent Moidin Kunhi, son of Idddi Kunhi Beary, residing in Someswar village Mangalore taluk.

Where as in the above named suit, the Execution petitioner decree holder has applied for sale of immoveable property, you are here by informed that the 20th day of November 1941 has been fixed for settling the terms of the proclamation of sale.

(By order of Court)

Mangalore 10-11-1941 } U. Ramabha, M. A. B. L. Advocate for Petitioner

ಸುಭಾಸ ಬೋಸರು ಹಿಟ್ಲರ್ ಮುಸಲನಿಗಳ ರಾಜ್ಯದಲ್ಲಿದ್ದಾರೆ

ಎಸೆಂಬ್ಲಿ ಸದಸ್ಯರ ಪ್ರಶ್ನೆಗೆ ಸರಕಾರದ ಉತ್ತರ

ಸುಭಾಸಬೋಸರು ಬರ್ಲಿನಿನಲ್ಲಿಯೋ ರೋಮಿನಲ್ಲಿಯೋ ಇರುವರೆಂದು ತಿಳಿಯುವುದಾಗಿ ಕೇಂದ್ರ ಎಸೆಂಬ್ಲಿಯ ಪ್ರಶ್ನೆಗೆ ಸರಕಾರದ ಉತ್ತರ ಬಂದಿದೆ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ವಿಚಾರವು ಇನ್ನೂ ಸಂಪೂರ್ಣ ನಿಷ್ಪರ್ಷೆಯಾಗಿಲ್ಲ. ಆದರೆ ಅಮೆರಿಯವರೂ ಆ ಕುರಿತು ತೀವ್ರ ವಿಚಾರಮಾಡುತ್ತಿರುವರಂತೆ. ವಿಸ್ತರಿತ ಕೌನ್ಸಿಲಿನ ಹೊಸ ಸದಸ್ಯರು ಈ ವಿಚಾರದಲ್ಲಿ ಸರಕಾರಕ್ಕೆ ಒತ್ತಾಯಹಾಕಿರುವರಂತೆ. ಅಟ್ಲಾಂಟಿಕ್ ಕಾನ್ಸನವನ್ನು ಭಾರತಕ್ಕೆ ಅನ್ವಯಿಸಬೇಕೆಂಬ ನಿರ್ಣಯವು ಕೇಂದ್ರ ಎಸೆಂಬ್ಲಿಯಲ್ಲಿ ಮಂಜೂರಾಯಿತು. ಕಾಂಗ್ರೆಸನ್ನು ಪರಿವರ್ತಿಸಲು, ತಿರುಗಿ ಅಧಿಕಾರ ಸ್ವೀಕರಿಸುವಂತೆ, ಗಾಂಧಿಜಿ ಸತ್ಯಮೂರ್ತಿಯವರಿಗೆ ಒಪ್ಪಿಗೆ ಕೊಟ್ಟಿರುವರು.

ಸುಭಾಸಬೋಸರು ಹಿಟ್ಲರ್ ಮುಸಲನಿಗಳೊಡನೆ!

ಸರಕಾರದ ಉತ್ತರ

ಕ್ವಾಸ್ಲ್ ಆಫ್ ಸ್ಟೇಟಿನಲ್ಲಿ 'ಸುಭಾಸಬೋಸರು ಎಲ್ಲಿರುವರು?' ಎಂದು ಕೇಳಿದ ಪ್ರಶ್ನೆಗೆ ಸರಕಾರದ ಮಂತ್ರಿಗಳ ಕಾರ್ಯದರ್ಶಿ ಉತ್ತರ ಕೊಡುತ್ತಾ "ಸುಭಾಸಬೋಸರು ಬರ್ಲಿನ್ ಅಥವಾ ರೋಮ್‌ಗಳಲ್ಲಿ ಇದ್ದು ಶತ್ರುಗಳೊಡನೆ ಒಪ್ಪಂದ ಮಾಡಿಕೊಂಡಿರಬೇಕೆಂದೂ, ಹಿಂದೂಸ್ಥಾನದ ಮೇಲೆ ಧಾಳಿಯಾದಾಗ ವಂಚನು ದಳ್ಳುಳಿಡನೆ ಶತ್ರುವಿಗೆ ನೆರವಾಗುವಂತೆ ಕೆಲಸ ಮಾಡುವ ಯೋಜನೆ ನಡೆಸುತ್ತಿರುವರೆಂದೂ ಕೆಲ ಸಮಯುಗಳಿಂದ ಇಲ್ಲಿ ಕೆಲವು ಕಡೆಗಳಲ್ಲಿ ಹೇಳಲಾಗುತ್ತಿದೆ" ಎಂದು ಹೇಳಿದರು. ಈ ಸಂಬಂಧದಲ್ಲಿ ಪ್ರಕಟವಾಗಿರುವ ಕೆಲವು ಹಸ್ತಪತ್ರಿಕೆಗಳ ಆಧಾರದಿಂದ ಈ ಸುದ್ದಿಯನ್ನು ತಿಳಿಯಲಾಗಿದೆಯೆಂದರು.

'ಹಿಂದುಸ್ಥಾನದಲ್ಲಿ ವಿಪ್ಲವ' ಎಂದು ಪ್ರಕಟವಾದ ಹಸ್ತ ಪತ್ರಿಕೆಯಿಂದ ಕೆಲವು ವಿಷಯಗಳನ್ನು ಅಲ್ಲಿ ಓದಹೇಳಿದರು. ಬರ್ಲಿನಿನಲ್ಲಿ ನಡೆದ ಪರಿಷತ್ತಿನಲ್ಲಿ ಅವರು ಒಪ್ಪಂದ ಮಾಡಿಕೊಂಡಿರುವರೆಂದೂ, ಸುಭಾಸರು ಕ್ಯಾಂಕಾರಕರಿರುವರೆಂದೂ, ಈಗ ಅವರು ಯುರೋಪಿನಲ್ಲಿರುವ ಕ್ಯಾಂಕಾರಕ ವಕ್ಷದೊಡನೆ ನಿಕಟ ಸಂಬಂಧ ಇಟ್ಟುಕೊಂಡಿರುವರೆಂದೂ, ಅವರು ತಮ್ಮ ಹಸ್ತಾಕ್ಷರ ಬಂದ ಬಂದು ವ್ಯಕ್ತಿಗೆ ಹೊರಡುವರು ರೆಂದೂ ಕೆಲವು ಪರಿಪತ್ರಗಳಿಂದ ಅವರು ಒಳ್ಳೆಯ ತೋರಿಸಿಂದ ಪತ್ರವ್ಯವಹಾರ ನಡೆಸುತ್ತಿರುವರೆಂದೂ, ಬರ್ಲಿನ್ ಅಥವಾ ರೋಮ್ ನಗರಗಳಿಗೆ ಬೋ ಸರು ಹೇಗೆ ಮುಟ್ಟಿದರೆಂಬುದು ಸರಕಾರಕ್ಕೆ ತಿಳಿದಿಲ್ಲವೆಂದೂ ಅವರು ಹೇಳಿದರು.

ನೆಹರುಗಳ ಹೊಸ ಪುಸ್ತಕ

"ಭಾರತದ ಪುನಃ ಶೋಧ"

ನೆಹರುಗಳು ಈ ಸಲ ಸೆರೆಮನೆಯಲ್ಲಿ ಭಾರತದ ಪುನಃ ಶೋಧ ಎಂಬ ಪುಸ್ತಕವನ್ನು ಬರೆಯುತ್ತಿರುವರೆಂದು ತಿಳಿದಿದೆ. ಈ ಸಲ ಅವರು ಹೆಚ್ಚಾಗಿ ಸಂಸ್ಕೃತ ಸಾಹಿತ್ಯವನ್ನು ಅಲ್ಲಿ ಅಭ್ಯಾಸಿಸಿ ಅನುಭವದ ಸಂಗ್ರಹವಾಗಿ ಈ ಪುಸ್ತಕ ಬರೆಯುವರಂತೆ.

ಕಾಶಿ ವಿಶ್ವವಿದ್ಯಾನಿಲಯಕ್ಕೆ

ವರ್ಷ ೨೪ ಸಾವಿರ ರೂಪಾಯಿ

ಇಂದೂರ್ ಹೋಳ್ಕರರ ದಾನ

ಇಂದೂರ್ ಹೋಳ್ಕರ ಮಹಾರಾಜರು ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ಅಂತರ್‌ರಾಷ್ಟ್ರೀಯ ವೀಕ್ಷದ ಸಲುವಾಗಿ ವರ್ಷಕ್ಕೆ ೨೪ ಸಾವಿರ ರೂಪಾಯಿ ಉತ್ತನ್ನ ಬರುವ ದಾನ ಕೊಟ್ಟಿರುವರು. ಇದರಿಂದ ಅಂತರ್‌ರಾಷ್ಟ್ರೀಯ ವರ್ಚಸ್ಸಿನ ಮಹಾನೀಯರನ್ನು ಕರೆಸಿ ಕಾಶಿಯ ವಿಶ್ವವಿದ್ಯಾನಿಲಯದಲ್ಲಿ ಭಾಷಣ ಕೊಡಿಸುವ ಏರ್ಪಾಡು ಮಾಡಲಾಗುವುದು.

ಫ್ರೆಂಚ್ ಫೈಸ್ಸೋ ಕುಪಿಡ್ ಕ್ರೀಮ್

ಆಕ್ಯಂತ ಪರಿಣಾಮಕಾರಿಯಾದ
ಕಾಸ್ಮೊಟ್ಟಿಜನ ಕ್ರೀಮ್
(ಗಂಡುಸರು ಹೊರಸಡಿಗೆ ಉಪಯೋಗಿಸಲು)



ಇದು ಯೂರೋಪಿನ ಹಾಗೂ ವಿದೇಶ ರಾಷ್ಟ್ರಗಳಲ್ಲಿ ಎಲ್ಲಾ ಕಡೆ ಪ್ರಚಾರದಲ್ಲಿದೆ. ಇದನ್ನು ಹೊರಗಡೆಗೆ ಹಚ್ಚಿದ ಸ್ವಲ್ಪ ನಿಮಿಷದಲ್ಲಿಯೇ ಗಂಡುಸಿನ ಆಸಯವೆಷ್ಟೇ ಕೂತಿದ್ದರೂ ಬೃಹದಾಕಾರವನ್ನು ಹೊಂದುವುದು. ಕಿ ಗಟ್ಟಿಯಾಗಿ ನೆಟ್ಟಗೆ ನಿಲ್ಲಿಸುವುದು; ಪ್ರಾಯದವರಿಗಾಗಲಿ, ಕಡಿಮೆ ವಯಸ್ಸಾಗಿದ್ದವರಿಗಾಗಲಿ ಹಿಂದೆ ಅನುಭವಿಸದಂತಹ ಕಾಮಸುಖವನ್ನು ಕೊಡುವುದು. ಹಲವು ವೆಂಡಂದಿರಿಗೆನೆ ರಮಿಸುವ ನಪುಂಸಕತನವನ್ನು ಇದನ್ನು ಹೆಚ್ಚಾಗಿ ಉಪಯೋಗಿಸುವರು. ಮೇಲೆ ತಾಗಿಸುವುದರಿಂದ ನಿಶ್ಶಾನೇ ನರಗಳು ಶಕ್ತಿಕೊಡುತ್ತದೆ. ಅರ್ಧ ನಪುಂಸಕತನವನ್ನೂ ಇದು ಪೋಗಲಾಡಿಸುತ್ತದೆ. ಅಂಗದ ಕೂದಲುಗಳನ್ನು ಕಳೆಯುತ್ತದೆ. ವಕ್ರವಾಗಿ ಆದ ಬಿನ್ನಷ್ಟವನ್ನು ಅದನ್ನು ಸರಿಗೊಳಿಸುತ್ತದೆ. ಆಕಾರ ಬಹಳ ಸ್ವಲ್ಪವಿದ್ದರೆ ದೊಡ್ಡದು, ಮಾಡುತ್ತದೆ. ಇದು ಬೆಲೆ ಹೊತ್ತಿನ ನರಿಗೆ ಕಾಮಸುಖವನ್ನು ಕೊಡುತ್ತದೆ.

ಬಾಟಲಿ ಒಂದಕ್ಕೆ ರೂ. 2—0—0,
ವಿಳಾಸ: ದಿ ಅಮೇರಿಕನ್ ಸ್ವಿಸ್
ಟ್ರೇಡ್ ಎಂಡ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 13, ಪಾರ್ಕ್‌ಟೌನ್,
ಮದ್ರಾಸು.

ರಾಜಕೀಯ ಕೈದಿಗಳ ಬಿಡುಗಡೆ ವಿಚಾರ

ಅಮೆರಿಯೋಚಿಸುತ್ತಾರೆ

ಕಾಂಗ್ರೆಸನ್ನು ಪರಿವರ್ತಿಸಲು ಸತ್ಯಮೂರ್ತಿಯವರಿಗೆ ಸ್ವಾತಂತ್ರ್ಯ

ಡಾಕ್ಟರರಿಗೆ ಕರೆ

೫೫ ವರ್ಷಕ್ಕೆ ಕಡಿಮೆಯಾದವರು ಸೈನ್ಯಕ್ಕೆ ಸೇರಲು ಬರಬೇಕು

೫೫ ವರ್ಷಕ್ಕೆ ಕಡಿಮೆ ವಯಸ್ಸಿನ ಡಾಕ್ಟರರೆಲ್ಲರೂ ಸೈನ್ಯಕ್ಕೆ ಸೇರಲು ಬರಬೇಕೆಂದು ಭಾರ್ಮ - ಸರಕಾರವು ಆರ್ಡಿನೆನ್ಸ್ ಹೊರಡಿಸಿದೆ.

ವಿದ್ಯಾರ್ಥಿಗಳ ಮೇಲೆ

ಬರೋಲಿಯಿನಾಚರಣೆ ನಿಮಿತ್ತ ಮೀರಟಿನಲ್ಲಿ ನಡೆಸುತ್ತಿದ್ದ ಕಾನುಪ್ರತಿಕ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠೀ ಪ್ರಹಾರ ಮಾಡಿದರು. ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಕೆಲವರನ್ನು ಕೈದುಮಾಡಲಾಗಿದೆ.

ರಾಜಕೀಯ ಕೈದಿಗಳನ್ನು ಬಿಡುಗಡೆಮಾಡುವ ಸಂಭವ?

ಪರಿಸ್ಥಿತಿ ಪುನರಾಲೋಚಿಸಲು ಕಾಂಗ್ರೆಸಿಗೆ ಸಂದರ್ಭ ಕೊಡುವುದು?

ವೈಸರಾಯ್ ಕಾರ್ಯಕಾರೀ ಮಂಡಳಿಯ ಹೊಸ ಮೆಂಬರರು ಭಾರತದ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಲು ಮಾಡಿದ ಯತ್ನದ ಫಲವಾಗಿ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆಮಾಡುವ ಸಂಭವವಿದೆಯೆಂದೂ ತಿಳಿದುಬರುತ್ತದೆ. ಕಾಂಗ್ರೆಸ್ ಪ್ರೆಸಿಡೆಂಟ್ ಆಜಾದರನ್ನೂ, ನೆಹರುಗಳನ್ನೂ, ಜಿ. ಭಾ. ಕಾಂಗ್ರೆಸ್ ಕಮಿಟಿ ಮೆಂಬರುಗಳನ್ನು ಬಿಡುಗಡೆಮಾಡುವರೆಂದೂ, ಕಾಂಗ್ರೆಸಿನ ನಿಲುವನ್ನು ಪುನರಾಲೋಚನೆ ಮಾಡಲು ಹೀಗೆ ಸಂದರ್ಭವನ್ನು ಏರ್ಪಡಿಸಲಾಗುವುದೆಂದೂ ಹೇಳಲಾಗಿದೆ. ಈ ವಿಷಯದಲ್ಲಿ ಶ್ರೀ. ಸತ್ಯಮೂರ್ತಿಗಳೂ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡುವ ಸಂದರ್ಭವಿದೆಯೆಂದು ಹೇಳಿದ್ದಾರೆ.

ಕಾಂಗ್ರೆಸ್ ಧೋರಣೆಯಲ್ಲಿ ಮಹತ್ವಪೂರ್ಣ ಬದಲಾವಣೆ?

ಪ್ರಾಂತಿಕ ಶಾಸನ ಸಭೆಗಳಲ್ಲಿ ವಿರೋಧ ಪಕ್ಷವನ್ನು ಸ್ವೀಕರಿಸುವುದೆ?

ಸತ್ಯಾಗ್ರಹೀ ಖೈದಿಗಳನ್ನು ಸರಕಾರವು ಬಿಡುಗಡೆ ಮಾಡುವ ಯೋಜನೆ ಮಾಡುತ್ತಿದೆಯೆಂದು ಹೇಳಲಾಗಿದೆ. ಅದರಲ್ಲಿ ಕಮ್ಯೂನಿಸ್ಟರನ್ನು ಕೆಲವನ್ನು ಬಿಡಲಾಗುವುದಿಲ್ಲವೆಂದು ನೆಹರು ಅಬೋದರನ್ನು ಎಂಬಿಸಿನ ಮೆಂಬರರನ್ನೂ ಬಿಡುಗಡೆ ಮಾಡಿ ಕಾಂಗ್ರೆಸಿನ ನೋ ಇತ ನಿಲುವು ಅವಾಗ ಪುನರಾಲೋಚಿ ಸಲು ಸಂದರ್ಭವನ್ನು ಒದಗಿಸಲಾಗುವುದೆಂದೂ ತಿಳಿದಿದೆ.

ಪ್ರಾಂತಗಳಲ್ಲಿ ಸಲಹೆಗಾರರ ಸರಕಾರಕ್ಕಿಂತ ಅಲ್ಪ ಮತದವರ ಸರಕಾರವಾದರೂ ಒಳ್ಳೆಯದೆಂದು ಕಾಂಗ್ರೆಸು ಆ ಬಗೆಯ ಸರಕಾರ ಸ್ಥಾಪನೆಗೆ ಅನುಕೂಲ ಕೊಡುವುದೆಂದು ಪ್ರಾಂತಿಕ ಎಸೆಂಬ್ಲಿಗಳಲ್ಲಿ ಕಾಂಗ್ರೆಸು ವಿರೋಧ ಪಕ್ಷವನ್ನು ಅಂಗೀಕರಿಸುವುದೆಂದು ಹೇಳಲಾಗಿದೆ. ಸರಕಾರದ ಧೋರಣ ಬದಲಾಗದೆ ಕಾಂಗ್ರೆಸು ಮಂತ್ರಿಮಂಡಲ ಸ್ವೀಕರಿಸುವುದು ಅಕಸ್ಮಿಕವೆಂದು ತಿಳಿಯುತ್ತದೆ.

ದೇವಲಿಯಲ್ಲಿ ೧೬೪ ಜನ

ಅನ್ನಸತ್ಯಾಗ್ರಹ ಬಿಟ್ಟರು

ಶ್ರೀ. ಎಂ. ಎನ್. ಜೋಶಿಯವರು ಭರವಸೆಯಿತ್ತಂತೆ ದೇವಲಿ ಎಂಬಲ್ಲಿ ಅನ್ನಸತ್ಯಾಗ್ರಹವನ್ನು ಆರಂಭಿಸಿದ ೨೦ ಕ್ಕೆ ಮಿಕ್ಕಿದ ರಾಜಕೀಯ ಕೈದಿಗಳಲ್ಲಿ ೧೬೪ ಜನರು ಉಪವಾಸಬಿಟ್ಟರೆಂದು ತಿಳಿದಿದೆ.

ವೈದ್ಯರತ್ನ
ಪಂಡಿತ ಡಿ. ಗೋಪಾಲಾಚಾರ್ಲು
ಇವರ
ಅರುಣ
ಸ್ತ್ರೀಯರಿಗಾಗಿ
ಮಾನಸಿಕ ತೊಂದರೆಗಳಿಂದ ಪರಿಹಾರ ತೊಡಲು, ಆರೋಗ್ಯ ಅಭ್ಯುತ್ತಮವಾಗಿ ಹಾಗೂ ಭವಿಷ್ಯತ್ತಾದ ಸ್ತ್ರೀಯರಿಗೆ ಔಷಧಿಯೆಂದು ಅನುಭವಸ್ಥರಾದ ಸ್ತ್ರೀಯರೆಗೆ ಕೊಟ್ಟುಂಟು. ಇದು ಹೆಂಗಸರನ್ನು ಆರೋಗ್ಯವಂತರಾಗಿಯೂ, ಸುಖಿಗಳಾಗಿಯೂ ಮಾಡುವುದು.

ಎಲ್ಲಾ ಕೆಮಿಷ್ಟರಲ್ಲಿಯೂ ಸ್ಟಾಕಿಗಳಲ್ಲಿಯೂ ಇದು ಮಾರಲ್ಪಡುತ್ತದೆ.
ತಯಾರಿಸುವವರು:—
ಆಯುರ್ವೇದಾಶ್ರಮ,
ಮದ್ರಾಸು.
ಸ್ಟಾಕಿಸ್ಟ್:—
ನ್ಯೂಯಲರ್ ಸ್ಟೋರ್ಸ್,
ಮಂಗಳೂರು.

ಭಯಂಕರ ನಾರೀ 'ಎಡ್ತಾ'

ಮುಸಲನಿಯ ಮಮತೆಯ ಮಗಳು.

ಹಸುರು ಕಣ್ಣು, ಕಂಪು ತುಟಿ, ಆಗೆಲ ಬಾಯಿ, ಇಂತಹ ಹೆಣ್ಣು ಮುಸಲನಿಯ ಮಗಳಾದ ಕೌಂಟಿಸ್ ಎಡ್ತಾಸಿಯಾನೋ! ಈಕೆ ಯುರೋಪಿನ ಒಬ್ಬ ಅತ್ಯಂತ ಭೀಕರಳಾದ ನಾರಿ! ಛತುರೆ, ಸಾಹಸಗಾರ್ತಿ, ಮಾಟಗಾರ್ತಿಯಿವಳು. ಫೇಸಿಸ್ಟ್ ಇಟಲಿಯಲ್ಲಿ, ಮುಸಲನಿಯ ರಾಜ್ಯದಲ್ಲಿ ಹೆಂಗಳೆಯರಿಗೆ ಸಾರ್ವಜನಿಕ ಜೀವನದಲ್ಲಿ ಮಹತ್ವವಿಲ್ಲದಿದ್ದರೂ ಎಡ್ತಾಳು, ಮುಸಲನಿಯ ಬೆನ್ನೇರಿ ಸವಾರಿಮಾಡುತ್ತಾಳೆ! ರಾಜಕೂತ್ರ ನಿಪುಣೆ, ಗಂಡಸು ಗುಣದ ಹೆಂಗಸು. ಇಟಲಿಯ ಎಲ್ಲಾ ನಿಯಮ ಶಾಸನಗಳನ್ನೂ ಮಿನಿಸ್ಟರಿನಿಂತ ಮಹಾ ಶಕ್ತಿ ಶಾಲಿನಿ "ಎಡ್ತಾ!"

"ಭಯಂಕರ ನಾರಿ! ಆದರೆ ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಆಕೆಯಿಂದ ಜರ್ಮನಿಗೆ ಉಪಕಾರವಾದೀತು." ಹೀಗೆಂದು ಎಡ್ತಾಳ ವಿಷಯ ಹಿಟ್ಲರನೇ ಒಮ್ಮೆ ಹೇಳಿದ್ದ. ಇಂದು ಎಡ್ತಾಳು ಹಿಟ್ಲರನ ಬಲಗೈ ಬಂಟಳೇ ಆಗಿದ್ದಾಳೆ! ನಾಜೀ ರಾಜ್ಯಭರಣಕ್ಕೆ ಆಕೆ ಕೊಡುವ ಬೆಂಬಲವು ಜಗದ್ವಿನಿಕವಾಗಿದೆ! ನೋರಂಗನು ತನ್ನ ಮಗಳಿಗೂ 'ಎಡ್ತಾಳ' ಹೆಸರನ್ನೇ ಇಟ್ಟನು; ಎಡ್ತಾಳ ಸ್ಮರಣೆಗಾಗಿ. ಬರ್ಲಿನಿಗೆ ಬಂದಿದ್ದಾಗ ರಿಬ್ಬನ್ ಟ್ರಾಪನು ಎಡ್ತಾಳನ್ನು ಕೊಂಡಾಡಿದನು! ಹೆಸ್ ಆಕೆಯೊಡನೆ ಅಂತರಂಗ ಸಂಭಾಷಣೆ ನಡೆಸಿದನು ಹೀಗೆ ನಾಜೀ ಪ್ರಮುಖರು ಎಡ್ತಾಳೆನ್ನು ತಮ್ಮ ಒಬ್ಬಳು ಒಡನಾಡಿಯೆಂದೇ ನೋಡಿಕೊಳ್ಳುತ್ತಾರೆ.

ಇಟಲಿಯ ರಾಣಿಯಾಗಲು

1910ನೆಯ ಇಸವಿಯಲ್ಲಿ ಎಡ್ತಾಳ ಜನನವಾಯಿತು! ಆಕೆಯ ಹುಟ್ಟಿನ ಕುರಿತು ಅನೇಕ ಊಹಾಪೋಹಗಳಿವೆ. ಮುಸಲನಿ ಬೆನ್ನು ಹಿಡಿದ ರಶ್ಯನ್ ಸ್ತ್ರೀ ಕ್ರಾಂತಿಕಾರಕಳೊಬ್ಬಳ ಒಸರಲ್ಲಿ ಆಕೆ ಹುಟ್ಟಿದಳೆಂದು ವದಂತಿಯಿದೆ ಅದು ಹೇಗಿದ್ದರೂ, ಎಡ್ತಾಳು ಮುಸಲನಿಯ ಅತ್ಯಂತ ಪ್ರೀತಿಯ ಪುತ್ರಿ. ಮುಸಲನಿಗೆ ಇರುವಂತಹ ಅಧಿಕಾರ ಪ್ರೀತಿ ಅವಳಲ್ಲಿಯೂ ಇದೆ. ಮುಸಲನಿಯಂತೆ ಕರಿಣಳೂ ವಂಚಕಳೂ ಆಗಿದ್ದಾಳೆ.

ತಂದೆತಾಯಿಗಳಿಗೆ ಬಾಲ್ಯದಲ್ಲಿ ಘೋರ ಆಕೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಬಹಳ ಕಷ್ಟವಿತ್ತು. ಬಾಲಕಿಯಾಗಿದ್ದಾಗಲೇ ಆಕೆ ಇಟಲಿಯ ರಾಜಕುಮಾರನನ್ನು ಮದುವೆಯಾಗುವೆನೆಂದು ಹೇಳುತ್ತಿದ್ದಳು. ಇಟಲಿಯ ರಾಣಿಯಾಗಬೇಕೆಂದು ಅವಳ ಮಹತ್ವಾ ಕಾಂಕ್ಷೆ! ಆಕೆಯನ್ನು ಇಟಲಿಯ ಉತ್ತಮ ಶಾಲೆಯೊಂದಕ್ಕೆ ಕಳುಹಿಸಿದರು. ಆಕೆ ಇಚ್ಛಿಸಿದ ರಾಣಿ ಪದವಿಗೆ ಅವಳನ್ನು ಯೋಗ್ಯಳಾಗಿ ತರಬೇತಿ ಮಾಡಲು! ಆದರೆ ಎಡ್ತಾ ಬಂದು ದಿನ ಶಾಲೆಯಿಂದ ಹೊರನಡೆದಳು- ತಿರುಗಿ ಶಾಲೆಗೆ ಹೋಗಲು ತಿರಸ್ಕರಿಸಿದಳು. ಶಾಲೆಯಲ್ಲಿ ಬಹಳ ತಿಸ್ತುಪಾಲನೆಯಾಡಬೇಕಾಗಿತ್ತು! ತಿಸ್ತೆಂದರೆ ಅವಳಿಗೆ ಸಿಟ್ಟು ಸರ್ವಾಧಿಕಾರಿಯಾದ ಮುಸಲನಿಗೂ ಮಗಳ ಈ ಮನೋಭಾವನೆಯನ್ನು ಬಗ್ಗಿಸಲಾಗಲಿಲ್ಲ.

ಮದುವೆಯ ಸಂತೆಯಲ್ಲಿ

ಕೊನೆಗೆ ಒಂದು ದಿನಬಂತು! ರಾಜಕುಮಾರಕೊಡನೆ ಎಡ್ತಾಳ ಭೇಟಮಾಡಿಸಲಾಯಿತು! ಆದರೆ ರಾಜ ಕುಮಾರ "ಮದುವೆಯಾಗಲೊಲ್ಲೆ" ಎಂದುಬಿಟ್ಟ! "ನ ದುವೆಯಾಗಲೊಲ್ಲೆ" ಎಂದಳೇನು? ಎಡ್ತಾಳಿಗೆ ಸಿಟ್ಟು ನೆತ್ತಿಗೇರಿತು ಎಡ್ತಾ ಪ್ರತಿಕಾರ ಬಯಸಿದಳು. ಆ ಅರಸು ಮನೆತನವನ್ನು ನಿರ್ಮೂಲ ಮಾಡಲು! ಕೆಲವೇ ದಿನಗಳಲ್ಲಿ ಸುಂದರ ಕರುಣ ಕೌಂಟ್ ಸಿಯಾನೋವನ್ನು ಎಡ್ತಾ ಕೈಹಿಡಿದಳು. ಸಿಯನೋ ಮೊತ್ತ ಎಡ್ತಾ ಅನ್ಯ ಸಮರಸವಾಗಿಕೂಡಿಬಾಳಲಿಲ್ಲ. ಆದರೂ ಹೊರಗಡೆ ಆಕೆ ಬಹಳ ಪತಿವ್ರತೆಯಾಗಿ ನಟಿಸುತ್ತಾಳೆ. ತನ್ನ ಮಕ್ಕಳು, ಮನೆ ವಾರ್ತೆ ಗಂಡನ ವಿಷಯವೇ ಸದಾಮಾತನಾಡಿಕೊಳ್ಳುತ್ತಾಳೆ

ಭಯಂಕರ ನಾರೀ

ಮುಸಲನಿಯು ಮಾಡಿದ ಅನೇಕ ಕೊಲೆಗೆ ಆಕೆ ಕಾರಣಳು! ಅನ್ಯಾಯದ ಜಾನ್ಸ್‌ಲರನ್ನು ನಾಜೀ ಪ್ರಮುಖನ ಕೈಯಿಂದ ಕೊಲ್ಲಿಸುವುದರಲ್ಲಿಯೂ ಎಡ್ತಾಳ ಹಸ್ತವಿತ್ತು. ಎಡ್ತಾಳ ಪ್ರೇರಣೆಯಲ್ಲ ವಾದರೆ ಮುಸಲನಿ ಇಂದಿನ ಯುದ್ಧದಲ್ಲಿ ಸೇರುವ ಸಂಭವವಿರಲಿಲ್ಲ! ಇಟಲಿ ಈಗ ಯುದ್ಧಕ್ಕೆ ಸೇರದಿದ್ದರೆ ಬ್ರಿಟನ್ನನ್ನು ಸೂರೆ ಮಾಡುವುದು ಸಂಪೂರ್ಣ ಪಾಲು ಜರ್ಮನ್ನರಿಗೆ ಹೋಗುವುದೆಂದು ಆಕೆ ತಂದೆಗೆ ಆತಂಕ ಹುಟ್ಟಿಸಿದಳು. ರೋಮ್ ಬರ್ಲಿನ್ ಸಂಧಿಗೆ ಆಕೆ ಕಾರಣಳು! ಎಡ್ತಾಳನ್ನು ಮದುವೆಯಾದ ಮೇಲೆ ಸಿಯನೋ ವೈದೇಶಿಕ ಮಂತ್ರಿಯಾದ, ಮುಂದೆ ವಿದೇಶ ಮಂತ್ರಿಯಾಗಿದ್ದಾನೆ ರಾಜಕೀಯದ ವಿಷಯ ಯಾರಾದರೂ ಆಕೆಯೊಡನೆ ಪ್ರಶ್ನಿಸಿದರೆ ಇವಳು ನಗಾಡಿ ಹೇಳುತ್ತಾಳೆ- "ರಾಜಕೀಯದಲ್ಲಿ ನನಗೆ ಅಭಿರುಚಿಯೇ ಇಲ್ಲ" ಎಂದು "ನನ್ನ ಅಭಿರುಚಿ ನನ್ನ ಮನೆಯಲ್ಲಿ, ಮಕ್ಕಳಲ್ಲಿ, ಮನೆವಾರ್ತೆಯಲ್ಲಿ" ಎನ್ನುತ್ತಾಳೆ. ಎಡ್ತಾ ದೊಡ್ಡ ಮಾಟಗಾರ್ತಿಯೆಂಬುದು ಜಗತ್ತಿಗೇ ಗೊತ್ತು!

(ಕೃ)

ಸ್ವದೇಶಾಭಿಮಾನಿಯಲ್ಲಿ

ನಿನ್ನು ಜಾಹೀರಾತುಗಳನ್ನು

ಕೊಡಿರಿ

ಸುಕ್ರ ಸಂಜೀವನ

ಭಾರತ ದೇಶವಿಂದು ಪುರಾತನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ಧೀಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿಹುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಕರಾಗಿರುತ್ತಾರೆ ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಬಳಲುವ ಮಂದಿಗೆಲ್ಲ ನವವಿನಂತಿ ಏನೆಂದರೆ 'ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

THE SPINE IS THE HUMAN SWITCHBOARD OF HEALTH & VIGOR

HEAD
EYES
EARS
NOSE
THROAT
ARMS
HEART
LUNGS
LIVER
STOMACH
PANCREAS
SPLEEN
KIDNEYS
BOWELS
APPENDIX
BLADDER
LOWER LIMBS

SUKRA RELEASES THE POWER WITHIN

½ ಸೇರಿಗೆ ರೂ 4

ಅಧ್ಯಕ್ಷ ಡಾ। ಜೋಗೆಸ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ ಸಿ ಎಸ್ ಆಯುರ್ವೇದ ಶಾಸ್ತ್ರಿ (ಅಮೇರಿಕ)
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದೆಲ್ಲೆಲ್ಲಾ ಇವೆ

ಮಾಗಣಿಕೊಂಡ ಪಡೆಂಟ್. ಷಾ ಕಂಪೆನಿ, ಹೆಂಪನಕಟ್ಟ, ಮಂಗಳೂರು

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ

ದಮ್ಮಿಗೆ ಒಂದೇ ಒಂದು ಉಪಾಯ

ಹಮ್ಮು ಒಮ್ಮೆಲೇ ನಟ್ಟಗಾಗಬೇಕು ಎಂಬ ಆಕೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಮ ನಷ್ಟು ಹೋಗಿದ್ದಾರೆ. ಪುರೋಹಿತ ಶಾಸ್ವಸಹಾರೀಯು ಇಂಥದಲ್ಲ, ಆದರೆ ದಮ್ಮಿನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣವಾದುವ ಉಶ್ವಾಸ್ಯಶಾಸ್ತ್ರೀಯ ಉಪಾಯವು. ಆದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ಕೆಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶಾಜದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಷ್ಟಿಸ ಗಟ್ಟಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು

ದಮ್ಮು, ತೇಕು, ಛೇಕರಿಗೆ, ಗಂಟಲು ಉರಿಯುವಂಥದು ಮತ್ತೂ ಪುಷ್ಟಿಸ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫೀನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಭದ್ಧಕೋಷ್ಠ, ಮತ್ತೂ ಅಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ್ (ಕೆಂಪು ಪ್ಯಾಕಿಂಗ್) ತೆಗೆದು ಕೊಂಡರೆ ಹೆಚ್ಚು ಗುಣ. ರೂ. ೩-೩, ರೂ. ೬-೪ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತಿರಸ್ಕರಿಸುವ ವಿಚಾರ.

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ
ಇಲ್ಲವೇ ಮೆ॥ ವನಮಾಳೀ ಭೀಮಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ಸಿನೆಮಾ ಸುದ್ದಿ

ಸುಭದ್ರಾ

– ಸೆಂಟ್ರಲ್ ಟಾಕೀಸಿನಲ್ಲಿ –

ಕನ್ನಡ ಸುಭದ್ರಾ ಚಿತ್ರವು ಮಂಗಳೂರು ಸೆಂಟ್ರಲ್ ಟಾಕೀಸಿನಲ್ಲಿ ಈ ದಿನದಿಂದ ಆರಂಭವಾಗಿದೆ. ಜಯಮ್ಮ ಹೊನ್ನಪ್ಪ ಭಾಗವತರು, ವೀರಣ್ಣ, ದೇವೇಂದ್ರಪ್ಪ ಇವರು ಅಭಿನೆಯಿಸುವರು. ಬಹು ಕಾಲದ ಮಂಗಳೂರ ಮಹಾಜನರ ನಿರೀಕ್ಷೆಯು ಫಲಿಸುವಂತಾಗಿದೆ. ಗುಬ್ಬಿ ವೀರಣ್ಣನ ಹಾಸ್ಯ, ಜಯಮ್ಮನ ಶೃಂಗಾರ ನಟನೆ, ಹೊನ್ನಪ್ಪ ಭಾಗವತರ ಉತ್ಕೃಷ್ಟ ಅಭಿನಯ, ದೇವೇಂದ್ರಪ್ಪನವರ ಮಧುರ ಸಂಗೀತೆಗಳನ್ನು ಇಲ್ಲಿ ಪ್ರತ್ಯಕ್ಷ ಕಾಣಬಹುದು.

ರಾಜಾಜಿಯವರು ಬರೆದ ಕತೆಯನ್ನು ಸಿನೆಮಾದಲ್ಲಿ

ಮಂತ್ರಿಗಳಾಗಿದ್ದ ಶ್ರೀ ಕೆ. ಎಂ. ಮುನ್ಸಿಯವರು ಬರೆದ ಕಥೆಯೊಂದು ಹಿಂದೆ ಚಲಚ್ಚಿತ್ರವಾಗಿದೆ ಇಂದು ಮದರಾಸಿನ ಪ್ರಧಾನಮಂತ್ರಿಗಳಾಗಿದ್ದ ರಾಜಾಜಿಯವರ ಕಥೆಯು ಚಲಚ್ಚಿತ್ರವಾಗಲಿದೆಯೆಂಬ ಸುದ್ದಿಯುಂಟು. ರಾಜಾಜಿ ಬರೆದ 'ದುಃಖಿತಳಾದ ಪಾರ್ವತಿ' ಎಂಬ ಹುಡುಕನ ಹೆಂಡತಿಯೋರ್ವಳ ಜೀವನ ಚಿತ್ರವನ್ನು 'ನವಯುಗ ಚಿತ್ರ ಪೀಟ'ದವರು 'ಪಾರ್ವತಿ' ಎಂಬ ಹೆಸರಲ್ಲಿ ಚಲಚ್ಚಿತ್ರ ತೆಗೆವರೆಂದು ತಿಳಿದಿದೆ.

ಜ್ಞಾನೇಶ್ವರ ಅಮೇರಿಕದಲ್ಲಿ

'ಪ್ರಭಾತ'ದವರ 'ಸಂತ ಜ್ಞಾನೇಶ್ವರ' ಚಿತ್ರವನ್ನು ಅವೆರಿಕದಲ್ಲಿ ಪ್ರದರ್ಶಿಸಲಾಗಿದೆ. ಈ ಚಿತ್ರವನ್ನು ಶ್ರೀ. ರಾವ್ ಬಾಗಾಯಿಯವರು ವಿಶೇಷ ಆಮಂತ್ರಣದಿಂದ ಅನೇಕ ಪ್ರಮುಖರನ್ನೂ ಇತರ ಕಲಾವಂತರನ್ನೂ ಕರೆಸಿ ಅಲ್ಲಿ ತೋರಿಸಿದರು. ಅಲ್ಲಿನವರು ಇದನ್ನು ಮೆಚ್ಚಿದರೆಂದು ಸುದ್ದಿ

ನಿರ್ದೇಶಕ ಶಾಂತಾರಾಮ

ಇವರು ಫಿಲ್ಮ್ ಎಜ್ಯುಕೇಷನಲ್ ಬೋರ್ಡಿಗೆ ಪ್ರಧಾನರಾಗಿ ನೇಮಕಗೊಂಡಿದ ವಿಷಯ ಇನ್ ಫೋರ್ಮೇಶನ್ ಮೆಂಬರರಾದ ಸರ್ ಅಕ್ಬರ್ ಹೈದರಿಯವರನ್ನು ಕಾಣಲು ಸಿಮ್ಲಕ್ಕೆ ತೆರಳಿದ್ದಾರೆ.

ಮೆಹತಾಬ್

ಮೆಹತಾಬಳು ನ್ಯೂ ಥಿಯೇಟರ್ಸನ್ನು ಸೇರಿದಳೆಂದು ಸುದ್ದಿ.

ಭೇಟಿ

ರಣಜಿತ್ ಚಿತ್ರ 'ಬೇಟಿ'ಯಲ್ಲಿ ವಸಂತಿ ಅಭಿನಯಿಸುತ್ತಾಳೆ ವಸಂತಿ ಈ ಚಿತ್ರದ ಅಭಿನಯದಲ್ಲಿ ನೂತನ ಯೌವನದ ಮನೋಹರ ಕಾರಿಯಾಗಿ ವಿರಾಜಿಸುತ್ತಾಳೆ.

ಸಾಸೀಮ್ ಮತ್ತು ಪೃಥ್ವಿರಾಜ್

ಮಿನರ್ವಾ ಮೂವೀಟೋನ್ ನಿರ್ದೇಶಕತ್ವದಿಂದ 'ತಾಜ್ ಮಹಾಲ್ ಪಿಕ್ಚರ್ಸ್'ನವರು ತಯಾರಿಸುವ 'ಉಜಾಲ' ಚಿತ್ರದಲ್ಲಿ ಸಾಸೀಮ್ ಮತ್ತು ಪೃಥ್ವಿರಾಜ್ ಇವರು ನಟಿಸುತ್ತಾರೆ. ರತನ್ ಬಾಯಿಯೂ ಇದರಲ್ಲಿ ನಟಿಸುವಳು.

"ಸಂಗಂ"

ನವಯುಗ ಚಿತ್ರವಿತರಣದವರ 'ಸಂಗಂ' ಪೂರ್ತಿಯಾಯಿತು. ನಿರ್ದೇಶಕ ಜುನ್ನಾಳ್ಕರ್ ರವರು ಇದನ್ನು ತಯಾರಿಸಿದ್ದಾರೆ. ನವಂಬರ್ 8ಕ್ಕೆ ಮುಂಬಯಿಯಲ್ಲಿ ಇದು ಪ್ರಥಮ ಸಲ ವಿನಾಯಕರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲಾಗಿದೆ. 'ರಾಜ ಅತಿಥಿಗಳು' ಎಂಬ ಹಾಸ್ಯ ಚಿತ್ರ ಪ್ರಸಿದ್ಧವಾಗುತ್ತಿದೆ ಇದನ್ನು ವಿನಾಯಕರೇ ನಿರ್ದೇಶಿಸುವರು.

'ಮಹಾನುಭಾವ ಬಸವಣ್ಣ'

(ಕನ್ನಡ ಚಿತ್ರ)

ಶ್ರೀ ಶಾಂತೇಶ ಪಾಟೀಲ ಎಂ. ಎಸ್. ಸಿ. ಇವರು ಒಂದು ಚಲಚ್ಚಿತ್ರ ಕಂಪೆನಿ ಸ್ಥಾಪಿಸಿ ಶ್ರೀ. ಕೆ. ನಾರಾಯಣ ರಾಳೆಯವರ ನಿರ್ದೇಶಕತ್ವದಿಂದ "ಮಹಾನುಭಾವ ಬಸವಣ್ಣ" ಎಂಬ ಕನ್ನಡ ಚಿತ್ರವನ್ನು ತಯಾರಿಸಲಿದ್ದಾರೆಂದು ತಿಳಿಯುತ್ತೇವೆ ಶ್ರೀ. ಪಾಟೀಲರು ಇಂಜಿನಿಯರಾಗಿ ಚಲವು ಕಂಪೆನಿಗಳಲ್ಲಿ ಕೆಲಸಮಾಡಿರುವರು ಪೋಸ್ಟ್‌ಮನ್, ಯುತ್ ಲೀಗ್, ಬೋಲೆಭಾಲ, ಕುಂಕುಮ, ನರ್ತಕಿ, ಮುನ್ಸಿಪಾಲಿಟಿ ಇವುಗಳ ಧನಲೇಖನ ಇವರದು.

ಕಾಸ್ಟ್ಯೂಮ್ಸ್

ಇಮ್ಮಡಿ ಉದ್ದೇಶವಿರುವ ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಛಿದ್ರತೆಯು

ಸಾಧನ!

ನಿನ್ನ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವನೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿನ್ನ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಕೈಲ್ಕ ಮತ್ತು ಬೆವರಿನಿಂದ ಮೆಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯಕ್ಕೆ ಮತ್ತು ಸೌಂದರ್ಯತೆಗೆ ನಿನ್ನ ಮೈಚರ್ಮವನ್ನು ಯಾವಾಗಲೂ ಕೂಟಿಕೂರಾ ಸಾಬೂನಿನಿಂದ (Cuticur Soap) ತೊಳೆಯಿರಿ. ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದ್ದೆ ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹನಿಗೆ ನ್ಯೂಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಅದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮು(Cuticura Ointment)ನಿಂದ ಮುದ್ದಣ, ಛಿದ್ರ, ಗಜ್ಜಿಗಳನ್ನು ನಾಶವಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶವಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura TalcumPowder) ಒಪ್ಪ ಶೈತ್ಯಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು.

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನುಗಳು ಪೊಡ್ಡಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪುಟಾ ರಕ್ಕೆ) ದೊರೆಯುತ್ತದೆ.



ನನ್ನಪ್ಪಕ್ಕೆ ನಾನು ಸ್ವತಂತ್ರನಾಗಿ ಯೋಜಿಸಬೇಕು

ನಾನು ನನ್ನ ಜೀವ, ನನ್ನ ಸಂಸಾರ ರಕ್ಷಿಸಿಕೊಳ್ಳಲೇಬೇಕು

ನನ್ನ ಹಣ ಕಾಪಾಡಿಕೊಳ್ಳಲೇಬೇಕು

ಆದ್ದರಿಂದ ಈಕ್ಷಣವೇ ಕಾರ್ಯೋನ್ಮುಖನಾಗಬೇಕು

ನಾನು ಕೊಳ್ಳಲೇಬೇಕು

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು

ನಿಮಗೆ ಅಥವಾ ನಿಮ್ಮ ಮಕ್ಕಳಿಗೆ ಅಥವಾ ಇತರರಿಗೆ ಉಡುಗೊರೆಯಾಗಿ ಕೊಡಲು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಅತ್ಯುತ್ತಮವಾದವು. ಇವು ಸುರಕ್ಷಿತವಾದ ಹೂಡಿಕೆಯಾಗಿದ್ದು ಹತ್ತು ವರ್ಷಗಳಲ್ಲಿ ಶೇಕಡಾ 46 ಲಾಭವನ್ನು ಕೊಡುತ್ತವೆ.

ಪ್ರತಿ ೧೦ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ರೂ ೬.೯೦/ಲಾಭಕೊಡುತ್ತೆ

ಪೋಸ್ಟಾಫೀಸಿನಲ್ಲಿ ಎಲ್ಲಾ ವಿವರವೂ ಸಿಗುತ್ತದೆ. ಇ.ಸ.೪೫೫

Notice of Holiday

Wednesday, the Nineteenth of November, 1941 being the Founder's Day will be observed as a holiday by our branches in South Kanara.

CANARA BANK LIMITED.

Estd: 1906.

ವಿಜ್ಞಾನಯುಗ

ಮನುಷ್ಯರಿಗೆ ಹುಲ್ಲು ಆಹಾರವಾಗುವುದೆ?

ಹುಲ್ಲು ಮನುಷ್ಯರಿಗೆ ಆಹಾರವಾಗ ಬಹುದೆಂದು ಕಂಡು ಹಿಡಿದ ವಿಜ್ಞಾನಿಗೆ ಗ್ರಿಮಿಲಿಯಾ ಡೋಲರನ ಪ್ರಶಸ್ತಿಯೊಂದು ಕಾದಿದೆ. ಪಶುಗಳಂತೆ ಮನುಷ್ಯನೂ ಹುಲ್ಲು ತಿಂದು ಜೀವಿಸಬಲ್ಲನೆಂದು ತಿಳಿದರೆ, ಅದು ವಿಜ್ಞಾನ ಪ್ರಪಂಚದಲ್ಲೇ ದೊಡ್ಡದಾದೊಂದು ಕ್ರಾಂತಿಯಾಗುವುದು.

ಹುಲ್ಲಿನಲ್ಲಿಯೂ 'ವಿಟಮಿನ್'ಗಳು ಇವೆಯೆಂದು ಅಮೆರಿಕದ ವೈಜ್ಞಾನಿಕರು ಕಂಡು ಹಿಡಿದಿರುವರು. ಒಂದು ರಾತಲು ಹುಲ್ಲಿನಲ್ಲಿ ಇರಿ ರಾತಲು ಹಣ್ಣು ತರಕಾರಿಗಳಲ್ಲಿರುವ ವಿಟಮಿನ್‌ಗಳಿಗಿಂತ ಹೆಚ್ಚು 'ವಿಟಮಿನ್'ಗಳಿವೆ. ಹಸ್ಸೆರಡು ರಾತಲು ಒಣಗಿದ ಹುಲ್ಲಿನಲ್ಲಿ ಇಳಂ ರಾತಲು ಹಣ್ಣು ತರಕಾರಿಗಳಿಂದ ಅಧಿಕ ವಿಟಮಿನುಗಳಿವೆ. ಮನುಷ್ಯನು ವರ್ಷ ಒಂದಕ್ಕೆ ತಿನ್ನುವ ವಿಟಮಿನುಗಳಿಗಿಂತಲೂ ಇದು ಅಧಿಕವಾಗಿದೆ. ಆದರೆ ಹುಲ್ಲು ಮನುಷ್ಯನ ರುಚಿಗೆ ಸರಿ ಹೋಗುವುದಿಲ್ಲ. ಇದನ್ನು ಸರಿ ಗೊಳಿಸುವ ಸಲುವಾಗಿ ವೈಜ್ಞಾನಿಕರ ಸಮಿತಿಯೊಂದು ಈಗ ಸಂಶೋಧನೆ ನಡೆಸುತ್ತಿದೆ.

❀ ❀ ❀

ಎದೆ ಬಡಿದ ನಿಂತಿತು! ಜೀವ ಹೋಗಲಿಲ್ಲ!

ಅವನ ಎದೆ ಬಡಿತ ನಿಂತಿತು! ಆದರೂ ಅವನಿಂದು ಬದುಕಿದ್ದಾನೆ. ಲಂಡನ್ ಆಸ್ಪತ್ರೆಯ ಹನ್ನೆರಡು ವರ್ಷ ವ್ಯಾಯದೆ ಒಂದು ಹುಡುಗನ ವಿಷಯದಲ್ಲಿ ಆದ ಅನುಭವವಿದು!

ಹುಡುಗನ ಎದೆ ಬಡಿತ ನಿಂತಾಗ ವೈದ್ಯರು ಆತನಿಗೆ ಇಂಜೆಕ್ಷನ್ ಕೊಟ್ಟರು. ಆದರೆ ಪರಿಣಾಮ ಪ್ರಯೋಜನ ಕಾಣಲಿಲ್ಲ. ಕಿಬ್ಬೊಟ್ಟೆಯ ಮೇಲ್ಭಾಗವನ್ನು ಕತ್ತರಿಸಿ ಮುಖ್ಯ ಭಾಗವನ್ನು ತಿಳಿದರು, ಆದರೂ ಪ್ರಯೋಜನ ಕಾಣಲಿಲ್ಲ. ಮಿನಿಟೊಂದು ಕಳದ ಕೂಡಲೇ ಎದೆ ಬಡಿತ ಪುನಃ ಕೇಳಿಸಿತು ಮತ್ತೆ ಸ್ವಲ್ಪ ಸಮಯದಲ್ಲಿ ಎದೆ ಬಡಿತ ಸರಿಯಾಯಿತು!

❀ ❀ ❀

ಪೊಟ್ಟಿಟೊ ಮತ್ತು ಟೊಮೆಟೊಗಳು ಒಂದೇ ಗಿಡದಲ್ಲಿ!

ರಷ್ಯದಲ್ಲಿ ಕೆಲವು ವಿಚಿತ್ರ ವೈಜ್ಞಾನಿಕ ಸಂಶೋಧನೆಗಳು ನಡೆದಿವೆ. ಗಿನಿಗಾರದಿಲ್ಲದೆ, ಗಿನಿಗಳಿಂದ ಕಲ್ಲಿದ್ದಲು ತೆಗೆವುದು, ಗಿಡಗಳಲ್ಲಿ ಎರಡು ಮೂರು ಬಗೆಯ ಫಲ ಮಾಡುವುದು, ಒಂದು ಗಿಡದಲ್ಲಿ ಅತ್ಯಧಿಕ ಫಲ ಬರಿಸುವುದು, ಸತ್ತವರ ಕಣ್ಣುಗಳನ್ನು ತೆಗೆದು, ಕುರುಡರಿಗೆ ಕಣ್ಣು ಕಾಣಿಸುವುದು ಇಂತಹ ವಿಚಿತ್ರ ಸಂಶೋಧನೆಗಳು ಆಗಿವೆ. ಇವ್ಕ ತಹ ಮೂವರು ವಿಜ್ಞಾನಿಗಳಿಗೆ 'ಸ್ಟಾಲಿನ್' ಪಾರಿತೋಷಕ'ವು ಸಂದಿದೆ.

ವಿಚಿತ್ರ ಪ್ರಪಂಚ

ಗೋರಕ ಪುರದಲ್ಲಿ ನಾಲ್ಕು ಕೈಕಾಲುಗಳುಳ್ಳ ಶಿಶು

ನಾಲ್ಕು ಕೈಕಾಲುಗಳುಳ್ಳ ಶಿಶುವೊಂದು ಗೋರಕ ಪುರದಲ್ಲಿ ಜನಿಸಿದೆ. ನಾಲ್ಕು ಪ್ರತ್ಯೇಕ ಅವಲುಗಳು, ನಾಲ್ಕು ಸ್ವತಂತ್ರ ಕೈಗಳು ಆ ಶಿಶುವಿಗಿದೆ.

ಈ ಶಿಶು ಹುಟ್ಟಿದ ವರ್ತಮಾನ ಪಟ್ಟಣದಲ್ಲಿ ಬೆಂಕಿಯಂತೆ ಹರಡಿತು! ಸಾವಿರಾರು ಮಂದಿ ಕೂಡಿದರು. ಮಗುವು ಹುಟ್ಟಿದ ಕೂಡಲೇ ಸತ್ತು ಹೋಗಿತ್ತು. ಹೆಣವನ್ನು ತಮಗೆ ಕೊಡಬೇಕೆಂದು ಸಂಶೋಧನಾಲಯದವರು ಅದಕ್ಕೆ ಉತ್ತಮ ಕೊಡುವುದಾಗಿಯೂ ಹೇಳಿದರು ಆದರೆ ಕಂದೆ ತಾಯಿಗಳು ಒಪ್ಪಲಿಲ್ಲ. ರಾಷ್ಟ್ರ ನದಿಯ ಬಳಿ ಆ ಹೆಣವನ್ನು ಸುಟ್ಟು ಬಿಟ್ಟರು ದಾರಿಯಲ್ಲಿದ್ದಕ್ಕೂ ಅವರು ಮಿತ ಜನಸಂದಣಿ ಕೂಡಿ ನೋಡುತ್ತಿತ್ತು.

❀ ❀

ಉದುರಿದ ಹಲ್ಲು ಆಂಟಿ ಕೊಂಡಿತು!

ಇದು ಇನ್ನೊಂದು ವಿಚಿತ್ರ. ಲಂಡನಿನಲ್ಲಿ ಆದುದು. ಒಬ್ಬ ಎಂಟು ವರ್ಷದ ಬಾಲಿಕೆ ಎಡವಿ ಬಿದ್ದು ಎದುರು ಗಡೆಯ ಹಲ್ಲು ಉದುರಿಸಿಕೊಂಡಳು. ಹಲ್ಲನ್ನು ಎತ್ತಿಕೊಂಡು ಆಸ್ಪತ್ರೆಗೆ ಧಾವಿಸಿ ಬಂದಳು!

ದಂತ ಸರ್ಜನನು ಆ ಹಲ್ಲನ್ನು ಅದು ನೊದಲ್ಲಿದ್ದಲ್ಲಿಯೇ ಇಟ್ಟು ಕಟ್ಟಿದನು. ಎರಡು ತಿಂಗಳ ಬಳಿಕ ಹಲ್ಲು ನೊದಲಿನಂತೆಯೇ ಕೂಡಿಕೊಂಡಿತು! ಇದು ಎಲ್ಲರಿಗೂ ಆಶ್ಚರ್ಯ. ಆದರೆ ಹಲ್ಲು ಉದುರಿ ಬಹಳ ಸಮಯ ಆಗದಿದ್ದರೆ ಮೊಂಸವು ತರುಗಿ ಅದನ್ನು ಕೂಡಿಸಿ ಕೊಳ್ಳುವುದೆಂದು ಈಗ ತಿಳಿದಿದೆ.

❀ ❀

ಕುಂಟ ತೈಮೂರನ ಗೋರಿ

ಸಮರ್ ಖಂಡದಲ್ಲಿರುವ ಕುಂಟ ನಾದ ತೈಮೂರನ ಗೋರಿಯನ್ನು ಕಳದ ಜೂನ್ ತಿಂಗಳಲ್ಲಿ ಸಂಶೋಧಕರು ತೆರೆದು ಒಂದು ಅಸ್ತಿ ಪಂಜರವನ್ನು ಹೊರ ತೆಗೆದಿರುವರು.

ಗೋರಿಯೊಳಗಿದ್ದ ಅಸ್ತಿ ಪಂಜರವು ಇತಿಹಾಸ ಪ್ರಖ್ಯಾತನಾದ ಕುಂಟ ತೈಮೂರನದೆಂದು ಸಂಶೋಧಕರಿಗೆ ಭರವಸೆಯಾಗಿದೆ. ಅದಕ್ಕೆ ಅಗಲವಾದ ಹಣೆಯಿತ್ತು. ಬಲಕಾಲು ಸ್ವಲ್ಪ ಕುಂಟಾಗಿತ್ತು.

ತೈಮೂರನು ೧೪೦೫ ನೆ ಇಸವಿ ಫೆಬ್ರವರಿ ೧೯ ರಂದು ಚೈನಕ್ಕೆ ಆಕ್ರಮಣ ಮಾಡಲು ಹೊರಟವನು ದಾರಿಯಲ್ಲಿ ಜ್ವರದಿಂದ ತೀರಿಹೋಗಿದ್ದನು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಆಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಭದ್ರ ಮುಂತಾದುವನ್ನು ಗುಣವಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು.—

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್

ಸ್ಮಾಲ್ ಕಾಜ್ ನಂಬ್ರ 542/1941

ಯರೆ ರಮಾನಾಥ ಶೆಣೈ ... ವಾದಿ.

ಮತ್ತು

ಸಂತಾನ್ ಪಿರೇರಾ ... ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿ— ಸಂತಾನ್ ಪಿರೇರಾ M. D. X. ನಂಬ್ರ 529 ನೆ ಬೋರ್ ಹೌಸ್‌ನವ್-ಕಂಕನಾಡಿ—ಮಂಗಳೂರು-ಇವರಿಗೆ ಈ ಮೂಲಕ ತಿಳಿಸುವದೇನೆಂದರೆ—

ಮೇಲ್ಕಾಣಿಸಿದ ವಾದಿರು ನಿಮ್ಮಿಂದ ಸದ್ರಿ ಯವರಿಗೆ 3 ಹುಂಡಿಗಳ ಮೇಲೆ ಬರತಕ್ಕ ಐವೇಜು ರೂಪ್ಯಾ 194-1-0ಕ್ಕೆ ಸದ್ರಿ ವ್ಯಾಜ್ಯವನ್ನು ಮಾಡಿ ನಿಮ್ಮ ಹಾಜರಾತಿ ಬಗ್ಗೆ ಸದ್ರಿ ವ್ಯಾಜ್ಯವನ್ನು ತಾ. 1-12-1941ನೇ ದಿವಸ ಗಂಟೆ 11½ಕ್ಕೆ ಸದ್ರಿ ಕೋರ್ಟ್ ಮುಂದೆ ಇಟ್ಟು ರುತ್ತದೆ. ಆದ್ದರಿಂದ ನೀವು ಆ ದಿವಸ ವಕೀಲ ವ್ಯಾಸಾಗಲಿ ಖುದ್ದಾಗಲಿ ಸದ್ರಿ ಕೋರ್ಟ್ ಮುಂದೆ ಹಾಜರಾಗತಕ್ಕದ್ದು. ತಪ್ಪಿದರೆ ನಿಮ್ಮನ್ನು Exparte ಮಾಡಲಾದೀತು.

ಮಂಗಳೂರು | M. Venkatraya Kamath,
11-11-41. | Advocate for Plaintiff

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್‌ನಲ್ಲಿ

S. C. 509/1941

ವಾದಿ—ಕಾರಂಗ ಅಡಿಗ

ಪ್ರತಿವಾದಿರು—1 ಜೋನ್ ಪಿ. ಶಿಕೇರ, 2. ಆಂದ್ರು ಶಿಕೇರ, 3 ಚಾರ್ಲಿ ಶಿಕೇರ, 4. ಡೋಸ್ ಶಿಕೇರ ಜ್ಯಾ, 5. ಅಪ್ರಸನ್ ಶಿಕೇರ ಜ್ಯಾ, 6. ಜೆ. ಎಮ್ ಶಿಕೇರ 2ನೇ ಪ್ರತಿವಾದಿ ಆಂದ್ರು ಶಿಕೇರ, 3ನೇ ಪ್ರತಿವಾದಿ ಚಾರ್ಲಿಸ್ ಶಿಕೇರ ಡಿಡ್‌ವಾಕ್ ಶಿಕೇರನ ಮಕ್ಕಳು.

ಇವರಿಗೆ ತಿಳಿಯಪಡಿಸುವುದೇನೆಂದ್ರೆ—

1ರಿಂದ 5ನೇ ವರೆಗಿನ ಪ್ರತಿವಾದಿರ ತಂದೆ ಡಿಡ್‌ವಾಕ್ ಶಿಕೇರರು ವಾದಿಗೆ ತಾರೀಕು 12-10-'38ರಲ್ಲು ರೂಪ್ಯಾ 200ಕ್ಕೆ ಬರಕೊಟ್ಟ ದಿವಾಂದು ನೋಟ್ಸಿನ ಅನ್ವಯ ಬಡ್ಡಿ ಹಣಕ್ಕೆ ಮೇಲ್ಸಿನ ದಾವೆಯನ್ನು ಮಾಡಿಸ್ಥಿಗೆಯಿತ್ತದೆ. ಆ ದಾವೆಯು ಮೇಲಿನ ಕೋರ್ಟ್‌ನಲ್ಲಿ ತಾರೀಕು 4-12-1941ಕ್ಕೆ ತಪ್ಪಿಗೆ ಇಟ್ಟಿದೆ. ಆಕ್ಷೇಪಣೆಗಳಿದ್ದರೆ ಕೋರ್ಟ್ ಮುಂದೆ ಹಾಜರಾಗಿ ಜ್ಞಾಪಿಸಿ ಮಾಡತಕ್ಕದ್ದು.

ಕುಂದಾಪುರ | K. Ramappayya,
ತಾ. 11-11-'41 | Advocate for Pltiff.

TENDER NOTICE

Sealed tenders will be received up to 3 p.m, on 1-12 '41 for the following works:

1. Reconstructing the Yelmudi Bridge in 31/5 of Mangalore - Mercara Trunk Road No. A-16 Estimate Rs 12,600.

2. Reconstructing the superstructure of Mundaje Bridge in 45/1 of Mangalore-Mysore Trunk Road. Estimate Rs. 28,700

The tender documents can be seen in the District Board Engineer's office on any working day and can be had on a payment of Rs. 5 per set each.

Mangalore, 10.11.41.

District Board Engineer,
(S. KANARA)

BHUVANENDRA PRODUCTS LTD.,

Head Office and Factory: KATAPADI S. Kanara

Depots: 1. Maharatha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕರ್ತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್.

THE PIE-MONEY BANK, LTD.
Maidan Road, MANGALORE.
Undertakes all kinds of Banking Business. Current account at 2½% per annum, Savings Bank Deposits at 4½% per annum.
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K R. GURU, *Managing Director.*

The Bank of Mangalore Limited.
Branches—MOODABIDRI & PADUBIDRI.
HEAD OFFICE MANGALORE ESTD. 1931.
All kinds of Banking Business transacted.
Fixed Deposits received at rates ranging from 3% to 5%.
INTEREST PAYABLE QUARTERLY
Interest on Savings Bank Deposits allowed at at 2½%

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ಜೊಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು
ಕುಳಗುಂದ ಜಾನುವಾರ ಸಂತೆ
4-11-1941 ರಿಂದ 17-11-1941

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ. **18—11—1941**

ಶ್ರೀ ಸುಬ್ರಹ್ಮಣ್ಯ ಷಷ್ಠಿ ಮಹೋತ್ಸವ. **24—11—1941**

ಪ್ರಯಾಣಿಕರ ಮತ್ತು ಯಾತ್ರಾ ಸ್ಥಳಗಳಿಗೆ ಹೋಗಲಿಚ್ಛಿಸುವ ಯಾತ್ರಾರ್ಥಿಗಳ
ಅನುಕೂಲತೆಗಾಗಿ ಇದೇ ಬರುವ 1—11—1941 ರಿಂದ 30—11—1941 ರ ವರೆಗೆ ಮೇಲ್ಕಂಡ ಸ್ಥಳಗಳಿಗೆ
ಅಗತ್ಯವಿದ್ದಲ್ಲಿ
ಸ್ಪೆಶಲು ಸರ್ವಿಸುಗಳನ್ನು ಚಾಲುಮಾಡುವ ಏರ್ಪಾಡನ್ನು ಮಾಡಲಾಗುವುದು
ಹೆಚ್ಚಿನ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಃ ಕೇಳಿ ತಿಳಿಯಬಹುದು.

THE JOINT MANAGERS,
The Combined Booking Agency, Mangalore.

ಒಂದು ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 3-0-0 ಷಾಂಮಿಕ ಪೋಸ್ಟೇಜು ಸಹಿತ ರೂ. 3-13-0 Regd. No. M. 3460

ಸ್ವದೇಶಾಭಿಮಾನಿ

[ಸಂಪುಟ 35] ಶನಿವಾರ 14-11-1941 [ಸಂಚಿಕೆ 45]

(Regd)

ಅಮೃತಾಂಜನ

ತಲೆನೋವು, ತಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವುಗಳಿಗೂ ಎದೆನೋವು, ಶ್ವಾಸಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಸಕ್ಕವಾತ, ಮೈ ನೋವು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಕಜ್ಜಿ, ಹುಳುಕಡ್ಡಿ, ಪಿತ್ತ ಉದ್ರೇಕ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ-ಮದರಾಸು, ಕಲ್ಕತ್ತೆ.

ಮುಂಗಳೂರಿನ ಈ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,——MANGALORE,——CALICUT MADRAS,

TRIVANDRUM,——BANGALORE City, —and BOMBAY 4.

ಇಂದು ಎಲೆಯೊಗಟ್ಟಿಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತು ಯಾವುದೆ

ನಂಜನಗೂಡು ಟೂತ್ ಪೌಡರ್

ಸದ್ಯೆದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಸಾರ್ವಭೌಮರು ವೈಮಾನಿಕರನ್ನು ಸಂದರ್ಶಿಸಿದರು.

ವೈಶ್ರವಿಮಾನಗಳು ರಾತ್ರಿ ಕಾಲದಲ್ಲಿ ಧಾಳ ಮಾಡುವಾಗ ಅವುಗಳನ್ನೆದುರಿಸುವ ಬ್ರಿಟಿಷ ವೈಮಾನಿಕರನ್ನು ಸಾರ್ವಭೌಮರು ಸಂದರ್ಶಿಸಿದಾಗ ತೆಗೆದ ಚಿತ್ರ

KANNADA ILLUSTRATED WEEKLY

ಪುಸ್ತಕ ವಿಮರ್ಶೆ

ಕ್ರಾಂತಿ: ಲೇಖಕರು: ಗರುಡ ಸದಾಶಿವರಾವ್. ಕ್ರೌನ್ ೧/೮ ಆಕಾರದ ೨೬ ಪುಟಗಳು, ಬೆಲೆ ೪ ಆಣೆ.

ಪ್ರತಿಭಾವಂತ ನಾಟಕಕರ್ತರಂತೆ, ವೈಭವಾನ್ವಿತ ನಟರಾಗಿ, ಶ್ರೀ. ಗರುಡ ಸದಾಶಿವರಾಯರು ಕನ್ನಡ ರಂಗಭೂಮಿಯಲ್ಲಿ ಹೆಸರಾಂತವರು. ಅವರ ಲೇಖನಿಯಿಂದ ಹೊಂಟು, ಅವರ ನಟನೆಯೊಡನೆ ರಂಗಭೂಮಿಗಿಳಿದ ನೂತನ ಸಾಮಾಜಿಕ ನಾಟಕವಿದು 'ಕ್ರಾಂತಿ'ಯು. ಸಮಾಜದಲ್ಲಿ ವರದಕ್ಷಿಣೆಯ ಅನ್ಯಾಯವನ್ನು ಎದುರಿಸುವ, ದೇಶಸೇವೆಗಾಗಿ ಅಕ್ಕಬಲಿ ದಾನಕೊಡುವ, ಸ್ವದೇಶನ್ನೊಜದ ಹಕ್ಕಿಗಾಗಿ ಹೋರಾಡುವ, ಇಂತಹ ಸಾಮಾಜಿಕ ರಾಜಕೀಯ ಕ್ರಾಂತಿ ವಿಚಾರ ಭಾವನೆಗಳ ಪ್ರಚೋದಕವಾಗಿರುವೀ ನಾಟಕವು ಬಹಳ ಪರಿಣಾಮಕಾರಿಯಾಗಿದೆ.

ಬ್ಯಾಂಕರ್ ವಸಂಕರಾಯರು, ತಮ್ಮ ಸುಶಿಕ್ಷಿತ ಪುತ್ರನಾದ ಶೂಲಪಾಣಿಗೆ ವರದಕ್ಷಿಣೆ ಸಿಗದೆ ಕನ್ಯೆಯನ್ನು ತರಲು ಒಪ್ಪುವುದಿಲ್ಲ. ಶೂಲಪಾಣಿಗೆ ತಂದೆಯ ವಿಚಾರವು ಸರಿಬೀಳಲಾರದು. ಪುರುಷನು ಪ್ರೇಮಿಸಿ ವಿವಾಹವಾಗಬಯಸಿದ್ದರೆ, ತಾವು ವರದಕ್ಷಿಣೆ ಮೂಲಕ ವಿವಾಹವಾಗಲಾರೆವೆಂದೂ, ಅವಿವಾಹಿತೆಯರಾಗಿದ್ದು ದೇಶಸೇವೆ ಮಾಡುವೆವೆಂದೂ ಆ ಊರ "ಗೌರೀ ಮಂಡಳ"ದ ಸದಸ್ಯೆಯರು ಪಣತೊಟ್ಟಿರುತ್ತಾರೆ. 'ಗೌರಿ ಮಂಡಳ'ದ ಸದಸ್ಯೆಯರಲ್ಲಿ ಒಬ್ಬಳಾದ ಗೌರಿಯನ್ನು ಶೂಲಪಾಣಿಗೆ ವಿವಾಹಮಾಡಿಕೊಡುವ ಕಾರ್ಯದಲ್ಲಿ ವರದಕ್ಷಿಣೆಯೇ ಅಡ್ಡಬಂತು, ವರದಕ್ಷಿಣೆ ಕೊಟ್ಟು ಮದುವೆಮಾಡಿಸಬೇಡಿರೆಂದು ಗೌರಿ ಹಟ ಹಿಡಿದಳು. ವರದಕ್ಷಿಣೆ ತೆಗೆದು ಮದುವೆಯಾಗಲಾರೆನೆಂದುದಕ್ಕಾಗಿ ಶೂಲಪಾಣಿಯೂ ತಂದೆ ಬ್ಯಾಂಕರರ ಮನೆ ಬಿಟ್ಟುಹೋಗಬೇಕಾಯಿತು.

ಅಪ್ಪರಲ್ಲಿ ಕಾಂಗ್ರೆಸಿನ ಆಶ್ರಯದಿಂದ ಚೀನಕ್ಕೆ ಸಹಾಯಪಥಕವೊಂದು ಹೊರಟಿತು! ದೇಶಾಭಿಮಾನಿಗಳಾದ ಯುವಕ ಯುವತಿಯರು ಹಲವರು ಆ ಪಥಕದಲ್ಲಿ ಸೇರಿದರು. ಗೌರೀ ಶೂಲಪಾಣಿಯರು ಆ ಪಥಕದಲ್ಲಿ ಸೇರಿ ಹೊರಟರು. ಚೀನದಲ್ಲಿ ಬಹಳ ವಿಪತ್ತು ಬದಗುವುದು. ಶೂಲಪಾಣಿಯು ಅಲ್ಲಿ ಕೈಕಾಲು ಮುರಿಸಿಕೊಳ್ಳುತ್ತಾನೆ. ಕುರೂಪಿಯೂ ಅಗುವನು. ಗೌರಿಯೂ ಕಠಿಣ ಕಾಯಿಲೆಗೆ ತುತ್ತಾಗುವಳು. ಶುಶ್ರೂಷಾಪಥಕವು ತನ್ನ ಕಾರ್ಯ ತೀರಿಸಿ ಭಾರತಕ್ಕೆ ಮರಳುವುದು. ಮರಳಿಬಂದ ದೇಶಸೇವಕರಿಗೆ ಸ್ವಾಗತವಾಯಿತು. ಗೌರೀ ಶೂಲಪಾಣಿಯರನ್ನು ನಾಡಿಗೆ ನಾಡೇ ಕೊಂಡಾಡಿತು. ಶೂಲಪಾಣಿಯ ಮಾತಾಪಿತೃಗಳೂ ವರದಕ್ಷಿಣೆಯಲ್ಲದೆ—ವಿವಾಹಕ್ಕೆ ಒಪ್ಪಿದರು. ರಾಷ್ಟ್ರಧ್ವಜದ ಅಡಿಯಲ್ಲಿ ಅವರ ವಿವಾಹವು ಸಂಭ್ರಮದಿಂದ ನೆರವೇರಿತು.

ಹೀಗೆ ಕತೆಯು ಆಧುನಿಕ ಭಾರತದ ವಿಚಾರ ಕ್ರಾಂತಿಯನ್ನು ಹೊರಹೊಮ್ಮಿಸುವುದಾಗಿ ಸಫಲವಾಗಿದೆ. ಬಹಳ ಓಜಸ್ವಿಯಾದ ಶೈಲಿಯಲ್ಲಿ ಲೇಖಕರು ಬರೆದಿದ್ದಾರೆ. ಅನರಣ್ಯದಲ್ಲಿ ಮತ್ತು ಒಳ ಪಡೆಯಲ್ಲಿ ನಾಟಕಾಭಿನಯದ ನಾಲ್ಕು ಭಾವಚಿತ್ರಗಳೂ ಇವೆ.

ಕೃತ್ರಿಮ ದಂಪತಿಗಳು ಹಿಂದುಸ್ಥಾನೀ ಭಾಷೆ ಮಾತನಾಡುವಂತೆ ಮಾಡಿದುದರ ಉದ್ದೇಶವೇನೆಂದು ಅರ್ಥವಾಗುವುದಿಲ್ಲ. ಹಿಂದೀ ಭಾಷೆ ನಮ್ಮ ಸಾಮಾಜಿಕರಿಗೆ ಪರದೇಶಿ ಭಾಷೆಯಂತೂ ಆಗಲಾರದು. ಕನ್ನಡಿಗರಿಂತೂ ಇದು ಒಂದು ರೀತಿಯಲ್ಲಿ ವಿದೇಶೀಯವಾಗಿಯೇ ಅನ್ನಿಸಬಹುದು. ಕನ್ನಡದಲ್ಲಿಯೇ ಅವರ ಮಾತನ್ನೂ ಬಳಸಿಕೊಂಡಿದ್ದರೆ ನಾಟಕದ ಸ್ವಾರಸ್ಯ ಕೆಡಿಮೆಯಾಗುತ್ತಿತ್ತೆಂದು ನಮಗೆ ತೋರುವುದಿಲ್ಲ.

—ಕಯ್ಯಾರ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 320/41.

ಎ. ಎ. ಟೋಟೋ . . . . ವಾದಿ

ಮತ್ತು

ಅಬ್ಬಚ್ಚು ಕೂಡಾ . . . ಪ್ರತಿವಾದಿ

1ನೇ ಪ್ರತಿವಾದಿ ಅಬ್ಬಚ್ಚು ಕೊರಪಳು ಮಗಳು, ವ ಕೊರಗ ಪೂಜಾರಿ ಹೆಂಡತಿ— ಪುತ್ತೂರು ತಾಲೂಕು ಕಡಬ, ಕಳಿಬೇ ಗ್ರಾಮ.

ಸದ್ರಿ 1ನೇ ಪ್ರತಿವಾದಿಗೆ ಈ ಕೋರ್ಟು ಮೂಲಕ ತಿಳಿಸುವದೇನೆಂದರೆ: ವಾದಿಯು ದಾವಾ ಆಸ್ತಿ ಬಾಬ್ತು ತೆತ್ತೀರ್ವೆವಜು ವೆಬದ್ದಿಕೂಡಾ ರೂ. 36-7-9ನ್ನು ಆಸ್ತಿ ಜಪಾಟ್ಟಾರಿಯಿಂದ ದಿಕ್ರಿ ಕೊಡಿಸಬೇಕಾಗಿ ನಿಮ್ಮ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ಒಂದು ದಾವಾದಾಕ್ಲು ಮಾಡಿದ್ದಾರೆ. ಸದ್ರಿ ದಾವೆಯು ಆಕ್ಕೆರುಸಡಿಸುವ ಬಗ್ಗೆ ತಾ. 26-11-41ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಪ್ಪಗೆ ಇಟ್ಟಿದೆ. ಆ ದಿವಸ ಹಗಲು 10 ಘಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತರವಾಗಿಯಾಗಲೀ ಸದ್ರಿ ಕೋರ್ಟು ಮುಂದೆ ತಪ್ಪದೆ ಹಾಜರಾಗಿ ವ್ಯವಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಶಿಪ್ಪಾ ಮಾಡಿ ನಿಮ್ಮ ಮೇಲೆ ಪೈಸ್ಲೆ ಮಾಡೋಣಾದೀತು ಎಂತ ಕೋರ್ಟು ಹುಕುಂ ಪುಕಾರು ಈ ನೋಟೀಸು ಕೊಟ್ಟಿದೆ.

(By order of the Court)

Puttur, S.K. 10—11—41. } **B. Achuth Baliga,** Pleader for plaintiff.

INVITATION

The Old Boys' Day and the College Day of Government College, Mangalore, will be celebrated on 22nd and 23rd November, 1941, respectively.

The Committee extends its cordial invitation to all those Old Boys of the College who have not been invited individually for lack of their address and requests them to make the above functions a success by their presence.

COMMITTEE OF THE OLD BOYS ASSOCIATION

NOTICE

In the Court of the District Munsif of Mangalore

Original Suit No. 337/1941.

Between

Lingappa Bhandary & others **Plaintiffs.**

and

Sankamma & others. **Defendants.**

To

Defendants:—(6) Sankappa Shetty, (8) Lakkanna Shetty and (9) Laxmi, children of Dyake. All reside in Yorkady Kasba village, Kasargod Taluk.

Please take notice that the plaintiffs above named have filed the above suit for recovery of Rs. 1895-11-2 being maintenance amounts with interest up to 29-7-1941 from the 1st defendant personally and as ejamanthi of the family as well, together with future interest and costs of suit with interest and that the suit is posted for hearing at 10-30 a. m. on 29-11-1941 in the above Court. You may appear either in person or by pleader on or before the said date and contest the suit, failing which the same will be decided exparte.

Mangalore, 8—11—1941 } **B. Vaikunta Baliga** Vakil for Plaintiffs.

ನೋಟೀಸು

ಉಡುಪಿ ತಾಲೂಕು ಶಿರ್ವ ಗ್ರಾಮದ ಮಾಣಿ ಬೆಟ್ಟು ಪಡುಮಜಲಿದಲ್ಲಿರುವ ರಾಮ ಉಪಾಧ್ಯರ ಹೆಂಡತಿ ಕಮಲಮ್ಮ 1 ಇವರ ಮಗ ಶ್ರೀನಿವಾಸ ಉಪಾಧ್ಯ 1- ಕೂಡಾ 2 ಜನರು ಈ ಮೂಲಕ ತಿಳಿಯಪಡಿಸುವುದೇನೆಂದರೆ:- ನಮ್ಮ ಪೈಕಿ 1ನೆಯವಳ ಗಂಡ ವ 2ನೆಯವನ ತಂದೆ ರಾಮ ಉಪಾಧ್ಯರು ತಮ್ಮ ಆಸ್ತಿಸ್ಥಿತಿಯ ಪೈಕಿ ಯೆಂದ ತನ ಸಂಪೂರ್ಣ ಆದೀನ ಮಗ್ಗೈರಿಯನ್ನು ಕಳಿದ ತಾ. 10-9-1939ರಲ್ಲು ಅವರ ಉತ್ತರಾಧಿಕಾರಿಗಳಾದ ನಮಗೆ ಬರಹ ಮೂಲಕ ಬಿಟ್ಟುಕೊಟ್ಟಿರುತ್ತಾರೆ. ಅವರ ಕಾಲಿಲೆಯು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬುದ್ಧಿವಿಕಾರ ಉಂಟಾಗಲು ತೊಡಗಿರುವರೆಂಬ ಈ ಸಮಯದಲ್ಲಿ ನಮ್ಮ ದ್ವೇಷಿಕರು ನಮ್ಮನ್ನು ಕಷ್ಟನಷ್ಟಗಳಿಗೆ ನುಂಗಿಸಿ ತಾವು ಅಕ್ರಮ ಲಾಭ ಪಡೆಯ ಬೇಕೆಂಬ ದುರಾಲೋಚನೆಯಿಂದ ಸದ್ರಿ ರಾಮ ಉಪಾಧ್ಯರಿಗೆ ಬೋಧಿಸಿ, ನಮ್ಮ ಕ್ರಯನ ಗತದ ಮೂಲ ವ ಮೂಲಗೇಣಿ ಆಸ್ತಿಯನ್ನು ಯಾ ಆದರೆ ಆಂಶವನ್ನು ವಾಯ್ಕೆಗೇಣಿ ಮೂಲ ಗೇಣಿ, ಅಡವು, ದಾನ, ಕ್ರಯ ಮುಂತಾದ ಯಾವುದಾದರೊಂದು ವಿಧದಲ್ಲಿ ಕಾಶಾಧೀನ ಮಾಡಿಸಿಕೊಳ್ಳುವ ಯೋಚನೆಯಲ್ಲಿ ಇರುತ್ತಾರಾಗಿ ನಮ್ಮ ತಿಳುವಳಿಕೆಗೆ ಬಂದಿರುತ್ತದೆ. ನಮ್ಮ ಆಸ್ತಿಯನ್ನು ಕಾಶಾಧೀನ ಮಾಡುವ ಯಾವ ದೊಂದು ಗರ್ಜಾ ಸದ್ರಿ ರಾಮ ಉಪಾಧ್ಯರಿಗಿರುವುದಿಲ್ಲ. ಅದುದರಿಂದ ಯಾರಾದರೂ ನಮ್ಮ ಒಪ್ಪಿಗೆ ವಿನಹಾ ಸದ್ರಿಯವರಿಂದ ಮೇಲ್ಕಾಣಿಸಿದಂತೆ ಆಸ್ತಿಯ ಕಾಶಾಧೀನವಾಗಲೀ ಪ ಇತರ ನೋಟು, ದಸ್ತೈವಾಜುಗಳನ್ನಾಗಲೀ ಮಾಡಿ ಕೊಂಡಲ್ಲಿ ಅಂಥ ಯಾವ ವ್ಯವಹಾರುಗಳೂ ಕಾಶಾಧೀನಕ್ಕೂ ಸಿಂಧುವಾಗತಕ್ಕವುಗಳಲ್ಲ ಮತ್ತು ನಮಗೆ—ಭಾಧಿಸ—ತಕ್ಕವುಗಳೂ ಆಲ್ಲ ವೆಂಬದನ್ನು ಈ ಮೂಲಕ ಎಲ್ಲಾ ಜನರೂ ತಿಳಿದಿರತಕ್ಕದ್ದು.

ಶಿವಮೊಗ್ಗೆ 13-11-1941 | ಕಮಲಮ್ಮನವರು ಪರವಾಗಿ ಶ್ರೀನಿವಾಸ ಉಪಾಧ್ಯನ ರುಜು

ಡೋಗ ಪೂರ್ತಿಯಾದ ಕೂಡಲೇ, ದಿನನಿತ್ಯ ಓವಲ್‌ಟಿನ್‌ನನ್ನು ಕುಡಿದು, ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಆದರ ಹಿತಕರವಾದ ಸನಿಯನ್ನು ಕೊಂಡಾದು ವಿರಿ. ನಶಕ್ತವಾದ ಶರೀರಕ್ಕೆ ದುರ್ಬಲವಾದ ನರಗಳಿಗೆ, ಅದು ತಕ್ಷಣ ಶಕ್ತಿಯನ್ನು ಉಂಟು ಮಾಡಿ, ಸುಖ ನಿದ್ರೆಯನ್ನುಂಟು ಮಾಡುವುದಲ್ಲದೆ ಶರೀರವನ್ನು ಕ್ರಮಪ್ರಕಾರ ಬಲಗೊಳಿಸುವುದು.

ಓವಲ್‌ಟಿನ್ ಶುದ್ಧ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅದನ್ನು ಕುಡಿಯಿರಿ. ಇತರ ನಕಲಿ ಮಾಲುಗಳನ್ನು ಉಪಯೋಗಿಸದಿರಿ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಆಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಪಿಸ್ಬ್ಲೂಟ್ಸ್—ಗ್ರೈಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬಾಯಿ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಒವಲ್‌ಟಿನ್
OVALTINE

OV/26/40

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

'ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

21—11—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೧—೧೧—೧೯೪೧]

ಸಮರಭೂಮಿಯ ಸಂಚಾರ

ರಶ್ಯನ್ ರಣಭೂಮಿಯಲ್ಲಿ ಇತ್ತೀಚೆಗೆ ವಿಶೇಷ ಬದಲಾವಣೆಗಳೇನೂ ಆಗಿಲ್ಲ. ರಣರಂಗದ ಪ್ರತಿಯೊಂದು ಕಡೆಯಲ್ಲಿಯೂ ರಶ್ಯನರು ವೀರಾವೇಶದಿಂದ ಜರ್ಮನರನ್ನು ಎದುರಿಸುತ್ತಿದ್ದಾರೆ.

ರಶ್ಯದಲ್ಲಿ ಈಗ ಛಳಿಗಾಲವು ಪ್ರಾರಂಭವಾಗಿದೆ. ಸಹಿಸಲಸಾಧ್ಯವಾದ ಛಳಿಯಿಂದ ಜರ್ಮನರು ನಡುಗುತ್ತಾ ತಮ್ಮ ತಿಬಿರದಿಂದ್ದ ಹೊರ ಬರಲಾರದಾಗಿರುವರು. ಹಿಮವೂ ಬೀಳುತ್ತಿದೆ ಅನೇಕ ಜರ್ಮನರು ಹಿಮದಲ್ಲಿ ಹೂತು ಹೋದರಂತೆ! ಟೇಂಕುಗಳೂ ನಡೆಯದಂತಾಗಿದೆ. ಡೊನೆಟ್ಸ್ ಭಾಗದಲ್ಲಿ ಮಳೆಯೂ ಬೀಳುತ್ತಿದೆ. ಇದೆಲ್ಲಾ ಜರ್ಮನರ ಮುನ್ನಡೆಗೆ ಸ್ವಲ್ಪ ಪ್ರತಿಬಂಧವುಂಟಾಗಿದೆ.

ಇಷ್ಟೊಂದು ತಡೆಗಳಿದ್ದರೂ, ಛಳಿ, ಹಿಮ, ಮಳೆಗಳಿದ್ದರೂ ಜರ್ಮನರು ಲೆಕ್ಕಿಸದೆ, ತಮ್ಮ ಗುರಿಯನ್ನು ಸಾಧಿಸುವ ಸಲುವಾಗಿ ಹೊಸ ಹೊಸ ಸೈನ್ಯಗಳನ್ನು ಮತ್ತು ಯುದ್ಧಾಸ್ತ್ರಗಳನ್ನು ಸಂಗ್ರಹಿಸುತ್ತಿದ್ದಾರೆ. ಮೋಸ್ಕೋ ರಣಕ್ಷೇತ್ರದಲ್ಲಿ ಜರ್ಮನರ ಸಿದ್ಧತೆ ಬಲವಂತವಾಗಿದೆ. ಟೂಲಾವನ್ನು ವಶಪಡಿಸಿ ಕೊಳ್ಳಲು ಬಿಡದೆ ಸಾಹಸ ಮಾಡುತ್ತಿರುವರು.

ಜರ್ಮನ್ ವೈಮಾನಿಕರು ಸೆಬಾಸ್ಟೆಪೋಲದ ಮೇಲೆ ಧಾಳಿ ಮಾಡಿದರು. ಅಲ್ಲಿನ ಭದ್ರವಾದ ಒಂದು ಕೋಟೆಯು ಅವಂ ವಶವಾಯಿತೆಂದು ಜರ್ಮನ್ ಸುದ್ದಿಯಿದೆ. ಈಗ ಸೆಬಾಸ್ಟೆಪೋಲ ಕೋಟೆಗಳ ಸುತ್ತಲೂ ಧಾಳಿ ನಡೆಯುತ್ತಿದೆ. ಲೆನಿನ್‌ಗ್ರಾಡ್ ಪ್ರದೇಶದಲ್ಲಿ ಅನೇಕ ಆಯಕಟ್ಟಿನ ಸ್ಥಳಗಳು ಜರ್ಮನ್ ವಶವಾಯಿತೆಂದು ಜರ್ಮನ್ ಸುದ್ದಿ ಖಾತೆಯು ಹೇಳಿಕೆ.

ಮೋಸ್ಕೋ ರಣಭೂಮಿಯಲ್ಲಿ ನುಂದೊತ್ತಲು ಜರ್ಮನರು ಸಾಹಸ ಪಡುತ್ತಿದ್ದಂತೆ ರಶ್ಯನರ ಪ್ರತಿ ಧಾಳಿಯೂ ಭೀಕರವಾಗಿದೆ. ಮೇಲೇರಿ ಬರುತ್ತಿರುವ ಜರ್ಮನರನ್ನು ಹಿಂದಕ್ಕಟ್ಟಿ ರಶ್ಯನರು ತಾವೇ ಅವರ ಮೇಲೇರಿ ಹೋಗುತ್ತಿರುವರು. ಹಲವೆಡೆ ಜರ್ಮನರು ಹಿಂದೆ ಸರಿದ್ದರೆಂದೂ ಸುದ್ದಿಯಿದೆ. ಇದರಿಂದ ರಶ್ಯನರು ಮುಕ್ತಮನ ಉತ್ಸಾಹಗೊಂಡು ಬೆನ್ನಟ್ಟುತ್ತಿರುವರಂತೆ. ರಶ್ಯನರಿಗೆ ಬಹಳ ಉಪಯುಕ್ತವಾದ ಲೆನಿನ್‌ಗ್ರಾಡ್—ಮೋಸ್ಕೋ ರೈಲ್ವೆಯನ್ನು ಜರ್ಮನರು ಭೇದಿಸಿದರೆಂದು ತಿಳಿದಿದೆ.

ಮೋಸ್ಕೋ ವ್ಯೂಹದಲ್ಲಿ ಇತ್ತೀಚೆಗೆ ಎಲ್ಲೆಡೆಗಳಲ್ಲಿಯೂ ಜರ್ಮನರ ಮುನ್ನಡೆಯನ್ನು ನಿಲ್ಲಿಸಲಾಗಿದೆಯೆಂದು ಸುದ್ದಿ ಬಂದಿದೆ.

ರಶ್ಯದಲ್ಲಿರುವ ಜರ್ಮನ್ ಸೇನಾಪತಿಗಳು ತಮ್ಮ ಸೈನ್ಯವನ್ನು ಪುನರ್ಘಟಿಸುತ್ತಿದ್ದಾರೆ. ಇದು ಯುದ್ಧವನ್ನು ತೀವ್ರಗೊಳಿಸಲೆಂದು ಹೇಳಲಾಗುತ್ತಿದ್ದರೂ, ಹೀಗೆ ಪುನರ್ಘಟಿಸಿದ ಸೈನಿಕರನ್ನು ಛಳಿಗಾಲವಲ್ಲಿ ರಶ್ಯಕ್ಕೆ ತಿರುಗಿ ಕಳಿಹಿಸಲಾಗುವುದೆಂದೂ ಸುದ್ದಿಯಿದೆ. ರಶ್ಯನರು ಅನೇಕ ಪ್ರದೇಶಗಳನ್ನು ಸುಟ್ಟುಬಿಟ್ಟು ಬೆಂಜಲವಿರುವುದರಿಂದ ಅದು ದೀರ್ಘಕಾಲ ಜರ್ಮನಿಯನ್ನು ಎದುರಿಸಲು ಸಾಧ್ಯವಿದೆ

ಜರ್ಮನರು ಈಗ ಕಾಕಸಸ್ ಕಾಳಗದ ಸಿದ್ಧತೆ ಮಾಡುತ್ತಿರುವರೆಂದು ತಿಳಿದಿದೆ. ಕಾಕಸಸ್ ಕಾಳಗದಲ್ಲಿ ಜರ್ಮನರಿಗೆ ಜಯವಾಗಿದೆ ಅವರು ಅಲ್ಲಿಂದ ಇರಾಕ್ ಇರಾಣ್‌ಗಳಿಗೆ ಮುನ್ನುಗ್ಗಬಹುದು ಭೂಮಧ್ಯ ಸಮುದ್ರ ಅದರಲ್ಲಿಯೂ ಸುವೇಜ್ ಕಾಲುವೆಯ ಬ್ರಿಟಿಷ್ ಸಾಮ್ರಾಜ್ಯದ ಜೀವನಾಳದಂತಿದ್ದು ಇದನ್ನು ವಶಪಡಿಸಲು ಜರ್ಮನರು ಯತ್ನಿಸಬಹುದೆಂದು ಊಹಿಸಲಾಗಿದೆ

ಜರ್ಮನರು ಕಾಕಸಸ್ ರಣಭೂಮಿಯ ಸಿದ್ಧತೆಯನ್ನು ಬಹಳ ಜಾಗ್ರತೆಯಿಂದ ಮಾಡುತ್ತಿರುವರು. ಸದ್ಯಕ್ಕೆ ಕಾಕಸಸ್ ಪ್ರದೇಶದ ಉತ್ತರಕ್ಕೆ ಅವರು ಸೈನ್ಯವನ್ನು ಸಂಗ್ರಹಿಸುತ್ತಿದ್ದಾರಂತೆ.

Figures Justify Your Confidence in The Stability and Soundness of

THE TROPICAL INSURANCE Company Ltd., (New Delhi)

Life fund exceeds...	Rs. 10,81,000
Premium income exceeds	Rs. 4,42,000
Investment in Govt. securities exceeds	Rs. 5,17,000
Shareholders' liability ..	Rs. 4,49,000
Total claims paid exceeds	Rs. 4,00,000
Total assets exceeds	Rs. 17,55,000

For Better, Bright & Brilliant Future Join Agency Force and write for full particulars in confidence to:-

M. SUNDERRAM SHETTY,
Branch Secretary, MANGALORE.

ಸ್ವದೇಶಾಭಿಮಾನಿ

ತಾರೀಕು 21—11—1941

ನಿಯೋಲಿಯ ಅನ್ನಸತ್ಯಾಗ್ರಹಿಗಳು

ಎಲ್ಲರ ದೃಷ್ಟಿಯೂ ಈಗ ದಿಯೋಲಿ ಸೆರೆಮನೆಯ ಕಡೆಗೆ ಹರಿದಿದೆ. ಸುಮಾರು ೬೦ ಮೈಲುಗಳ ಸುತ್ತಮುತ್ತ ನಾಗರಿಕ ಜೀವನದಿಂದ ದೂರವಾಗಿ, ಅಜಮೀರ ಪ್ರಾಂತ್ಯದಲ್ಲಿರುವೀ ಸೆರೆಮನೆಯಲ್ಲಿ ಭಾರತದ ಹಲವು ನೂರು ಮಂದಿ ಮೇಧಾವೀ ಪ್ರಭಾವಶಾಲಿಗಳಾದ ತರುಣರು ಇಂದು ಅನ್ನಸತ್ಯಾಗ್ರಹವನ್ನು ಕೈಕೊಂಡು ಮೃತ್ಯುಶಯ್ಯೆಯಲ್ಲಿ ಮಲಗಿದ್ದಾರೆ! ಇಂಥ ವರಲ್ಲಿ ಅಖಿಲ ಭಾರತ ಪ್ರಸಿದ್ಧಿಯಮುಂದಾಳುಗಳೂ ಹಲವರಿದ್ದಾರೆ. ಶ್ರೀ ಜಯಪ್ರಕಾಶ ನಾರಾಯಣರೂ ಒಬ್ಬರಾಗಿರುವರು. ಕಳೆದ ತಿಂಗಳ ೨೫ನೆಯ ತಾರೀಕಿಗೆ ಆರಂಭವಾದೀ ಸತ್ಯಾಗ್ರಹವು ಇಂದಿನ ವರೆಗೆ ಮುಂದುವರಿಯುತ್ತಿದ್ದು, ಭಾರತದ ಜನಮನದಲ್ಲಿ ಇದರಿಂದ ಸ್ಪಬಲವಾದ ಪಕ್ಷೋಭವುಂಟಾಗಿದೆ!

ಭಾರತದ ಬೇರೆ ಬೇರೆ ಪ್ರಾಂತಗಳ 'ಡೆಟಿನ್ಯೂ'ಗಳನ್ನು ಹಿಡಿತಂದು ದಿಯೋಲಿಯಲ್ಲಿ ಕೂಡಿಸಿರುತ್ತಾರೆ ಇದರಿಂದಾಗಿ ಅವರಿಗೆ ತಮ್ಮ ಇಷ್ಟಮಿತ್ರ ಸಮಾಗಮವು ಬಹಳ ದುರ್ಲಭವಾಗುತ್ತದೆ. ಅನೇಕ ಕೈದಿಗಳಿಗೆ ವರ್ಷಕ್ಕೊಮ್ಮೆಯಾದರೂ ತಮ್ಮ ಬಂಧುಗಳನ್ನು, ಹೆಂಡಿರು ಮಕ್ಕಳನ್ನು ಕಾಣುವ ಸೌಭಾಗ್ಯವೂ ಇಲ್ಲ. ತನ್ಮನ್ನು ತಮ್ಮ ತಮ್ಮ ಪ್ರಾಂತಗಳಲ್ಲಿಯೇ ಇರಿಸಬೇಕೆಂಬುದು ಇವರ ಮುಖ್ಯವಾದೊಂದು ಬೇಡಿಕೆಯಾಗಿದೆ.

ಅವರ ಬೇಡಿಕೆಗಳನ್ನು ಬಹಳ ಹಿಂದೆಯೇ ಸರಕಾರದ ಮುಂದಿಡಲಾಗಿತ್ತು. ಕಳೆದ ನವಂಬರದಲ್ಲಿ ಈ ಕುರಿತು ವರಿಷ್ಠ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು. ಅವರು ತಮ್ಮ ಬೇಡಿಕೆಗಳನ್ನು ಕಳೆದ ಎಪ್ರಿಲ್ ತಿಂಗಳಲ್ಲಿ ಸರಕಾರದ ಮುಂದಿಟ್ಟರು. ಸರಕಾರದ ಅಸ್ಪಷ್ಟ ನಡೆದು ಶ್ರೀ. ಎನ್. ಎಂ. ಜೋಶಿಯವರು ಕಳೆದ ಜುಲಾಯಿ ತಿಂಗಳಲ್ಲಿ ಆ ನಿಟ್ಟಿನಲ್ಲಿ ಹೋಗಿ ಅವರ ವರಿಷ್ಠತೆಗಳನ್ನು ಕಣ್ಣಾರೆ ಕಂಡು ಒಂದು ವರದಿಯನ್ನು ತಯಾರಿಸಿ ಸರಕಾರಕ್ಕೆ ಒಪ್ಪಿಸಿದರು. ಅದರಲ್ಲಿ ಆಯಾಯ ಕೈದಿಗಳನ್ನು ಅವರವರ ಪ್ರಾಂತಕ್ಕೆ ಕಳುಹಿಸುವೆ, ವರ್ಗೀಕರಣ ವಿಧ್ಯುತೆಗೆದು ಹಾಕುವ, ಕೈದಿಗಳ ಮನೆಯವರ ಪೋಷಣೆ ವ್ಯವಸ್ಥೆ ಮಾಡುವ, ಯೋಗ್ಯ ಆಹಾರ ಕೊಡುವ ಭೇಡಿಕೆಗಳ ಇದ್ದವು.

ಈ ಬೇಡಿಕೆಗಳು ನ್ಯಾಯವೇ ಆಗಿವೆ. ಬ್ರಿಟನ್ನಿನಲ್ಲಿರುವ 'ಡೆಟಿನ್ಯೂ'ಗಳಿಗೆ ಇದಕ್ಕಿಂತಲೂ ವಿಶೇಷ ಸೌಕರ್ಯಗಳನ್ನು ಅಲ್ಲಿನ ಸರಕಾರವು ಕೊಡುತ್ತದೆ. ಹೀಗಿರುವಾಗ, ಕಳೆದ ಒಂದು ವರ್ಷಗಳಿಂದ ತಮ್ಮ ಬೇಡಿಕೆಗಳನ್ನು ಸರಕಾರದ ಮುಂದಿಟ್ಟು ಅದಕ್ಕೆ ಯಾವ ಉತ್ತರವೂ ಬರದಿರಲು ಅವರು ಕೊನೆಯ ಅಸ್ತ್ರವಾಗಿ ಈಗ ಅನ್ನಸತ್ಯಾಗ್ರಹದಂತಹ ಧೀರ ನಿರ್ಧಾರಮಾಡಿದ್ದು ಸಹಜವಿದೆ

ದಿಯೋಲಿಯ 'ಡೆಟಿನ್ಯೂ'ಗಳ ಬೇಡಿಕೆಯು ನ್ಯಾಯವಾದುದೆಂದು ಅಖಿಲ ಭಾರತದ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ ಅಖಿಲ ಭಾರತದ ಪತ್ರಿಕೆಗಳು ಸಮರ್ಥಿಸಿವೆ. ಗಾಂಧಿಜಿ ಅವರ ಬೇಡಿಕೆಯನ್ನು ಪೂರೈಸಬೇಕೆಂದು ಸರಕಾರದೊಡನೆ ಕೇಳಿಕೊಂಡಿದ್ದಾರೆ ಅನ್ನಸತ್ಯಾಗ್ರಹವನ್ನು ಬಿಡದೆ ಅವರ ಬೇಡಿಕೆಯ ವಿಚಾರ ಮಾಡಲಾಗುವುದಿಲ್ಲವೆಂದು ಸರಕಾರವು ಹೇಳುವುದು ಕ್ರೂರತ್ವವೆಂದು ಗಾಂಧಿಜಿಯ ಅಭಿಪ್ರಾಯವಿದೆ. ಬೇಡಿಕೆ ಪೂರೈಸದೆ ಅನ್ನಸತ್ಯಾಗ್ರಹ ಬಿಡಲಾರೆವೆಂದು ಜಯಪ್ರಕಾಶರೂ, ಗಾಂಧಿಜಿಯು ಅನ್ನಸತ್ಯಾಗ್ರಹ ಬಿಡಬೇಕೆಂದು ಅವರಿಗೆ ತಂತಿಬಿಟ್ಟಿದ್ದಕ್ಕೆ ಉತ್ತರಕೊಟ್ಟಿದ್ದಾರೆ! ಹೀಗೆ ಇಂದು ವರಿಷ್ಠತೆಯು ತೀರಾ ವಿಷಮತೆಗೇರಿದೆ.

ಇದು ಗಂಡಾಂತರದ ವರಿಷ್ಠತೆ. ನಾಗರಿಕರ ಜೀವಕ್ಕೆ, ಅದರಲ್ಲೂ ಸ್ವಭಾವತಾಲೀ ಜನತಾ ಮುಖಂಡರ ಜೀವಗಳಿಗೆ ಗಂಡಾಂತರವೊದಗುವ ವರಿಷ್ಠತೆ! ಈ ತ್ಯಾಯದಾದ ಸೆರೆಮನೆಗೆ ಹಾಕಿದ ಡೆಟಿನ್ಯೂಗಳನ್ನು ಹೀಗೆ ನೋಡುವುದಾದರೆ, ಬೇಕುಬೇಕೆಂದು ಸೆರೆಮನೆಗೆ ಹೋದ ಸತ್ಯಾಗ್ರಹಿಗಳು ಯಾವ ಮುಖದಿಂದ ಹೊರಗೆ ಬರಬೇಕೆಂದು ಗಾಂಧಿಜಿ ಸರಕಾರದೊಡನೆ, ಜನರೊಡನೆ ಪ್ರಶ್ನೆ ಕೇಳಿದ್ದಾರೆ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ಸರಕಾರದ ಮನೋಧರ್ಮವೂ ಈ ತರದ ನಿರ್ಧಯ ವರ್ತನೆಯೂ ತೀರಾ ವಿರುದ್ಧವಾಗಿವೆ ದಿಯೋಲಿ ಡೆಟಿನ್ಯೂಗಳ ಬೇಡಿಕೆಗಳನ್ನು ಪೂರೈಸಲು ಹಿಂಜರಿಯುವುದು, ಬ್ರಿಟಿಷ್ ರಾಜನೀತಿಗೆ ಕಳಂಕ ತರುವಂತಿದೆ ಜನತೆಯಲ್ಲಿ ಈ ಅನ್ನಸತ್ಯಾಗ್ರಹದಿಂದ ಈಗಾಗಲೇ ವಿಶೇಷ ಕಳವಳವುಂಟಾಗಿದೆ, ಅದನ್ನು ಹೆಚ್ಚದಂತೆ ಮಾಡುವುದು ಸರಕಾರದ ಕರ್ತವ್ಯವಿದೆ ದಿಯೋಲಿ ಕೈದಿಗಳ ನ್ಯಾಯವಾದ ಬೇಡಿಕೆಗಳನ್ನು ಕೂಡಲೇ ಪೂರೈಸಿ ವರಿಷ್ಠತೆಯನ್ನು ಶಾಂತಗೊಳಿಸಬೇಕಾಗಿ ನಮ್ಮ ಅಗ್ರಹದ ಬೇಡಿಕೆ

ಸರಕಾರದ ಹೊಸ ಪಾರಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ಯಂ ವಾಸುದೇವರಾವ್, ಎಂ ಎ. ಎಲ್. ಟಿ (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮವನ್ನು ಪಡೆದವರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪಾಠದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0
6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.
ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಭೂಪಟಾಲಯ, ರಥಬೀದಿ ಮಂಗಳೂರು.

YOUR SHARE OF PROSPERITY

Some people, you may have noticed, get more than their share of prosperity while others get less. In some cases it is no doubt all a matter of luck But often the difference may be traced to a modest bank account. Are you enjoying your due share of prosperity? If not, opening a bank account may help you to turn the tide of so-called luck

CANARA BANK LIMITED.

ಶ 1906.

ನೋಟಗಳು

ರಾಷ್ಟ್ರಸಂಘವು (League of Nations) ಇನ್ನೂ ಉಳಿದಿದೆಯೆಂಬುದೂ, ಹಿಂದೂ ದೇವು ಕ್ರತವರ್ಷ ತಪ್ಪದೆ ಅದಕ್ಕೆ ಲಕ್ಷಾಂತರ ರೂಪಾಯಿ ವಂತಿಗೆ ಕೊಡುತ್ತಾ ಬರುತ್ತಿದೆಯೆಂದೂ ಮೊನ್ನೆ "ಕ್ವಾಸ್ಚನ್ ಆಫ್ ಸ್ಟೇಟ್"ನಲ್ಲಿ ನಡೆದ ಚರ್ಚೆಯಲ್ಲಿ ಸರಕಾರದ ಕಡೆಯಿಂದ ಉತ್ತರ ದೊರಕಿತು.

❁ ❁ ❁

ದುರ್ಬಲ ರಾಷ್ಟ್ರಗಳನ್ನು ಪ್ರಬಲ ರಾಷ್ಟ್ರಗಳು ಇಂದು ಮುಂಗಿ ತೀರ್ಮಾಡಿಯುತ್ತಿದ್ದರೂ, ಪ್ರಬಲ ರಾಷ್ಟ್ರಗಳೊಳಗೂ ಈಗ ಒಕ್ಕೂಟ, ಧರ್ಮಗಳು ಮಾಯವಾಗಿ ಜೋರಾಟವೇ ಹೆಚ್ಚುತ್ತಿದ್ದರೂ, ಇನ್ನೂ ರಾಷ್ಟ್ರಸಂಘವು ಉಳಿದಿದೆಯೆಂಬುದನ್ನು ಕೇಳಿ ಅನೇಕರು ಆಶ್ಚರ್ಯಪಡುತ್ತಿದ್ದಾರೆ!

❁ ❁ ❁

ರಾಷ್ಟ್ರಸಂಘವು ಬದುಕಿದೆಯೆಂದು ಸೂಚಿಸಿದ್ದೂ, ಅದರ ಅಸ್ತಿತ್ವವನ್ನು ಗಮನಿಸದೆ ಅನೇಕ ರಾಷ್ಟ್ರಗಳು ವರ್ತಿಸುತ್ತಿರುವ ಬಗ್ಗೆ ಅಳಬೇಕೋ ನಗಬೇಕೋ ತಿಳಿಯದು!

❁ ❁ ❁

"ಆಟ್ಲಾಂಟಿಕ್ ಶಾಸನವು ಯೂರೋಪಿನ ರಾಷ್ಟ್ರಗಳಿಗೆಲ್ಲಾ ಅನ್ವಯಿಸುವುದಿದ್ದರೂ ಹಿಂದೂ ದೇಶಕ್ಕೆ ಅನ್ವಯಿಸುವುದಿಲ್ಲ" ಎಂದು ಚರ್ಚಿಲರು ಸ್ವಪ್ಪಪಡಿಸುತ್ತಿದ್ದಂತೆಯೇ ಹಿಂದೂ ದೇಶವು ಪ್ರತಿ ವರ್ಷವೂ ತಪ್ಪದೆ ಲಕ್ಷಾಂತರ ರೂಪಾಯಿಗಳನ್ನು ರಾಷ್ಟ್ರಸಂಘಕ್ಕೆ ಕಪ್ಪವೊಪ್ಪಿಸುತ್ತಾ ಬರುವುದರ ಆರ್ಥವೇನೆಂಬ ತಿಳಿಯಲಾರದೆ ಭಾರತೀಯರೆನೇಕರು ಬೆರಗುಗೊಳ್ಳುವಂತಾಗಿದೆ.

❁ ❁ ❁

'ಆಟ್ಲಾಂಟಿಕ್ ಶಾಸನ'ದ ವಿಷಯದಲ್ಲಿ 'ಚರ್ಚಿಲ್ ಅಮೆರಿಯವರು ಹೇಳಿದ್ದಕ್ಕಿಂತ ಹೆಚ್ಚಿಗೆ ಹೇಳಲಿಕ್ಕೇನೂ ಇಲ್ಲ' ಎಂದು ಆಕೆಯವರು 'ಆಕೆಯಿಟ್ಟು' ಹೇಳಿದಂತೆಯೇ 'ಕ್ವಾಸ್ಚನ್ ಆಫ್ ಸ್ಟೇಟ್'ನಲ್ಲಿ ಸರ್ ಅಕ್ಬರ್ ಹೈದರಿಯವರೂ ಉತ್ತರ ಕೊಟ್ಟರು

❁ ❁ ❁

'ಆಟ್ಲಾಂಟಿಕ್' ಶಾಸನಕ್ಕೆ ಚರ್ಚಿಲರಂತೆ ರೂಸ್‌ವೆಲ್ಟರೂ ಜೋಡಿಗಾರರಷ್ಟೆ? ಅವರ ಸ್ಪಷ್ಟೀಕರಣವೇನೆಂದು ವಿವರಿಸಲು ಹಿಂದೆ ಸಾರ್ವರ್ಕಾರರು ರೂಸವೆಲ್ಟರಿಗೆ ಒಂದು ತಂತಿ ಬಿಟ್ಟಿದ್ದರು!

❁ ❁ ❁

ತಂತಿ ಬಿಟ್ಟಿದ್ದರೆಂದು ಮಾತ್ರ ತಿಳಿದು ಬಂದಿದ್ದಲ್ಲದೆ ಅದು ರೂಸ್‌ವೆಲ್ಟರಿಗೆ ಮುಟ್ಟಿದೆಯೆಂದಾಗಲಿ, ಅದಕ್ಕೆ ಅವರು ಉತ್ತರಕೊಟ್ಟರುವರೆಂದಾಗಲಿ ಕೊನೆವರೆಗೂ ಏನೂ ಸುದ್ದಿ ಬರಲಿಲ್ಲ.

❁ ❁ ❁

ಹಿಂದಿನ ಕಾಲದ, 'ಹಿಂದೂ ಸಾಮ್ರಾಟರು ಈ ಲೋಕದಲ್ಲಿ ಸಿಂಹಕ್ಕೆ ಮೇಲಿನ ಕೆಳಗಿನ ಲೋಕಗಳಿಗೆಲ್ಲಾ ಅಸ್ತ್ರ ಮೂಲಕ ಪತ್ರ ಕಳುಹಿಸಿ ಉತ್ತರ ತರಿಸುತ್ತಿದ್ದರಂತೆ' ಇಂದಿನ ಹಿಂದಿನ 'ಹಿಂದೂ ಮಹಾ ಸಭಾಸಮ್ರಾಟ'ರಾದ ಸಾವರ್ಕಾರರ ಅಸ್ತ್ರವು ಹೀಗೆ ವಿಫಲವಾದ ಬಗ್ಗೆ ಅವರ ಅನುಯಾಯಿಗಳನೇಕರು ಕಳವಳಗೊಂಡಿದ್ದಾರೆ!

❁ ❁ ❁

ಈಗ ಬರ್ಮಾದ ಪ್ರಧಾನ ಮಂತ್ರಿಯು ಸಾರವರು ಅಮೇರಿಕಕ್ಕೆ ಹೋಗಿ ರೂಸ್‌ವೆಲ್ಟರೊಡನೆ ಸ್ವತಃ ಆಟ್ಲಾಂಟಿಕ್ ಶಾಸನದ ವ್ಯಾಪ್ತಿಯ ವಿಷಯ ಪ್ರಶ್ನಿಸುವರೆಂದು ಸುದ್ದಿಯಿದೆ

❁ ❁ ❁

ಹಿಂದೂ ದೇಶಕ್ಕೆ ಬಂದು ಗಾಂಧಿಜಿಯನ್ನೂ ಯೂ. ಸಾ ಸಂದರ್ಶಿಸುವರೆಂದು ಶ್ರುತವಾಗಿದೆ ಸಾವರ್ಕಾರರು ಆಗ ಯೂ ಸಾ. ರಥವನ್ನು ಫ್ಲೇಟಿಯಂಗಾ ತಮ್ಮ ಸಂಶಯವನ್ನೂ ಪರಿಹರಿಸಿಕೊಳ್ಳಬಹುದು!

❁ ❁ ❁

ಇತ್ತೀಚೆಗೆ ರೂಸ್‌ವೆಲ್ಟರಿಂದಲೇ 'ಹಿಂದೂ ಸಭಾ ಸಾಮ್ರಾಟ'ರಿಗೆ ಉತ್ತರದ ತಂತಿಬಂದಿರೆ ಅವರು ಬಿಟ್ಟ ಅಸ್ತ್ರ ಸಫಲವಾದಂತೆಯೇ ಆಯಿತಷ್ಟೆ!

❁ ❁ ❁

ವಿಷಯ ಕ್ಷೇತ್ರದ ಪ್ರಾಜ್ಞರು ಸಾವರ್ಕಾರರಂತೆ ರೂಸ್‌ವೆಲ್ಟರ ಉತ್ತರವನ್ನು ಹಾರೈಸುತ್ತಾ ಇರಬಹುದು!

ಸುಧಾರಕ

— ಲೇಖಕ: ನಾರಾಯಣ, ಕಲ್ಕಿ.

'ಗೋವಣ್ಣ' ಮುಂಬಯಿಯಿಂದ ನಮ್ಮೂರಿಗೆ ಬಂದು ಇನ್ನೂ ಮೂರು ದಿನವೂ ಕಳೆದಿರಲಿಲ್ಲ. ಮೂರನೆಯ ದಿನ ಬೆಳಿಗ್ಗೆ ಕಾಫಿ ತೀರಿಸಿ ಅದ ಮೇಲೆ ಜಗಲಿಯಲ್ಲಿ ಏನೋ ಬರೆಯುವುದರಲ್ಲೇ ಮಗ್ನನಾಗಿದ್ದ. 'ಕ್ರಿಕೆಟ್ ಮ್ಯಾಚ್' ನೋಡಲು ಹೋಗುವೆನೆಂದ. ನಾನು ಕ್ಯಾಷ್ ಬಾಚುತ್ತಾ ನನ್ನ ರೂಮಿನಲ್ಲಿದ್ದೆ.

'ಗಂಸೀ' ಎಂದು ಅಣ್ಣನ ಕರೆ ಕೇಳಿಸಿತು

'ಗಂಸಿ'ಯೆಂಬುದು ನನ್ನ ಗಣವತಿಯೆಂಬ ಹೆಸರಿನ ಚಿಕ್ಕ ರೂಪ. ಮನೆಯಲ್ಲಿ, ಗೆಳೆಯರ ಮಧ್ಯದಲ್ಲಿ ನಾನು 'ಗಂಸಿ'. ನಾನೆ ನನ್ನ ರೂಮಿನಿಂದಲೇ ಕೇಳಿದೆ: 'ಏನು ಬೇಕು, ಗೋವಣ್ಣ?'

'ಇಲ್ಲಿ ಬಾರೊ'.

ನಾನು 'ಮ್ಯಾಚ್'ಗೆ ಹೋಗುವ ತವಕದಿಂದಿದ್ದರೂ ಗೋವಣ್ಣನ—ಅದರಲ್ಲೂ ನಾನೆಂದರೆ ಅವನಿಗೆ ಪ್ರಾಣ—ಮನ ನೋಯಿಸುವುದ. ಒಳ್ಳೆಯದಲ್ಲವೆಂದು ಅವನಿದ್ದಲ್ಲಿ ಹೋಗಿ ನಿಂತೆ.

'ಒಂದು ಚಿಕ್ಕ ಕೆಲಸ ಮಾಡ್ತೀಯಾ?' ಅವ ಕೇಳಿದ.

'ಯಾವ ಕೆಲಸ?'

'ಅದೆಲ್ಲಾ ನಿಂಗ್ಯಾಕೆ? ಮಾಡ್ತಿಯಾ, ಹೇಳು? ನಿನಗೆ ಎಂಟಾಣೆ ಕೊಡ್ತೇನಿ!'

ಎಂಟಾಣೆ! ಸಿನೀಮಾ . ಕೃಷ್ಣ ಭವನ! ನನ್ನ ಬಾಯಲ್ಲಿ ನೀರೂರಿತು ನಾನು ಮಾಡುತ್ತೇನೆಂದು ಒಪ್ಪಿಕೊಂಡೆ ಗೋವಣ್ಣ 'ಡ್ರಾಯರ'ನಿಂದ ಏನೋ ಒಂದು ಕಟ್ಟು ತೆಗೆದು ಬಿಚ್ಚಿದ. ನಾನು ಕುತೂಹಲದಿಂದ ಕಣ್ಣು ಸಿಪಿಸಿಪಿ ಮಾಡಿ ನೋಡಿದೆ. ಅರೇ! ಅವುಗಳು ಮದುವೆಯ ಆಮಂತ್ರಣ ಪತ್ರಿಕೆಗಳಾಗಿದ್ದುವು! ನಾನು ಕೇಳಿದೆ

'ಅಣ್ಣಾ, ಅದ್ಯಾರ ಮದುವೆದು?'

'ಬೇಕಾದರೆ ನೀನೇ ಓದಿ ನೋಡು'

ನಾನು ಒಂದನ್ನು ತೆಗೆದು ಲಗುಬಗೆಯಿಂದ ಓದಿ ನೋಡಿದೆ

'. . . ಮಾಧವರಾಯರ ಪ್ರಥಮ ಪುತ್ರ ಗೋವಣ್ಣನು . . . ನಾಗವೇಣಿಯನ್ನು . ವಿವಾಹವಾಗುವುದಾಗಿ . . . ಇತಿ, ಗೋವಣ್ಣ.'

ಛೆ! ನಾನು ನನ್ನ ಕಣ್ಣುಗಳನ್ನೇ ನಂಬಲಾರದಾದೆ! ಗೋವಣ್ಣನಿಗೆ ಮದುವೆ? ತನ್ನ ಮೊದಲಿನೆ ಪತ್ನಿ ತೀರಿಹೋದ ಮೇಲೆ ತಾನಿನ್ನು ಮದುವೆಯೇ ಆಗುವುದಿಲ್ಲವೆಂದು ಹಟ ತೊಟ್ಟಿದ್ದ, ಗೋವಣ್ಣ. ಅಮ್ಮನವರು ಅನೇಕ ಬಾರಿ ಒತ್ತಾಯ ಪಡಿಸಿದ್ದರು; ಅದೂ ಅಲ್ಲದೆ ಎರಡು ಮೂರು ಹುಡುಗಿಯರ ಚಿತ್ರವನ್ನೂ ಕಳುಹಿಸಿದ್ದರು. ಆದರೆ, ಗೋವಣ್ಣ ಬೇಡವೆಂದೇ ಹಟ ಹಿಡಿದಿದ್ದ. ಈಗ ನಾಗವೇಣಿಯೊಡನೆ ಮದುವೆ? ಅದೂ ತಂದೆ ತಾಯಂದಿರಿಗೆ ತಿಳಿಯದಂತೆ! ನನಗೆ ಆಶ್ಚರ್ಯವಾಯಿತು. ಹೂಂ—ಆ ನಾಗವೇಣಿ ಅಣ್ಣನಿಗೆ ಹುಚ್ಚು ಹಿಡಿಸಿರಬೇಕೆಂದು ನೆನೆಗೆನಿಸಿತು. ನಾನು ಕೇಳಿದೆ:

'ನೀನು ಬ್ರಹ್ಮಚಾರಿಯಾಗಿರುತ್ತೇ ನಂತ ಹೇಳಿದ್ದೀಯಲ್ಲಾ? ಹುಂ, ನಾಗವೇಣಿ ಯಾರು? . . .'

'ಅದಿಲ್ಲಾ ನಿಂಗ್ಯಾಕೆ? ಮದುವೆಯಾಗುವ ನಾನು—ಅದಿರಲಿ, ನಾನು ಹೇಳುವ ಕೆಲಸ . . .'

ಆದರೆ ನಾನು ಅಡಿಗೆ ಕೋಣೆಗೆ ಓಡಿದೆ. ಅಮ್ಮನು ದೋಸೆ ಕಾಯಿಸುತ್ತಿದ್ದರು. ಅವರೊಡನೆ ಅಣ್ಣನ ಗುಟ್ಟಿನ ಮದುವೆಯ ವಿಚಾರವನ್ನು ಗಡಿಬಿಡಿಯಿಂದ ಹೇಳಿದೆ ಅವರು ಮೂಗಿಗೆ ಬೆರಳಿಟ್ಟು ನನ್ನ ಹಿಂದೆಯೇ ಜಗಲಿಗೆ ಬಂದು ಅಣ್ಣನ ಮೇಲೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದರು

'ಗೋಪ್ಸು, ಆ ನಾಗೇಣಿ ಯಾರು? ಹೇಗೆ, ಬಳಿಯಿದ್ದಾಳಾ?—ಅಲ್ಲ, ಕಪ್ಪು? ಯಾವ ಊರಿನವಳ ? ವರದಕ್ಷಿಣೆಯೆಷ್ಟು? ಅವಳ ಅಪ್ಪ ಯಾರು? ಹುಂ! ಅದರಲ್ಲೂ ಏನು ಗುಟ್ಟದ.? ನಿನ್ನನ್ನು ಸಾಕಿದ ನನ್ನ ಬಳಿಯಲ್ಲಾದರೂ ಹೇಳಿಕಳಿಸ್ಬಾರ್ದೇ?'

'ಯಾಕಮ್ಮಾ ಇಷ್ಟು ಗಡಿಬಿಡಿ?' ಗೋವಣ್ಣ ಸಮಾಧಾನ ಹೇಳಿದ. 'ಒಂದು ಮದುವೆಯಾಗಬೇಕಾದರೆ ಊರಿಗೆಲ್ಲಾ ಹಂಗುರ ಹೊಡೆಯಬೇಕೇನು? ಮೊದಲೇ ನಿಮಗೆ ತಿಳಿಸಿದ್ದರೆ ನೀವು ಒಪ್ಪುತ್ತಿದ್ದಿರೊ, ಇಲ್ಲವೊ, ಎಂದು ಸುಮ್ಮನಿದ್ದೆ. ನಾಗವೇಣಿಯ ತಂದೆ ತಾಯಿ ಎಲ್ಲಾ ತೀರಿದ್ದಾರೆ ಪಾಪ! ಅವಳಿಗಾರೂ ಇಲ್ಲ. ಇದ್ದ ಗಂಡ ಕೆಲವು ತಿಂಗಳ ಹಿಂದೆ—ಅವಳ ಮದುವೆಯಾದ ಒಂದೆರಡು ತಿಂಗಳಲ್ಲೇ ತೀರಿಹೋದ .'

'ಏನು, ಅವಳು ವಿಧವೆಯೆ? ಅಯ್ಯೋ! ನಿನಗೇನು ಹುಚ್ಚು ಹಿಡಿಯಿತು? ಅಲ್ಲಾಽಽದ್ರೆ, ಆ ಅಗ್ರಹಾರದ ಕೇಶವಭಟ್ಟು ಅವರ ಬಂಗಾರದಂತ ಹುಡುಗಳನ್ನು ಕೊಡಲಿಕ್ಕೆ ತಯಾರಿದ್ದಾರಲ್ಲ! ನೀನು ಆ ವಿಧವೆಯನ್ನು . . .'

'ಇರಲಿ, ಸಾಕಮ್ಮಾ ಅವಳು ವಿಧವೆ. ನಾನು?—ನಾನೂ ವಿಧುರನಲ್ಲವೇ? ಆವಳಲ್ಲಿ ನನಗೆ ಪ್ರೇಮವಿದೆ. ಅಲ್ಲದೆ ಅವಳನ್ನು ಮದುವೆಯಾಗೆವೆನೆಂದು ಭಾಷೆ ಕೊಟ್ಟು ಬಂದಿದ್ದೇನೆ. ಬಟ್ಟಾರೆ ಮದುವೆಯಾಗುವವರೊಳಗೆ ಪರಸ್ಪರ ಮೈತ್ರಿಯಿದ್ದರೆ ಸಾಕಮ್ಮಾ'

ನಾನು ಒಂದು ಬದಿಯಲ್ಲಿ ನಿಂತು ತಾಯಿ ಮಕ್ಕಳ ವಾಕ್ ಕಲಹವನ್ನು ಕೇಳುತ್ತಾ ಮೆಲ್ಲಗೆ ನಗುತಿದ್ದೆ. ಅಮ್ಮ ಹೇಳಿದರು.

'ಪ್ರೇಮ—ಪ್ರೇಮ! ಏನು ಸುಟ್ಟ ಪ್ರೇಮವೊ? ಏನೂ ಅಲ್ಲ—ಆ ಹುಡುಗಿ ನಿನಗೆ ಮದ್ದು ಹಾಕಿ ಮರುಳುಗೊಳಿಸಿರುವಳು! ಹುಂ, ಆ ಮು . . . ದೆ!'

'ಮ್ಮಮ್ಮ ಹಾಕುವ ಸಂಗ್ತಿ ಬಿಡಮ್ಮಾ. ಅವಳಲ್ಲದಿದ್ದರೆ ನಾನು ಮುಂಬಯಿಯಲ್ಲಿ ಸಾಯುತಿದ್ದೆ! ಕೆಲವು ತಿಂಗಳ ಹಿಂದೆ ನನಗೆ ವಿಪರೀತ ಜ್ವರ ಬಂದಿತ್ತು. ನನ್ನ ಕೋಣೆಯಲ್ಲಿ ನನ್ನನ್ನು ಯಾರೂ ನೋಡುವವರಿಲ್ಲದೆ—ನರಳುತಿದ್ದೆ. ಆಗ ನಾಗವೇಣಿ ಬಂದು ನನ್ನ ಆರೈಕೆ ನೋಡಿಕೊಳ್ಳದಿರುತಿದ್ದರೆ ನಾನು ಸತ್ತು ಶತಮಾನವಾಗುತಿತ್ತು! ಹುಂ, ಅದು ನಿನಗೆ ತಿಳಿಯುವುದಾದರೂ ಹೇಗೆ? ಮದ್ದಂತೆ! . . ಅವಳು ಬಹಳ ಗುಣವತಿ ಕಾಣಮ್ಮಾ!'

'ಆದರೆ . ' ಅಮ್ಮ ನಿಟ್ಟುಸಿರು ನೀಡುತ್ತಾ ಹೇಳಿದರು 'ಆದರೆ ಅವಳು ವಿಧವೆಯಲ್ಲೇನೊ? . '

'ಅವಳು ವಿಧವೆ. ನಾನು ಹೆಂಡತಿ ಸತ್ತ ವಿಧುರ ಸರಿಯಾಯಿತು' ನಾನು ಭಾಷೆ ಕೊಟ್ಟಿದ್ದೇನೆ ಆದ್ದರಿಂದ ಮಾತು ವೆಯಾಗಿಯೇ ಬಿಡುತ್ತೇನೆ ಯಾಕಮ್ಮಾ ಅಳುತ್ತೀ?'

ನಾನು 'ಮ್ಯಾಚ್' ನೋಡಲು ಹೋದೆ ಅದೂ ಉತ್ಸಾಹದಿಂದಲ್ಲ.

卐 卐 卐

ಈ ವಿಷಯ ಸಂಜೆಯೊಳಗೆ ಕಂದಿ ಮುವರ ತಿವಿಗೆ ಮುಟ್ಟಿತು ಅವರ ಮುಖ ನೋಡುವಾಗ ಬಹಳ ಕೋಪ ಗೊಂಡವರಂತೆ ಕಾಣುತಿದ್ದರು ರಾತ್ರಿಯೂಟದ ತರುವಾಯ ಅವರು ಗೋವಣ್ಣನ ಬಳಿಗೆ ಬಂದು ಮಾತನಾಡಲಾರಂಭಿಸಿದರು ನಾನು ಪಾಠ ಓದುವವನಂತೆ ನಟಿಸುತ್ತಾ ಒಂದು ಮೂಲೆಯಲ್ಲಿ ಕುಳಿತು ಕಿವಿಗೊಟ್ಟು ಕೇಳುತಿದ್ದೆ

'ಆ ನಾಗವೇಣಿಗೆ ತಂದೆ, ತಾಯಿ ಯಾರೂ ಇಲ್ಲವೆಂದು ನೀನೇ ಹೇಳುವಿ ' ನನ್ನ ತಂದೆಯವರು ಚರ್ಚಿಸುತಿದ್ದರು. 'ಅದರಲ್ಲೂ ಅವಳು ವಿಧವೆ! ಒಂದು ಗಂಡ ಕೈ ಹಿಡಿದ ಎರಡು ತಿಂಗಳಲ್ಲೇ ಸಾಯಬೇಕಾದ್ರೆ ಅವಳ ಸುಟ್ಟವೋರೆಯೆಂತಹುದೊ? ಅಂಥ ಹುಡುಗಿಯನ್ನು ಕಟ್ಟಿಕೊಂಡು ಆಗಬೇಕಾದುದೇನು?'

'ಎಲ್ಲಾ ಅಹುದು., ಆದರೆ ಅವಳ ಗಂಡ ಕ್ಷಯರೋಗ ಪೀಡಿತನಾಗಿ ಸತ್ತನಲ್ಲದೆ, ಅವಳ ''ಸುಟ್ಟ ಮೋರೆ''ಯಿಂದಲ್ಲ! ನಾನು ಭಾಷೆ ಕೊಟ್ಟಾಗಿದೆ. ಅದನ್ನು ತಪ್ಪಿ ನಡೆಯುವುದು ನನ್ನ ಮರ್ಯಾದೆಗೆ ಕುಂದ್ಬಲ್ವೆ?' ಅಣ್ಣನಿಗೆ ಕೋಪ ಮೂಗಿನ ತುದಿಯಲ್ಲೇ ಬಂದಿರಬೇಕು! ಪಾಪ!

'ಆದರೆ, ನನ್ನ ಮರ್ಯಾದೆಗೆ ನಾಸ್ತಿ ಬರುವುದು ಖಂಡಿತ! ನೀನು ಆ ಹಡುಗಿಯನ್ನು ಮದುವೆಯಾಗಬಾರದು. ಗೋಪ್ಸು, ನಾನು ಎಂದಂತೆ ಕೇಳು. ಇಲ್ಲದಿದ್ದರೆ '

'ಅದೇನೂ ಆಗಲಿ! ನಾನು ನಾಗವೇಣಿಯನ್ನು ಮದುವೆಯಾಗದೆ ಇರುವುದಿಲ್ಲ! ಖಂಡಿತವಾಗಿಯೂ . . .'

'ಧೂ, ಮಂಗ! ನಿನ್ನ ಸೊಕ್ಕೇ? ನಾಲ್ಕು ಮೊಸೆ ಮೂಡಿತೆಂದರೆ ನಿನ್ನ ಅಪ್ಪನಂದಿರು ಖಡಾಖಂಡಿ ಚರ್ಚಿಸುವೆ! ಹೌದು, ಈಗಿನವರೆಲ್ಲಾ ಹೀಗೆಯೇ! ನೋಡು, ಇನ್ನೊಮ್ಮೆ ಹೇಳುತ್ತೇನೆ—ನೀನು ಅವಳನ್ನು ಮದುವೆಯಾದರೆ ನಿನ್ನ ನನ್ನ ಸಂಬಂಧ ಈ ಹೊತ್ತಿಗೆ ಮುಗಿಯಿತೆಂದಿಟ್ಟುಕೊ! ನೀನು ನನ್ನ ಮನೆಯನ್ನು ನಾಳೆಯೇ ಬಿಟ್ಟು ಹೋಗಬೇಕು!'

ಅಯ್ತು, ನಿಮ್ಮ ಮನಸ್ಸು!' ಎಂದಿಷ್ಟೇ ಗೋವಣ್ಣ ಹೇಳಿದ ತಂದೆಯವರು ತಮ್ಮ ರೂಮಿಗೆ ಹೋಗಿ ತಾಯಿಯವರೊಡನೆ ಈ ವಿಷಯವನ್ನು ಹೇಳಿದರೆಂದು

[ಅನೆಯ ಪುಟವನ್ನು ನೋಡು]

ಅಂತರಂಗ ನೈರ್ಮಲ್ಯವೇ ಅಳುಗಳನ್ನು ಜಾಗರೂಕರಾಗಿಯೂ ಜಾರುಕಾಗಿಯೂ ಆರೋಗ್ಯವಂತರನ್ನಾಗಿ ಮಾಡಿತು

ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮ ಸೂತ್ರವೆಂದು ಮಕ್ಕಳಿಗೆ ಚೆನ್ನಾಂದಿನಲ್ಲಿಯೇ ಕಲಿಸಿ

ದೇಹದ ಒಳಭಾಗವನ್ನು ನೈರ್ಮಲ್ಯವಾಗಿರಿಸಲು ಯಾವಾಗಲೂ ಅವುಗಳಿಗೆ ಒಂದು ಗ್ಲಾಸು ಎಂಡ್ರೂಸ್ ಫ್ರೂಟ್ ಸಾಲ್ಟನ್ನು ಕೊಡಿರಿ ಎಂಡ್ರೂಸ್ ಲಿವರ್ ಸಾಲ್ಟ್ ಹೊಟ್ಟೆಯನ್ನು ಹಸನಾಗಿಯೂ ಸ್ವಚ್ಛವಾಗಿಯೂ, ಶುಚಿಗೊಳಿಸಿ ಮಲಬದ್ಧತೆ ಮತ್ತು ಇನ್ನಿತರ ಖಾಯಿಲೆಗಳಿಗೆ ಕಾರಣವಾದ ಮಲೀನತೆಯನ್ನು ಹೊರಸೆಳೆಯುತ್ತವೆ, ಮಕ್ಕಳಿಗೆ ಉತ್ತೇಜನವನ್ನೂ, ಒಲವನ್ನೂ ಕೊಟ್ಟು ಮುಖ ಮತ್ತು ಕಣ್ಣುಗಳ ಸೌಂದರ್ಯವನ್ನೂ ಹೆಚ್ಚಿಸಿ ಸುಖವನ್ನೀಯುವುದು.

ಅಂತರಂಗ ನೈರ್ಮಲ್ಯಕ್ಕೆ
ಯಾವಾಗಲೂ ಸ್ಥೇವಿಸಿರಿ

ಎಂಡ್ರೂಸ್ ಲಿವರ್ ಸಾಲ್ಟ್

ANDREWS
LIVER SALT



ಆರೋಗ್ಯ ಪ್ರಾಪಣಿಯ ಮತ್ತು ವಿರೇಚಕ ಔಷಧಿಕರು
ನೈರ್ಮಲ್ಯ ಕಂಪನಿ
ಪಣಾವಾಸ್ಸು, ಪೆಮ್ಮ

ಸ. ಸೈ 111 ಆ
ಮೊ ಸೈ 11ನೇ

ಹಿಮಬಾಧೆಯಿಂದ ಜರ್ಮನರ ಹೋರಾಟ ಕಡಿಮೆಯಾಗಿದೆ

ರಷ್ಯಾರಣರಂಗದಲ್ಲಿ ಈಗ ಜರ್ಮನರ ಮುಂದೊತ್ತುವಿಕೆ ಸ್ವಲ್ಪ ಕಡಿಮೆಯಾಗಿದೆ. ಛಳಿ, ಹಿಮ, ಮಳೆಗಳ ಬಾಧೆಯಿಂದಾಗಿ ಕರ್ಚ್ ಜರ್ಮನರ ಸ್ವಾಧೀನವಾಯಿತಂತೆ. ಕಾಕೆಸಸಿನ ಕಡೆಗೆ ಜರ್ಮನರು ಧಾಳಿಮಾಡಲು ಸಿದ್ಧತೆ ನಡೆಸುತ್ತಿರುವರೆಂದು ಹೇಳಲಾಗಿದೆ. ಹಿಟ್ಲರನು ಕಟ್ಟಕಡೆಯ ರಾಷ್ಟ್ರಗಳಲ್ಲಿ ಶಾಂತಿ ಪ್ರಚಾರ ಮಾಡುತ್ತಿರುವನಂತೆ. ಜಪಾನ್ ಅಮೆರಿಕ ಸಂಧಾನದ ಮಾತುಕತೆ ಇನ್ನೂ ನಡೆಯುತ್ತಲೇ ಇದೆ. ಸಥೂಮ್ ಇಂಡೋ ಚೀನದ ಗಡಿನಾಡಿನಲ್ಲಿ ಬಿಡಿದಾಟವಾಗಿದೆ. ಅಮೆರಿಕದ ಕಲ್ಲಿದ್ದಲು ಕಣಿಗಳ ಕೆಲಸಗಾರರು ಮುಷ್ಕರ ಹೂಡಿರುವರು. ರೂಸ್‌ವೆಲ್ಟರ ಆಜ್ಞೆಯನ್ನೂ ಅವರು ಕೇಳಲಿಲ್ಲ.

ಇಂಗ್ಲೆಂಡಿನ ಮೇಲೆ ಧಾಳಿ ಮಾಡುವ ಯೋಜನೆ?

ಬರ್ಲಿನಿನಲ್ಲಿ ಸಿದ್ಧತೆಯಾಗಿದೆಯೆ?

ಇಂಗ್ಲೆಂಡಿನ ಮೇಲೆ ಭೀಕರ ವಿಮಾನ ಧಾಳಿ ಮಾಡುವರೆ ಜೋರಿನಿಂದ ಸಿದ್ಧತೆ ನಡೆದಿರುವುದಾಗಿ ತಿಳಿದಿದೆ. ಜಾರು ವಿಮಾನಗಳಿಂದ ಇಂಗ್ಲೆಂಡಿಗೆ ಜರ್ಮನ್ ಸೈನಾನಿಕರು ಬಂದಿಳಿವರಂತೆ.

'ಆರ್ಕ್‌ರಾಯಲ್' ಮುಳುಗಿತು

ಬ್ರಿಟಿನಿನ ಹಡಗ 'ಆರ್ಕ್‌ರಾಯಲ್' ಜಿಬ್ರಾಲ್ಟರ್ ಪೂರ್ವ ಭಾಗದಲ್ಲಿ ಯುಬೋಟಿನಿಂದ ಬಡಿತಗೊಂಡು ಮುಳುಗಿತು. ಇದರ ಭಾರ ೨೨ ಸಾವಿರ ಟನ್. ನಿರ್ಮಿಸಲು ೨½ ವರ್ಷ ಕಾಲ ಹಿಡಿದಿದೆ. ೩೬ ಲಕ್ಷ ಪೌಂಡ್‌ಗಳು ವೆಚ್ಚವಾಗಿವೆ.

ಜಪಾನ್ ಸಾಮ್ರಾಜ್ಯದ ಮೇಲೆ ಗುಂಡಾಂತರ

ಬ್ರಿಟನು ಅಮೆರಿಕಗಳ ಧೋರಣದಿಂದ ಜಪಾನು ಸಾಮ್ರಾಜ್ಯದ ಮೇಲೆ ಗುಂಡಾಂತರವಿದೆಯೆಂದೂ ಜಪಾನ್ ಪಾರ್ಲಿಮೆಂಟಿನಲ್ಲಿ ವಿದೇಶ ಮಂತ್ರಿ ಹೇಳಿದನು.

ಜಪಾನಿನ ಮೂರು ಉದ್ದೇಶಗಳು
ಟೋಜೋ ಹೇಳಿಕೆ

ಜಪಾನಿನ ಮೂರು ಉದ್ದೇಶಗಳನ್ನು ಜಪಾನು ಪ್ರಧಾನ ಮಂತ್ರಿ ಟೋಜೋ ಹೀಗೆಂದು ವಿವರಿಸಿದನು:

೧. ಚೀನದ ಸಂಬಂಧದಲ್ಲಿ ನಮ್ಮ ಉದ್ದೇಶವು ಯಶಸ್ವಿಯಾಗಿ ಕೊನೆಗೊಳ್ಳುವಂತೆ ಮೂರನೆಯ ಯಾವ ರಾಷ್ಟ್ರವೂ ನಮಗೆ ತಡೆಯುಂಟಾಗಕೂಡದು.

೨. ಜಪಾನಿನ ಸುತ್ತಮುತ್ತಲಿರುವ ಪ್ರಾಂತಗಳು ಜಪಾನಿನ ಮೇಲೆ ಧಾಳಿ ಮಾಡಕೂಡದು. ಆರ್ಥಿಕ ದಿಗ್ಬಂಧನದ ವ್ಯವಸ್ಥೆಯಿಂದ ನೈಸರ್ಗಿಕವನ್ನು ಕೊಳ್ಳಬಾರದು. ಜಪಾನಿನೊಡನೆ ಆರ್ಥಿಕ ಸಂಬಂಧವನ್ನಿಟ್ಟುಕೊಂಡು ಒಪ್ಪಂದ ಮಾಡಬೇಕು.

೩. ಯೂರೋಪಿನ ಯುದ್ಧವು ಪೂರ್ವ ದಿಕ್ಕಿಗೆ ವ್ಯಾಪಿಸದಂತೆ ಮಾಡುವುದು.

ಕಪಟ ವೇಷದ ಜರ್ಮನ್ ಮೋಟರ್ ಬೋಟು

ಅಮೆರಿಕದ ಹಡಗದಂತೆ ಕಪಟವೇಷ ಮಾಡಿ ಅಟ್ಲಾಂಟಿಕಿನಲ್ಲಿ ಸಂಚರಿಸುತ್ತಿದ್ದ ಒಂದು ಜರ್ಮನ್ ಮೋಟರು ಬೋಟನ್ನು ಹಿಡಿದು ಅಮೆರಿಕಕ್ಕೆ ತಂದಿರುವರು. ಇದು ಜಪಾನಿನಿಂದ ಜರ್ಮನಿಯ ಕಡೆಗೆ ಸಾಗಿತ್ತಂತೆ. ಇದರಲ್ಲಿ ಅನೇಕ ಯುದ್ಧ ಸಾಮಗ್ರಿಗಳಿದ್ದುವು.

ರಶ್ಯಕ್ಕೆ ಹೊಸ ಭೂಮಾರ್ಗ
ಬಲುಚಿಸ್ತಾನ—ಇರಾಕ್ ಮೂಲಕ

ಬಲುಚಿಸ್ತಾನ ಮತ್ತು ಪೂರ್ವ ಇರಾಣ್‌ಗಳ ಮುಖಾಂತರ, ಹಿಂದುಸ್ತಾನದಿಂದ ರಶ್ಯಕ್ಕೆ ಹೊಸ ಭೂಮಾರ್ಗವನ್ನು ಸ್ಥಾಪಿಸಲಾಗಿದೆ. ಇದೇ ಮಾರ್ಗದ ಮುಖಾಂತರ ರಶ್ಯಕ್ಕೆ ಅತ್ಯವಶ್ಯವಿರುವ ಗೋಣಿ ಚೀಲ ಮೊದಲಾದವುಗಳನ್ನು ಸಾಗಿಸಲಾಯಿತು. ಬಲಚಿಸ್ತಾನ ರೈಲ್ವೆ ಮಾರ್ಗವು ನೊಕೆಷ್ಕಾಂಗಿಗೆ ಮುಗಿಯುತ್ತದ್ದು. ಅಲ್ಲಿಂದ ಈಶಾನ್ಯ ಇರಾಣಿನಲ್ಲಿರುವ ಮಹಶೇದವು ೬೦೦ ಮೈಲು ದೂರದಲ್ಲಿರುವುದು. ಈ ಪ್ರವಾಸದಲ್ಲಿ ಅನೇಕ ಮಹತ್ವದ ಸಂಗತಿಗಳು ಕಂಡುಬಂದವು. ಎರಡನೆಯ ಪ್ರವಾಸವನ್ನು ಕೈಕೊಂಡ ನಂತರ ಕಾಯಂ—ಪ್ರವಾಸ ಮೂಡಲಾಗುವುದು. ರಸ್ತೆಯ ದುರಸ್ತಿಗಾಗಿ ಈಗ ೫೦೦ ಜನ ಕೂಲಿಗಾರರನ್ನು ನೇಮಿಸಲಾಗಿದೆ. ರಶ್ಯಕ್ಕೆ ಯುದ್ಧ ಸಾಮಗ್ರಿಗಳನ್ನು ಈ ಮೂಲಕ ಕಳುಹಿಸಲಾಗುತ್ತದೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಶಕ್ತಿ ಮತ್ತು ಆರೋಗ್ಯ
ಬಲ ಸಂವರ್ಧನೆಯ ರಹಸ್ಯ

ಮನುಷ್ಯನ ಜೀವನದಲ್ಲಿ ಶಕ್ತಿ ಆರೋಗ್ಯ ಮತ್ತು ರೋಗವನ್ನು ತಡೆವ ಚೈತನ್ಯಗಳು ಇವು ಇರಬೇಕಾದುದು ಅವಶ್ಯ. ಅನೇಕ ವರ್ಷಗಳ ಅನುಭವದಿಂದ ಪಂಡಿತ ಡಿ. ಗೋಪಾಲಾಚಾರ್ಯರವರ 'ಜೀವಾಮೃತ'ವು ಶಕ್ತಿ ಆರೋಗ್ಯಗಳನ್ನುಂಟುಮಾಡುವ ಸತ್ವಗಳಿಂದ ಕೂಡಿದುದೆಂದು ಜಗದ್ವಿಖ್ಯಾತಿ ಪಡೆದಿದೆ. ಇದು ನರಗಳ ಶಕ್ತಿ ಹೆಚ್ಚಿಸುತ್ತದೆ. ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಇದು ಹೆಚ್ಚಿಸುತ್ತದೆ. ಹೀಗಾಗಿ ಇದು ಆರೋಗ್ಯವನ್ನುಂಟು ಮಾಡಿ ಇಡೀ ಶರೀರದಲ್ಲಿ ನವಚೈತನ್ಯವನ್ನು ತುಂಬುತ್ತದೆ. ಜೀವಾಮೃತವು ಅತ್ಯುಚ್ಚ ವನೌಷಧಿಗಳಿಂದ ಅನೇಕ ವರ್ಷಗಳ ಸಂಶೋಧನೆಯ ಬಳಿಕ ತಯಾರಿಸಿದ್ದ ಉತ್ತಮ ಔಷಧಿಯಾಗಿದೆ.

ಜೀವಾಮೃತ
ಚೈತನ್ಯ ಶಕ್ತಿ ಮತ್ತು ಆರೋಗ್ಯಗಳಿಗೆ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಸ್ವದೇಶಿಗಳಲ್ಲಿಯೂ ದೊರಕುವುದು.
ತಯಾರಿಸುವವರು: ಆಯುರ್ವೇದಾಶ್ರಮಂ, ಮದರಾಸು.
ಸ್ಟೋರ್ಸ್: ಸೌಮ್ಯಲರ್ ಫ್ಲೋರ್ಸ್, ರಥಬೀದಿ, ಮಂಗಳೂರು

ಮೆಕ್ಲೀನಿನಿಂದ
ನೀವು ನಿಮ್ಮ ಹಲ್ಲುಗಳನ್ನು ಶುಚಿಗೊಳಿಸಿದ್ದೀರಾ?

ಹೌದು ಶುಚಿಮಾಡಿದ್ದೇವೆ

ಹೊಳೆವ ಬಿಳುಪು ಹಲ್ಲುಗಳಿಗೆ, ಆರೋಗ್ಯಕರ ದಂತಪಂಕ್ತಿಗಳಿಗೆ, ತಂಪಾದ ಹೊಸತಾಗಿ ತೋರುವ ಮುಖಕ್ಕೆ ಮೆಕ್ಲೀನು ಅತ್ಯಂತ ಸಹಕಾರಿಯಾಗಿದೆ. ಇದು ಬೇಗನೇ ಕೊಳೆಯನ್ನು ದೂರ ಮಾಡುತ್ತದೆ. ಹಲ್ಲುಗಳನ್ನು ಬಿಳಿಮಾಡುತ್ತದೆ. ದವಡೆಗಳನ್ನು ಶುಚಿಗೊಳಿಸುತ್ತದೆ. ಇದರಿಂದ ಬಹಳ ಕಡಿಮೆ.



ರಾಜಕೀಯ ಕೈದಿಗಳ ಬಿಡುಗಡೆ ಈಗಲೇ ಸಾಧ್ಯವಿಲ್ಲ!

ಅಸೆಂಬ್ಲಿಯಲ್ಲಿ ಗೃಹಮಂತ್ರಿ ಹೇಳಿಕೆ

ದಿಯೋಲಲ್ಲಿ ಅನ್ನಸತ್ಯಾಗ್ರಹವು ವಿಷಮತೆಗೇರಿದ! ಬೋಸರು ಜರ್ಮನಿಯಲ್ಲಿದ್ದಾರೆಂದು ರೇಡಿಯೊ?

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ. ಜೋಶಿಯವರು ತಂದ ಠರಾವಿಗೆ ಗೃಹ ಮಂತ್ರಿಗಳು ಉತ್ತರವೀಯುತ್ತಾ ಅದು ಈಗಲೇ ಶಕ್ಯವಿಲ್ಲವೆಂದೂ, ಪ್ರಾಂತಿಕ ಆಡಳಿತವನ್ನು ವಿಚಾರಿಸಬೇಕೆಂದೂ, ೪೦ ಕೋಟಿ ಜನರಿರುವ ದೇಶದಲ್ಲಿ ಇಷ್ಟು ಮಂದಿ ಕೈದಿಗಳಿರುವುದು ಹೆಚ್ಚಲ್ಲವೆಂದೂ ಹೇಳಿದರು. ಈ ಉತ್ತರದಿಂದ ಎಲ್ಲರಿಗೂ ತೀವ್ರ ಅಸಮಾಧಾನವಾಗಿದ್ದು, ಬೋಸರು ಜರ್ಮನಿಯಲ್ಲಿರುವರೆಂದೂ, ಹಿಟ್ಲರನೊಡನೆ ಒಪ್ಪಂದ ಮಾಡಿಕೊಂಡಿರುವರೆಂದೂ ಇಟಲಿ ಜಪಾನು ರೇಡಿಯೋಗಳೂ ಹೇಳುತ್ತಿರುವಂತೆ ಸತ್ಯಮೂರ್ತಿಗಳಿಗೆ ಕಾಂಗ್ರೆಸಿನವರನ್ನು ಅವರ ಅಭಿಪ್ರಾಯಕ್ಕೆ ಪರಿವರ್ತಿಸುವ ವಾಕ್ ಸ್ವಾತಂತ್ರ್ಯವನ್ನು ಗಾಂಧಿಜಿಯಿತ್ತಿರುವರು. ದಿಯೋಲಿಯ ಡೆಟಿನ್ಯೂಗಳ ಅನ್ನ ಸತ್ಯಾಗ್ರಹವು ಇಪ್ಪತ್ತು ದಿವಸ ದಾಟಿತು ಹಲವರು ತೀರಾ ಪ್ರಾಣಾಪಾಯದಲ್ಲಿದ್ದಾರೆ ಅವರಲ್ಲಿ ಜಯಪ್ರಕಾಶರೂ ಒಬ್ಬರು.

ಬೋಸರು ಜರ್ಮನಿಯಲ್ಲಿ?

ಇಟಲಿ-ಜಪಾನ್ ರೇಡಿಯೋಗಳ ಸುದ್ದಿ

ತಾ ೧೭ ರಂದು ಇಟಲಿಯ ರೇಡಿಯೋ ಹೀಗೆ ಹೇಳಿದೆ: 'ಸುಭಾಸ ಚಂದ್ರ ಬೋಸರು ಈಗ ಜರ್ಮನಿಯಲ್ಲಿದ್ದಾರೆ. ಅವರ ಭಾಷಣವನ್ನು ಕೇಳಲು ಭಾರತೀಯರು ಹಾರೈಸುತ್ತಾರೆ. ಭಾರತೀಯರನ್ನುದ್ದೇಶಿಸಿ ಭಾಷಣ ಮಾಡಲು ಜರ್ಮನಿ ರೇಡಿಯೋ ಅವರಿಗೆ ಅವಕಾಶವನ್ನು ಮಾಡಿ ಕೊಡುವುದೆಂದು ಊಹಿಸುತ್ತೇವೆ'. ಇದೇ ದಿನ ಜಪಾನ್ ರೇಡಿಯೋ ಹೀಗೆ ಹೇಳಿತು. 'ಜರ್ಮನಿಗೆ ಬೋಸರು ಸುರಕ್ಷಿತವಾಗಿ ಮುಟ್ಟಿದ ಕೂಡಲೇ ಜಪಾನಿನ ಭಾರತೀಯ ಸ್ವತಂತ್ರ ಮಂಡಳದ ಅಧ್ಯಕ್ಷರಾದ ರಾಸ್ ಬಿಹಾರಿ ಬೋಸರು ಅವರನ್ನು ಅಭಿನಂದಿಸಿ ತಂತಿ ಕಳುಹಿಸಿದರು. ಬೋಸರು ೧೯೪೧ನೆಯ ಜನವರಿ ತಿಂಗಳಲ್ಲಿ ಹಿಂದೂ ದೇಶದಿಂದ ಅದೃಶ್ಯರಾದರು. ಈಗ ಅವರು ಜರ್ಮನಿಗೆ ಹೋಗಿ ಸ್ವತಂತ್ರ ಹಿಂದೂಸ್ತಾನಕ್ಕೆ ಸೈನ್ಯ ಕಳುಹಿಸುವಂತೆ ಜರ್ಮನಿಯೊಡನೆ ಒಪ್ಪಂದ ಮಾಡಿಕೊಂಡಿರಬಹುದು".

ಹೊಸದಿಲ್ಲಿಯಾದ ಅಸೋಸಿಯೇಟೆಡ್ ಪ್ರೆಸ್ ಸುದ್ದಿ ಇದು. ಆದರೆ ಈ ಸುದ್ದಿಯನ್ನು ನಂಬಕೂಡದಲ್ಲವೆಂದೂ ಬೋಸರ ಹೆಸರನ್ನು ಕದಿಸಲು ಹೀಗೆ ಪ್ರಚಾರ ಮಾಡಲಾಗುತ್ತದೆಯೆಂದೂ ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿ ಹೇಳಿಕೆಯಿತ್ತಿದ್ದಾರೆ

ರಾಜಾಜಿ ಮೌಲಾನಾ ಆಜಾದರನ್ನು ಕಂಡದ್ದು

ರಾಜಾಜಿಯವರು ಸೈನಿ ಜೈಲಿಗೆ ಹೋಗಿ ಖಾಸ್ಯವತಿ ಮೌಲಾನಾ ಆಜಾದರನ್ನು ಕಂಡು ಮಾತನಾಡಿದರು

ಮಹಾತ್ಮರ ಬೇಟಿ

ಸುಹಾತ್ಮರನ್ನು ತಿರುಗಿ ರಾಜಾಜಿಯವರೂ, ಶ್ರೀಮತಿ ಕಮಲಾದೇವಿಯವರೂ ವರ್ಧಾದಲ್ಲಿ ಭೇಟಿಯಾದರು.

ಬೋಸರ ಮೇಲೆ ಹೊರಿಸಿದ ಆರೋಪ ಹಿಂದೆ ತೆಗೆದು ಕೊಳ್ಳಿರಿ

ಎಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಸೈಹಶಾಖೆಯ ಕಾರ್ಯದರ್ಶಿ ಹೇಳಿದ ಮಾತಿನಲ್ಲಿ ಬೋಸರ ಮೇಲೆ ಆರೋಪ ಹೊರಿಸಿದನ್ನು ಹಿಂತೆಗೆದು ಕೊಳ್ಳಬೇಕೆಂದು ರದ್ದಾದ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ ನಿರ್ಣಯ ಮಾಡಿದೆ.

ಭೂಕಂಪ

ಲಾಸ್ ಎಂಜಲ್ಸ್-ವ್ಯಾಂಕ್ಯದಲ್ಲಿ ಭೂಕಂಪವಾಗಿ ೧೨ ಲಕ್ಷ ಡಾಲರುಗಳ ನಷ್ಟವುಂಟಾಗಿದೆ

ಖಾಕ್ಸರ ಮುಖಂಡರ ಉಪವಾಸ

ಮದ್ರಾಸು ಸೆರೆಮನೆಯಲ್ಲಿರುವ ಖಾಕ್ಸರ ಮುಖಂಡರಾದ ಅಲ್ಲಮ ಇನಾಯತುಲ್ಲ ಖಾನ್ ಇವರು ಆಹಾರ ಬಿಟ್ಟು ಉಪವಾಸ ಮಾಡುತ್ತಿದ್ದಾರೆ. ಹಣ್ಣಿನ ರಸ ತೆಗೆದು ಕೊಳ್ಳುವರಂತೆ. ಇವರ ಉಪವಾಸದ ಸಹಾನುಭೂತಿಗಾಗಿ ಉಪವಾಸಕ್ಕೆ ಆರಂಭಿಸಿದ ಆಹೋರಿನ ೬ ಮುಸ್ಲಿಮರನ್ನು ಬಂಧಿಸಲಾಗಿದೆ

ರಾಜಕೀಯ ಕೈದಿ ದಿನಾಚರಣೆ

೩೦—೧೧—೪೧ರಂದು

೩೧—೧೧—೪೧ರಂದು ರಾಜಕೀಯ ಕೈದಿಗಳ ದಿನಾಚರಣೆ ಮಾಡಿ, ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿರುವರ ವಿಚಾರಿಸಿ ಕ್ಲಾಸಿನ ಕೈದಿಗಳ ಆಹಾರದ ವಿಚಾರ ರಾಜಕೀಯ ಕೈದಿಗಳನ್ನು ಯೋಗ್ಯರೀತಿಯಿಂದ ನಡೆಸಿ ಕೊಳ್ಳುವ ವಿಚಾರ ವಿವರಿಸಲು ಬೇಕೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಪ್ರಕಟಣೆಯಿದೆ.

ಕಾಲುನೋವಿನಿಂದ ನರಳಬೇಡಿರಿ

ಜ್ಯಾಂಬಕ್ .ನೋವನ್ನು ಕಡಿಮೆ ಮಾಡುತ್ತದೆ. ಮಂತ್ರೌಷಧಿಯಂತೆ ಗುಣಪಡಿಸುತ್ತದೆ

ಜ್ಯಾಂಬಕ್ ಹೇಗೆ ನೋವನ್ನು ಗುಣ ಪಡಿಸುತ್ತದೆಯೆಂಬುದನ್ನು ಕೇಳಿದರೆ ನೀವು ಆಶ್ಚರ್ಯಪಡುವಿರಿ ಬಾವು, ಕಾಲುನೋವು ಮೊದಲಾದ ವ್ರಣಗಳಿಗೆ ಅತ್ಯುತ್ತಮ ಔಷಧಿಯಾಗಿದೆ ವ್ರಣದ ಮೇಲೆ ಜ್ಯಾಂಬಕನ್ನು ದಪ್ಪವಾಗಿ ಹಚ್ಚಿರಿ ಮತ್ತು ಗಟ್ಟಿಯಾಗಿ ಕಟ್ಟಿರಿ ಜ್ಯಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು ಚರ್ಮಕ್ಕೆ ಬೇಗನೇ ಎಳಕೊಳ್ಳುತ್ತದೆ, ಹಾಗಾಗಿ ನೋವು ಮತ್ತು ಬಾವುಗಳು ಕೂಡಲೇ ಕಡಿಮೆಯಾಗುತ್ತದೆ. ಕಲೆಯು ಸಹಿತ ಉಳಿಯದಂತೆ ಜ್ಯಾಂಬಕ್ ಗುಣಪಡಿಸುತ್ತದೆ ಜ್ಯಾಂಬಕ್ ಮೂಲಿಮಿಗೆ ಒಂದು ರೂಪಾಯಿ ಅರ್ಧಾ ದೂ ತಿಳಿಂ ನೋವಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ

ಏಜೆಂಟರು — ಮೆಸರ್ಸ್ ದಾಧ್ಯಾ ಮತ್ತು ಕಂಪೆನಿ, ಪಿ ಟಿ. ಮದರಾಸು

ಯಾವಾಗಲೂ ಜಾಂಬಕು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ನಿರಹಿತವಾದುದು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ನಮ್ಮಿಂದ ಮೇಲಿನ ಘನವಾದ ಮತ್ತು ಶುದ್ಧ ಸ್ನುಂತಾದುವನ್ನು ಗುಣವಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರರು —

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಎಂ. ವಿ. ಅಧಿಕಾರಿಗಳಿಗೆ ತಿರುಗಿ ೪ ತಿಂಗಳ ಶಿಕ್ಷೆ ಮತ್ತು ೧೦೦ ರೂ. ಜುಲ್ಮಾನೆ

ಕಾರ್ಕಳದಲ್ಲಿ ಎರಡನೆಯ ಸಲ ಸತ್ಯಾಗ್ರಹ ಮಾಡಿದ ಶ್ರೀ. ಎಂ. ವಿ. ಅಧಿಕಾರಿಗಳಿಗೆ ಎಂಟು ತಿಂಗಳ ಶಿಕ್ಷೆ ಮತ್ತು ರೂ. ೧೦೦ ಜುಲ್ಮಾನೆ ವಿಧಿಸಲಾಗಿದೆ.

ಗವರ್ನರರ ಆಗಮನ

ಮದ್ರಾಸಿನ ಗವರ್ನರರು ದಶಂಬರ ೧೫ಕ್ಕೆ ಮಂಗಳೂರಿಗೆ ಬರುವರು.

ತಾ. ೧೫ರಂದು ಪೂರ್ವಾಹ್ನ ೧೦.೬೫ಕ್ಕೆ ಕಲೆಕ್ಟರ ಕಚೇರಿಯ ಬೆಂಚ್ ಕೋರ್ಟಿನಲ್ಲಿ ಇವರ ಅಧ್ಯಕ್ಷತೆಯಿಂದ ಯುದ್ಧ ಕಮಿಟಿ ಸಭೆಯೂ, ಅದೇ ದಿನ ಸಂಜೆ ೫ಕ್ಕೆ ಗವರ್ನಮೆಂಟ ಕಾಲೇಜಿನಲ್ಲಿ ಸಾರ್ವಜನಿಕ ಸಭೆಯೂ ಇರುವುದು.

ಮಂಗಳೂರು ಮುನ್ಸಿಪಲ್ ಕೌನ್ಸಿಲ್

ಇದರ ಸಾಮಾನ್ಯ ಸಭೆಯು ತಾ. ೧೫ರಂದು ಸಂಜೆ ಚೇರ್‌ಮೇನ್ ಶ್ರೀ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಿಂದ ಜರಗಿತು. ಪುರೋಹಿತ ವರ್ಗದ ಮೇಲೆ ವೃತ್ತಿತೆರಿಗೆ ಹೊರಿಸುವ ವಿಷಯವು ಸರಕಾರದೊಡನೆ ಅಭಿಪ್ರಾಯ ಕೇಳಬೇಕೆಂದಾಯಿತು. ಕದ್ರಿಯಲ್ಲಿ ಡಾ। ಶಿವರಾಯರ ಆಸ್ಪತ್ರೆ ಬಳಿ ಹೊಸ ರಸ್ತೆಯ ಮಟ್ಟವನ್ನು ನಿರ್ಣಯಿಸಲು ಬೇಕಾದ 'ಎಸ್ಟಿಮೇಟ್'ನ್ನು ತಯಾರಿಸಬೇಕೆಂದಾಯಿತು.

ಡಿ। ಬೋ। ಸಭೆ

ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು ತಾರೀಕು ೨೧ರಂದು ಅಪರಾಹ್ನ ೪ ಗಂಟೆ ೧೦ಕ್ಕೆ ಮೂಲ್ಕಿ ಹೈಸ್ಕೂಲಲ್ಲಿ ಜರಗುವುದು. ಆ ದಿನ ಪ್ರಾತಃ ೭ಕ್ಕೆ ಶ್ರೀ. ವಿ. ಎಸ್. ಕುಡ್ವರ ಹಸ್ತದಿಂದ ಮೂಲ್ಕಿ ಹೈಸ್ಕೂಲಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವೂ, ೫ಗಳಾದ ಎ. ಬಿ. ಶೆಟ್ಟಿ ಮತ್ತು ಜವಾಬ್ ಎಚ್. ಎಸ್. ಹುಸೆನ್ ಇವರ ಬಾವ ಚಿತ್ರ ಅನಾವರಣವೂ ಜರಗಲಿದೆ.

ರಜೆ

ತಾ. ೨೬ರಿಂದ ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಡಿ. ನರಸಿಂಹ ಶಾಸ್ತ್ರಿಗಳು ೨ ತಿಂಗಳು ೫ ದಿನಗಳ ರಜೆ ತೆಗೆದುಕೊಳ್ಳುವರೆಂದೂ ಅವರ ಸ್ಥಾನಕ್ಕೆ ಹಂಗಾಮಿಯಾಗಿ ಶ್ರೀ. ಯು. ಸತ್ಯನಾರಾಯಣ ಇವರು ನೇಮಕವಾಗುವರೆಂದು ತಿಳಿದಿದೆ.

ಅರಿಸಲ್ಪಟ್ಟರು

ಮಂಗಳೂರು ಆಫೀಸಿಯಲ್ ರಿಸೀವರಾದ ಶ್ರೀ ಜೆ. ಎಂ. ಸಿಕೇರಾ ಇವರು ಮುನ್ಸಿಫ್ ಹುದ್ದೆಗೆ ಆರಿಸಲ್ಪಟ್ಟಿದ್ದಾರೆ.

ಅರಣ್ಯ ಖಾಯೆಯ ಅಸಿ. ಕನ್‌ಸರ್‌ವೇಟರ ರಾದ ಶ್ರೀ. ಪಿ. ಗೋವಿಂದ ಮೆನೋನ್ ಇವರು ಮ್ಯಂಗಳೂರಿಂದ ನೇಲಮಿಗೆ ವರ್ಗಾಯಿಸಲ್ಪಟ್ಟಿರುವರು.

ಶ್ರೀಮತಿ ಗೈತಾನೊ ಮತ್ತು ಶ್ರೀ. ಚೆನ್ನಪ್ಪ ಇವರು ಮಂಗಳೂರು ಸ್ಪೆಷಲ್ ಬೆಂಚ್ ಕೋರ್ಟಿನ ಅ। ಮೆಜಿಸ್ಟ್ರೇಟರಾಗಿ ಪ್ರಸಕ್ತ ನೇಮಿಸಲ್ಪಟ್ಟಿದ್ದಾರೆ.

'ವಿಶ್ವ ಸಹೋದರತ್ವವು ಕೆನಸೊ?'

ಮಂಗಳೂರು ಥಿಯೋಸಫಿಕಲ್ ಲಾಜಿನ ವಾರ್ಷಿಕೋತ್ಸವವು ತಾ. ೧೭ರಂದು ಸಂಜೆ ಥಿಯಾಸಫಿಕಲ್ ಲಾಜಿನಲ್ಲಿ ಡಾ। ರಾಮ ಕಾಮತರ ಅಧ್ಯಕ್ಷತೆಯಿಂದ ಜರಗಿತು. ಆ ದಿನ 'ವಿಶ್ವ ಸಹೋದರತ್ವವು ಕನಸೋ ನನ್ನವೋ?' ಎಂಬ ವಿಷಯ ಚರ್ಚೆಯಾಯಿತು. ಅನೇಕರು ಅದರಲ್ಲಿ ಭಾಗವಹಿಸಿದ್ದರು.

ಲೇಬರ್ ಉಪಾಧ್ಯಾಯರ ಸಭೆ

ಬರುವ ತಿಂಗಳಲ್ಲಿ ಜರಗಲಿಕ್ಕಿರುವ ಲೇಬರ್ ಉಪಾಧ್ಯಾಯರ ಪರಿಷತ್ತಿನ ಬೈಠಕ್‌ಗೆ ಇದೇ ತಿಂಗಳ ತಾ. ೦೬ರಂದು ಲೇಬರ್ ಉಪಾಧ್ಯಾಯರ ಸಭೆಯು, ಡಿ. ಸಿ. ಎಮ್. ಶಾಲೆಯಲ್ಲಿ ಜರಗಿ ಈ ಸಭೆಯಲ್ಲಿ ಜಿಲ್ಲೆಯ ಉಪಾಧ್ಯಾಯರು ಭಾಗವಹಿಸಿದ್ದ ಇದ್ದುದರಿಂದ ಈ ಸಭೆಯನ್ನು ಇದೇ ತಿಂಗಳ ತಾ. ೨೩ಕ್ಕೆ ಹಗಲು ಗಂಟೆ ೧೦ಕ್ಕೆ ಡಿ. ಸಿ. ಎಸ್.ನಲ್ಲಿ ಮುಂದರಿಸಲಾಗಿದೆ. ಪ್ರತಿ ಒಬ್ಬ ಉಪಾಧ್ಯಾಯರೂ ತಪ್ಪದೆ ಬರಬೇಕಾಗಿಯೂ ಮತ್ತು ಬರಲಿಕ್ಕೆ ಆನಾನುಕೂಲವಾದವರು ತಮ್ಮ ತಮ್ಮ ಅಭಿಪ್ರಾಯವನ್ನು ಪತ್ರಮೂಲಕ ಶ್ರೀ. ಕೆ. ಈಶ್ವರ ಎಮ್. ಎಲ್. ಎಯವರಿಗೆ ತಿಳಿಸ ಬೇಕಾಗಿಯೂ ಆವರ ವಿನಂತಿಯಿದೆ.

ಗೀತಾ ಜಯಂತಿ

ತಾ. ೫ರಂದು ಸಾಯಂ. ಗಂಟೆ ೬ಕ್ಕೆ ಕೆನರಾ ಹೈಸ್ಕೂಲ್ ಭವನದೇಂದ್ರ ಸಭಾ ಸದನದಲ್ಲಿ ಗೀತಾ ಜಯಂತಿಯು ಆಚರಿಸಲಾಗುವುದು. ಶ್ರೀ. ಸುವಿಜ್ಞಾನಾನಂದ ಸ್ವಾಮಿಜಿಯವರು ಅಧ್ಯಕ್ಷ ಸ್ಥಾನವನ್ನು ವಹಿಸುವರು. ಕಾರ್ಯಕ್ರಮದಲ್ಲಿ ಗೀತೆಯಲ್ಲಿ ಆರಿಸಿದ ಶ್ಲೋಕಗಳನ್ನು ಹಾಡುವುದೂ, ಇಂಗ್ಲಿಷು ಕನ್ನಡ ಭಾಷಣಗಳೂ ಇರುವವು.

ಕಾರ್ಕಳದಲ್ಲಿ ವಿಚಿತ್ರ ಮಗು

ಕಾರ್ಕಳದ ಸಮೀಪದ ಹಳ್ಳಿಕತ್ತಲ ಎಂಬಲ್ಲಿ ಹೆಣ್ಣ ಹೆರಿಗೆ ಸಮಯದ ಮಕ್ಕಳನ್ನು ಪೆತ್ತಿದ್ದು, ಆದರಲ್ಲಿ ಏರಡು ಮಕ್ಕಳಲಿಗೆ ಹೊಕ್ಕುಳು ಒಂದೇ ಆಗಿಯೂ, ಕಾಲು ಕೈಗಳು ನಾಲ್ಕಾಗಿಯೂ ತಲೆಗಳು ಎರಡೂ ಇರೆಯಂತೆ. ದೇಹ ಒಂದ ಕ್ಕೊಂದು ಎದೆಯ ಬಳಿ ಸಂದಾಗಿರುವುದೆಂದೂ ಸುದ್ದಿಯಿದೆ.

ವರ್ಗ

ಉಡ್ಪಿ ಕಡಿಕಿಲ್ಲಾರ್ ಶ್ರೀ. ಜೆ. ಎಫ್. ದೇಸೋ ಇವರು ೬ ತಿಂಗಳ ರಜೆ ಮೇಲೆ ಹೋಗುವುದರಿಂದ ಆವರ ಸ್ಥಾನಕ್ಕೆ ಕಾಸರಗೋಡು ಸೈ ಸಮ್ಯಾಜಿಸ್ಟ್ರೇಟರಾದ ಶ್ರೀ. ಯು. ಸೀತಾರ್ಜನ ಇವರೂ, ಕಾಸರಗೋಡಿಗೆ ಶ್ರೀ. ಪಿ. ಸೀತಾರಾಮ ಶೆಟ್ಟಿ ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀ. ಜಿ. ಧಾತ್ರತ್ರೇಯ ರಾಯರು (ಡಿ। ಕಲೆಕ್ಟ್) ಆವರು ತಮ್ಮ ರಜೆ ಮುಗಿದ ಬಳಕ ಸೇಲಂ ಟ್ರೈಜರಿಗೆ ವರ್ಗಾಯಿಸಲ್ಪಟ್ಟಿರುವರು.

ಬರಿಮಾರು

ಕಲ್ಲಡ್ಕ ಸೆಂಟರಿನ ಶಾಲಾ ಉಪಾಧ್ಯಾಯರ ಸಭೆ ಜಿ. ಕಿಮ್ಮಪ್ಪಯ್ಯ ಪೂವಣಿರ ಅಧ್ಯಕ್ಷತೆಯಲ್ಲಿ ಜರಗಿತು.

ಸಾದರ-ಸ್ವೀಕಾರ

ಸೌತ್ ಕೆನರಾ ಪ್ಲಡ್ ರಿಲೀಫ್ ಫಂಡ್ ಮಂಗಳೂರು

ಇದರ 1941 ಜೂನ್ ತಿಂಗಳ ನಿತ ನಿವಾರಣಾ ಕಾರ್ಯದ ವರದಿಯನ್ನು ಆದುದರಿಂದ ಸ್ವೀಕರಿಸಿದ್ದೇವೆ. ಮಂಗಳೂರಿನ ಅಸಿಸ್ಟೆಂಟ್ ಕಲೆಕ್ಟರ ಅಧ್ಯಕ್ಷತೆಯಿಂದ, ಕಲೆಕ್ಟರ್ ಶ್ರೀ. ಸುಬ್ರಹ್ಮಣ್ಯ ಇವರ ನೇತೃತ್ವದಿಂದ. ಹಾಗೂ ಪ್ರಭಾವಶಾಲಿಗಳಾದ ಇತರ ಸದಸ್ಯರ ಬೆಂಬಲ ದಿಂದ ಈ ಕಮಿಟಿಯು ಕಳೆದ ನೆರೆಯ ಕಾಲ ದಲ್ಲಿ ಮಂಗಳೂರು, ಪುತ್ತೂರು, ಕಾರ್ಕಳ, ಕಾಸರಗೋಡು ತಾಲೂಕುಗಳಲ್ಲಿ 80 ಗ್ರಾಮ ಗಳಲ್ಲಿ, ನೆರೆಯಿಂದ ನೊಂದ 1764 ಕುಟುಂಬ ಗಳಿಗೆ ರೂ. 6077 ಧನ ಸಹಾಯ ಮತ್ತು ಸಾಮಗ್ರಿ ಸಹಾಯ ಸಲ್ಲಿಸಿದೆ. ಈ ಕಮಿ ಟಿಯ ಕಾರ್ಯಕ್ಕೆ 1923ನೆಯ ಸೌತ್ ಕೆನರಾ ಪ್ಲಡ್ ರಿಲೀಫ್ ಫಂಡಿನಿಂದ ರೂ. 5000 ದೊರ ಕಿದ್ದು ವಿಶೇಷ ಧನಸಹಾಯದಿಂದಾಗಿ ದೊರ ಕಿದೆ. ೫ಗಳಾದ ಎಚ್. ಕೆ. ತಿಂಗಳಾಯ, ವಿನ್. ಶ್ಯಾಮರಾಯ ನಾಯಕ್, ಬಿ. ದಾಮೋ ದರ ಬಾಳಿಗ, ಎಂ. ಎನ್. ಬಾಳಿ, ಉ. ಸುಬ್ರಾಯ ಕಿಣಿ, ಉ. ಅನಂತ ಕಿಣಿ, ಎಚ್. ದಾಮೋದರ ಕಾಮತ್, ಕೆ. ವಾಸುದೇವ ರಾವ್ ಕೆ. ಎಚ್. ಇಬ್ರಾಹಿಮ್ ಸಾಹೇಬ್, ಅತ್ತಪ್ಪ ರೈ, ಕೆ. ಕಿಟ್ಟಣ್ಣ ರೈ, ಕೂ. ಕೇಶವಶೆಣೈ, ಜಿ. ಕೊಗ್ಗ ಪ್ರಭು, ಬಿ. ವೆಂಕಟೇಶ ಕಾಮತ್, ಯಂ. ಕೃಷ್ಣಯ್ಯ ಶೆಟ್ಟಿ, ಎಸ್. ಎಸ್. ಶೆಟ್ಟಿ, ಕೆ. ಮಂಗೇಶ ರಾವ್, ಬಿ. ಗಣಪ ಕಾಮತ್ ಶ್ರೀ. ದಾಮೋದರ ಕೃಷ್ಣ ಪ್ರಭು, ಪಿ. ಕಲ್ಲು ರಾಯ ಭಟ್, ಇವರು ಗೌರವ ಕಾರ್ಯದರ್ಶಿಗಳಾಗಿ ನೆರೆ ಸಂಕಷ್ಟ ನಿವಾರಣಾ ಕಾರ್ಯವನ್ನು ಈ ಕಮಿಟಿಗೆ ನೆರವಾಗಿದ್ದಾರೆ.

ಸುಧಾರಕ

[ಹಿಂದಿನ ಪುಟದಿಂದ ಮುಂದುವರಿದುದು]

ಕಾಣ್ತಾದೆ. ಕಾಯಿ ಮೆಲ್ಲನೆ ಅಳುವುದು ಕೇಳಬರುತಿತ್ತು.

ನಾನು ಗೋವಣ್ಣನ ಬಳಿ ಹೋಗಿ ಅವನ ಬೆನ್ನ ಮೇಲೆ ಕೈಯಾಡಿಸಿದೆನು. 'ಅಣ್ಣಾ!' ಎಂದೆ. ಪಾಪ! ಅವನು ಕಣ್ಣೀರು ಬಿಡುತಿದ್ದ. ನನಗೆ ಎದೆಗೆ ಸೂಜಿ ಚುಚ್ಚಿದಂತಾಯಿತು. ಮುಂಬಯಿಯಿಂದ ಬಂದವನಿಗೆ ಈ ಉಪಚಾರವೇ? ನಿಜವಾಗಿಯೂ ತಂದೆಗೆ ಮುದಿಹುಚ್ಚು!

'ಗಂಪೀ' ಗೋವಣ್ಣ ಮೆಲ್ಲಗೆ ಹೇಳಿದ 'ನಾನು ನಾಳೆ ಮುಂಬಯಿಗೆ ಹೊರಡುತ್ತೇನೆ. ನನಗೆ ನೀನು ಆಗಾಗ ಕಾಗದ ಬರೆಯುತ್ತಿರು. ಏನಾದರೂ ಹಣ ಅಗತ್ಯ ವಿದ್ದರೆ ಬರೆ, ಅಯ್ತಾ? ಹುಂ, ಯಾಕೆ ಕೊಗುತ್ತೀ?'.

ನಿಜವಾಗಿಯೂ ನನ್ನ ಕಣ್ಣುಗಳಲ್ಲಿ ನೀರು ಸುರಿಯುತಿತ್ತು. ಎಷ್ಟು ಒಳ್ಳೆಯವ ಗೋವಣ್ಣ! ನಾನೆಂದರೆ ಅವನಿಗೆಷ್ಟು ಮಮತೆ! ತನ್ನ ದುಃಖಸಮಯದಲ್ಲೂ ನನ್ನ ವಿಚಾರ ಮಾಡುತಿದ್ದಾನೆ!

'ಗೋವಣ್ಣಾ, ನೀನು ಖಂಡಿತವಾಗಿಯೂ ತೆರಳುವೆಯಾ?'

'ಹೌದು. ಉಪಾಯವಿಲ್ಲ ಬೇರೆ. ತಂದೆಗೆ ಮುದಿಹುಚ್ಚು! ಅಲ್ಲ, ಅವರಂತೆಯೇ ಅನೇಕರಿಗೂ ವಿಧವಾ ವಿವಾಹ ವೆಂದರೆ ಭಾರೀ ತಾತ್ಸಾರ, ಗಂಪೀ. ಅಣ್ಣ ಮುಖವೊರಸಿ ಮುಂದುವರಿಸಿದ. 'ನನಗೆ ಈ ಲೋಕದ ಕೆಲವು ವಿಷಯಗಳನ್ನು ನೆನೆಯುವಾಗ ಭಾರೀ ವ್ಯಸನ ವಾಗುತ್ತದೆ. ವಿಧವೆಯರ ಗೋಳನ್ನು ಕೇಳುವವರಾರು? ಪಾಪ! ಪತಿ ತೀರಿದ ನೆಂದರೆ, ಅವರ ಸುಖಮಯ ಜೀವನ ವೆಲ್ಲರು ದಾಟಲಸಾಧ್ಯವಾದ ಒಂದು ಬೆಟ್ಟ ಅಡ್ಡ ಬಂದಂತೆ. ಸಮಾಜವು ಬಾಂಧವ್ಯ ಮರ್ಯಾದೆಯನ್ನು ವಿಧವೆಯರಿಗೆ ಕೊಡುವುದಿಲ್ಲ. ಕೆಲವರಂತೂ ತಮ್ಮ ದೇಹವನ್ನು, ರೂಪವನ್ನು ವಿಕಾರ ಪಡಿಸಿಕೊಂಡು ಸಾಯುವ ವರೆಗೆ ಯಾರಿಗೂ ಬೇಡದವರಂತೆ ಜೀವಿಸಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಸಮಾಜವು ಅವರ ಮೇಲೆ ಅಪವಾದದ ಮೂಟೆಯನ್ನೇ ಹೊರಿಸುತ್ತದೆ. ಅವರ ಬಾಳು ನಾಯಿಗಿಂತಲೂ ಕೀಳು! ಎಲ್ಲವೂ ಈ ಕ್ರೂರ ಸಮಾಜದಿಂದಾಗಿ!! . . .

'ವಿಧವೆಯರು 'ಅಪಶಕುನದ ಗೂಬೆ'ಯೆಂದೇ ಕೆಲವರು ಭಾವಿಸುತ್ತಾರೆ. ಮದುವೆ ಉತ್ಸವಗಳಲ್ಲಿ ಕೃಷಿಕಾಲು ಸಮಾಜವು ಬಿಡುವುದಿಲ್ಲ. ಏಲ್ಲೂ ತಿರಸ್ಕಾರವೇ ಅವರನ್ನು ಎದುರ್ಗೊಳ್ಳುತ್ತದೆ. ಇಂಥಾ ವಿಧವೆಯರ ಅರಣ್ಯರೋದನವನ್ನು ಕೇಳುವವರಾರು?'

ಗೋವಣ್ಣ ಬಹಳ ಉತ್ಸಾಹದಿಂದ ಮಾತಾಡಲಿಕ್ಕೆ ತೊಡಗಲುಮಾದಿದ.

'ಒಬ್ಬ ಪುರುಷನು ಏಳೇಂಟು ಪತ್ನಿಯರನ್ನು ಮದುವೆಯಾಗಬಹುದು. ಅವನ ಕೈ ಹಿಡಿದ ಹೆಂಡತಿಯರು ಸತ್ತರೂ ಜನ ಕೇಳ್ತಾರೆ—ಅವಳಿಗೆ ಅವನ ಕೈಕಳಿಗೆ ಬಾಳುವ ಪುಣ್ಯವಿಲ್ಲ. ಅವಳ ಆಯುಷ್ಯ ತೀರಿತು' ಎಂದು. ಆದರೆ ಒಬ್ಬಳು ಸ್ತ್ರೀಯು ಮದುವೆಯಾಗಿ, ಅಕಸ್ಮಾತ್ತಾಗಿ ಗಂಡನು ತೀರಿದನೆಂದರೆ ಊರವರು ಏನು ಹೇಳ್ತಾರೆ?—ಅವಳು ಸುಟ್ಟ ಮೋರೆಯವಳು! ಗಂಡನನ್ನು ಕೊಂದಳು! ಹಣೆ ಬರಹ ಕೆಟ್ಟವಳು!—ಎಂದು.

'ಸತ್ಕವನು ಬೇಕಾದರೆ ರೋಗಪೀಡಿತ ನಾಗಿದ್ದರೂ ದೂರು ಅವನ ಕೈಹಿಡಿದ ತರುಣಿಯ ಮೇಲೆ! ಜನರಿಗೆ ತಾಗಿದ ಈ ಹುಚ್ಚಿಗೆ ಆಸ್ಪತ್ರೆಯಾದರೂ ಎಲ್ಲಿ? ಗಂಪೀ, ನಾನು ಸಮಾಜದಲ್ಲಿರುವ ಜೀವವು ಕಟ್ಟು ಕಟ್ಟುಪಾಡಿಗಳನ್ನು ಸುಧಾರಿಸಬೇಕೆಂತ ಮನಸ್ಸು ಮಾಡಿದ್ದೇನೆ. ಅದರಿಂದಲೇ ನಾನು ನಾಗವೇಣಿಯನ್ನು ಮದುವೆಯಾಗುವುದು.

ಅವಳಂತೆ ಇನ್ನೆಷ್ಟು ಮಂದಿ ತರುಣಿಯರು ವಿಧವತ್ವದಿಂದ ನರಳುವುದಿಲ್ಲ? ಸುಧಾರಕರು ನಮ್ಮೀ ಸಮಾಜದಲ್ಲಿ ಅಗತ್ಯ.'

ನನಗೆ ಅಣ್ಣನ ಈ ಮಾತುಗಳನ್ನು ಕೇಳಿ, ಅಲ್ಲೇ ಜೊಂಪು ಹಿಡಿಯಿತು. ಅಣ್ಣ ತನ್ನ ಪೆಟ್ಟಿಗೆಗಳನ್ನು ಭದ್ರಪಡಿಸುತಿದ್ದ.

ಮರುದಿನ ಪ್ರಾತಃಕಾಲ. ಗೋವಣ್ಣ ಮುಂಬಯಿಗೆ ತೆರಳಿದನು. ತಂದೆ ಮನೆಯಲ್ಲಿರಲಿಲ್ಲ. ಅಮ್ಮ ಅಳುತಿದ್ದರು. ನನಗಂತೂ ಅಣ್ಣನೊಟ್ಟಿಗೆ ಹೋಗಬೇಕೆಂದು ತೋಚಿತು. ಆದರೆ ತಂದೆಯ ಭಯ.

卐 卐 卐

ಎರಡು ತಿಂಗಳುಗಳ ನಂತರ—ನನಗೆ ಗೋವಣ್ಣನ ಕಾಗದವೊಂದು ಬಂದಿತ್ತು. ಅದರೊಟ್ಟಿಗೆ ಒಂದು 'ಟ್ಲೇಕ್ ಬರ್ಡ್' ಪೇನಾ ಪಾರ್ಸೆಲ್ ಬಂದಿತ್ತು. ಕಾಗದದಲ್ಲಿ:—

'ಗಂಪೀ, ನೊನ್ನೆ ನಮ್ಮ ರಿಜಿಸ್ಟ್ರಿ ಮದುವೆಯಾಯಿತು. ನಾಗವೇಣಿಗೆ ಬಹಳ ಸಂತೋಷವಾಯಿತುಕಣೋ. ನಿನ್ನನ್ನು ನೋಡ್ಬೇಕೆಂದು ಅವಳಿಗೆ ಆಶೆಯುದೆಯಂತೆ. ನೀನು ಬೇಸಗೆ ರಜೆಯಲ್ಲಿ ಬರುವಿಯೆಂದು ನಾನು ನಂಬುತ್ತೇನೆ. ಇವೇನು ನಿನ್ನ ಅತ್ತಿಗೆಯ ಬಹುಮಾನ.

'ಗಂಪೀ! ಒಂದು ವಿಶೇಷ ವಿಷಯ. ನನಗೆ ಅವಳ ಹೆಸರಿನಲ್ಲಿ ೩೦೦೦ ರೂಪ್ಯಾ ಸೋತ್ತಿಯಲ್ಲಿ ಸಿಕ್ಕಿತು, ಹುಡುಗ! ಹೇಗೆ, ನಾಗವೇಣಿಯ ಮುಖಲಕ್ಷಣ?

'ತಂದೆ ಹೇಳಿದ ಹಾಗೆ 'ಸುಟ್ಟಮೋರೆ' ಯವಳಲ್ಲವೆಂದು ಅವರಿಗೆ ಹೇಳು. ರಜೆಯಲ್ಲಿ ನನ್ನಲ್ಲಿಗೆ ಬರಲು ಮರೆಯ ಬೇಡ— ಇತಿ, ನಿನ್ನ ಅಣ್ಣ ಗೋವು.'

ನನ್ನ ಅತ್ತಿಗೆ ಕಳುಹಿಸಿದ ಪೇನಾನಿಂದ ಬೇ ನಾನು ಇದನ್ನು ಬರೆಯುತ್ತಿದ್ದೇನೆ. ಹೂ, ನನ್ನಣ್ಣ ಭಾರೀ ಸುಧಾರಕನಾದನಲ್ಲಾ! ಅದೇ ನನ್ನ ಹೆಮ್ಮೆ!!

ಸಿನೆಮಾ ಸುದ್ದಿ

'ಡೋಕ್ಟರ್' ನ್ಯೂ ಥಿಯೇಟರ್ಸ್ ಚಿತ್ರ

ನಿರ್ದೇಶಕ ಸುಬೋಧರು 'ಡಾಕ್ಟರ್' ಎಂಬ ಚಿತ್ರವನ್ನು ಹಿಂದುಸ್ತಾನೀ ಭಾಷೆಯಲ್ಲಿ ಚಿತ್ರಿಸಿರುವರು. ಈ ತಿಂಗಳ ಅಂತ್ಯದಲ್ಲಿ ಭಾರತದ ಮುಖ್ಯ ಕೇಂದ್ರಗಳಲ್ಲಿ ಈ ಚಿತ್ರವು ಪ್ರದರ್ಶಿತವಾಗುವುದು.

'ಹಳ್ಳಿಗೆ ಸಾಗಿರಿ' ಎಂಬ ಸಂದೇಶವನ್ನು 'ಡಾಕ್ಟರ್' ಚಿತ್ರವು ಕೊಡುತ್ತದೆ. ಕಥೆ ಪ್ರೇಮಾಭಿನಯಮಯವಾಗಿದೆ. ಇದರಲ್ಲಿ ಘೊಂಕಜಮಲ್ಲಿಕರ ಸಂಗೀತ ನಿರ್ದೇಶಕತ್ವವು ಬಹಳ ರಮ್ಯವಾಗಿದೆ. ಭಾರತಿ ಎಂಬ ಹೊಸ ನಟಿಯನ್ನಿದರಲ್ಲಿ ಕಾಣಬಹುದು.

'ಮೇರೀ ದುನಿಯಾ' ಮಜ್ಜಾರ್ ಖಾನನಿಂದ

'ಮಾರ್ವೀ' ಅಥವಾ ಮೇರೀ ದುನಿಯಾ ಎಂಬೀ ಚಿತ್ರವನ್ನು ನೇಶನಲ್ ಆರ್ಟಿಸ್ಟ್ಸ್‌ನವರು ತಯಾರಿಸುವ ಯೋಜನೆಯಲ್ಲಿರುವರು. ಮಜಾರ್ ಖಾನ್ ನಿರ್ದೇಶಿಸುವನು. ಇದರಲ್ಲಿ ಒಬ್ಬ ತಾತ್ವಿಕನ ಪಾತ್ರವನ್ನು ಆತನೇ ನಟಿಸುತ್ತಾನೆ. ಮಿಸ್ ಕೌಸಲ್ಯಾ, ಹರಿಶಿವ ದಾಸನಿ, ಎ ಹಸೆನ್, ವಾಜಿದ್, ಎ ಖೈರ್ ಪಹ್ಲಾನ್, ಎಸ್ ನಾಜಿರ್, ಮಿಸ್ ಸುಲೋಚನಾ, ದಯಾದೇವಿ, ಮಿಸ್ ಶೋಭಾ, ಶ್ಯಾಮು (ಅಕೇಲ ಸ್ಪರ್ಧಿಯ) ಮತ್ತು ಗೋಪೆ ಇವರು ನಟನಟಿಯರು.

ಇವರ ಮುಂದಿನ ಚಿತ್ರ 'ಮುಸಿಂಜ್' ಅಥವಾ 'ಬಾರೆಲೋಗ್' ಎಂಬುದು.

'ಮಹೋಬತ್'

ವೃಭಾತಿದ ಮುಂದಿನ ಚಿತ್ರ 'ಮಹೋಬತ್'ನ್ನು ನಿರ್ದೇಶಕ ಸಯ್ಯದ್ ಫಾತೇಲಾಲ್ ನಿರ್ದೇಶಿಸುವನು.

ಹಿಂದೀ ಚಿತ್ರ ತಯಾರಿಸಬೇಕು

ದಕ್ಷಿಣ ಭಾರತದ ಸಿನೆಮಾ ನಿರ್ಮಾಪಕರು ಹಿಂದೀ ಚಿತ್ರಗಳನ್ನು ನಿರ್ದೇಯಿಂದಾಗಿ ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಅವರೂ ಹಿಂದೀ ಚಿತ್ರಗಳನ್ನೇ ತಯಾರಿಸಿ, ಸ್ಪರ್ಧೆ ಮಾಡುವವರ ಶಿಬಿರಕ್ಕೆ ತನ್ನ ಚಿತ್ರಗಳನ್ನು ಯಾಕೆ ಕಳುಹಿಸಬಾರದು ಎಂದು ಒಬ್ಬ ಲೇಖಕರು ಬರೆಯುತ್ತಾರೆ.

ಅಶೋಕ್ ಮತ್ತು ಲೀಲಾ

ಟೊಂಬೇ ಟಾಕೀಸಿನ ಜೂಲಾ ಚಿತ್ರದಲ್ಲಿ ಅಶೋಕ ಕುಮಾರ್ ಮತ್ತು ಲೀಲಾ ಚಿಟ್ನೀಸ್ ಇವರು ಮತ್ತೊಮ್ಮೆ ಪ್ರಣಯಪೂರ್ಣವಾದ ಅಭಿನಯ ಮಾಡುತ್ತಾರೆ.

ಸೌಹಾರ್ದಭಾವವನ್ನು ಪ್ರಭಾತ ಕಂಪನಿ ಕಲಿಯಬಾರದೆ?

ಪಡೋಶಿಯುಂತಹ ಉಜ್ವಲ ಸೌಹಾರ್ದ ಭಾವನೆಯನ್ನು ಬೋಧಿಸುವ ಶಾಂತಾರಾಮರು, ತಮ್ಮ ಕಂಪನಿ ವಾಲುಗಾರರೊಡನೆ (ಶಾಂತಾರಾಮ, ಭಾಬುರಾವ್ ಪೈ, ಕುಲಕರ್ಣಿ, ಫಾತೇಲಾಲ್) ಸೌಹಾರ್ದದಿಂದ ಯಾಕೆ ಇರುವುದಿಲ್ಲ? ಡಾಕ್ಟರರು ಇತರರಿಗೆ ಕೊಡುವ ಮದ್ದನ್ನು ತಮಗೇ ಹಿಂದು 'ಡೋಸ್' ಯಾಕೆ ತೆಗೆದುಕೊಳ್ಳಬಾರದು? ಎಂದು ಬೊಂಟುಯಿ ಪತ್ರಿಕೆಯೊಂದು ಬರೆಯುತ್ತದೆ.

ಮದನಕಳಾ ಶಾಸ್ತ್ರ ಎಂಬ ಪ್ರೇಮ ರಹಸ್ಯಗಳು ರೂ 1—4—0

ಈ ಪುಸ್ತಕ ಕನ್ನಡ ಭಾಷೆಯಲ್ಲಿ ಸ್ತ್ರೀಪುರುಷರ ಸ್ವೀಯ ಫೋಟೋಗಳೊಡನೆ ಮುದ್ರಿಸಿದೆ.

ಇದರಲ್ಲಿ ಎಲ್ಲ ದೇಶದ ವೇಶ್ಯಕನ್ಯೆಗಳುಮೋಹಿಸುವ ರಹಸ್ಯಗಳು ಹಾಸಿಗೆಯ ಸುಖವಿಲಾಸಗಳು, ಸ್ತ್ರೀಪುರುಷರಿಗೆಂಬರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವೈಭವಾದಿಗಳ ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧದಲ್ಲಿ ಕಸ್ಸಿಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳ, ಇನ್ನೂ ಅನೇಕ ಪ್ರೀತಿಯ, ಮುತ್ತಿಡುವ, ಮಲಗುವ ಕ್ರಮಾದಿ ರಹಸ್ಯ ಫೋಟೋಗಳು ಅದಗಿನೆ ೩೦೦ ಪುಟಗಳು ಅದಗಿನೆ

ಪುಸ್ತಕ ಒಂದಕ್ಕೆ ರೂ 1—4—0

ಅಮೆರಿಕನ್ ಸ್ವಿಸ್ ಟ್ರೇಡಿಂಗ್ ಕೊ,
ಪೋಸ್ಟು ಬಾಕ್ಸ್ ನಂ ೪12
ಪಾರ್ಕ್ ಟೌನ್ ಮದರಾಸು

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ—

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನೂನತೆಗಳನ್ನು ತಕ್ಕದಾದ ಸುಲಭ ರೀತಿಯಲ್ಲಿ ನಾಶಮಾಡಿರಿ ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಆದರ ಮೇಲೆ ಹಚ್ಚಿ ಬಿಡಿರಿ ಇದು ಕುರುಹುಣ್ಣು, ಮುದ್ದಣ ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯು ಮೂಲವನ್ನೇ ಕೊಳ್ಳು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣವಾಡುತ್ತದೆ

ಕುಟೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತನ್ನ ಯವು ಆಮದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು ರಕ್ಷಣೆಯು ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು

ಕುಟಿಕೂರಾ ಮುಲಾಮನ್ನು (cuticura ointment) ಸಜ್ಜೆ ಕುರು ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಾಘಾತಗಳನ್ನೂ ಗುಣಪಡಿಸುತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾಮುಲಾಮು'
Cuticura Ointment

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧಿ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.



ಮೂತ್ರ ರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು ಈ ಔಷಧವು ಪ್ರಾರಂಭಿಸಿದ ಮೂರು ದಿನಗಳಲ್ಲಿ ಯೇ ತನ್ನ ಆಶ್ಚರ್ಯಕರವಾದ ಗುಣವ ಚಮತ್ಕಾರವನ್ನು ತೋರಿಸುತ್ತದೆ ಸ ವಿಧಾನ ರೋಗಿಗಳು ಇದರ ಗುಣವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಪ್ರಶಂಸಿಸುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪುರುಷತ್ವ ಪರವಾ ಮೂತ್ರವ್ಯಾಧಿಂದ ಕೀವು ಹೋಗುವುದು, ವಿಸ್ಮಾನ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ ಕೊಕಸ್ ಎಂಬ ವಿಷಕ್ರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಗಾಂಕುರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ 50 ಮಾತ್ರೆಗಳ ಬಿಟ್ಟಿಗೆ 1ಕ್ಕೆ ರೂ. 3—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ಯೌಷಧವ್ಯಾಪಾರ ಇಂಗ್ಲಿಷಿನಲ್ಲಿ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪೇಟೆಲ್ ರೋಡ್, ಬಾಂಬಾಯಿ 4.

Sole Manufacturer: **Dr. D. N JASANI,** Vithalbhai Patel Road, BOMBAY 4.
Madras Agent **Appah & Co, China Bazar Madras.**

ಪತ್ಯೌಷಧವ್ಯಾಪಾರ ಇಂಗ್ಲೀಷ್ ಅಥವಾ ತುರಾರಿಯಲ್ಲಿ.

ವಿಜ್ಞಾನಯುಗ

'ಬ್ಲೇಕ್ ಔಟ್' ಸರಿಯಾದುದಲ್ಲ

ಶತ್ರುಗಳು ಆಕಾಶ ಮಾರ್ಗವಾಗಿ ವಿಮಾನಗಳಲ್ಲಿ ಬಂದು ಪಟ್ಟಣಗಳಿಗೆ ಬಾಂಬುಗಳನ್ನೆಸೆದು ಅನಾಹುತ ಮಾಡುವುದನ್ನು ತಡೆಯಲು ಅವರಿಗೆ ಪೆಟ್ಟಣಗಳ ವಿಷಯ ತಿಳಿವಾಗದಂತೆ ಮಾಡಲು 'ಬ್ಲೇಕ್ ಔಟ್' ಮಾಡುವ ಕ್ರಮವು ಜಾರಿಗೆ ಬಂದಿದೆಯಷ್ಟೆ? ಇದು ಸರಿಯಾದುದಲ್ಲವೆಂದೂ, ಪಟ್ಟಣಗಳಲ್ಲಿತ ಹೆಳೆಗಳನ್ನೂ ಬೆಳಕಿಂದ ಬೆಳಗಿಸಿದರೆ ಶತ್ರುಗಳಿಗೆ ತೀರಾ ಸಂದೇಹವುಂಟಾಗಿ ಅನಾಹುತ ಕಡಿಮೆಯಾಗುವುದೆಂದೂ ಲಂಡನ್ನಿನಲ್ಲಿ ಕೆಲವರು ವೈಜ್ಞಾನಿಕರು ವಿಚಾರ ಮಾಡುತ್ತಿದ್ದಾರೆ.

ಕಿಟಿಕಿಗಳಿಲ್ಲದ ಮನೆಗಳು

ಅಮೆರಿಕವು ಇದುವರೆಗೆ ಯುದ್ಧ ರಂಗಕ್ಕೆ ಇಳಿಯಲಿಲ್ಲವಾದರೂ ಅಲ್ಲಿ ಇತ್ತೀಚೆಗೆ ಕಟ್ಟಿದ ಕಟ್ಟಡಗಳು ಯುದ್ಧ ಸಿದ್ಧತೆ ಸೂಚಿಸುತ್ತವೆ ಕೆಲಿಫೋರ್ನಿಯದಲ್ಲಿ ಕಟ್ಟಿದ ಡೊಗ್ಲಾಸ್ ಏರ್ ಕ್ರಾಫ್ಟ್ ಕಂಪೆನಿಯ ಕಟ್ಟಡವು ಇದೀ ಕಿಟಿಕಿಗಳಿಲ್ಲದ ಮನೆಯಾಗಿದೆ. ಆಕಾಶದಿಂದ ನೋಡಿದರೆ ಆ ಕಟ್ಟಡವು ರಾತ್ರಿ ಕಾಲದಲ್ಲಿ ಕಾಣಲಾರದಾಗಿದೆ ಹೊರಗಿಂದ ಗಾಳಿ ಬರುವುದು ಕಿಟಿಕಿಬಾಗಿಲುಗಳಿಂದಲ್ಲ ಯಂತ್ರ ಮೂಲಕ ಯೋಜನೆ ಮಾಡಿರುತ್ತಾರೆ

ಶಬ್ದದಿಂದಲೂ ಗುಣವಾಗುವುದು

'ಶಾಂತಿ ಮತ್ತು ನಿಶ್ಶಬ್ದ' ಇವುಗಳು ಹೆಚ್ಚಾಗಿ ಆರೋಗ್ಯ ಕಾರಣಗಳು ಇಂದಿನ ಯುದ್ಧ ಕಾಲದಲ್ಲಿಯೂ ಕೂಡಾ ಬಾಂಬಿನ ಪೆಟ್ಟಿನಿಂದ ಗಾಯಗೊಂಡ ಸಿಪಾಯಿಗಳಿಗೆ 'ಶಾಂತಿ ಮತ್ತು ನಿಶ್ಶಬ್ದ'ದ ಚಿಕಿತ್ಸೆ ಹಲವು ಪಾಲಿಗೆ ಗುಣಕಾರಿಯಾಗಿದೆ. ಆದರೆ ಇತ್ತೀಚೆಗೆ ಸಿಪಾಯಿಗಳ ನರದೌರ್ಬಲ್ಯ ಮೂಲವಾದ ರೋಗವು ಶಬ್ದದಿಂದ ಗುಣಹೊಂದುವುದಾಗಿ ತಿಳಿಯುತ್ತದೆ. ಬಾಂಬಿನ ಪೆಟ್ಟಿನಿಂದ 'ನರಗಳೆ ಕಡಿತ'ವುಂಟಾದವರು ವಿಮಾನಗಳ ಧ್ವನಿ, ಫಿರಂಗಿಗಳ ಗರ್ಜನೆಗಳನ್ನು ಕೇಳಿ ಗುಣಹೊಂದಿದರಂತೆ.

ಸೂರ್ಯಸ್ನಾನ ಹುಡುಗಿಯನ್ನು ಕೊಂದಿತು!

'ಸೂರ್ಯಸ್ನಾನದಿಂದ ಮನುಷ್ಯನು ಆರೋಗ್ಯ ಹೊಂದುವನೆಂಬ ಇತ್ತೀಚೆಗೆ ಹುಡುಗಿಯರು ಸ್ವಮುಚ್ಚದ ದಂಡಿಗೆ ಹೋಗಿ ಮಳಲ ರಾಶಿಯಲ್ಲಿ ಉರುಳಾಡಿ ಸೂರ್ಯಸ್ನಾನ ಮಾಡುವ ಸಿದ್ಧತೆ ಪಾಶ್ಚಾತ್ಯ ದೇಶದಲ್ಲಿದೆ. ಹದಿನಾರು ವರ್ಷದ ಹುಡುಗಿಯೊಬ್ಬಳು ಬ್ರಸ್ಸಲ್ಸಿನಲ್ಲಿ ಸೂರ್ಯಸ್ನಾನದಿಂದ ಮರಣ ಹೊಂದಿದಳೆಂದು ಈಗ ತಿಳಿದಿದೆ ತನ್ನ ಗೆಳೆಯನೊಡನೆ ಅಕೆ ಸೂರ್ಯಸ್ನಾನಕ್ಕೆ ಕಡಲದಡಕ್ಕೆ ಹೋಗಿದ್ದಳು. ಆ ದಿನ ಅವಳ ಮೈಮೇಲೆ ಬೊಕ್ಕೆಗಳು ಎದ್ದುವು. ಎಂತಹ ಔಷಧಿ ಕೆಪಚಾರಗಳಿಂದಲೂ ಗುಣವಾಗಲಿಲ್ಲ. ಕಡೆಗೆ ಹುಡುಗಿ ತೀರಿಹೋದಳು.

ವಿಚಿತ್ರ ಪ್ರಪಂಚ

ವಿಷಸರ್ಪವು ಹೆಂಗುಸಿನ ಮೊಲೆಹಾಲು ಕುಡಿಯಿತು

ಬಂಗಾಳದಿಂದ ಬಂದ ಈ ಸುದ್ದಿಯು ಬಹಳ ವಿಚಿತ್ರವಾಗಿದೆ! ವಿಮೆನ್ಸಿಂಗಿನ ಬಳಿಯಿರುವ ಮುಕ್ತಗಾಬಾ ನಗರದಲ್ಲಿರುವ ಜಮೀನ್ದಾರ ಕಾಂತೋದಾಸರ ವಿವಾಹಿತ ವಗಳ ಮೊಲೆಯಮೇಲೆ ಒಂದು ಮುಂಜಾನೆ ನೋಡಿದಾಗ ಕೆಲವು ಗಾಯಗಳು ಕಂಡವು. ಹೆತ್ತವರಿಗೆ ಅದು ಆಶ್ಚರ್ಯ ಹುಟ್ಟಿಸಿತು

ಮರುದಿನ ರಾತ್ರಿ ಮಗಳು ಕೂಗಿದಾಗ ಎಲ್ಲರಿಗೂ ಆ ಒಂದು ದೃಶ್ಯವನ್ನು ಕಂಡು ಆಶ್ಚರ್ಯವಾಯಿತು! ಒಂದು ವಿಷಸರ್ಪವು ಅವಳ ಕಾಲುಗಳಿಗೆ ಸುತ್ತುಹಾಕಿ ಮೊಲೆಯಿಂದ ಹಾಲು ಕುಡಿಯುತ್ತಿತ್ತು ದೊಡ್ಡ ಶಬ್ದ ಮಾಡಿದ ಮೇಲೆ ಸರ್ಪರಾಜನು ಜಲಿಸಿದನು!

ಮನುಷ್ಯನು ಮಾಡಿದ ಪ್ರಮಾದ

ಮನುಷ್ಯನು ಮಾಡಿದೆ ಮಹಾ ಪ್ರಮಾದವೆಂದರೆ ಸರಿಯಾಗಿನಿಂತು ಎರಡು ಕಾಲುಗಳ ಮೇಲೆ ನಡೆಯಲಿಕ್ಕೆ ಪ್ರಾರಂಭಿಸಿದ್ದು, ಅದರಿಂದಲೇ ಹೆಚ್ಚಿನ ರೋಗಗಳು ಉಂಟಾಗಲು ಕಾರಣವಾದುವು, ಎಂದು ಕೆಲಿಫೋರ್ನಿಯ ಯುನಿವರ್ಸಿಟಿಯ ಡಾ। ವೆರ್ನೆ ಐ ಇನ್ಸಾನ್ ಎಂಬವರ ಅಭಿಪ್ರಾಯ ನೆಟ್ಟಗೆ ನಿಲ್ಲುವುದರಿಂದ ದೇಹದ ಹಲವು ಅವಯವಗಳ ಮೇಲೆ ಭಾರಬಿದ್ದು ಅನಾರೋಗ್ಯ ಹೆಚ್ಚುವುದು, ವ್ಯಾಯಾಮೋದಂತೆ ಭಾರವು ಹೆಚ್ಚು ಬೀಳಕೊಡಗಿ ರೋಗಗಳು ಅನಾರೋಗ್ಯಗಳೂ ಹೆಚ್ಚುವವು. ಆದ್ದರಿಂದ ಒಂದೇ ಒಂದು ಉಪಾಯವೆಂದರೆ ಶಿಸ್ತಿನಿಂದ ಸದಾ ಹಿತಕರ ವ್ಯಾಯಾಮ ಮಾಡುವುದು ಎಂದು ಅವರು ಹೇಳುತ್ತಾರೆ.

ಹಿಮಗಾಲದಲ್ಲಿ ಬುದ್ಧಿವಂತಿಕೆ ಹೆಚ್ಚು

ಮಕ್ಕಳಿಗೆ ಹಿಮಗಾಲದಲ್ಲಿ ಬುದ್ಧಿ ಹೆಚ್ಚುಬೆಳೆಯುತ್ತದೆಯೆಂದು ಅಮೆರಿಕದ ಮನಶ್ಶಾಸ್ತ್ರಜ್ಞರು ಕಂಡುಹಿಡಿದಿರುವರು. ಈ ಬೆಳವಣಿಗೆಯು ಸಣ್ಣ ಮಕ್ಕಳ ವಿಷಯದಲ್ಲಿ ಹೆಚ್ಚಾಗಿ ಸರಿಯೆನಿಸಿ ಕಂಡು ಬರುತ್ತದೆ ಮನುಷ್ಯನ ಭೀಶಕ್ತಿಯು ಸಹ ಹಿಮಗಾಲದಲ್ಲಿ ಹೆಚ್ಚುವುದೆಂದು ಕಂಡುಬಂದಿದೆ. ಈ ಕಾಲದಲ್ಲಿ ಮಕ್ಕಳು ಹೆಚ್ಚು ಕಲಿಯುವುದಕ್ಕೆ ಸಮರ್ಥರಾಗಿರುತ್ತಾರೆಯೆಂದು ಪ್ರೊ। ಹಾರ್ವೆಯೆಂಬರ ಹೇಳಿಕೆ

ಸುಕ್ರ ಸಂಜೀವನ

ಭಾರತ ದೇಶದಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಸ್ಮತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತ್ತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ವಿಶ್ವೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯು ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಲಿಯುವೆ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ' ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯರೆಂಬುದೇ ಈ ವಿಷಯವು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ ೫



ಅಷ್ಟಾವಧಾನಿ ಡಾ। ಜೋಗೆಶ್ ಚಂದ್ರಘೋಷ್, ಎಂ ಎ, ಎಫ್.ಸಿ ಎಸ್ (ಲಂಡನ್) ಎಂ ಸಿ ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು
ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ,, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೈ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್ ಸಾ ಕಂಪೆನಿ, ಹಂಪನಕಟ್ಟಾ ಮಂಗಳೂರು

The Canara Banking Corporation Ltd.

(Incorporated in British India)

Estd. 1906.

With effect from 1—11—1941 the following will be rates of interest on Deposits:

FIXED

3 MONTHS	2¼% P A
6 - do -	2½% ,,
9 - do -	3% ,,
12 - do -	3¼% ,,
24 - do -	3½% ,,
SHORT TERM	2% ,,

ಸೆರೆಮನೆಯಲ್ಲಿ ಸಂಭೋಗ

ಅಮೆರಿಕದ ಕೈದಿಗಳಿಗೆ ವಾರಕ್ಕೆ ಎರಡು ಸಲ ತಮ್ಮ ಹೆಂಡರೊಡನೆ ಅಥವಾ ತಮ್ಮವ್ವದ ಇತರ ಹೆಂಗುಸರೊಡನೆ ಸಂಭೋಗ ನಡಲು ಸರಕಾರವು ಅನುಮತಿ ಕೊಟ್ಟಿದೆ. ಇದಕ್ಕೆ ಸೆರೆಮನೆಯೊಳಗೇ ತಕ್ಕ ಏರ್ಪಾಡು ಮಾಡಲಾಗುವುದು; ಒಳಗೆ ಬರುವ ಹೆಂಗುಸರು ರೋಗವಿರಹಿತರಾಗಿರಬೇಕಾಂ. ಅವಿವಾಹಿತ ಕೆರುಣರು ಇದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಆದರೆ ಹೆಣ್ಣು ಸೆರೆಯಾಳುಗಳಿಗೆ ಈ ಕರಜ ಸೌಕ್ಯವಿಲ್ಲವಂತೆ!

BHUVANENDRA PRODUCTS LTD.,

Head Office and Factory: KATAPADI S: Kanara

Depots:
1. Maharatha Galli, Hubli.
2. 57 Big Street, Triplicane, Madras.

"BHUVANENDRA"

Danthadavan Choorna

Economical in use. Cheapest in value
Genuine in quality and choiced by all.
Antiseptic, astringent, aromatic. Useful in Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರದಬೀದಿ
ರಾಘವೇಂದ್ರ ರಂಗ ಪೈ, ಸುರ್ಕಂಟ್, ರದಬೀದಿ.
ಡಾ। ಎಮ್. ಎಸ್. ಪ್ರಭು, M. B B S. ಸಿ ವಿ ಸಿ ಬಿಲ್ಡಿಂಗ್.

THE PIE-MONEY BANK, LTD.
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public
Apply for particulars—
K. R. GURU, *Managing Director.*

The Bank of Mangalore Limited.
Branches—MOODABIDRI & PADUBIDRI
HEAD OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3% to 5%.
INTEREST PAYABLE QUARTERLY
Interest on Savings Bank Deposits allowed at at 2½%

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ಜೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕುಳಗುಂದ ಜಾನುವಾರ ಸಂತೆ
4-11-1941 ರಿಂದ 17-11-1941

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ. 18-11-1941

ಶ್ರೀ ಸುಬ್ರಹ್ಮಣ್ಯಷಷ್ಠಿ ಮಹೋತ್ಸವ. 24-11-1941

ಪ್ರಯಾಣಿಕರ ಮತ್ತು ಯಾತ್ರಾ ಸ್ಥಳಗಳಿಗೆ ಹೋಗಲಿಚ್ಛಿಸುವ ಯಾತ್ರಾರ್ಥಿಗಳ
ಅನುಕೂಲತೆಗಾಗಿ ಇದೇ ಬರುವ 1-11-1941 ರಿಂದ 30-11-1941 ರ ವರೆಗೆ ಮೇಲ್ಕಂಡ ಸ್ಥಳಗಳಿಗೆ
ಅಗತ್ಯವಿದ್ದಲ್ಲಿ
ವಿಶೇಷ ಸರ್ವಿಸುಗಳನ್ನು ಚಾಲುಮಾಡುವ ಏರ್ಪಾಡನ್ನು ಮಾಡಲಾಗುವುದು.
ಹೆಚ್ಚಿನ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಸ್ವತಃ ಕೇಳಿ ತಿಳಿಕೊಳ್ಳಬಹುದು.

THE JOINT MANAGERS,
The Combined Booking Agency, Mangalore.

ವಾ. ಸಂಚಿಕೆ ಪೋಸ್ಟ್ ಇಂದಾಗಿ ಚಾರ್ಜ್ ಇಂದಾ ರೂ. 2-0-0 ಆರು ತಿಂಗಳ ಸೇರಿ ರೂ. 2—12—0 Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 21—11—1941 [ಸಂಚಿಕೆ 46]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಶುಕ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಕಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವಿಲ್ಲದೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ವಿಷ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಕೊಂಬ್ಯಾ, ಮದರಾಸು, ಕಲ್ಕತ್ತ.

ಎಲ್ಲಾ ಔಷಧಾಲಯಗಳಲ್ಲಿಯೂ ಈ ಕಂಪೆನಿಯಲ್ಲಿ ದೊರೆಯುವುದು.



CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings

Prompt Settlement of Claims

Liberal Terms

Long Experience &

Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,——MANGALORE,——CALICUT——MADRAS,

TRIVANDRUM,——BANGALORE City,——and BOMBAY 4.

ಇಂದು ವಾಲೆಯಾಗಬೇಕಾದ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI



ಇದೊಂದು ನೂತನ ಭೀಕರ ವಿಮಾನ!

ಎರಡು ಎಂಜಿನ್‌ಗಳನ್ನು ಬ್ರಿಟಿಷರ ಪ್ರಿನ್ಸಲ್ 'ಬಿಯೋ ಫೈಟರ್' ಎಂಬ ಈ ವೇಗವನ್ನು, ಬಹ್ಯಾಕಾಶದಿಂದ ಕೆಂಬಿರುವ ಯುದ್ಧವಿಮಾನವಿದು! ಇಗಲು ಮತ್ತು ಗಾತ್ರ ಬಿಂದ ಇದಾಂದ ಯುದ್ಧವಾಡಬಹುದು.
ಈ ಚಿತ್ರವು 'ಬಿಯೋ ಫೈಟರ್' ವಿಮಾನವು ಹಾರಾಡುತ್ತಿರುವುದನ್ನು ತೋರಿಸುತ್ತದೆ.

KANNADA ILLUSTRATED WEEKLY

'ಓವಲ್‌ಟಿನ್'

★ ಆರೋಗ್ಯದಲ್ಲಿದ್ದ ಸಂಸಾರವೇ ★
ಸುಖಮಯ ಸಂಸಾರ

ನಮ್ಮ ಕುಟುಂಬದ ಪ್ರತಿ ಒಬ್ಬನಿಗೂ ಯಾವಾಗಲೂ 'ಓವಲ್ಟಿನ್' ಇತ್ತು, ಪ್ರತಿ ಕಡೆಯಲ್ಲಿಯೂ ಸಾವಿರಾರು ಜನರು ಅನುಸರಿಸುತ್ತಿರುವ ಉದಾಹರಣೆಯನ್ನೇ ಅನುಸರಿಸಿ, ಶ್ರೇಷ್ಠವಾದ ಪೋಷಣೆಯ ಗುಣವುಳ್ಳ ಈ ಪಾನೀಯವು ಆರೋಗ್ಯ, ಬಲ ಹಾಗೂ ಚೇತನವನ್ನೀಯುತ್ತದೆ.

ಮಕ್ಕಳು ಹಾಗೂ ವಾಯಸ್ಕರು ಇದರ ರುಚಿಯನ್ನು ಬಹಳ ಮೆಚ್ಚುತ್ತಾರೆ. 'ಓವಲ್ಟಿನ್'ನ ಪ್ರತೀ ಒಂದು ಹನಿಯೂ ಶ್ರೇಷ್ಠವಾದ ಪೋಷಣೆಯಿಂದ ಕೂಡಿದ್ದು ದೇಹ, ಮೆದುಳು ಹಾಗೂ ನರನಾಡಿಗಳನ್ನು ಉತ್ತೇಜನ ಸ್ಥಿತಿಯಲ್ಲಿರುತ್ತದೆ. ನಮ್ಮ ಮಕ್ಕಳು ಮಂಗಳ ಸುಖವು ಅವರ ಆರೋಗ್ಯದ ಮೇಲೆ ಹೊಂದಿಕೊಂಡಿರುವುದೆಂದು

ನೆನಪಿನಲ್ಲಿಟ್ಟುಕೊಳ್ಳಿರಿ!

"ಓವಲ್ಟಿನ್" ಪ್ರಕೃತಿಯ ಶ್ರೇಷ್ಠ ಟಾನಿಕ್ ಆಹಾರಗಳ ತಯಾರಿಕೆಯಾಗಿರುತ್ತದೆ. ಹಸಿಯ ಹಾಲಿನಿಂದ ಮಾಡಿದ ಚಾರ್ಕ್—ಗದ ಹಾಲು, ಶ್ರೇಷ್ಠವಾದ ನೈಸರ್ಗಿಕ ಜೀವಾತುಗಳು, ಮತ್ತು ಇತರ ಪದಾರ್ಥ ಪಾನೀಯಗಳನ್ನು ಕೈಜಿರಿ. "ಓವಲ್ಟಿನ್"ನ್ನು ಕೊಂಡುಕೊಳ್ಳಿರಿ.

"ಓವಲ್ಟಿನ್" ಪುಟಿಕರವಾದ ಆಹಾರಪಾನೀಯವಾಗಿರುತ್ತದೆ. ಇದು ಬಿಸಿಯಾಗಿರಲಿ ತಣ್ಣಗಿರಲಿ ಕುಡಿಯಬಹುದು. ಅದಲ್ಲದೆ ಓವಲ್ಟಿನ್ ಪಾನೀಯವನ್ನು ತಯಾರಿಸಲು ಬಲು ಸುಲಭ. ಪ್ರತಿ ಬಾಟಲಿಗೆ ಒಬ್ಬಿಗೆ ಮೇಲೆ ತಯಾರಿಸುವ ವಿಧಾನವಿದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ — ಮಾರಲ್ಪಡುತ್ತದೆ

SAVE FOR VICTORY

ಡಿಸ್ಟ್ರಿಬ್ಯೂಟರ್ಸ್:

ಗ್ರೆಹಮ್ಸ್ ಟ್ರೇಡಿಂಗ್ ಕೋ.
(ಇಂಡಿಯಾ), ಲಿಮಿಟೆಡ್.
16 ಬೇಂಕ್ ಸ್ಟ್ರೀಟ್, ಫೋರ್ಟ್ ಮತ್ತು ಕಳ್ಳಕ್ಕ,
ಮದ್ರಾಸು, ಕರಾಚಿ, ರಂಗೂನ್‌ಗಳಲ್ಲಿ.

OV/61/40

ಸಾದರ-ಸ್ವೀಕಾರ

ಸಾರ್ವಜನಿಕ ಉಪಯೋಗಕ್ಕಾಗಿ ಜಾಹೀರು ಮಾಡಿದ್ದಾರೆ. ಇದರಲ್ಲಿ ಯಾವುದೇ ಭಾಗ, ಪದ್ಯ, ವಾಕ್ಯವಿಶೇಷಗಳು ಇದು ಸ್ವಯೋಚಿತವಾಗಿಯೂ ಕಂಡರೆ ಪ್ರಜಾಮತ ಪತ್ರಿಕೆಯು ಯಾವುದೇ ಸಮಯ ಪತ್ರಿಕೆಯ ಸಂಪಾದಕರಲ್ಲಿ ಸಂಪರ್ಕಿಸಿ ಸಂಪಾದಕರು ಈ ಪತ್ರಿಕೆಯನ್ನು ಕುರಿತು ಸಾಧಕ ಬಾಧಕಗಳ ಬಗ್ಗೆ ಲೇಖನಗಳನ್ನು ಬರೆಯಲು ಕೋರಿಕೆ ಸಲ್ಲಿಸಿದ್ದಾರೆ. ಇದರಲ್ಲಿ ಯಾವುದೇ ಭಾಗ, ಪದ್ಯ, ವಾಕ್ಯವಿಶೇಷಗಳು ಇದು ಸ್ವಯೋಚಿತವಾಗಿಯೂ ಕಂಡರೆ ಪ್ರಜಾಮತ ಪತ್ರಿಕೆಯು ಯಾವುದೇ ಸಮಯ ಪತ್ರಿಕೆಯ ಸಂಪಾದಕರಲ್ಲಿ ಸಂಪರ್ಕಿಸಿ ಸಂಪಾದಕರು ಈ ಪತ್ರಿಕೆಯನ್ನು ಕುರಿತು ಸಾಧಕ ಬಾಧಕಗಳ ಬಗ್ಗೆ ಲೇಖನಗಳನ್ನು ಬರೆಯಲು ಕೋರಿಕೆ ಸಲ್ಲಿಸಿದ್ದಾರೆ.

"ನ ನಿಷ್ಕಿಂಚಿತಾರ್ಥಾದ್ಧಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ತ್ರಿನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

28—11—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೮—೧೧—೧೯೪೧]

ಸಮರಭೂಮಿಯು ಸಂಚಾರ

ರಷ್ಯ ರಣಭೂಮಿಯಲ್ಲಿ, ಮೋಸ್ಕೋ ನಗರದ ಮೇಲೆ ಜರ್ಮನರ ಮುತ್ತಿಗೆಯು ಬಹಳ ಜೋರಾಗಿದೆ. ಇದರಿಂದ ಗಂಡಾಂತರವು ಬಹಳ ಹೆಚ್ಚಿದೆಯೆಂದು ಮೋಸ್ಕೋ ರೇಡಿಯೋ ಹೇಳುತ್ತದೆ. ರಾಜಧಾನಿಗೆ ವಾಯುವ್ಯದಲ್ಲಿರುವ ಕ್ಯಾಲಿನಿನ್ ಮತ್ತು ದಕ್ಷಿಣದಲ್ಲಿರುವ ಟೂಲಾ ಗಳಿಂದ ಜರ್ಮನರು ಅತಿ ವೇಗವಾಗಿ ಮುನ್ನುಗ್ಗುತ್ತಿರುವರು. ಮೋಸ್ಕೋ ಧಾಳಿಯ ಸಲುವಾಗಿ ಜರ್ಮನರು ಸುಮಾರು ೬೦ ಸಾವಿರ ಸೈನ್ಯಗಳನ್ನೂ ಅಪಾರ ಯುದ್ಧೋಪಕರಣಗಳನ್ನೂ ಉಪಯೋಗಿಸುತ್ತಿರುವರೆಂದು ತಿಳಿದಿದೆ. ಹಿಟ್ಲರನು ಮೋಸ್ಕೋ ನಗರವನ್ನು ಭೇದಿಸಲು ಸುಮಾರು ೨ ಮಿಲಿಯ ಅಕ್ಷ ಸೈನಿಕರನ್ನು ಕಳುಹಿಸಿರುವನೆಂದು ತಿಳಿದಿದೆ. ಅಪಾರ ಹಾನಿಯಾಗುತ್ತಿದ್ದರೂ, ಪರಿಸ್ಥಿತಿಯನ್ನು ಗಣಿಸದೆ ಜರ್ಮನರು ಮುಂದೆ ಮುಂದೆ ಬರುತ್ತಿರುವುದನ್ನು ಕಂಡರೆ ಗಂಡಾಂತರ ಹೆಚ್ಚಿದಂತೆಯೇ ಆಗಿದೆ. ಕ್ಯಾಲಿನಿನ್ ಭಾಗದಲ್ಲಿ ಬಹಳ ಜೋರಿನಿಂದ ಹೋರಾಡುತ್ತಿದ್ದ ರಶ್ಯನರು ಒಂದೆರಡು ಕಡೆ ಹಿಂಜರಿಯಬೇಕಾಯಿತು.

ಬೇರೆ ಕಡೆಗಳಲ್ಲಿ

ಲೆನಿನ್ ಗ್ರಾಡ್ ವ್ಯೂಹದಲ್ಲಿ ರಶ್ಯನ್ ಸೈನ್ಯಗಳು ನೂವೊಗ್ರಾಡಿನ ಈಶಾನ್ಯ ದಿಕ್ಕಿನಲ್ಲಿ ಮೂವತ್ತು ಮೈಲು ದೂರದಲ್ಲಿ ಲೆನಿನ್ ಗ್ರಾಡ್—ಮೋಸ್ಕೋ ರೈಲ್ವೆ ಮಾರ್ಗಕ್ಕೆ ತಾಗಿಕೊಂಡಿದ್ದ ಒಂದು ನಗರದಿಂದ ಜರ್ಮನರನ್ನು ಹೊರಗಟ್ಟಿದ ರೆಂದು ಸುದ್ದಿಯಿದೆ. ಟೂಲಾ ದಲ್ಲಿ ಜರ್ಮನ್ ಟ್ಯಾಂಕು ಸೈನ್ಯಗಳು ಯಾಂತ್ರಿಕ ಶಸ್ತ್ರಾಸ್ತ್ರ ಸಜ್ಜಿತ ಸೈನ್ಯಗಳ ಸಹಾಯದಿಂದ ಟೊಲ್ಸ್ತಾಯ್ಹೆದಲ್ಲಿ ಮೋಸ್ಕೋ ನಗರಕ್ಕೆ—೧೧೦ ಮೈಲು ದೂರ ಸೈಯ್ಕ್ಯ ಭಾಗದಲ್ಲಿರುವ ಸಂರಕ್ಷಕ ವ್ಯೂಹವನ್ನು ಎಡಪಾರ್ಶ್ವದ ಸೈನ್ಯದ ಮೇಲೆ ಧಾಳಿ ಮಾಡಿದವೆಂದು ಸುದ್ದಿ. ಕೊನೆಜ್ ವ್ಯೂಹದಲ್ಲಿ ಜರ್ಮನರನ್ನು ರಶ್ಯನ್ ಸೈನ್ಯಗಳು ಹಿಂದಕ್ಕಟ್ಟಿದರೆಂದೂ, ದೊಸ್ಕೊವಿನ ಬೀದಿಯಲ್ಲಿ ಕೈ ಕೈ ಕಾಳಗವಾಯಿತೆಂದೂ ತಿಳಿದಿದೆ.

ಲಿಬಿಯ ಯುದ್ಧ

ಕಳೆದ ಐದಾರು ದಿನಗಳಿಂದ ಲಿಬಿಯದಲ್ಲಿ ನಡೆಯುತ್ತಿರುವ ಯುದ್ಧವು ಭೀಕರವಾಗಿ ಸಾಗುತ್ತಿದೆ. ಬ್ರಿಟಿಷರು ಜರ್ಮನರ ಮೇಲೆ ಆಕ್ರಮಣ ಮಾಡಲು ಈ ಯುದ್ಧದಿಂದ ಆರಂಭಿಸಿದರು. ಎರಡು ಪಕ್ಷಗಳೂ ಅಲ್ಲಿ ಕಲಿತನದಿಂದ ಕಾದಾಡುತ್ತಿವೆ. ರಶ್ಯದ ಕಡೆ ಮುನ್ನುಗ್ಗುತ್ತಿರುವ ಜರ್ಮನ್ ಸೈನ್ಯಗಳ ವೇಗವನ್ನು ಕಡಿಮೆ ಮಾಡಲು ಹೀಗೆ ಲಿಬಿಯದಲ್ಲಿ ಯುದ್ಧವಾಗುತ್ತಿದೆಯೆಂದು ಫಲವರ ಹೇಳಿಕೆಯಿದೆ. ಬ್ರಿಟಿಷ ಮತ್ತು ಜರ್ಮನ್ ಸೈನ್ಯಗಳು ಸೀದರೆಜಪೆದಲ್ಲಿ ಟೇಂಕ್ ಕಾಳಗ ಮಾಡುತ್ತಿದೆ. ವೈರಿಗಳ ನಡುವಣ ಕೇಂದ್ರವಾದ ಗ್ಯಾಂಬಟ ದುರ್ಗವನ್ನು ಬ್ರಿಟಿಷರು ವಶಪಡಿಸಿಕೊಂಡರು. ಗ್ಯಾಂಬಟವು ಬಾರ್ಡಿಯ ಮತ್ತು ಟ್ರೋಬ್ರುಕಗಳ ನಡುವೆ ಇದೆ.

ಬಾರ್ಡಿಯವು ಬ್ರಿಟಿಷರ ಕೈವಶವಾಯಿತೆಂದು ಕೈರೋ ಪ್ರಕಟಿಸಿಯಿಂದ ಹೇಳಲಾಗಿದೆ. ಇದು ವರೆಗೆ ಲಿಬಿಯದಲ್ಲಿ ಬ್ರಿಟಿಷ್ ಸೈನ್ಯಗಳು ೧೫೦೦೦ ಸೈನಿಕರನ್ನು ಸೆರೆ ಹಿಡಿದಿವೆ. ಸಿದಿಬರಾನಿ ದ್ಧಲ್ಲಿರುವ ಹಿಂದೀ ದಲವು ೬೦೦೦ ಇಟ್ಟಲಿಯನರನ್ನು ಸೆರೆ ಹಿಡಿದಿತ್ತು. ಕೆಲವು ಜೀವನ್ನು ಬ್ರಿಟಿಷರು ಕೈವಶ ಪಡಿಸಿಕೊಂಡಿರುವರು.

ಸಂಧಾನ ಮುರಿಯಿತು

ಜಪಾನ್ ಅಮೆರಿಕಾ ಸಂಧಾನ ಮಾತುಕತೆಯು ಮುರಿದುಹೋಯಿತೆಂದು ತಿಳಿದಿದೆ. ಇದರಿಂದ ಪೂರ್ವಾಂತ್ಯದಲ್ಲಿ ಗಂಡಾಂತರ ತಪ್ಪಿದ್ದಲ್ಲವೆಂದು ಹೇಳಬಹುದು. ಗಂಡಾಂತರವು ಅನಿರೀಕ್ಷಿತವಾಗಿ ಆಗಬಹುದೆಂದು ಹೇಳಲಾಗಿದೆ. ಮೊನ್ನೆ ಚರ್ಚಿಲ್ಲರು ಜಪಾನಿಗೆ ಕೊಟ್ಟ ಎಚ್ಚರಿಕೆಯಿಂದ ಬ್ರಿಟನಿನ ಧೋರಣೆಯೇ ನಿದೆಯೆಂಬುದಷ್ಟು ಸ್ಪಷ್ಟವಾಗಿದೆ. ಜಪಾನಿನ ಮೇಲೆ ಗಂಡಾಂತರ ಬಂದಿದೆಯೆಂದು ಜನರಲ್ ಟೋಜೋ ೬೦ ಪ್ರತಿನಿಧಿಗಳ ಗವರ್ನರರಿಗೆ ಎಚ್ಚರಿಕೆ ಯಿತ್ತರುವನು. ಮುಂದಿಟ್ಟ ಹೆಜ್ಜೆಯನ್ನು ಜಪಾನು ಹಿಂದಿಡಲಾರದು ಎಂದು ಅತನು ಹೇಳಿದ್ದಾನೆ.

ಜಪಾನ್ ಅಮೇರಿಕಾ ಸಂಧಾನ ಮುರಿದುದರಿಂದ ಜಪಾನು ಅಮೆರಿಕಾ ಯುದ್ಧವಾಗುವ ಸಂಭವವು ಒದಗಿದೆ. ಜರ್ಮನಿಯೊಡನೆ ಬ್ರಿಟನು ಹೋರಾಡುವಲ್ಲಿ ಬ್ರಿಟನಿಗೆ ಅಮೆರಿಕದ ಸಹಾಯವು ಹೋಗದಂತೆ, ಅಮೆರಿಕದವರು ಜಪಾನನ್ನು "ನಿಲ್ಲಿಸಬೇಕೆಂದು ಹಿಟ್ಲರನೂ ಹೊಚಿಕೆಮಾಡಿರುತ್ತಾನೆ. ಆದ್ದರಿಂದ ಇನ್ನು ಮುಂದಿನ ಪರಿಸ್ಥಿತಿಯು ಬಹಳ ಗಮನೀಯವಿದೆ. ಪೂರ್ವದಿಕ್ಕಿನಲ್ಲಿಯೂ ಗಂಡಾಂತರದ ಚಿಹ್ನೆಗಳೇ ಇದರಿಂದ ಕಂಡುಬರುತ್ತಿವೆ ಅಂತೂ ಯುದ್ಧದ ಜ್ವಾಲೆಯು ಎಲ್ಲಡೆಯಲ್ಲಿ ಯೂ ಹಬ್ಬುತ್ತಾ ಬರುತ್ತಿದೆ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ಸರಕಾರದ ಹೊಸ ವಾರಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ಯಂ. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪದವೀಧರರು)

ಈ ಪುಸ್ತಕಗಳನ್ನು ಪಡಕೊಂಡಲ್ಲಿ ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪೆಸದ ಅಂತ್ಯದಲ್ಲಿ ಅಭ್ಯಾಸಗಳನ್ನೂ ಮಾದರಿ ಪ್ರಶ್ನೆಗಳನ್ನೂ ಕೊಟ್ಟಿದೆ.

೩ನೆಯ ಪುಸ್ತಕ ೦೬೦ . ೫ನೆಯ ಪುಸ್ತಕ ೦೭೦

೬, ೭ ಮತ್ತು ೨ನೆಯ ಪುಸ್ತಕದಲ್ಲಿ ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

ಶಾರೀಕು 28—11—1941

'ಅಮೆರಿರಾಗ'

ಭಾರತ ಮಂತ್ರಿ ಅಮೆರಿಯವರು ಇತ್ತೀಚೆಗೆ ಮೆಂಚೆಸ್ಟರಿನಲ್ಲಿ ಒಂದು ಭಾಷಣ ಮಾಡುತ್ತಾ ಮುನಃ ತಮ್ಮ ಹಿಂದಿನ ಹಾಡಿನ ವೆಲ್ಲವಿಯನ್ನೇ ಪುನರಾಲಾಪಿಸಿದ್ದಾರೆ. ಭಾರತದ ಕುರಿತು ಅಮೆರಿ ಹೇಳುವುದು ಹೀಗೆಯೇ ಎಂಬುದು ಈಗಾಗಲೇ ಜನತೆಗೆ ಸ್ಪಷ್ಟವಾಗಿಬಿಟ್ಟಿದೆ. ಭಾರತದಲ್ಲಿ ಮಾತ್ರವಲ್ಲ ಲಂಡನಿನಲ್ಲಿಯೂ 'ಅಮೆರಿರಾಗ'ದ ಕುರಿತು ತೀರಾ ಅಸಂತೋಷವು ಹುಟ್ಟಿದೆಯೆಂದು ತಿಳಿದುಬಂದಿದೆ. ಟೈಮ್ಸ್‌ನಂತಹ ಪತ್ರಿಕೆಯೂ ಅಮೆರಿಯವರ ಧೋರಣೆಯನ್ನೆತ್ತಿ ಟೀಕೆ ಮಾಡಿರುತ್ತದೆ. ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಅವರ ಮೆಂಚೆಸ್ಟರ್ ಭಾಷಣದ ವಿಷಯದಲ್ಲಿ ಬರೆಯುತ್ತಾ, ಹೀಗೆ ಹೇಳುವುದರಿಂದ ಭಾರತದ ರಾಜಕೀಯ ವಸ್ತುಸ್ಥಿತಿಯನ್ನು ಸುಧಾರಿಸಿದಂತೆ ಆಗಲಿಲ್ಲವೆಂದು ಹೇಳುತ್ತದೆ. ಅಮೆರಿಯವರ ಮಾತಿನಿಂದ ಭಾರತೀಯರಿಗೆ ಸಮಾಧಾನವಾಗಲಾರದೆಂದೂ, ಸಾಹಾರ್ದತೆಯಿಂದ ಹಾಗೂ ಭಾರತೀಯರ ಕೇಳಿಕೆಗೆ ಸಮಾಧಾನವಾಗುವಂತೆ ವರ್ತಿಸಿದರೆ ಮಾತ್ರ ಸಮಸ್ಯೆ ಪರಿಹಾರವಾಗುವುದೆಂದೂ ಡೈಲಿ ಹೆರಾಲ್ಡ್ ಪತ್ರಿಕೆ ಸೂಚನೆಯಿತ್ತಿದೆ. ಹೀಗಿದ್ದರೂ ಅಮೆರಿಯವರು ತಮ್ಮ ಪ್ರಲಾಪರೆಯ 'ರಾಗ'ವನ್ನು ಬಿಡಲೊಲ್ಲರೆಂಬುದು ಅತ್ಯಂತ ಖೇದಾಸ್ಪದವಾಗಿದೆ.

ಅಮೆರಿಯವರು ಹಿಂದೆ ಅನೇಕ ಸಲ ಹೇಳಿದ್ದನ್ನೇ ಹಚ್ಚಾಗಿ ಈ ಸಲವೂ ಹೇಳಿಬಿಟ್ಟರು. ಅದರಲ್ಲಿರುವ ಒಂದೆರಡು ಹೊಸ ವಿಷಯಗಳೆಂದರೆ ಇವು: (೧) ಇಂಗ್ಲಿಷರು 'ಮೆಗ್ನ ಕಾರ್ಟ'ದಿಂದ ಪಡೆದಷ್ಟು ಸ್ವಾತಂತ್ರ್ಯವನ್ನು ಭಾರತೀಯರಿಗೂ ಕೊಡಲಾಗಿದೆ (೨) ಅಟ್ಲಾಂಟಿಕ್ ಶಾಸನಕ್ಕಿಂತಲೂ ಆಗಸ್ಟ್ ಘೋಷಣೆಯು ಉದಾರವಿರುತ್ತದೆ. ಈ ಮಾತುಗಳು ಬಹಳ ಸ್ವಾರಸ್ಯವಾಗಿದ್ದು, ಭಾರತದ ಪರಿಸ್ಥಿತಿ ಗೊತ್ತಿಲ್ಲದವರಿಗೆ ಮರುಳು ಹಚ್ಚಲು ಸಾಕಾಗಿದೆ. 'ಮಗ್ನ ಕಾರ್ಟ'ದಿಂದ ಬ್ರಿಟಿಷರು ಪಡೆದಂತೆ ಭಾರತೀಯರು ಯಾವ ಹೊಸ ಹಕ್ಕನ್ನು ಪಡೆದರೋ ಎಂಬುದು ಯಾರಿಗೂ ತಿಳಿಯಲಾರದ ವಿಷಯವಾಗಿದೆ. ಅಮೆರಿಯವರೂ ಅದನ್ನು ವಿವರಿಸಿ ಹೇಳಿರುವುದಿಲ್ಲ. ಅಟ್ಲಾಂಟಿಕ್ ಶಾಸನಕ್ಕಿಂತ ಆಗಸ್ಟ್ ಘೋಷಣೆ ಉದಾರವಿದ್ದರೂ ಇರಬಹುದು; ಆದರೆ ನಮಗೆ ಉದಾರವಾದ ಆಗಸ್ಟ್ ಘೋಷಣೆ ಬೇಡ, ಅಟ್ಲಾಂಟಿಕ್ ಶಾಸನವನ್ನು ಅನ್ವಯಿಸುವಂತೆ ಮಾಡಿರಿ ಎಂದು ಭಾರತೀಯರು ಹೇಳುವುದಿದ್ದರೆ ಅದನ್ನು ಮುರಿವಾಡಲು ಅಮೆರಿ ಯತ್ನಿಸುತ್ತಿರುವುದರ ಗೂಢವೇನೆಂದೂ ಗೊತ್ತಾಗುವುದಿಲ್ಲ. ಅಟ್ಲಾಂಟಿಕ್ ಶಾಸನಕ್ಕೆ ಭಾರತೀಯರು ಯೋಗ್ಯರಲ್ಲವೆಂದು ಹೇಳುವಂಥಾ ಖಂಡಿತವಾದ ಮಾತನ್ನು ಬಿಟ್ಟು ಅಟ್ಲಾಂಟಿಕ್ ಶಾಸನಕ್ಕಿಂತ ಆಗಸ್ಟ್ ಘೋಷಣೆ ಹೆಚ್ಚೆನ್ನುವ ಅಮೆರಿಯವರೆ 'ದ್ರಾವಿಡ ಪ್ರಾಣಾಯಾಮ'ದಿಂದ ಭಾರತೀಯರು ಕೃಶಿಸಿಹೋಗುವುದು ಸಾಧ್ಯವಿಲ್ಲ.

ಭಾರತದಲ್ಲಿ ಒಮ್ಮತವಿಲ್ಲವೆನ್ನುವುದು ಹಿಂದಿನ್ನ ವಾದಸ್ಫರನ್ತಿಯೇ ಅಲ್ಲದೆ ಹೊಸ ತೇನೂ ಅಲ್ಲ. ಮೊರನೇಯವರು ಇಬ್ಬರೊಳಗಿನ ಈ ಕರುಕುಳವನ್ನು ಎತ್ತಿ ಹೇಳುವುದನ್ನು ಬಿಟ್ಟ ಕೂಡಲೇ ಇಬ್ಬರ ಜಗಳವು ಮಾಯವಾಗಿ ಏಕ್ಯವು ತೋರುವುದೆಂದು ಹಿಂದಿನಿಂದಲೇ ಭಾರತೀಯ ಮುಖಂಡರು ಹೇಳುತ್ತಾ ಬಂದಿದ್ದಾರೆ. ಅಖಿಲ ಭಾರತದ ಪ್ರತಿನಿಧಿಯಾಗಿ ಮಾತನಾಡುವ ಸಂಸ್ಥೆ ಯಾವುದಿದೆಯೆಂದು ಅಮೆರಿ ಪ್ರಶ್ನಿಸುತ್ತಾರೆ. ಕಳೆದ ಚುನಾವಣೆಯ ಕಾಲದಲ್ಲಿ ಭಾರತದ ಹನ್ನೊಂದು ಪ್ರಾಂತಪಳ ಸೈಕೆ ಏಳು ಪ್ರಾಂತೆಗಳಲ್ಲಿ ಯಾವ ಸಂಸ್ಥೆಯು ಬಹುಮತದಿಂದ ಆರಿಸಿ ಬಂದು ಮಂತ್ರಿಮಂಡಳವನ್ನು ಸ್ಥಾಪಿಸಿ ಅಧಿಕಾರ ನಡೆಸಿತು ಎಂಬುದು ಅಮೆರಿಯವರಿಗೆ ತಿಳಿಯದ ವಿಚಾರವಲ್ಲ. ಇದರ ಮೇಲೆ ಅಖಿಲಭಾರತದ ಪ್ರತಿನಿಧಿ ಸಂಸ್ಥೆ ಯ್ಞಾವುದೆಂಬುದನ್ನು ಅಮೆರಿ ಹುಡುಕುವುದು ಆಶ್ಚರ್ಯಕರವಾಗಿದೆ. ರಾಜಕೀಯ ಭಿನ್ನಾಭಿಪ್ರಾಯವಿದ್ದರೆ, ಅದರಿಂದ ರಾಷ್ಟ್ರ ಕೋಲಾಹಲವೇನೂ ಆಗುವುದಿಲ್ಲ. ಬ್ರಿಟಿನಲ್ಲಾಲ್ಲವರೂ ರಾಜಕೀಯ ಭಿನ್ನಾಭಿಪ್ರಾಯಗಳು ಶುಂಬಾ ಇವೆ. ಆದರೆ ಅಲ್ಲಿ ಸ್ವತಂತ್ರ ರಾಜ್ಯ ಭರಣಕ್ಕೆ ತೊಂದರೆಯಾದುದಿಲ್ಲ. ಇಂತಹ ಕ್ಷುಲ್ಲಕ ನೆವನ ಹೂಡಿ ಮಾತನಾಡುವುದರಿಂದ ಭಾರತೀಯರನ್ನು ಹಾಗೂ ಜಗತ್ತನ್ನು ಅಮೆರಿ ಇನ್ನು ಮಾರ್ಡೆ ವಂಚಿಸಲಾರರು.

ಭ್ರಾಂತಿ ಪರಿಹಾರ

ರಾಷ್ಟ್ರೀಯ ಮನೋವೃತ್ತಿಯ ಕೆಲವು ವೈಸರಾಯರ ವಿಸ್ತೃತ ಕಾರ್ಯಕಾರೀ ಮಂಡಲದಲ್ಲಿ ಅಧಿಕಾರ ವಹಿಸಿರುವುದರಿಂದ ಸರಕಾರದ ಧೋರಣೆಯಲ್ಲಿ ಬದಲಾವಣೆಯುಂಟಾಗಿ, ರಾಜಕೀಯ ಕೈದಿಗಳ ಬಿಡುಗಡೆಯೂ, ಕಾಂಗ್ರೆಸ್ ಸರಕಾರಗಳೊಳಕೆಗೆ ಸಂಧಾನವೂ ಆಗುವುದೆಂದು ಭ್ರಮೆಗೊಂಡಿದ್ದ ಹಲವರಿಗೆ ಮೆನ್ನೆ ಎಸೆಂಬ್ಲಿಯಲ್ಲಿ ಗೃಹಮಂತ್ರಿಗಳಾದ ಮ್ಯಾಕ್ಸ್‌ವೆಲ್ಲರು ಹೇಳಿದ ಮಾತಿನಿಂದ ಭ್ರಾಂತಿ ಪರಿಹಾರವಾಯಿತು. ಮಾಕ್ಸ್‌ವೆಲ್ಲರು ಸ್ಪಷ್ಟಪಡಿಸಿದ ಅಭಿಪ್ರಾಯವು ಬ್ರಿಟಿಷ್ ಸರಕಾರದ ನುನೋವೃತ್ತಿಯನ್ನು ಅಭಿವ್ಯಕ್ತಿಸಿದವರಿಗೆ ಮಾತ್ರ ಏನೂ ಆಶ್ಚರ್ಯಕರವೆನಿಸಲಿಲ್ಲ.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ವಿಷಯದಲ್ಲಿ ಪ್ರಾಂತಿಕ ಸರಕಾರಗಳ ಸಮ್ಮತಿ ಪಡೆಯಬೇಕೆಂಬ ಕುಂಟು ಕಾರಣವನ್ನು ಗೃಹಮಂತ್ರಿಗಳು ವ್ಯಕ್ತಪಡಿಸಿದರು. ಇದು ಎಷ್ಟರಮಟ್ಟಿಗೆ ನಿರಾಧಾರವಾದುದೆಂಬುದನ್ನು ಈಗಾಗಲೇ ಅನೇಕ ಮುಖಂಡರೂ ಭಾರತದ ಅನೇಕ ಪ್ರಮುಖ ಪತ್ರಿಕೆಗಳೂ ತಿಳಿಸಿ ಹೇಳಿವೆ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದರಿಂದ ಕಾಂಗ್ರೆಸಿನ ಗೌರವ ಹೆಚ್ಚಿಸಿದಂತಾಗುತ್ತದೆಯೆಂದು ಸರಕಾರವು ಯೋಚಿಸಿ, ಹೀಗೆ ಅಸಮ್ಮತಿ ತೋರ್ಪಡಿಸಿರುವುದೆಂದೂ ಕೆಲವು ಕಡೆಗಳಿಂದ ಕೇಳಿ ಬರುತ್ತದೆ. ಅಖಿಲ ಭಾರತದ ರಾಜಕೀಯಕ್ಕೆ ಸಂಬಂಧಿಸಿ, ಇಂದಿನ ಯುದ್ಧ ಯತ್ನಕ್ಕೆ ವಿರೋಧನಿಂತ ಜನತೆಯ ಸಹಕಾರವನ್ನು ಸಂಪಾದಿಸಿಕೊಳ್ಳಲು, ವೈಸರಾಯರು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದರ ಮೂಲಕ ಪ್ರಯತ್ನಿಸುವುದಿದ್ದರೆ ಅದಕ್ಕೆ ಪ್ರಾಂತಿಕ ಆಡಳಿತದವರು ಅಡ್ಡಿಬರಲು ಸಾಧ್ಯವಿಲ್ಲ. ಅವರು ಅತಂಕ ಕರುವರೆಂದು ಬಗೆದು ಸರಕಾರದವರು ಆ ಪ್ರಶ್ನೆಯನ್ನು ಇನ್ನೂ ಮುಂದಿಡುವ ಅವಶ್ಯವಿರಲೂ ಇಲ್ಲ. ಇದರಿಂದ ಕಾಂಗ್ರೆಸಿನೊಡನೆ ಸಂಧಾನ ಮಾಡಿಕೊಳ್ಳಲು ವೈಸರಾಯರಾಗಲಿ ಭಾರತ ಮಂತ್ರಿಯಾಗಲಿ, ಚರ್ಚಿಲ್ಲರಾಗಲಿ ಜಗದಂತೆ ತೋರುವುದಿಲ್ಲ

ಅಂತೂ ವೈಸರಾಯರ ವಿಸ್ತೃತ ಕೌನ್ಸಿಲಿಗೆ ರಾಷ್ಟ್ರೀಯ ಮನೋವೃತ್ತಿಯುಳ್ಳವರೆಂದು ಹೇಳಿಸಿಕೊಳ್ಳುವ ಆಜೆಯಂತಹವರು ಹೋದದರಿಂದ ಸರಕಾರದ ಧೋರಣೆಯಲ್ಲಿ ಬದಲಾವಣೆಯಾಗಿ, ಕೈದಿಗಳ ಬಿಡುಗಡೆಯೂ, ಕಾಂಗ್ರೆಸ್ ಸರಕಾರಗಳೊಳಕೆಗೆ ಸಂಧಾನವೂ ಆಗುವುದೆಂದು ಭ್ರಮೆಗೊಂಡಿದ್ದ ಹಲವರಿಗೆ ಮೆನ್ನೆ ಎಸೆಂಬ್ಲಿಯಲ್ಲಿ ಗೃಹಮಂತ್ರಿಗಳಾದ ಮ್ಯಾಕ್ಸ್‌ವೆಲ್ಲರು ಹೇಳಿದ ಮಾತಿನಿಂದ ಭ್ರಾಂತಿ ಪರಿಹಾರವಾಯಿತು. ಮಾಕ್ಸ್‌ವೆಲ್ಲರು ಸ್ಪಷ್ಟಪಡಿಸಿದ ಅಭಿಪ್ರಾಯವು ಬ್ರಿಟಿಷ್ ಸರಕಾರದ ನುನೋವೃತ್ತಿಯನ್ನು ಅಭಿವ್ಯಕ್ತಿಸಿದವರಿಗೆ ಮಾತ್ರ ಏನೂ ಆಶ್ಚರ್ಯಕರವೆನಿಸಲಿಲ್ಲ.

The Canara Banking Corporation Ltd.

(Incorporated in British India)

Estd. 1906.

With effect from 1—11—1941 the following will be rates of interest on Deposits:

FIXED

3 MONTHS	2¼% P. A
6 -do-	2½% ,,
9 -do-	3% ,,
12 -do-	3¼% ,,
24 -do-	3½% ,,
SHORT TERM	2% ,,

ನೋಟಗಳು....

ಜಪಾನು ಯುದ್ಧಕ್ಕಿಳಿವುದೆಂಬುದನ್ನು ತಿಳಿದು ಬ್ರಿಟನು ಹಲವು ಸಿದ್ಧತೆಗಳನ್ನು ಮಾಡಿದೆ. ಸಿಂಗಾಪುರದಲ್ಲಿ ತನ್ನ ಪ್ರಬಲವಾದ ನೌಕಾಪಡೆಯನ್ನಿಟ್ಟಿರುತ್ತದೆ. ಬರ್ಮಾ ದೇಶದಲ್ಲಿ ಅಫಿಕ ಸಂಖ್ಯೆಯಿಂದ ಯುದ್ಧಕ್ಕೆ ಜನ ಕೂಡಿಸುವ ಕಾರ್ಯ ನಡೆಯುತ್ತಿದೆ. ಹಿಂದೂದೇಶದಲ್ಲೂ ಭದ್ರತೆಯ ಕೆಲಸ ಸಾಗುತ್ತಿದೆ. ಹೀಗೆ ಜಪಾನು ಬ್ರಿಟನು ಅಮೇರಿಕಗಳ ಮೇಲೆ ಯುದ್ಧ ಸಾರಿದ್ದರಿಂದ ಸ್ಪೈನ್, ಫ್ರೋರ್ಚುಗಲ್‌ಗಳಿನ್ನು ಬಿಟ್ಟು ಜಗತ್ತಿನ ಎಲ್ಲಾ ರಾಷ್ಟ್ರಗಳೂ ಈಗ ಯುದ್ಧಕ್ಕಿಳಿದಂತಾಯಿತು. ರಾಷ್ಟ್ರರಾಷ್ಟ್ರಗಳ ಈ ಯುದ್ಧಾಸಕ್ತಿಗೆ ಅಸಂಖ್ಯ ನಿರಪರಾಧೀ ಜನರು ಬಲಿಬೀಳಬೇಕಾಗಿದೆ! ರಕ್ತದ ನದಿಯು ಚಿಲ್ಲಾಟವು ರಾಷ್ಟ್ರರಾಷ್ಟ್ರಗಳಲ್ಲಿ ನಡೆಯುತ್ತಿದೆ!

ಉಳಿದದ್ದು

ತೆಗೆದುಕೊಳ್ಳಿರಿ

ಎಂದು ನಂಬಿಗೆಯಿಂದ ಹೇಳಬರುವ

ದಮ್ಮಿಗೆ ಒಂದೇಬಂದು ಉಪಾಯ

ದಮ್ಮು ಒಮ್ಮಲೇ ನಿಲ್ಲುಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು, ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು 'ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸಮೂಲವಾಗಿ ಗುಣಮಾಡುವ ಉತ್ಕೃಷ್ಟಶಾಸ್ತ್ರೀಯ ಔಷಧವು. ಅದನ್ನು ತೆಗೆದುಕೊಳ್ಳಲು ತಿರಂಧಿಸದ ಕೂಡಲೇ ದಮ್ಮು ಹೋಗೆವುದು, ತೀಕು ಕಡಿಮೆಯಾಗುವುದು, ಶಾಖದ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಷ್ಪಸ ಗಟ್ಟಿ ಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೀಕು, ಕೆಳಕರಿ, ಗಂಟಲು ಉರಿಯುವಂಥದು ಮತ್ತೂ ಪುಷ್ಪಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫೀನ (ನೀಲಿ ಪ್ಯಾಕಿಂಗ್) ಉಪಯೋಗಿಸಬೇಕು. ಬಲ್ಲ ಕೋಷ್ಟ, ಮತ್ತೂ ಆಮ್ಲಪಿತ್ತ ಕೆಜ್ಜಾಗಿ ದಮ್ಮು ಹತ್ತಿದವರು ಶ್ವಾಸಹಾರಿಕಂ ಪೌಂಡ (ಕೆಂಪು ಪ್ಯಾಕಿಂಗ್) ತೆಗೆದು ತೀವಂತರೆ ಹೆಚ್ಚು ಗುಣ ಯಾ ೨—೩ ರೂ. ೬—೮ ತಿಮ್ಮಿನಲ್ಲಿ ಸ್ಥೂಲ ದೊಡ್ಡ ಬಾಟಲಿಗಳಲ್ಲಿ ಎಲ್ಲ ಆಡಿಸುಗುವವು. ತಪ್ಪಿಸಿಕೊಳ್ಳುವ ವಿಳಾಸ:—

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ ಮೆ॥ ವಸಂತಲಾಲ್ ಭಾಟಿಯಾ ಮತ್ತು ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

NOTICE

In the Court of the District Judge of South Kanara

Original Petition No. 130/1941.

In the matter of the Will of Kistu Souza....(deceased)

Between:

Kenjar Rama Kamath—Petitioner.

and

1. Thomas D'Souza
2. Felix D'Souza
3. Mercina Souza Bai
4. Jackina Souza Bai

Respondents.

To All whom it may concern

Notice is hereby given that application has been made to the Court of the District Judge of South Kanara for a grant of Letters of Administration with the Will dated the 20th day of February 1926 annexed, of the property and credits of Kistu Souza, son of Joorna Souza, late of Adyapadi village, Mangalore Taluk who died on the 15th day of December 1926 at the said Adyapadi village, to the petitioner Kenjar Rama Kamath, son of Baba Kamath, land-holder, residing in Kenjar village Mangalore Taluk, as the purchaser of the properties from the Official Receiver of South Kanara—the Receiver appointed in respect of the estates of the Residuary Legatees under the Will (Respondents 1 and 2) insolvents in I. P. Nos., 12 and 13 of 1933 respectively on the file of the Subordinate Judge of South Kanara and that the 17th day of January 1942 has been appointed for the hearing of the said application, and that if you desire to oppose the same, you must file a Caveat in the said Court.

The gross value of the estate has been sworn at Rs. 2700-0-0 and the net value at Rs. 2700-0-0.

(By order of the Court)

Mangalore, 8-12-1941. | H. Vasudeva Kamath. Pleader for Petitioner.

ಸ್ವದೇಶಾಭಿಮಾನಿ

ತಾರೀಕು 12—12—1941

ನೆಹರುವಾಣಿ

"ರಶ್ಯವು ಸೋಲಬಹುದೆಂಬ ಹೆದರಿಕೆಯನ್ನು ನಾನು ಇಟ್ಟುಕೊಂಡಿಲ್ಲ. ಆದರೂ ರಶ್ಯವು ಸೋತಪಕ್ಷದಲ್ಲಿ ನಾನು ಬಹಳ ವಿಷಾದಗೊಳ್ಳುವೆನು. ಈ ಯುದ್ಧದಲ್ಲಿ ನನ್ನ ಸಹಾನುಭೂತಿಯು ಯಾರೊಡನೆ ಎಂಬುದಾಗಿ ಕೇಳಿದರೆ, ನಾನು ತತ್‌ಕ್ಷಣ ಹೇಳುವೆನು, 'ನನ್ನ ಸಹಾನುಭೂತಿ ರಶ್ಯ, ಚೀನ, ಅಮೆರಿಕಾ, ಇಂಗ್ಲೆಂಡುಗಳೊಡನೆ'ಎಂದು. ಈ ಪಂಗಡದ ಮೇಲೆ ನನ್ನ ಸಹಾನುಭೂತಿಯಿದ್ದರೂ ನಾನು ಬ್ರಿಟನಿಗೆ ಸಹಾಯಮಾಡುವುದು ಸಾಧ್ಯವಿಲ್ಲ. ನನಗೆ ಕೊಡಲೊಪ್ಪದ ವಸ್ತುವಿಗಾಗಿ—ಸ್ವಾತಂತ್ರ್ಯಕ್ಕಾಗಿ—ನಾನು ಹೇಗೆ ಹೋರಾಡಲಿ?"

"ರಾಜಕೀಯ ಕೈದಿಗಳ ವಿಚಾರಣೆಯ ಪರಿಸ್ಥಿತಿಯು ಸುಧಾರಿಸಿಲ್ಲ. ಭಾರತದ ಕುರಿತು ಬ್ರಿಟಿಷರ ಧೋರಣೆ ಇನ್ನೂ ಮೊದಲಿನಂತೆಯೇ ಇದೆ. ಕಾಂಗ್ರೆಸು ಇನ್ನು ಯಾವ ಹಜ್ಜೆ ಕೆಗೆದುಕೊಳ್ಳುವುದೆಂದು ನಾನೀಗ ಇಲ್ಲಿ ಹೇಳಲಾರೆನ್ನಾದರೂ, ಕಾಂಗ್ರೆಸು ಕನ್ನ ಕಾರ್ಯನೀತಿಯನ್ನು ಸ್ಪಷ್ಟಗೊಳಿಸಿಯೇ ಇದೆ. ಗಾಂಧಿಜಿಯವರು ಸತ್ಯಾಗ್ರಹ ಆಂದೋಲನವನ್ನು ಬಹಳ ಯಶಸ್ವಿಯಾಗಿ ನಡೆಸಿದ್ದಾರೆ. ಮಹಾತ್ಮರ ಮುಂದಾಳುತನದಲ್ಲಿ ನನಗೆ ಅಚಲ ವಿಶ್ವಾಸವಿದೆ."

—ಇವು ಪಂಡಿತ ನೆಹರುಗಳು ಲಕ್ನೋ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ ಕೆಲವು ಸಂಗತಿಗಳು. ಪಂಡಿತ ನೆಹರು ಲಕ್ನೋದ ಪತ್ರಿಕಾ ಪ್ರತಿನಿಧಿಗಳ ಕೂಟದಲ್ಲಿ ಚರ್ಚಿಸುತ್ತಾ ಇನ್ನೂ ಕೆಲವು ವಿಷಯಗಳನ್ನು ಹೇಳಿರುತ್ತಾರೆ. ಭಾರತ ಮತ್ತು ಯುದ್ಧ ನೀತಿಯ ವಿಚಾರವಾಗಿ, ಕಾಂಗ್ರೆಸಿನ ಮುಂದಿನ ಸ್ಥಿತಿಗತಿಗಳೇನಿರಬಹುದೆಂದು ಸಂದೇಹಗೊಂಡಿರುವ ಹಲವರಿಗೆ ಅವರ ಮಾತುಗಳು ಮಾರ್ಗದರ್ಶಕಗಳಾಗುವುವು. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಡಲಾಗಿದೆ:

"ಗಾಂಧಿಜಿ ಚಿಲ್ಲರೆ ಸಂಗತಿಗಳ ಕಡೆಗೆ ಮನಸ್ಸನ್ನು ಹರಿಯಗೊಡದೆ ಕೆಲವು ಘನ ತತ್ವಗಳಿಗೆ ಅಂಟಿಕೊಂಡು ತಲೆಯಂತೆ ನಿಶ್ಚಲರಾಗಿರುವರು. ಯುದ್ಧದ ಸಂಬಂಧ ಭಾರತದ ಧೋರಣೆಯೇನಿದೆಯೆಂಬುದು ಹಿಂದೆಯೆ ಸ್ಪಷ್ಟವಾಗಿದೆ. ಇನ್ನು ಅದರಲ್ಲಿ ಬದಲಾವಣೆಯಾಗುವ ವರೆಗೆ ಕಾಂಗ್ರೆಸ್‌ನ ಕಾರ್ಯಕ್ರಮದಲ್ಲಿ ವೈತ್ಯಾಸವಾಗಲಾರದು. ಆ ಬದಲಾವಣೆಯೂ ಹಲವು ಮುಖ್ಯ ವಿಷಯಗಳನ್ನು ಹೊಂದಿದೆ. ಬ್ರಿಟನ್ನು, ಕಾಂಗ್ರೆಸಿನ ಆ ಬೇಡಿಕೆಯಂತೆ ಪೂರ್ಣವಾಗಿ —ಕಾಂಗ್ರೆಸಿಗಾಗಿಯಲ್ಲ, ಭಾರತದ ಸಲುವಾಗಿ— ಭಾರತದ ವಿಷಯ ಅನುಸರಿಸಿದರೆ ಅದೇ ಮಹತ್ವದ ಒಂದು ಅಂತರ್ರಾಷ್ಟ್ರೀಯ ಘಟನೆಯಾಗಿ ಜಗತ್ತಿನ ನೀತಿಯನ್ನು ಬದಲಾಯಿಸುವುದು. ಅಷ್ಟಾದರೆ ಎಷ್ಟೋ ಆತಂಕಗಳು ಕಡಿಮೆಯಾಗಿ ಮಿತ್ರರಾಷ್ಟ್ರಗಳ ಬಗ್ಗೆ ಸಹಾಯ ನೀಡಲು ಅನುಕೂಲವಾಗುವುದು. ಆಗ ಬ್ರಿಟನಿಗೆ ಭಾರತವು ಹೀಗೆ ವಂಚಾಮೃಷ್ಟಾರಿಯಾಗಿ ಸಹಾಯನೀಡಬಹುದೆಂಬ ವಿಚಾರವನ್ನು ಭಾರತದ ಪ್ರತಿನಿಧಿಗಳೇ ನಿರ್ಧರಿಸಬೇಕಾಗುವುದು. ಸದ್ಯಕ್ಕೆ ಸಹಜವಾಗಿ ಭಾರತೀಯರಿಲ್ಲರೆ ಮುಂದಿರುವ ಸಮಸ್ಯೆಯು ಭಾರತದ ರಕ್ಷಣೆಯಾಗಿದೆ."

'ವೈಸರಾಯರ ವಿಸ್ತೃತ ಕೌನ್ಸಿಲಿನಿಂದ ಸರಕಾರವನ್ನು ಭಾರತೀಯವಾಗಿ ಮಾಡಿದಂತಾಗಿದೆಯೆಂಬ ವಿಷಯವು ನನಗೆ ಹೊಳೆಯುವುದಿಲ್ಲ. ಸರಕಾರವಾಗಲಿ ಸೈನ್ಯವಾಗಲಿ ಭಾರತೀಯವಾಗಿಲ್ಲ. ಬಿಟಿಷರ ಸೈನ್ಯ ಬ್ರಿಟಿಷ್ ರದಾಗಿದೆಯೆಂಬ ವಿಷಯ ಮಾತನಾಡುವುದಲ್ಲ. ಯಾವುದೇ ರಾಷ್ಟ್ರದ ಸೈನ್ಯ ಆ ರಾಷ್ಟ್ರದ್ದಾಗಬೇಕೆಂಬುದನ್ನು ನಾವು ಮಾತನಾಡುವುದು. ಅಧಿಕಾರವು ವಿದೇಶೀಯರಿಂದ ಸ್ವದೇಶೀಯರಿಗೆ ಬರಬೇಕೆಂದು ಹೇಳುವುದು. ಆದ್ದರಿಂದ ಭಾರತೀಯವಾಗಿ ಮಾಡುವುದು ನಮ್ಮ ಗುರಿಯಲ್ಲ. ಅಧಿಕಾರವೂ ನಮ್ಮ ಕೈಗಿರಬೇಕು; ಅಧಿಕಾರವನ್ನು ನಮ್ಮ ಹಿತದಲ್ಲಿ ತರುವ ಅಧಿಕಾರ ಬರಬೇಕು ಎಂಬುದು ನಮ್ಮ ಧ್ಯೇಯ. ವೈಸರಾಯರ ವಿಸ್ತೃತ ಕೌನ್ಸಿಲಿನಲ್ಲಿ, ವೈಸರಾಯರಿಗೆ ಬೇಕಾದ ಭಾರತೀಯರಿದ್ದರೆ ಅದರಿಂದ ಅಧಿಕಾರದ ಬದಲಾವಣೆಯಾಯಿತೆಂದು ಅರ್ಥವಾಗುವುದಿಲ್ಲ.

"ಜನಾಬ್ದಾರೀ ಪಾರ್ಲಿಮೆಂಟ್ ಇಲ್ಲದೆ ಪಾರ್ಲಿಮೆಂಟ್ ಕಾರ್ಯಕ್ರಮವೂ ಪ್ರಯೋಜನವಿಲ್ಲ. ಕೇಂದ್ರ ಶಾಸನ ಸಭೆಗೆ ಹೋಗುವುದು ಅಲ್ಲಿ ಭಾಷಣಮಾಡುವುದು, ಪ್ರಶ್ನೆ ಕೇಳುವುದು ಇದರಿಂದೆಲ್ಲಾ ಪಾರ್ಲಿಮೆಂಟರಿ ಕಾರ್ಯಕ್ರಮವು ಸಿದ್ಧಿಸಂತಾಗುವುದಿಲ್ಲ. ಅಂತಹ ಕುಲ್ಲಕ ಮಾತಿಗೆ ನಾವು ಮರುಳಾಗಬಾರದು. ನನಗೆ ಇದೆಲ್ಲಾ ಕುಲ್ಲಕ ವಿಷಯವೆಂದು ತೋರುತ್ತದೆ; ಕಾಂಗ್ರೆಸಿನ ನೀತಿಗೆ ಇಂದೀಗ ಸಂದರ್ಭದಲ್ಲಿ ಸರಿಯಾದುದಲ್ಲವೆನಿಸುತ್ತದೆ."

"ಭಾರತವು ಒಳ್ಳೆಯ ಕಾರ್ಯಕ್ಕಾಗಿ ತನ್ನ ಶಕ್ತಿಸಾಮರ್ಥ್ಯಗಳನ್ನು ವ್ಯಯಿಸಬೇಕೆಂದು ನಾನಿಚ್ಛಿಸುತ್ತೇನೆ. ನಾನೀಗ ಯುದ್ಧಮಾಡುತ್ತಿರುವ ಪ್ರಬಲ ರಾಷ್ಟ್ರಗಳಲ್ಲಿ—ಎರಡೂ ಕಡೆಗಳ—ಲೋಕ ಅಕ್ಷಮಣ ಬುದ್ಧಿಯಿದೆಯೆಂದು ತಿಳಿದಿರುವೆನು. ಹಿಟ್ಲರನಲ್ಲಿ ಇದು ಖಂಡಿತವಾಗಿದೆ. ಇತರ ಪಕ್ಷದವರು ಹಾಗೆಂದು ನಿಶ್ಚಯಗೊಳಿಸಿಲ್ಲ. ಜಗತ್ತನ್ನು ಅಕ್ರಮಿಸಬೇಕೆಂದು ಯಾವುದೇ ರಾಷ್ಟ್ರ ಆಕಾಂಕ್ಷಿಸುವುದಾದರೂ ಅದು ಅನ್ಯಾಯ ಮತ್ತು ಅಹಿತವಾದುದು; ಅದನ್ನು ಹೇಗಾದರೂ ಇದಿರಿಸಲೇಬೇಕು."

"ಈಗ ಹೋರಾಡುತ್ತಿರುವ ರಾಷ್ಟ್ರಗಳ ಗುಂಪನ್ನು ನಾವು ಆಲೋಚಿಸುವ. ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ರಶ್ಯ, ಬ್ರಿಟನ್ನು, ಅಮೆರಿಕ, ಚೀನಗಳು ಕೂಡಿವೆ. ಇವುಗಳೊಳಗೂ ಅನೇಕ ವಿರುದ್ಧಗಾಮಿ ಧೋರಣದವುಗಳಿವೆ. ಬ್ರಿಟನು ಭಾರತದ ಕುರಿತು ಅನುಸರಿಸುವ ಧೋರಣೆಯನ್ನು ಯೋಚಿಸಿದರೆ ನಮಗೆ ಅನುತಿಳಿಯದಿರದು. ಆದರೂ ಚೀನ ರಶ್ಯದಂತಹ ಪ್ರಗತಿವರ ರಾಷ್ಟ್ರಗಳ ಬೆಂಬಲ ನಿಂತ ಪರಗಡಕ್ಕೆ ನಾವು ಜಯವನ್ನು ಹಾಲೈಸಬೇಕಾಗಿದೆ. ಈ ಸಂದರ್ಭದಲ್ಲಿ ನಾವು ವಿಶಾಲ ದೃಷ್ಟಿಯನ್ನು ಅನುಸರಿಸಬೇಕು."

The Canara Banking Corporation Ltd.

(Incorporated in British India)

Estd. 1906.

With effect from 1—11—1941 the following will be rates of interest on Deposits:

	FIXED	
3 MONTHS	....	2½% P. A
6 - do -		2¾% "
9 - do -		3% "
12 - do -		3¼% "
24 - do -		3½% "
SHORTTERM		2% "

ನೋಟುಗಳು....

ದಕ್ಷಿಣಕನ್ನಡ ಪರಿಷತ್ತುಗಳ ತಿಂಗಳು. ಪ್ರತಿನಿಧಿಗಳು, ಪ್ರೇಕ್ಷಕರು, ಅಧ್ಯಕ್ಷರು, ಕಾರ್ಯದರ್ಶಿಗಳೂ ಊರಿಂದೂರಿಗೆ ಓಡಾಡುವ ಕೋಲಾಹಲದ ಕಾಲವಿದು.

* * *

ಹೈದರಾಬಾದಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು; ಲಕ್ಷ್ಮೇಶ್ವರದಲ್ಲಿ ಪಂಪನ ಸಹಸ್ರಸಾಂವತ್ಸರಿಕೋತ್ಸವ; ಧಾರವಾಡದಲ್ಲಿ ವಿದ್ಯಾವರ್ಧಕ ಸಂಘದ ಸುವರ್ಣೋತ್ಸವ! 'ಕನ್ನಡದ ಬಾವುಟ' ಮೈಸೂರಲ್ಲಿ ಹಾರಾಡುತ್ತಾ ಕನ್ನಡಿಗರನ್ನು ಈ ಎಲ್ಲಾ ಉತ್ಸವಗಳಿಗೂ ಬಸ್ಸಿರೆಂದು (ಅಥವಾ ಹೋಗಿರೆಂಬ) ಕರೆಯುತ್ತಿದೆ! ಅಧ್ಯಕ್ಷರೂ, ಪ್ರತಿನಿಧಿಗಳೂ, ಪ್ರೇಕ್ಷಕರೂ, ಕಾರ್ಯದರ್ಶಿಗಳೂ ಎಲ್ಲಲ್ಲಿಗೆ ಪ್ರಿಡಾಡಲು ಹಾತೊರೆದಿದ್ದಾರೆ. ಟಿಕೆಟು ತೆಗೆದು ಕೊಡುವರಿಲ್ಲದೆ ಮ್ಲಾಕ್ ಹಲವರು ಕಂಗೆಟ್ಟಿದ್ದಾರೆ!

* * *

ಅಖಿಲ ಕರ್ನಾಟಕದಲ್ಲಿ ಕೇವಲ ಮೂರು ಪರಿಷತ್ತುಗಳು; ಅದೂ ಕೂಡ ಇನ್ನು ಮುಂದೆ ಮಾತ್ರ ಆಗಲಿರುವವಾದರೆ, ನಮ್ಮ ದಕ್ಷಿಣ ಕನ್ನಡದಲ್ಲಿ ಇಷ್ಟರಲ್ಲಿಯೇ ಮೂರು ಪರಿಷತ್ತುಗಳು ಸೇರಿಹೋದವು. ಅಧ್ಯಕ್ಷರು, ಪ್ರತಿನಿಧಿಗಳು, ಪ್ರೇಕ್ಷಕರು, ಕಾರ್ಯದರ್ಶಿಗಳು ಓಡಾಡಿದ್ದು ಮಾತ್ರವಲ್ಲದೆ, ಭಾಷಣಗಳ ಮತ್ತು ತರಾವುಗಳ ಸುರಿಮಳೆಯೇ ಪತ್ರಿಕೆಗಳಲ್ಲಿ ಪ್ರವಹಿಸಿಬಿಟ್ಟಿತು! ಧಶಕ್ಕೂ ಕಿಂಗಳ ಅರ್ಧ ಇನ್ನೂ ದಾಟಿದಷ್ಟರಲ್ಲಿ ಇಷ್ಟರಲ್ಲಿಯೇ ಹೀಗೆ ನಮ್ಮಲ್ಲಿ ಪರಿಷತ್ತುಗಳ ಕೋಲಾಹಲವಾಗಿರುವಾಗ ಇನ್ನುಳಿದರ್ಧ ತಿಂಗಳಲ್ಲಿ ಇನ್ನೆಷ್ಟು ಆಗಲಿರುವುದೋ ನೋಡಬೇಕು.

* * *

ಡಿಸ್ಟ್ರಿಕ್ಟ್ ಬೋರ್ಡ್ ಉದ್ಯೋಗಿಗಳ ಪರಿಷತ್ತು ಕಾರ್ಕಳದಲ್ಲಿ ಕೂಡಿತು. ನುಸಿಳೆಯರ ಪರಿಷತ್ತು ಮಂಗಳೂರಲ್ಲಿ ಸೇರಿತು. ಸಹಕಾರಿಗಳ ಪರಿಷತ್ತು ತರುವಾಯ ಕಾರ್ಕಳದಲ್ಲಿ ಗೋಮಟೇಶ್ವರನ ಸನ್ನಿಧಿಯಲ್ಲಿಯೇ ನಡೆಯಿತು.—ಜಿಲ್ಲೆಗೆ ಒಂದೇ ಇರುವ ಡಿಸ್ಟ್ರಿಕ್ಟ್ ಬೋರ್ಡಿನ ಉದ್ಯೋಗಿಗಳೂ ಒಂದು ಪರಿಷತ್ತು ಮಾಡಿಬಿಟ್ಟರೆಲ್ಲ ಜಿಲ್ಲೆದಿ ಎರಡು ಮುನ್ಸಿವಾಲಿಟಿಗಳಿರುವಾಗ ಅದರ ಉದ್ಯೋಗಿಗಳು ಬಂದು ಮನಸ್ಸು ಮಾಡಲಾರರೆಂದು ಹೇಗೆ ಹೇಳುವುದು? ಮಹಿಳೆಯರೂ ಹೀಗೆ ಪರಿಷತ್ತು ಕೂಡಿಸಿರುವಾಗ ನಮ್ಮ ಜಿಲ್ಲೆಯಲ್ಲಿ ಇನ್ನು ಮುಂದೆ ಮಹಾನೀಯರಿರುತ್ತಾ ತಮ್ಮ ವರಿಷತ್ತೊಂದನ್ನು ಕರೆಯಲಾರರೆ? ಅನಹಕಾರ ಚಳವಳಿಯಲ್ಲಿ ಮುಂದಾಳುತನ ವಹಿಸಿ 'ಕೀರ್ತಿಶೇಷ'ವಾದ ನಮ್ಮ ಜಿಲ್ಲೆಯಲ್ಲಿಯೇ ಹೀಗೆ 'ಸಹಕಾರಿ' ಪರಿಷತ್ತು ಸೇರಿಬಿಟ್ಟ ಮೇಲೆ ಅಸಹಕಾರಿಗಳು ತಮ್ಮ ಪರಿಷತ್ತೊಂದನ್ನು ಕೂಡಿಸದಿದ್ದರೆ ಅವರು ಬದುಕಿದ್ದು ವೃಥಾಗಾಲಿಕ್ಕೆಲ್ಲವೆ?

* * *

[ಇನ್ನೂ ಕೆಲವನ್ನು ನೋಡಿ]

...ಕೊಟ್ಟು ಇಳಿಯಲು ಇನ್ನೂ ಸಮಯವಿದ್ದುದರಿಂದ ಬೇಗುಲದ ಒಳಭಾಗವು ಮೆಲ್ಲಮೆಲ್ಲನೆ ನಮಗೆ ಗೋಚರವಾಯಿತು. ಇದರಲ್ಲಿ ಮಾರುತಿಯ ವಿಗ್ರಹ; ಬಲಿಯಲ್ಲಿ ಉರಿವ ಹಣತೆಗಳಿರದು, ಹಣತೆಯ ಪ್ರಕಾಶವು ಮಂದವಾಗಿದ್ದರೂ, ದಿನದ ಬೆಳಕೂ ಹಣತೆಯೂ ಸೇರಿ ಒಂದು ಬಗೆಯಲ್ಲಿ ದೇಗುಲವನ್ನು ಬೆಳಗಿಸಿದ್ದವು. ಮಾರುತಿಯ ವಿಗ್ರಹವು ನೋಡಲು ಸುಂದರವಾಗಿದ್ದರೂ ಎಷ್ಟೋ ವರ್ಷಗಳಿಂದ ಉಪಾಸಕರಿಲ್ಲದೆ ಧೂಳು ತುಂಬಿ ಭಯಂಕರವಾಗಿ ಕಾಣುತಿತ್ತು.

ಚೆನ್ನಾಗಿ ಉಬ್ಬಿದ ದೇಹ, ವಿಶಾಲವಾದ ಕಣ್ಣುಗಳು, ಬೂದಿಯಿಂದ ನರೆತ ಕೂದಲು, ಮಾರುದ್ದ ಗದ್ದದಿಂದಲಂಕೃತವಾದ ವ್ಯಕ್ತಿಯೊಂದು ಧ್ಯಾನಸ್ಥನಾಗಿ 'ಉಳಿತಿದ್ದಂತೆ ತೋರಿತು. ಬಲಗೈಯಲ್ಲಿ ತುಳಸೀಮಣಿ ಮಾಲೆಯನ್ನು ತಿರುಗಿಸುತ್ತಿರುವುದೂ ಕಂಡುಬಂತು. 'ಹಿಂದೆ ಭಗೀರಥನಾದರೂ ಇಷ್ಟು ಧ್ಯಾನಸ್ಥನಾಗಿರಲಿಲ್ಲವೆಂದು ನನ್ನೆ ನಂಬುಗೆ' ಎಂದು ಗೋಪುವು ಮೆಲ್ಲಗೆ ಗುರುಹಿದನು. ಎಡಗೈಯಲ್ಲಿ ಏನೋ ಮಂತ್ರಿದಂತೆ ತೋರಲು ಕೈಗಡಿಯಾರವೊಂದನ್ನು ಸಿಕ್ಕಿಸಿಕೊಂಡಿದ್ದುದು ತೋರಿತು. ಸಾಧುಗಳೂ 'ನಾಗರಿಕ' ರಿದ್ದರೆಂದು ಯೋಚಿಸಿದೆ. ಫೆಳ್ಳನೆ ಗಡಿಯಾರ ನೋಡಿ 'ಅಂಬೇ-ಜೈ ಗೋಪಾಲ!' ಎಂದು ಬಾಯಿಬಿರಿದು ನುಡಿದರು. ನುಡಿಯು ಗರ್ಜನೆಯಂತೆ ಕೇಳಿತು. ಇದರೆ ಅವರು 'ಅಂಬೇ' ಎಂದು ಹೇಳಲು ಕಾರಣವೇನಿರಬಹುದು? ಯೋಚಿಸು ಘಾಗಲೇ ಅವರೆ ಹೇಳಿದುದು 'ಅಂಬೇಯೆಂದಲ್ಲ; 'ಓಂ' ಎಂದು ಹೊಳೆಯಿತು. ದೇಗುಲದಲ್ಲಿ ಅವರ 'ಓಂ' ಮಾರ್ದನಿಯಾಗಿ 'ಅಂಬೇ' ಯೆಂದು ನಮಗೆ ವಿಚಿತ್ರವಾಗಿ ಕೇಳಿಬಂದು ಅಳ ಳ ಸ್ವರವೆಂದು ನಾವು ಭಾವಿಸಿದರೆ ಅದು ನಮ್ಮ ತಪ್ಪೇ?

ಕೂಡಲೇ ಕೂಸಯ್ಯ ಒಳಗೆ ಬಂದು ಉದ್ದಂಡ ಬಿದ್ದು 'ರಾಜನ್, ನಿನ್ನ ಹೇಳಿದ ಆಂಕೆ ತಪ್ಪಾಯಿತಲ್ಲ?' ಎಂದು ಕೇಳಿಕೊಂಡನು. 'ಜೈ ಗೋಪಾಲ್-ರಾಧೇ ಶ್ಯಾಮ್, ಪ್ರಾಯಶಃ ನಿನ್ನ ಆ ಶ್ರೀಮಂತರಾಯರು ಇನಗೆ. ಮೇಸಾಮಾದಿರ ಭಾಹುದು. ಇಂದು ಆರನೇ ಆಂಕೆಗೆ ಕೈಯಿಟ್ಟು ಬಿಡು; ಶ್ರೀಣಯ್ಯನವರಲ್ಲಿ ಹಣಕಟ್ಟು ಬಿಡು; ದೇವರಿದ್ದಾನೆ-ಜೈ ಗೋಪಾಲ್!' ಎಂದು ತಟ್ಟನೆ ಪಿಟ್ಟಾಗಿ ನುಡಿದು ಸಾಧುಗಳು ಕಣ್ಣು ಮುಚ್ಚಿ ದೇವತಾಸ್ತೋ ಇಲ್ಲವೋ ನೋಡಕುಳಿತರು.

ಶ್ರೀಣಯ್ಯನವರು ಭಾರೀ ಬಲ್ಯೆಯವರೆಂದೂ ಆರನೇ ನಂಬರಿಗೆ ಅವರಲ್ಲೇ ಹಣ ಸುರಿದರೆ ದೇವರಿದ್ದಾನೆಂದೂ ಎಷ್ಟೋ ಜನರಿಗೆ ಸಾಧುಗಳು ಬಹಳ 'ಸಾಧುಗಳಾಗಿ' ಅಂದು ಹೇಳಿದರು. ಆದರೆ ಶ್ರುತಿಯೊಬ್ಬರೂ ಗುಟ್ಟಾಗಿರಬೇಕೆಂದೂ ಯಾರೊಡನೆಯೂ ಈ ಪ್ರಸ್ತಾಪವನ್ನೆತ್ತಕೂಡದೆಂದೂ ಕಟ್ಟಪ್ಪಣೆಯಾಯಿತು. ನಾಗವೇಣಿ, ಸಿದ್ಧವ್ವ, ಸಾವಿತ್ರಿ, ಇವರೆಲ್ಲರಿಗೂ ಮೆಲ್ಲನೆ ಚೀಲವು ಅರಸಂಕೆಯಲ್ಲಿ ಶ್ರೀಣಯ್ಯನವರಿಗಾಗಿ ಸುಳಿಯುತ್ತಿದ್ದಾನೆಂದೆ ಬಹಳ ಗಂಭೀರವಾಗಿ ತಿಳಿಯಹೊಡಿಸಿದರು. ನಾಗವೇಣಿಗೆ ಇದ್ದಕ್ಕಿದ್ದಂತೆ ಮನೆಯಂಗಳದಲ್ಲಿ ಕೊಪ್ಪರಿಗೆಯೊಂದು ಎದ್ದು ಬ್ರಂದಂತಾಯಿತು! ಸಿದ್ಧವ್ವಗೆ ನೆರೆಕೆಯು ಗೋವುಗಳ ಹಾಲೆಲ್ಲ ಜಕ್ಕಿಹೋಗಿ ತನ್ನ ಆಕಳಲಿ ಸೇರಿಕೊಂಡು ಹಾಲು ತುಂಬಿ ಉಕ್ಕಿ ಉಕ್ಕಿ ಬಂದಿ ಹಾಗೆ ಕನಸು ಬಿದ್ದಂತಾಯಿತು. ಉಳಿದವರಿಗೂ ಏನೇನೋ ತೋರಿರಬಹುದು.

ಎಲ್ಲರೂ ದೇಗುಲವನ್ನು ಬಿಟ್ಟು ಹಿಂತಿರಳಿದರು. ಸಾಧುಗಳ ಮುಂದೆ ಹಣ್ಣುಕಾಯಿಗಳ ರಾಶಿಯೇ ರಾಶಿ. ಅವರು ಪೀಲ್ಗಳ್ಳುವುದರಿಗೆ ಶ್ರೀಣಯ್ಯನವರು ಮೆಲ್ಲನೆ ಚೋರನಂತೆ ಒಳಹೊಕ್ಕು ಸಾಧುಗಳ ಬಳಿ ನಿಲ್ಲುತ್ತಿರು. 'ಊಂ, ಇವಿನ-ಸಬಲರಾಯ ಬಹಳ ಹೆಚ್ಚಾಗಿ ಕಿಟ್ಟಿದೆ. ಇರಲಿ, ನೀವು ಅರು ನಂಬರಲ್ಲೇ ದುಡ್ಡು ಸುರಿಯಬೇಕೆಂದು ಖರಿಯಾಗಿ ಹೇಳಿದ್ದೀರಲ್ಲ? ಇಲ್ಲಾದರೆ ಕಾರ್ಯಕ್ಕೆ ಎಲ್ಲಿಯವರೆಗೂ ನೋಳಕಾಗಿದರೆ ಈ ತಂಗಿನಕಾಯಿಯಿಂದ ನಿಮ್ಮ-' ಎಂದು ಕಿಟ್ಟಿಸುವವರಂತೆ ನಟಿಸಿ ತಂಗಿನಕಾಯಿಯನ್ನು ತೆಗೆದುಕೊಳ್ಳಲೆ-ಸಾಧುಗಳು ನಡುವೆ ಬಾಯಿ ಹಾಕಿ 'ನಾನೇನು ಮೋಕ್ಷಕ್ಕೆ ಹೋಗಲು ಹೊರಟಿರುವೆನೆಂದು ಭಾವಿಸಿದ್ದೀರೇನೆ? ನನಗೂ ಜೀವನವಾಸೆಯಲ್ಲವೇನೇ? ನೀವೇ ನನ್ನನ್ನು ಈ ವರೆಗೆ ಸಲಹಿದ್ದವರು; ಹಾಗೆಲ್ಲ ನಿಮ್ಮ ಉಪಕಾರ ಮರೆತು ನಿಮಗೆರಡು ಬಗೆಯಲಾರೆನು-ಜೈ ಗೋಪಾಲ್' ಎಂದು ಸುಮ್ಮನಾದರು. 'ನೀವು ನನ್ನ ಮುಂಡೆ 'ಜೈ ಗೋಪಾಲ್' ಹೇಳಬೇಡಿ. ಒಮ್ಮೆ ಮ್ಮೆ ನನಗೆ ವಿತ್ತ ಕದಡುವುದುಂಟು' ಎಂದು ಒತ್ತಿ ಹೇಳಿ 'ಹಣ್ಣುಕಾಯಿ ರಾಶಿಯನ್ನು ನಾನು ಅಂಗಡಿಗೆ ಸಾಗಿಸುವ ವಿಲವಾರಿ ಮಾಡುತ್ತೇನೆ. ನೀಕಡಾ ತಿಂಗರಂತೆ ಕೊಡಿಲು ನಾನು ಸಿದ್ಧನಿದ್ದೇನೆ. ನಿಮ್ಮ ಪೂಜಾ ಕಮಿಶನ್ ನಾಳೆಯೇ ಸಿಗುವುದು; ಎಷ್ಟು ಜನರು ಅರನೇ ನಂಬರಿಗೆ ಬೀಳುತ್ತಾರೆಂದು ನೋಡಬೇಕಲ್ಲ! ಏಲ್ಲಿ ರಿಸ್ಪ್ ವಾಜ್ ಹಿಂದೆ ಕೊಡಿ ಈಗ ನಿಮಗದು ಅಗತ್ಯವಿಲ್ಲ' ಎಂದು ಇಸುಕೊಂಡು 'ಜೈ ಗೋಪಾಲ್' ಪ್ರಹಾರ ಹಾಕಿ ಶ್ರೀಣಯ್ಯನವರು ದೇಗುಲದಿಂದ ಮರೆಯಾದರು.

'ಜೈಗೋಪಾಲ್-ರಾಧೇ ಶ್ಯಾಮ್' ಸಾಧುಗಳು ಶ್ರೀಣಯ್ಯನವರ ಕಮಿಷನ್ ಏಜಂಟರೆಂದು ತಿಳಿದಾಗ ನಮಗೆ ತಲೆತಿರುಗಿ ಆಯೆತಿಪ್ಪು ನಾವಿಬ್ಬರೂ ಸಾಧುಗಳ ಇದಿರಿಗೇ ಬಿದ್ದೆವು. ಅಯಂತಪ್ಪಿ ಬಿದ್ದುದರಿಂದ ನಾವು ಬೆಟ್ಟಿಬಿದ್ದೆವು; ಅದರೂ ಧೈರ್ಯಗೊಂಡು ನಾವು ಎದ್ದು ನಿಂತೆವು ಹಣ್ಣುಕಾಯಿಗಳ ವಿಲವಾರಿಯಾಗುವ ನೊದಲೇ ಹನಿದಿದ್ದ ಸಾಧುಗಳು ಕೆಲವೆ ಹಣ್ಣನ್ನು ಸುಂಗುವ ಯೋಜನೆ ನಡಿಸಿದ್ದರು. ನಾಲ್ಕಾರು ಹಣುಗಳು ಹೊಟ್ಟೆಯೊಗೆ ಹೋದಾಗ ಸಾಧುಗಳಿಗೆ ನಾವಲ್ಲಿ ನಿಂತುಕೊಂಡ ಸಮಚಾರ ತೋರಿತು. 'ಭೂತ-ಭೂತ' ಎಂದು ಬೊಬ್ಬಿಟ್ಟು ಸಾಧುಗಳು ತತ್ತರಿಸಿದರು. ಬಾಯಿಯೊಳಗಿದ್ದ ಬಾಳೆಹಣವನ್ನು ಗಾಬರಿಯಿಂದ ನುಂಗಿಬಿಟ್ಟರು. ಸಾಧುಗಳಿಗೆ ಗಾಬರಿಯಾದರೆ ಹಣ್ಣಿಗೇನು ಬಂತು? ಅದು ಗಂಟಲಲ್ಲಿ ನಿಕ್ಕಿಕೊಂಡಿತು. ಗೋಪುವಿಗೆ ಕೋಪ ಬಂದು ಕಾಯಿಯಂದ ಅವರ ತಲೆ ಬಡಿಯಲು ಕೈಯನ್ನೆತ್ತಿ ಕ್ಷಿಪ್ತನು. ಸಾಧುಗಳು ಬೆಟ್ಟಿ ಬಿದ್ದುದರಿಂದ ಯಥಾಸ್ಥಾನಕಾಪಾಗಿ ಹಣ್ಣು ಇದ್ದಕ್ಕಿದ್ದಂತೆಯೇ ಹೊಟ್ಟೆಯೊಳಗೆ ನೇರಿಕೊಂಡಿತು.

'ನೀವು ನಿಜವಾದ ಸಂಗತಿಯನ್ನು ಹೇಳಿ; ಇಲ್ಲವಾದರೆ ನಿಮ್ಮ ತಲೆಬುರುಡೆಯು ಹೋಳಾಗುವುದು' ಎಂದು ಬೆದರಿಕೆ ಹಾಕಿದೆವು. ತೀಕ್ಷ್ಣವಾಗಿ ನಮ್ಮನ್ನು ನೋಡುತ್ತಾ ಬಳಿಯಿದ್ದ ತ್ರಿಶೂಲಕ್ಕೆ ಕೈಹೊಟ್ಟು 'ನೀವು ಈಗ ಇಲ್ಲಿಂದ ನಡೆಯುತ್ತೀರೋ ಇಲ್ಲವೆ' ಎಂದು ಮುಂಬನವರಿಸುವರೊಳಗೆ ನಾವು 'ಭಸ್ಮ ಮಾಡಬೇಕೋ; ತ್ರಿಶೂಲದಿಂದ-ಇರಿಯಬೇಕೋ? ಶಾಪ ಕೊಡಬೇಕೋ? ಯಾವುದೂ ಉಪಯೋಗವಲ್ಲ. ಭಸ್ಮ ಮಾಡಿದರೆ ನಾವು ಭೂತಗಳಾಗಿ ನಿಮ್ಮ ಬೆನ್ನ ಹಿಂದೆ ತಿರುಗುವೆವು; ತ್ರಿಶೂಲದಿಂದ ಇರಿಯುವ ಸಾಹಸಕ್ಕೆ ಹೋಗಬೇಡಿ; ಕೈ ಸಾಗದು, ಶಾಪ ಕೊಟ್ಟರೆ ನಾವು ನಿಮ್ಮನ್ನು ಇಲ್ಲೇ ಘಾಸೀಕೊಟ್ಟು ಬಿಡುವ ಯೋಜನೆ ನಡಿಸಿದ್ದೀಕೆ. ನಿಮ್ಮ ನಿಜವಾದ ಸ್ಥಂಗತ್ತುಯನ್ನು ಕೂಲಂಕಷವಾಗಿ ತಿಳಿಸಿ ಬಿಡಿ' ಎಂದು ಬಲಾತ್ಕರಿಸಿದೆವು.

ಸಾಧುಗಳು ಇಳಿಯುವುದಿಲ್ಲವೆಂದೂ ಮಿಗಲಿರಿನಲ್ಲಿ ಅವರನ್ನು ಇಳಿಸಿಕೊಂಡು ಒಂದು ಪಾಲು ಗುಡಿಯಲ್ಲಿರುವಂತೆ ಪ್ರೋತ್ಸಾಹಿಸಿದವರು ಶ್ರೀಣಯ್ಯನವರೆಂದೂ ಶ್ರೀಣಯ್ಯನವರು ಹೇಳಿದಂತೆ ವರ್ತಿಸಿದರೆ ಕೈತುಂಬಾ ಕಾಸೂ ಬರುವುದೆಂದೂ ಸಾಧುಗಳಿಗೆಲ್ಲಾ ಬೇಕಾದುದನ್ನು ಸಂತೈಸುವಾಗ ಹಣ್ಣುಕಾಯಿ ವಿಲೆವಾರಿಗೋಸುಗ ಕಿಟ್ಟಿಪ್ಪ ದೇಗುಲಕ್ಕೆ ಬಂದನು. ಕಿಟ್ಟಿಪ್ಪ ಗೋಪುವಿನ ಮೋರೆ ನೋಡಿಯೇ ಬೆಳುಚೇರಿದ. ಕಿಟ್ಟಿಪ್ಪನ ತಂದೆ ಸುಬ್ಬ ಗೋಪುವಿನಲ್ಲಿ ಮುಡಿಯುತ್ತಿದ್ದ. 'ಇಮ್ಮಡಿಸನ್ನು ಇದ್ದ ಹಾಗೆ ಹೇಳಿಂದು' ಕಿಟ್ಟಿಪ್ಪನಿಗೆ ನಡೆದ ಸಮಚಾರವನ್ನೆಲ್ಲಾ ತಿಳಿಸಿದೆವು. ಕಿಟ್ಟಿಪ್ಪನು ಕೂಡಲೇ ಶ್ರೀಣಯ್ಯನವರಿಗೆ ಬಹುಷ್ಕಾರ ಹಾಕಿ ನಡೆದ ಸಂಗತ್ಯಯನ್ನೆಲ್ಲಾ ಸವಿಸ್ತಾರವಾಗಿ ಹೇಳಿದನು. ದೇಗುಲದಿಂದ ಹಿಂತಿರಳಿದ ಗುಂಪು ಕೂಡಲೇ ಶ್ರೀಣಯ್ಯನವರಲ್ಲಿ ಹುಡ್ಡು. ಸುರಿದಿದೆಯೆಂದೂ ಆದರಲ್ಲೂ ನಾಗವೇಣಿ ತನ್ನ ಗಂಡನಿಗೆ ತಿಳಿಯದಂತೆ ೩೦ ರೂಪಾಯಿಗಳನ್ನೂ, ಸಿದ್ಧವ್ವ ದೇವದೆ ದಬ್ಬಿಯಿಂದ ತೆಗೆದು ೨೦ ರೂಪ್ಯಾಗಳನ್ನೂ ಏನೇ ಅರಿಕೆಗೆ ಶ್ರೀಣಯ್ಯನವರಲ್ಲೇ ಸುರಿದಿದ್ದಾರೆಂದೂ ಹೇಳಿದನು. ಶ್ರೀಧರರಾಯನು ಎಲ್ಲಿಂದಲೋ ಸುಳಿದುತಂದೆ. ೪೦ ರೂಪಾಯಿಗಳನ್ನು ಮಿಂಚಿನಂತೆ ಅವರಲ್ಲೇ ಸುರಿದು ಹೋಗಿದ್ದಾನೆಂದೂ ವದಂತಿ ಹಿಕ್ಕಿತು. ಸಾಧುಗಳನ್ನು ಮಂಗಳೂರಿನಿಂದ-ಹೊರಗೆ ಸಾಗಿಸಿ ಕೊಡುವ ಕೆಲಸ ಕಿಟ್ಟಿಪ್ಪನು ವಹಿಸಿಕೊಂಡನು.

ಆ ದಿನವೂ ಭೂಧರರಾಯನ ದೆಸೆಕೆಟ್ಟು ಹೋಯಿತು. ಆರರ ಬದಲಾಗಿ ೯ ಮೇಲೆ ಬಿತ್ತು. ಇಂಥತ್ತು ಚಿತ್ತಿನ್ನೆವಾಗ ಭೂಧರನಿಗೆ ಕೋಪ ಬಂತು. ಎಲ್ಲಿಯ ತನಕ ಬಂತು ಎಂದು ಹೇಳುವುದು ಅಸಾಧ್ಯ. ಆದರೆ ಅವನು ಛಂದೇ ಸವನಿ ಮೊಳಗೆಯಿಂದ ಕೆಳಜಾವಡಿಗೆ ಹಾರಿದ ವೇಗವನ್ನು ನೋಡಿದರೆ ತೋಪವು ಆಸಾಮಾನ್ಯವಾದುದೆಂದು ತೋರುವುದು. ಕೂಡಲೇ ಒಂದು ದೊಣ್ಣೆ ಹಿಡಿದುಕೊಂಡು ಈ ಸಲ 'ಸಾಧುಗಳ' ಬೇಟೆಗೆ ಹೊರಟನು. ಭೂಧರನು ಕಣ್ಣು ಕೆರಳಿಸಿ ರಸ್ತೆಯಲ್ಲಿ ಓಡುವಾಗ ನಾಟಕ ಸರುವಾದಂತಾಯಿತು! ಜನರ ಬೆನ್ಬೆಬೇ ಬೊಬ್ಬೆ. ಮೊಹಲೇ ಕಿಟ್ಟಿಪ್ಪ ಸಾಧುಗಳನ್ನು ಸ್ವೇಶಾನಿಳಗೆ ಕೊಂಡೊಯ್ದು ಅಲ್ಲಿ ಕಾಯುತಿದ್ದನು. ಜನರ ಕೋಲಾಹಲ; ಆದರಲ್ಲೂ ಭೂಧರನು ದೊಣ್ಣೆ ಹಿಡಿದುಕೊಂಡು ಸಾಧುಗಳನ್ನು ಹುಡುಕಿ ಬರುತ್ತಾನೆಂದು ತಿಳಿದಾಗಂತೂ ಸಾಧುಗಳು ರೈಲು ನಕ್ಕಿತರು. ಕಿಟ್ಟಿಪ್ಪನೂ ಜೀವವಾಸೆಯಿಂದ ಮಾಯವಾದನು. ರೈಲು ಹತ್ತಿ ಕುಳಿತುಕೊಳ್ಳುವುದಕ್ಕೂ ಭೂಧರ ಸ್ವೇಶನಿನೊಳಗೆ ಹೋಗುವುದಕ್ಕೂ ಸರಿಯಾಯಿತು. ಅವಸರದಲ್ಲಿ ಸಾಧುಗಳು ಬಾಗಿಲು ಹಾಕಿಕೊಳ್ಳಲು ಹೋಗುವಾಗ ಭೂಧರನು ದೊಣ್ಣೆ ಬೀಸಿಬಿಟ್ಟ; ಬೀಸಿದ ದೊಣ್ಣೆ ಬಾಗಿಲಿಗೆ ತಾಗಿತು. ಕೂಡಲೇ ಅವರು ಅದನ್ನು ಬಲವಾಗಿ ಹಿಡಿದುಕೊಂಡರು. ರೈಲು ಸಮಯಕ್ಕೆ ಚಲಿಸಲಂತೆಂಬಿಸದೂ ಇಬ್ಬರೂ ದೊಣ್ಣೆಯನ್ನು ಎಳೆಮುಕೊಳ್ಳುತ್ತಿದ್ದರು. ರೈಲಿನ ವೇಗ ಹೆಚ್ಚಿತೆಂದು ತಿಳಿದೊಡನೆಯೇ ಸಾಧುಗಳು ದೊಣ್ಣೆಯನ್ನು ಬಂಡೇ ಸವನಿ ಬಿಟ್ಟುಬಿಟ್ಟರು. ಭೂಧರನು ದೊಣ್ಣೆ ಸಮೇತ ಪ್ಲಾಟ್‌ಫಾರ್ಮಿನ ಮೇಲೆ ಬಿದ್ದು ಬಿಟ್ಟನು. ಬಂಡಿ ಮುಂದೆ ಹೋಗುವಾಗ ಸಾಧುಗಳು ಉಗ್ರನಾಗಿ 'ಜೈ ಗೋಪಾಲ್' ಎಂದು ಹೇಳಿದರು.

ಭೂಧರನಿಗೆ ತುಂಬಾ ನಾಚಿಕೆಯಾಯಿತು. ಸಾಧುಗಳ 'ಜೈ ಗೋಪಾಲ್' ಕೇಳಿದ ಮೇಲಂತೂ ಕೋಪ ಹೆಚ್ಚಿತು. ತಕ್ಷಣ ಶ್ರೀಣಯ್ಯನವರ ನೆನಪೂ ಆಯಿತು. ಮಿಂಚಿನ ವೇಗದಲ್ಲಿ ಭೂಧರರಾಯ ದೊಣ್ಣೆ ಸಮೇತ ಶ್ರೀಣಯ್ಯನವರ ಆಗಮನದಿಗೆ ಓಡಿದನು.

ಇತ್ತ ಕೂಸಯ್ಯ ತಲೆಕೆಳಗಾಗಿ ಬಿದ್ದುದೇ ಮಿತ್ತು. ಚೀವಂತವಾಗಿ ಗಂಡನ ಕೈಗೆ ಸಿಕ್ಕರೆ ಬದುಕುವಂತಿಲ್ಲವೆಂದು ಭಯವಿಹ್ವಲಳಾಗಿ, ನಾಗವೇಣಿಯು ಬಾವಿಕಟ್ಟೆಯ ಹಗ್ಗ ತನ್ನ ಸೊಂಟಕ್ಕೆ ಸುತ್ತಿ ಪೆಲ್ಲುಮೆಲ್ಲನೆ ಬಾವಿಗಿಳಿದಳು. ಇಳಿಯುತ್ತಾ ಇಳಿಯುತ್ತಾ ಅಧೀರಳಾದಳು. ಅಧೀರಳಾದುದ್ದು ಚೀವಕ್ಕೆ ಉತ್ಪನ್ನವಾಯಿತು. ಹೀಗೆ ಬೇಕೋ ಬೇಡವೋ ಎಂಬ ಸ್ಥಿತಿಯಲ್ಲಿರಲು ಅವಳ ಗಂಡ ಬೆಳಿಗ್ಗೆ ಆಫೀಸಿಗೆ ಹೋದವನು ಚೀಲದಲ್ಲಿದ್ದ ರೂಪಾಯಿ ಕಾಣೆಯಾದುದನ್ನು ಕಂಡು ಮನೆಗೆ ಹಿಂತಿರುಗುವಾಗ ಕಿಟ್ಟಿಪ್ಪನಿಂದ ಎಲ್ಲಾ ಸಂಗತಿ ಕೇಳಿಕೊಂಡನು. ಭೂಧರನು ಶ್ರೀಣಯ್ಯನ ವರವನ್ನು ಹೆಮ್ಮಸಿಕೊಂಡು ಬಚ್ಚುತ್ತಿರುವುದನ್ನೂ ತಿಳಿದುಬಿಟ್ಟನು. ನಾಗವೇಣಿಯ ಗಂಡ ಬೇಗನೇ ಮನೆಗೆಹೋಗಿ ಹೆಂಡತಿಯನ್ನು ನಾಲಾರು ಸಲ ಕರೆದನು. ಒಮ್ಮೆ ಮಾತ್ರ ಯಾರೋ ಆ ಸ್ವಸ್ಥವಾಗಿ ಮಾತಾಡಿದಂತೆ ಕೇಳಿಸಿತು. ಅದಿಗೆ ಕೋಣೆಯಲ್ಲೆಲ್ಲಾದರೂ ಅವಿತುಕೊಂಡಿರಬಹುದೆಂದು ಯೋಚಿಸಿ ಒಳಗೆ ಹೋಗುವಾಗ ಬಾವಿಕಟ್ಟೆಯಲ್ಲಿ ಇಂದ್ರಜಾಲವಾಗುತ್ತಿರುವಂತೆ ತೋರಿತು. ಹಗ್ಗದ ಒಂದು ತುದಿಯು ರಾಟೆಯಿಂದ ನೇತಾಡುತಿತ್ತು. ಮತ್ತೊಂದು ತುದಿ ಬಾವಿಗೆ ಇಳಿದಿತ್ತು. ಕಾಣುತಿದ್ದ ತುದಿ ಒಮ್ಮೆ ಮೇಲಕ್ಕೆ ಹೋಗುವುದು; ಆಲ್ಲಿ ನಿಲ್ಲುತ್ತಾ ಪುನಃ ಕೆಳಗಿಳಿಯುವುದು; ಹೀಗೆ ಸುಮಾರು ಕಾಲು ಗಂಟೆ ಆಲ್ಲೇ ನಿಂತು ನೋಡಿದರೂ ಅವಳಿಗೆ ಹುಸಿಸ್ಸಿಗೆ ತೋರಲಿಲ್ಲ. ತಾನು ಎಚ್ಚರವಾಗಿದ್ದೇನೆಯೇ ಎಂದು ತಿಳಿಯಲು ತನ್ನನ್ನು ತಾನೇ ಚಿವುಟಿಕೊಂಡ. ಕೆಳಗೆ ಬಾವಿಗಿಣಿಕೆ ನೋಡಿದಾಗ ಅವನ ನಾಗವೇಣಿ ಅಲ್ಲಿರಲ್ಲಿಲ್ಲ. ಕೂಡಲೇ ಬಗ್ಗವನ್ನು ಬಲವಾಗಿ ಮೇಲಕ್ಕೆಕ್ಕಿತ್ತಲು ಸಿಂಗನಜೀವು ನಾಗವೇಣಿ ಮೇಲಕ್ಕೆ ಬಂದಳು. ಅವಳನ್ನೆತ್ತಿ ಪುನಃ ಬಾವಿಗೆ ಸೇರಾಗಿ ಜಿಸುವುದೋ ಎಂಬ ಶಂಕೆ ಹತ್ತಿತ್ತು. ಮನದಲ್ಲೇನೋ ಯೋಚಿಸುತ್ತಾ ನಾಗವೇಣಿಯನ್ನು ಒಳಗೆ ಕೊಂಡೊಯ್ದನು...

ಸಿದ್ಧವ್ವ ಹುಚ್ಚಳಂತಾದಳು. ಸಾಧುಗಳನ್ನು ಮನೆಸಾರೆ ಬೈದುದಲ್ಲದೆ ಶ್ರೀಣಯ್ಯನವರು ಸತ್ತೇ ಹೋಗಲೆಂದು ನಮ್ಮೋಣಿಯ ಭೂತಕ್ಕೆ ಥರಕೆ ಹೇಳಿಕೊಂಡಳು...

ಅತ್ತ ಶ್ರೀಣಯ್ಯನವರು ಇದ್ದಕ್ಕಿದ್ದಂತೆಯೇ ಮಾಯವಾದರು. ಭೂಧರರಾಯನು, ಏಕೆ, ಇದೀ ಊರವರೇ ಹುಡುಕಿದರೂ ಅವರ ಪತ್ತೆ ಸಿಗದೆ ಹೋಯಿತು. ಕೆಲವರು ಯೋಗಿಯಾಗಿ ಶ್ರೀಣಯ್ಯನವೆಂ ದೇಶಾಂತರದಲ್ಲಿ ತಲೆಮರೆಸಿರಬಹುದೆಂದೂ ಇನ್ನಾತರಾ ಹಾಂಡವರ ಗುಹೆಯಲ್ಲಿ ಅವಿತುಕೊಂಡಿರಬಹುದೆಂದೂ ಹೇಳುತ್ತಾರೆ. ದೇಶಾಂತರ ಪ್ರವಾಸಕ್ಕೆ ಹೋಗುವಾಗ ಅವರು ಎಲ್ಲಿರುವರೆಂದು ತಿಳಿಯಬಹುದೆಂದೂ ಕೆಲವರು ತಿಳಿಸುತ್ತಾರೆ. ಪಾಂಡವರ ಗುಹೆಯನ್ನು ನಾವಿನ್ನೂ ಶೋಧಿಸಿಲ್ಲ; ಕಾರಣ ಪಾಂಡವರ ಗುಹೆಯ ಒಳಗೆ ಹೋದವರು ಹೊರಗೆ ಜೀವಂತವಾಗಿ ಬಂದುದಿಲ್ಲವೆಂಬ ಮಾತನ್ನು ಕೇಳುವಾಗ ನಮ್ಮಲ್ಲಿ ಭೀತಿ ಹುಟ್ಟಿದೆ ಇದ್ದೀತೆ?

ಭೂಧರರಾಯನೂ ಬೇಸ್ತುಬಿದ್ದು ಅರಿಮರುಳನಂತಾಗಿ ಮುಂಚಿನ ಸೈಬರಿಯೆಲ್ಲ ಮಾಯವಾಗಿ ಸದ್ಧಾರಿ ಹಿಡಿದು ಕಾಡಲ್ಲಿ ತಿರುಗುತ್ತಾನಂತೆ!

ದಿನಗಳ ಮೇಲೆ ದಿನಗಳು ಉರುಳಿಹೋದರೂ ನಮ್ಮೋಣಿಯಲ್ಲಿ ಮುಸುಕಿದ ಮೋಡವಿನ್ನೂ ಮರೆಯಾಗಿಲ್ಲ.

ಸಾಧುಗಳೊಬ್ಬರು, ಊರಿನಿಂದ ಬೇರೆಯಾದರೂ ನಮ್ಮೋಣಿಯಲ್ಲಿ ಅಗತ್ಯವಿಲ್ಲವೆ ತುಂಬಿಕೊಂಡಿದ್ದ ಕಾವಿವೇಷಗಳನ್ನೂ ಮಾಯವಾಗಿಲ್ಲ. ಶ್ರೀಣಯ್ಯ ಕಾಣೆಯಾದರೂ ಜನಹಿತದ ದೃಷ್ಟಿಯಿಂದ. ಕಾಣೆಯಾಗಬೇಕಾಗುವವರು ಮತ್ತೆಷ್ಟು ಜನ ಇರುವರಲ್ಲವೆ?

HALFTONE & LINE
BLOCK MAKING
UNDERTAKEN
Sharada Press,
MANGALORE

ವಿನೋದ ಲೇಖನ

ನಮ್ಮೋಣಿಯಲ್ಲಿ 'ಬಿಡ್'

(ಲೇಖಾಂಕ ೬)

ಲೇಖಕಃ ರತ್ನಾಕರ, ಮಂಗಳೂರು.

ಪ್ರಿನ್ಸ್ ಆಫ್ ವೇಲ್ಸ್ ರಿಪಲ್ಸ್ ಹಡಗಗಳ ಜಲಸಮಾಧಿ!

ಜಪಾನು ಅಮೇರಿಕ ಬ್ರಿಟನುಗಳ ಮೇಲೆ ಯುದ್ಧ ಸಾರಿ ಸಯಾಮ್ ಫಿಲಿಪೈನ್, ಮಲಯಾ ಸಿಂಗಾಪುರಗಳ ಮೇಲೆ ಒಮ್ಮೆಲೇ ಧಾಳಿ ಮಾಡಿದೆ. ಹಡಗ ಯುದ್ಧವು ಪ್ಯಾಸಿಫಿಕ್ ಸಾಗರದಲ್ಲಿ ನಡೆಯುತ್ತಿದೆ. ಇವುಗಳಲ್ಲಿ ಮಲಯ ಕರಾವಳಿಯಲ್ಲಿದ್ದ ಬ್ರಿಟಿಷರ ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿಪಲ್ಸ್‌ಗಳೆಂಬ ಎರಡು ಹಡಗಗಳನ್ನು ಜಪಾನರು ಮುಳುಗಿಸಿದರು. ಅಮೆರಿಕವು ಜಪಾನಿನ ಮೇಲೆ ಯುದ್ಧ ಸಾರಿದೆ. ಜರ್ಮನಿ ಇಟಲಿಗಳೂ ಅಮೆರಿಕದ ಮೇಲೆ ಯುದ್ಧ ಸಾರಲಿರುವವೆಂದು ತಿಳಿದಿದೆ. ಅತ್ತ ಮೊಸ್ಕೋ—ಲೆನಿನ್‌ಗ್ರಾಡ್ ರಸ್ತೆಯಲ್ಲಿರುವ ಟಿಖ್ವಿನ ಎಂಬಲ್ಲಿ ಜರ್ಮನ್ ರಶ್ಯನ್ ಸೈನ್ಯಗಳಿಗೆ ಹೋರಾಟವಾಗುತ್ತಿದೆ.

ಮಲಯದಲ್ಲಿ ಕಾಳಗ

ಉತ್ತರ ಮಲಯದಲ್ಲಿ ಹಡಗಗಳಿಂದ ಇಳಿದು ಸಿಂಗಾಪುರದ ಕಡೆಗೆ ನುಗ್ಗಿ ಬರುತ್ತಿರುವ ಜಪಾನೀ ಸೈನಿಕರನ್ನು ಬ್ರಿಟಿಷ್ ಬಾಂಬರ್ ವಿಮಾನಗಳು ಇದಿರಿಸುತ್ತಿದೆ. ಏಲಿಪಾಯಿನ್‌ನಲ್ಲಿ ಮ್ಯಾನಿಲಾ ಕೈ ಪಾಯುವ್ಯದಲ್ಲಿ ಸುಮಾರು ೬೦ ಮೈಲು ದೂರದಲ್ಲಿರುವ ಅಪಾಗೋ ಎಂಬ ಪಟ್ಟಣದಲ್ಲಿ ಜಪಾನೀ ದಂಡುಗಳು ಬಂದಿವೆ. ಟೋಲೊನ ದ್ವೀಪಗಳಲ್ಲಿಯೂ ಜಪಾನ್ ದಂಡುಗಳು ಬಂದಿವೆ. ದೇವಲ ದ್ವೀಪಗಳಲ್ಲಿ ಅನರಿಗೆ ಪಂಚಮ ದಲದವರ ಸಹಾಯವಿದೆಯೆಂತೆ. ಉತ್ತರ ಮಲಯದಲ್ಲಿ ಕೊಟಾಬಾರು ವಿಮಾನ ಗೃಹದ ಹತ್ತಿರ ಕಾಳಗ ನಡೆಯುತ್ತಿದೆ. ಸಯಾಮಿನಲ್ಲಿ ಜಪಾನು ಸೈನ್ಯ ನುಗ್ಗಿತು. ಜಪಾನರು ಜಾಕಾರ್ಟಾ ದ್ವೀಪವನ್ನು ಕೈವಶ ಮಾಡಿರುವರು.

ಅಮೆರಿಕ ಬ್ರಿಟನುಗಳ ವಿರುದ್ಧ ಜಪಾನು ಯುದ್ಧ ಸಾರಿತು

ಜಪಾನು ಬ್ರಿಟನು ಅಮೆರಿಕಗಳ ವಿರುದ್ಧ ತಾ. ೮ರಂದು ಬೆಳಿಗ್ಗೆ ಯುದ್ಧ ಸಾರಿತು. ಅತ್ತ ಒಪ್ಪಂದದ ಮಾತುಕತೆ ಅಮೆರಿಕದಲ್ಲಿ ಆಗುತ್ತಿದ್ದಂತೆ ಇತ್ತ ಜಪಾನು ಯುದ್ಧ ಸಾರಿದ್ದು ಎಲ್ಲರಿಗೂ ದಿಗಿಲು ಹುಟ್ಟಿಸಿತು. ಜಪಾನು ಒಮ್ಮೆಲೇ ಸಯಾಮ್, ಫಿಲಿಪಾಯಿನ್‌ಗಳ ಮೇಲೆ ಧಾಳಿ ಮಾಡಿ ಅವುಗಳನ್ನು ಆಕ್ರಮಿಸಿಕೊಂಡಿದೆ. ಮಲಯದ ಮೇಲೆಯೂ ಬಿದ್ದಿದೆ. ಸಿಂಗಾಪುರದಲ್ಲಿ ಧಾಳಿನಡಾದಿದೆ. ಪ್ಯಾಸಿಫಿಕ್ ಸಾಗರದಲ್ಲಿ ಕಾದಾಟವು ಇನ್ನು ಪ್ರಾರಂಭವಾಗಲಿದೆ.

ಅಮೆರಿಕದೊಡನೆ ಇಟಲಿಜರ್ಮನಿಗಳು ಯುದ್ಧ ಸಾರುವವು

ಜಪಾನು ಯುದ್ಧ ಸಾರಿದ್ದರಿಂದ ಇಟಲಿ ಜರ್ಮನಿಗಳಿಗೂ ಅಮೆರಿಕದೊಡನೆ ಯುದ್ಧ ಸಾರುವಂತೆ ತಿಳಿಯುತ್ತದೆ.

ಮಲಯಾ ಕರಾವಳಿಯಲ್ಲಿ ಜಪಾನರ ಧಾಳಿ!

ಅಮೆರಿಕವೂ ಜಪಾನಿನ ಮೇಲೆ ಯುದ್ಧ ಸಾರಿತು!

ಮೋಸ್ಕೋ-ಲೆನಿನ್‌ಗ್ರಾಡ್ ರಸ್ತೆಯಲ್ಲಿ ಕಾಳಗ!

ಅಮೆರಿಕವೂ ಯುದ್ಧ ಸಾರಿತು

ಅಧ್ಯಕ್ಷ ರೂಸ್‌ವೆಲ್ಟರು ಅಮೆರಿಕದ ಕಾಂಗ್ರೆಸ್‌ನಲ್ಲಿ ತಾ. ೮ರಂದು ಮಾತನಾಡುತ್ತಾ ಅಮೆರಿಕವು ಜಪಾನಿನ ಮೇಲೆ ಯುದ್ಧ ಹೂಡಬೇಕೆಂದು ಹೇಳಿದರು. ಸೆನೆಟ್ ಆ ಠರಾವನ್ನು ಒಮ್ಮತದಿಂದ ಪಾಸುಮಾಡಿತು. ಸ್ಪೀಕಿನಿಧಿ ಸಭೆಯೂ ಅದನ್ನು ಒಲರ ವಿರುದ್ಧ ೧ ಮತದಿಂದ ಪಾಸುಮಾಡಿತು. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ವಿಮಾನ ಧಾಳಿ ಎಚ್ಚರಿಕೆ ನಡೆದಿದೆ. ಅಲ್ಲಿರುವ ಜಪಾನರನ್ನು ಬಂಧಿಸಲಾಗಿದೆ. ಕೇವಲ ಜರ್ಮನಿಯು ಪತ್ತಾಯದಿಂದ ಜಪಾನು ಧಾಳಿ ಮಾಡಿದೆ ಎಂದು ಅಮೆರಿಕನ್ ಸರಕಾರೀ ನ್ಯಕಟನೆಯೊಂದು ಸಾರಿದೆ.

ಅಸ್ತಾಮವು ರಣಕ್ಷೇತ್ರ?

ಒಂದು ಜಪಾನ್ ವಿಮಾನವು ಅಸ್ತಾಮಿನ ಕಡೆಗೆ ಬರುತ್ತಿದ್ದಿತೆಂದು ಬರ್ಮಾ ದೇಶದಿಂದ ಎಚ್ಚರಿಕೆ ಸುದ್ದಿ ಬಂದಿದೆ. ಕೂಡಲೇ ರಕ್ಷಣೋಪಾಯ ಕೈಕೊಳ್ಳಲಾಗಿದೆ. ಜಪಾನು ಯುದ್ಧ ಹೂಡಿದ್ದರಿಂದ ರಣಕ್ಷೇತ್ರವು ಹಿಂದೂದೇಶದ ಬಾಗಿಲಿಗೇ ಬಂದಂತಾಗಿದೆಯೆಂದು ಹಲವರು ಯೋಚಿಸುತ್ತಿದ್ದಾರೆ. ಸರಕಾರದವರು ಇಪ್ಪರಲ್ಲಿಯೇ ಹಲವು ಹೊಸ ಕಾನೂನುಗಳನ್ನು ಪ್ರಯೋಗಿಸಲಿರುವರೆಂದು ತಿಳಿದಿದೆ.

ರೂಸ್‌ವೆಲ್ಟರ ಗುಪ್ತ ವರದಿ

೧೯೪೩ರಲ್ಲಿ ಜರ್ಮನಿಗೆ ಧಾಳಿ?

ರೂಸ್‌ವೆಲ್ಟರು ಅಮೆರಿಕದ ಸೈನ್ಯ ಮಂಡಳದ ಅಧ್ಯಕ್ಷರಿಗೆ ಭರೆದೊಂದು ಪತ್ರದಲ್ಲಿ, ವೈರಿಯನ್ನು ನಿರ್ನಾಮ ಮಾಡಲು ಯೋಗ್ಯ ಸಿದ್ಧತೆಮಾಡಬೇಕೆಂದು ತಿಳಿಸಿದ್ದು, ಆ ಪ್ರಕಾರ ಒಂದು ಗುಪ್ತ ವರದಿ ತಯಾರಿಸಲ್ಪಟ್ಟಿತೆಂದು, ಅದರಲ್ಲಿ ಜರ್ಮನಿಯು ನಿರ್ನಾಮ ಮಾಡುವುದೇ ಮುಖ್ಯ ಧ್ಯೇಯವೆಂದು ತಿಳಿಸಲಾಗಿದೆಯೆಂದೂ ೧೯೪೩ನೆಯ ಇಸವಿ ಜುಲ್ಯಾ ತಿಂಗಳಲ್ಲಿ ಅಮೆರಿಕವು ಜರ್ಮನಿಯ ಮೇಲೆ ಧಾಳಮಾಡುವುದೆಂದೂ ಲಂಡನಿನಲ್ಲಿ ಹೇಳಲಾಗಿದೆ.

ರಶ್ಯ ಪೋಲೆಂಡ್ ಒಪ್ಪಂದ

ರಶ್ಯ ಮತ್ತು ಪೋಲೆಂಡ್‌ಗಳೊಳಗೆ ವರಸ್ಪರ ಸಹಾಯ ಮತ್ತು ಮಿತ್ರತ್ವದ ಒಂದು ಒಪ್ಪಂದವು ಆಗಿರುವುದು. ರಶ್ಯ ಪೋಲೆಂಡುಗಳೆರಡು ಬ್ರಿಟನು ಮತ್ತು ಅಮೆರಿಕಗಳೊಡನೆ ಸಹಕರಿಸಿ ಜರ್ಮನಿಯು ಸಂಪೂರ್ಣ ಸೋಲುವ ವರೆಗೆ ಯುದ್ಧ ನಡೆಸುವವಂತೆ!

ವಿಟೇನ್-ಗೋರಿಂಗ್ ಒಪ್ಪಂದ

ವಿಟೇನ್ ಗೋರಿಂಗರ ನಡುವೆ ಕಳೆಗಿನಂತೆ ಒಂದು ಒಪ್ಪಂದವು ಸಹಿಯಾಗಿದೆಯೆಂದು ತಿಳಿದುಬರುತ್ತದೆ.

೧. ಫ್ರೆಂಚ್ ಉತ್ತರ ಮತ್ತು ದಕ್ಷಿಣ ಆಫ್ರಿಕಗಳು ಒಂದು ನ್ಯಕ್ಕೇಕ ಕ್ಷೇತ್ರ ವೆನಿಸಿ ಭಾವಿಸಕಕ್ಕದ್ದು. ಉತ್ತರ ಆಫ್ರಿಕದಲ್ಲಿ ಜರ್ಮನಿಗೆ ಕೆಲವು ಅನುಕೂಲತೆಗಳನ್ನು ಒದಗಿಸಿಕೊಡತಕ್ಕದ್ದು. (೨) ಉತ್ತರ ಆಫ್ರಿಕದ ವಿಮಾನ ಮತ್ತು ನೌಕಾ ಕೇಂದ್ರಗಳನ್ನು ಜರ್ಮನರಿಗೆ ಬಿಟ್ಟುಕೊಡುವುದು. ಅವನ್ನು ಅವರು ಫ್ರೆಂಚ್ ನೌಕಾಬಲದ ಸಹಾಯವಿಲ್ಲದೆ ಆಕ್ರಮಿಸುವುದು. (೩) ಪಶ್ಚಿಮ ಆಫ್ರಿಕವನ್ನು ಫ್ರೆಂಚರು ಮೊತ್ತ ಆಳಬೇಕ್ಕು. ಆದರೆ ಅದನ್ನು ಫ್ರೆಂಚ್ ಮತ್ತು ಸ್ಪೈನ್ ಸೈನ್ಯಗಳು ಆಳಬೇಕು. (೪) ಪ್ರತಿಯಾಗಿ, ಜರ್ಮನಿಯು ಕೆಲವು ಸ್ಪೈಂಜ್ ಕೈದಿಗಳನ್ನು ಬಿಡುಗಡೆಮಾಡುವುದು; ಮತ್ತು ಫ್ರಾನ್ಸಿನ ಮೇಲೆ ಹೇರಿರುವ ಆಕ್ರಮಣ ಖರ್ಚನ್ನು ತುಸು ಕಡಿಮೆಮಾಡುವುದು.

"ಹಿಂದೂಸ್ತಾನ ಪ್ರಚಾರ ಸಮಿತಿ"

ಪಾರ್ಲಿಮೆಂಟ್ ಸದಸ್ಯರ ಕೆಲಸ

ಬ್ರಿಟಿಷ್ ಹಾಗೂ ಹಿಂದೂಸ್ತಾನದ ರಾಜಕೀಯ ಪಕ್ಷಗಳೊಳಗೆ ವರಸ್ಪರ ಸೌಹಾರ್ದ ಹುಟ್ಟಿಸುವ ಸಲುವಾಗಿ "ಹಿಂದೂಸ್ತಾನದ ಪ್ರಚಾರ ಸಮಿತಿ" ಯೆಂಬುದನ್ನು ಪಾರ್ಲಿಮೆಂಟಿನ ಕೂಲಿಗಾರ ಸದಸ್ಯರು ಸ್ಥಾಪಿಸಿರುವರು. ಆತ್ಯಾಂತಿಕ ಶಾಸನವು ಹಿಂದೂಸ್ತಾನಕ್ಕೆ ಅನ್ಯಯಿಸುವಂತೆ, ಸ್ವಾತಂತ್ರ್ಯಕೊಡುವಂತೆ ಇವರು ಸ್ಪ್ರಚಾರಮಾಡುವರು.

ಈ ಬೆಳಿಗ್ಗೆ ಮ್ಯಾಕ್ಲೀನ್ ಮಾಡಿದೆಯೋ?

ಓಹೊ! ಆರೋಗ್ಯಕರವಾದ ಹಲ್ಲುಗಳ ಲಾಭವು ನಿನಗೆ ತಿಳಿದಿದೆ.

ಈ ಮನುಷ್ಯನಿಗೆ ಹಲ್ಲುಗಳು ಕೊಳೆತರೆ ಮತ್ತು ಬೆಳೆಯುವುದಿಲ್ಲವೆಂದು ತಿಳಿದಿದೆ. ಆದುದರಿಂದ ಪ್ರತಿ ರಾತ್ರಿಯೂ ಮತ್ತು ಬೆಳಿಗ್ಗೆಯೂ ಅತನು ಪ್ಯಾಕ್ಲೀನ್ ಪೆರಾಕ್ಸೈಡ್ ಟೂತ್‌ಪೇಸ್ಟ್‌ನೇ ಉಪಯೋಗಿಸುತ್ತಾನೆ. ನೀವು ಶುಚಿಯಾದ ಬಾಯಿಯನ್ನು ಫಳಫಳ ಹೊಳೆಯುವ ಬಿಳಿಯ ಹಲ್ಲುಗಳನ್ನೂ ಹೊಂದಬಹುದು ಮ್ಯಾಕ್ಲೀನ್ ಉಪಯೋಗಿಸುವುದರಿಂದ.

NOTICE

In the Court of the Subordinate Judge of South Kanara

I. P. No. 17/1941.

Between:—

U. Padmanabha Mallya—
Petitioner (Insolvant)

and

1. Basti Devappa Shenoi. 2. U. Narayana Mallya. 3. Basti Ramayya Shenoi. 4. U. Kamalaksha Mallya 5. U. Anantha Mallya — *Respondents Creditors*

Notice Is hereby given that the above-named petitioner has applied for being declared an Insolvant and that the said application will come on for hearing before the said Court at 11 A. M. on 8-1-1942.

You are requested to appear before the said Court on the said date and hour and oppose the application; Otherwise the same will be heard and decided in your absence.

(By order of Court)

Mangalore, 11-12-1941. — **U. Narayan Rao,** Vakil for Petitioner

'ಸಣ್ಣ ಸೆರೆಮನೆಯಿಂದ ದೊಡ್ಡ ಸೆರೆಮನೆಗೆ ಬಂದೆನು'

ಬಿಡುಗಡೆಯ ಕುರಿತು ನೆಹರು ಹೇಳಿದರು

ಬಾರ್ಡೋಲಿಯಲ್ಲಿ ವರ್ಕಿಂಗ್ ಕಮಿಟಿ ಕೂಡುವುದು

ಹಿಂದೂದೇಶಕ್ಕೆ ಜಪಾನರ ಯುದ್ಧ ಭೀತಿಯಿದೆ!

ಸತ್ಯಾಗ್ರಹಿ ಕೈದಿಗಳ ಬಿಡುಗಡೆಯಾಗುತ್ತಿರುವುದರಿಂದ ಕಾಂಗ್ರೆಸು ತನ್ನ ಮುಂದಿನ ಧೋರಣೆ ವಿಚಾರಿಸಲು ವರ್ಕಿಂಗ್ ಕಮಿಟಿ ಸಭೆ ಕರೆದಿದೆ ಸತ್ಯಾಗ್ರಹವು ಬಿಡದೆ ಸಾಗಬೇಕೆಂದು ಗಾಂಧಿಜಿ ಹೇಳಿದಂತೆ ಸತ್ಯಾಗ್ರಹವು ಆಗುತ್ತಲೇ ಇದೆ. ಬಿಡುಗಡೆಯಿಂದ ವಿಶೇಷ ಹೃದಯ ಪರಿವರ್ತನೆಯಾದಂತಾಗಿಲ್ಲವೆಂದು ಹಲವು ಮುಖಂಡರ ಅಭಿಪ್ರಾಯ ಕಾಂಗ್ರೆಸಿನ ಮುಂಬಯಿ-ನಿರ್ಣಯವು ಶಬ್ದಾಗಿ ಪೂನಾ ನಿರ್ಣಯದಂತೆ ಕಾಂಗ್ರೆಸಿನವರು ಕೆಲಸಮಾಡಲು ಈಗ ಒಪ್ಪುವರೇ ಎಂಬುದು ನೋಡಬೇಕಾಗಿದೆ. ಡಿಯೋಲಿ ಸ್ಥಾನಬದ್ಧರನ್ನು ಅವರವರ ಪ್ರಾಂತಗಳಿಗೆ ಸರಕಾರದವರು ಕಳುಹಿಸುವುದಾಗಿ ಪ್ರಕಟಿಸಿದ್ದಾರೆ. ಬಂಗಾಳದಲ್ಲಿ ಹಕ್ಕರು ಪುನಃ ಮಂತ್ರಿಮಂಡಲ ಕರೆದಿರುವರು.

"ಸಣ್ಣ ಸೆರೆಮನೆಯಿಂದ ದೊಡ್ಡ ಸೆರೆಮನೆಗೆ ಬಂದೆನು"

ಬಿಡುಗಡೆಯ ವಿಷಯ ನೆಹರು ಹೇಳಿಕೆ

—ವಿದೇಶೀ ಆಧಿಕಾರಿಗಳು ಹೇಳಿದಾಗ ನಾವು ಸೆರೆಮನೆಯಿಂದ ಹೊರಗೆ ಬರುವುದೂ, ಸೆರೆಮನೆಗೆ ಸಾಗುವುದೂ ಒಳ್ಳೆದಲ್ಲ. ನಾನೀಗ ಸಣ್ಣ ಸೆರೆಮನೆಯಿಂದ ದೊಡ್ಡ ಸೆರೆಮನೆಗೆ ಬಂದಿದ್ದೇನೆ. ನನ್ನ ವಿಶಾಲ ಮನೋಭಾವನೆಕ್ಕೆ ಅಡಚಣಿಯನ್ನುಂಟುಮಾಡುವ ಎಲ್ಲ ಸೆರೆಮನೆಯು ಗೋಡೆಗಳನ್ನೂ ಭೇದಿಸಿಬಂದು ನಾವು ಸ್ವತಂತ್ರ ರಾಷ್ಟ್ರವಾಗುವ ಕಾಲವು ಖಂಡಿತ ಬರುವುದು ಆದರೆನ್ನೂ ಆ ಕಾಲ ಬಂದಿಲ್ಲ ಇದನ್ನು ನಾವು ಮರೆಯಬಾರದು. ಅರ್ಥವಿಲ್ಲದ ಈ ಸಣ್ಣ ಬದಲಾವಣೆಗಳಿಗಾಗಿ ನಾವು ಹರ್ಷವಡಬೇಕಾಗಿಲ್ಲ" ಹೀಗೆಂದು ತಾ ೪ರಂದು ಡಿಫೆನ್ಸ್‌ರೂಲು ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದ ನೆಹರು ಒಂದು ಹೇಳಿಕೆ ಕೊಟ್ಟಿರುವರು ರಾಷ್ಟ್ರಪತಿ ಆಜಾದರನ್ನು ಅದೇ ದಿನ ನೈನಿ ಸೆರೆಮನೆಯಿಂದ ಬಿಡುಗಡೆ ಮಾಡಿದರು

ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ ಮತ್ತೆ ಕೆಲವು ಸಂಗತಿಗಳು ಇಂತಿವೆ.

"ವಿದೇಶೀ ಆಡಳಿತದಿಂದ ತುಳಿಯಲ್ಪಡುತ್ತಿರುವ ನಮಗೆ ಶಾಂತಿಯಿಲ್ಲ ಸ್ವತಂತ್ರ ಭಾರತದ ಹಿತಕ್ಕಾಗಿಯೂ, ಸ್ವತಂತ್ರ ಜಗತ್ತಿನ ಹಿತಕ್ಕಾಗಿಯೂ ನಾವು ಕೆಲಸ ಮಾಡಲು ಕೊಡಗಬೇಕಾದ ಕರೆಯು ಎಡೆಬಿಡದೆ ಕಿವಿಗಳಲ್ಲಿ ಝೇಂಕರಿಸುತ್ತಿದೆ. ಸ್ವಾತಂತ್ರ್ಯಕ್ಕಾಗಿ ಚೀನವು ನಾಲ್ಕು ವರೆ ವರ್ಷಗಳಿಂದ ಉಗ್ರ ಕಾದಾಟದಲ್ಲಿ ತೊಡಗಿದೆ ಸೋವಿಯೆಟ್ ರಷ್ಯಾತನ್ನ ಸ್ವಾತಂತ್ರ್ಯ ರಕ್ಷಣೆಗಾಗಿ ಹೃದಯದ ರಕ್ತವನ್ನು ಚೆಲ್ಲುತ್ತಿರುವ ಅನೇಕ ಸಾಧನೆಮಾಡುತ್ತಿದೆ.

'ನಮ್ಮ ಪರಿಸ್ಥಿತಿಗಳು ಬೇರೆ; ನಮ್ಮ ಹೋರಾಟದ ಹಾದಿಗಳು ಬೇರೆಯಾಗಿವೆ ತ್ಯಾಗ, ತಿಸ್ತು, ದೃಢನಿಶ್ಚಯ ಮಾತ್ರ ನಮ್ಮಲ್ಲಿರಬೇಕು ಭಾರತದ ಕರೆ ನಮ್ಮ ಕಿವಿಗಳಲ್ಲಿ ಝೇಂಕರಿಸುತ್ತಿದೆ ನಮ್ಮ ರಕ್ಷಣೆನ್ನು ಕೆರಳಿಸುತ್ತದೆ ನಾವು ನಮ್ಮ ಮಾರ್ಗದಲ್ಲಿ ಹೋಗೋಣ ಎಲ್ಲಾ ಕಷ್ಟ ಗಳನ್ನೂ ಸೊಂದರೆಗಳನ್ನೂ ಶಾಂತಿಯಿಂದ ಇದಿರಿಸ್ತೋಣ " ನೆಹರುಗಳಿಗೆ ಸೆರೆಮನೆಯಲ್ಲಿರುವಾಗ ಚೀನದ ಚಿಯಾಂಗ್ ದಂಪತಿಗಳಿಂದ ಪತ್ರಬಂದಿತ್ತಂತೆ.

ಬರ್ಮಾ ರಸ್ತೆ ರಕ್ಷಣೆಗಾಗಿ

ಬರ್ಮಾ ರಸ್ತೆಯ ಮೇಲೆ ಪುನಃ ಜಪಾನರ ಧಾಳಿಯಭೀತಿಯಿರುವುದರಿಂದ ಅಮೆರಿಕದ ವಿಮಾನಗಳು ಕೂಡಲೇ ಅಲ್ಲಿಗೆ ಹೋಗುವವೆಂದು ತಿಳಿದಿದೆ.

ಬಾರ್ಡೋಲಿಯಲ್ಲಿ ವರ್ಕಿಂಗ್ ಕಮಿಟಿ

ಬಾರ್ಡೋಲಿಯಲ್ಲಿ ವರ್ಕಿಂಗ್ ಕಮಿಟಿ ಸಭೆ ಕೂಡುವುದಾಗಿ ತಿಳಿದುಬರುತ್ತದೆ.

ಅಲ್ಲಾಮಾ ಮಶ್ರೂಖಿಯವರು

ಆ ಮರಣಾಂತ ಉಪವಾಸ

"ಪಂಜಾಬ್ ಕಾಕ್ಸರ್ ಜಳವಳದ ಮುಖಂಡರಾದ ಶ್ರೀ. ಅಲ್ಲಾಮಾ ಮಶ್ರೂಖಿಯವರು ವೆಲ್ಲೂರು ಸೆರೆಮನೆಯಲ್ಲಿ ಆ ಮರಣಾಂತ ಉಪವಾಸ ಕೈಕೊಂಡಿರುವರು ಬೆಳಿಗ್ಗೆ ಮೂರು ರಾತ್ರೆ ಎರಡು ಕಿತ್ತಳೆ ಹಣ್ಣು ಮಾತ್ರ ತೆಕ್ಕೊಳ್ಳುವರು. ಇದು ಅಕ್ಟೋಬರ್ ೧೬ರಿಂದ ಪ್ರಾರಂಭವಾಗಿದೆ. ಸರಕಾರದವರು ಅವರ ಆಸ್ತಿ, ಪಾಸ್ತಿ, ವಶಪಡಿಸಿರುವರು ಅವರು ಬಿಡುಗಡೆಗಾಗಿ ವ್ಯಾಖ್ಯಿಸಿಕೊಂಡದಕ್ಕೆ ಸರಕಾರವು ಕಿವಿಗೊಡಲಿಲ್ಲ ಅವರೊಡನೆ ಯಾರೂ ಮಾತನಾಡಲು ಸಾಧ್ಯವಿಲ್ಲ" ಎಂದ ಡಾ। ಪಟ್ಟಾಭಿ ಹೇಳಿದರು

ಸಾವರ್ಕರರು ಪುನಃ ಅಧ್ಯಕ್ಷರು

ಭಾಗಲ್ ಪುರದಲ್ಲಿ ಸೇರಲಿರುವ ಹಿಂದು ಮಹಾ ಸಭಾಧಿವೇಶನಕ್ಕೆ ಶ್ರೀ. ವಿ ಡಿ ಸಾವರ್ಕಾರರೇ ಪುನಃ ಅಧ್ಯಕ್ಷರಾಗಿ ಆಧಿಕಲ್ಯುಕ್ತರಿರುವರು.

'ಸತ್ಯಾಗ್ರಹವು ತಡೆಯಿಲ್ಲದೆ ಸಾಗಬೇಕು'

ವರ್ಕಿಂಗ್ ಕಮಿಟಿ ಮತ್ತು ಎ.ಐ.ಸಿ.ಸಿ. ಸದಸ್ಯರು ಬಿಟ್ಟು-

ಮುಂಬಯಿ ನಿರ್ಣಯ ರದ್ದಾಗಬೇಕೆನ್ನುವವರೂ ಮಾಡಕೂಡದು

— ಮಹಾತ್ಮರ ಸ್ಪಷ್ಟೀಕರಣ —

ಜವಾಹರಲಾಲ್ ನೆಹರು, ಮೌಲಾನಾ ಆಜಾದರಿಗೆ ವರ್ಕಿಂಗ್ ಕಮಿಟಿ ಹಾಗೂ ಎ.ಐ.ಸಿ.ಸಿ ಸಭೆಗಳನ್ನು ಬೇಗನೇ ಕರೆಯುವಂತೆ ತಿಳಿಸಿರುವೆನು. ಆದರೆ ಮುಂಬಯಿ ನಿರ್ಣಯವು ಬದಲಾಗುವ ವರೆಗೆ ಶಾಸನ ಭಂಗವು ತೆಡೆಯಿಲ್ಲದೆ ಸಾಗುತ್ತಿರಲೇಬೇಕು. ಕ್ರಿಸ್‌ಮಸ ದಿನವು, ಚಾಕ್ಸಿಂಗ್ ದಿನವು, ಹೊಸವರ್ಷದ ದಿನವು, ಸತ್ಯಾಗ್ರಹಮಾಡಕೂಡದು.

"ಸರಕಾರದವರು ಸೆರೆಹಿಡಿಯದಿದ್ದರೆ ಆಶ್ಚರ್ಯ ಪಡಲು ಅಥವಾ ದೌರ್ಬಲ್ಯ ತೋರಿಸಲು ಕಾರಣವಿಲ್ಲ. ಸೆರೆಮನೆಗೆ ಹೋಗುವುದೇ ನಮ್ಮ ಗುರಿಯಲ್ಲ. ಭಾಷಣ ಸ್ವಾತಂತ್ರ್ಯಕ್ಕೇ ನಮ್ಮ ಸದ್ಯದ ಗುರಿ ಅದಕ್ಕೆ ತೆಡೆಯೊಡಗಿದ್ದರೆ ನಮ್ಮ ಗುರಿಯು ಕಡೆಗೆ ನಾವು ಸ್ವಲ್ಪ ಮುಂದುವರಿದಂತಾಗುವುದು. ಸೆರೆಮನೆ ವಾಸದ ಸಲುವಾಗಿ ಸೆರೆಮನೆ ಸೇರುವುದೂ ಮೂರ್ಖತ್ವ.

"ರಚನಾತ್ಮಕ ಕಾರ್ಯಕ್ರಮ ಮತ್ತು ಸತ್ಯಾಗ್ರಹಗಳಲ್ಲಿ ಅನಿವಾರ್ಯವಾದ ಅನ್ಯೋನ್ಯತೆ ಸಂಬಂಧವಿದೆ. ಸಾಮಾನ್ಯವಾಗಿ ಕಾಂಗ್ರೆಸಿನಲ್ಲಿ ಈ ಸಂಬಂಧ ಗೊತ್ತಿಲ್ಲದಿರುವುದರಿಂದ ಆಶ್ಚರ್ಯ ಹಾಗೂ ದೌರ್ಬಲ್ಯತೋರುವುದು ಸತ್ಯಾಗ್ರಹಕ್ಕೆ ರಚನಾತ್ಮಕ ಕಾರ್ಯದ ಬೆಂಬಲವಿಲ್ಲದೆ ಹೋದರೆ ಸೈಮನ್-ಗೂ ಸಾತಂತ್ರ್ಯಸಿಗದು ಅದು ಮಾತ್ರವಲ್ಲದೆ ಸತ್ಯಾಗ್ರಹವು ಹಿಂಸಾಮಯವೂ ಆಗುವುದು ಸತ್ಯಾಗ್ರಹವು ಸಾಮೂಹಿಕವಾದರೂ, ದೇಹಶಕ್ತಿಯುಳ್ಳನರಮಾತ್ರ ಅದೆನ್ನು ಮಾಡಬಲ್ಲರು. ಆದರೆ ರಚನಾತ್ಮಕ ಕಾರ್ಯಗಳನ್ನು ಎಲ್ಲರೂ ಮಾಡಬಹುದು. ರಚನಾತ್ಮಕ ಕಾರ್ಯದಲ್ಲಿ ಅಚಲ ವಿಶ್ವಾಸವಿಲ್ಲದಿದ್ದರೆ ನಾನು ಅಹಿಂಸೆಯ ಕುರಿತು ವಿವರಿಸಿಕೊಂಡಿರುವ ಮೆನೋಮಂದಿರವೆಲ್ಲ ಕುಸಿದು ಬೀಳುವುದು. ರಚನಾತ್ಮಕ ಕಾರ್ಯದ ಮೂಲಕ ಪಡೆದ ಅಹಿಂಸೆಯ ಆಧಾರದ ಮೇಲೆ ಸ್ವರಾಜ್ಯ ಸ್ಥಾಪಿಸಬೇಕೆಂದು ನನ್ನ ಅಭಿಪ್ರಾಯವಿದೆ. ಆದುದರಿಂದ ಸರಕಾರದವರು ಬಂಧಿಸಲಿ ಬಿಡಲಿ ನಮ್ಮ ಕಾರ್ಯಕ್ರಮವನ್ನು ನಾವು ಬಿಡದೆ ಸಾಗಿಸಬೇಕು. ಸತ್ಯಾಗ್ರಹಿಗಳು ಸಭೆ ಕೂಡಿಸಿ, ಇಂದಿನ ಪರಿಸ್ಥಿತಿಯನ್ನು ಸರಿಯಾಗಿ ತಿಳಿಸಿ ಕಾಂಗ್ರೆಸಿನ ಯುದ್ಧ ವಿರುದ್ಧ ಧೋರಣವನ್ನು ವಿವರಿಸಬೇಕು. ಕಾಂಗ್ರೆಸಿನವರು-ಸತ್ಯಾಗ್ರಹ ಮಾಡದಿದ್ದರೂ ಅವರ ಭಾಷಣಕ್ಕಾಗಿ ಸರಕಾರದವರು ಅವರನ್ನು ಬಂಧಿಸಬಹುದು. ಅಜಾದರನ್ನು ನೆಹರುಗಳನ್ನು ಸತ್ಯಾಗ್ರಹ ಮಾಡಿದ್ದಕ್ಕಾಗಿ ಸರಕಾರವು ಬಂಧಿಸಿದ್ದಲ್ಲ."

"ಹೊರಗಿನ ಕಾರಣಗಳ ಮೂಲಕ ಸವಿನಯ ಶಾಸನ ಭಂಗವನ್ನು ನಿಲ್ಲಿಸಲು ನನಗೆ ಅಧಿಕಾರವಿಲ್ಲ ಕಾಂಗ್ರೆಸಿಗೇ ಆ ಅಧಿಕಾರವಿದೆ. ನನ್ನ ಮಟ್ಟಿಗೆ ಹೇಳುವುದಿದ್ದರೆ ನನಗೆ ಬೇರೆ ಮಾರ್ಗವಿಲ್ಲ. ಶಾಂತಿಯೇ ನನ್ನ ಜೀವನದ ಉಸಿರಾಗಿರುವುದರಿಂದ ನಾನು ಇಂಥ ಸಮಯದಲ್ಲಿ ನನ್ನ ಯುದ್ಧವಿರುದ್ಧ ಆಂದೋಲನವನ್ನು ನಿಲ್ಲಿಸಿದರೆ ನನ್ನನ್ನೇ ನಾನು ಅಲ್ಲಗಳೆದುಕೊಂಡಂತೆ ಆಗುತ್ತದೆ. ಆದ್ದರಿಂದ ನನ್ನಂತೆ ಅಭಿಪ್ರಾಯವಿದ್ದ ನಾವೆಲ್ಲರು ನನ್ನ ಮಾರ್ಗವು ಎಷ್ಟೇ ತಪ್ಪಾಗಿ ಭಾವಿಸಲ್ಪಡಲಿ, ನನ್ನ ಕೆಲಸದಿಂದ ನನ್ನ ವಿಶ್ವಾಸವ್ಯಕ್ತವಾಗಬೇಕು ಮತ್ತು ಮನುಷ್ಯನನ್ನು ಅಧೋಗತಿಗೊಯ್ಯುತ್ತಿರುವ, ಕಕ್ಕಸಾಯನದಿಂದ ರಾಷ್ಟ್ರಗಳನ್ನು ಪಾರು ಮಾಡುವ ಬಗೆಯೆಂದರೆ ನನ್ನದು ಒಂದೇ ಇರುವುದೆಂದು ಕಟ್ಟ ಕಡೆಗೆ ಎಲ್ಲಾ ಯುದ್ಧಾಸಕ್ತ ರಾಷ್ಟ್ರಗಳೂ ಒಪ್ಪಿಕೊಳ್ಳಿದೆ ಇರುವ ಎಂಬ ಆಶೆ ಹಿಡಿದು ಮುಂದೆ ಸಾಗಬೇಕು."

—ಹೀಗೆಂದು ಮಹಾತ್ಮಾಜಿಯವರು ಸತ್ಯಾಗ್ರಹದ ಕುರಿತು ಒಂದು ದೀರ್ಘ ಪ್ರಕಟಣೆಕೊಡುತ್ತಾ ವಿವರಿಸಿದ್ದಾರೆ. ಅದರಲ್ಲಿ ಅವರು ವರ್ಕಿಂಗ್ ಕಮಿಟಿ ಮತ್ತು ಎ. ಐ. ಸಿ. ಸಿ. ಸದಸ್ಯರನ್ನುದ್ದೇಶಿಸಿ ಹೀಗೆಂದಿದ್ದಾರೆ.

"ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳು ಸಭೆಗಳನ್ನು ಜರಗಿಸಿ ಭಾಷಣ ಕೊಡಬೇಕು. ಅವರು ಕೂಡಲೇ ಪುನಃ ಸತ್ಯಾಗ್ರಹನಾಡುವುದು ಅನವಶ್ಯಕವಾದ ಅವಸರವಾಗುವುದು. ಆದರೆ ಶಾಸನ ಭಂಗವು ಸಾಗುತ್ತಿರಲೇ ಬೇಕು ಸರಕಾರದವರು ಸತ್ಯಾಗ್ರಹಿಗಳನ್ನು ಬಿಡುಗಡೆಮಾಡಿರುವುದು ಎ. ಐ. ಸಿ. ಸಿ. ಸಭೆಯನ್ನು ಕರೆಯಲು ಸಂಪರ್ಕಕೊಡುವ ಸಲುವಾಗಿ ಆಗಿದೆ. ಎ. ಐ. ಸಿ. ಸಿ. ಸಭೆಕೂಡಿದರೆ ಮುಂಬಯಿ ನಿರ್ಣಯವು ರದ್ದಾಗುವುದೆಂದು ಸರಕಾರವು ತಿಳಿದಂತೆ ತೋರುತ್ತದೆ. ಆದ್ದರಿಂದ ನಾನು ರಾಷ್ಟ್ರ

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ಹಿಂದೂ ಮಹಾಸಭೆ

ಇದೇ ತಿಂಗಳ ತಾ. ೧೩ನೇ ಶುಕ್ರವಾರ ಸಾಯಂಕಾಲ ಗಂಟೆ ೫½ಕ್ಕೆ ಪಕ್ಷೀಲ ಎಸ್. ನಾಗರಾಜಯ್ಯನವರ ಆಫೀಸಿನಲ್ಲಿ ಜರಗುವುದು. ಎಲ್ಲ ಸದಸ್ಯರು ಸದ್ರಿ ಸಭೆಗೆ ಹಾಜರಾಗಬೇಕಾಗಿ ಕಾರ್ಯದರ್ಶಿ ತಿಳಿಸುತ್ತಾರೆ:

ನಗರ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯೊಂದು ತಾ. ೧೬ರಂದು ಮುನ್ಸಿಪಲ್ ಆಫೀಸಿನಲ್ಲಿ ಸಂಜೆ ೫.೩೦ಕ್ಕೆ ಸೇರಲಿರುವುದು.

ಸತ್ಯಾಗ್ರಹಿಗಳಿಗೆ ಬಿಡುಗಡೆ

ತಾರೀಕು ೪ರಂದು ಬೆಳಿಗ್ಗೆ ೯ ಘಂಟೆಗೆ ಹಿಂದಲಗಿ ಜೈಲಿನಿಂದ ಶಿಕ್ಷೆ ಅವಧಿ ಮುಗಿಸಿ ಶ್ರೀ ಎ. ಜಿ. ಕಿರುಮಲೇಶ್ವರ ಭಟ್ ಮತ್ತು ಬಿ. ಜಿ. ಕಾಮಿಕ್ ಇವರು ಬಿಡುಗಡೆ ಹೊಂದಿದರು.

ಹಿಂಡಲಗಿ ಜೈಲಿನಿಂದ ತಾರೀಕು ೫ರಂದು ಬೆಳಿಗ್ಗೆ ೮ ಘಂಟೆಗೆ ೭೩ ಮಂದಿ ರಾಜಕೀಯ ಕೈದಿಗಳ ಬಿಡುಗಡೆಯಾಯಿತು. ಅದರಲ್ಲಿ ೩ ಮಂದಿ ಸ್ಥಾನಬದ್ಧ ಕೈದಿಗಳು. ಒಬ್ಬರು 'ಎ' ಕ್ಲಾಸಿನವರು; ೮ ಮಂದಿ 'ಬಿ' ಕ್ಲಾಸಿನವರು ಸೇರಿರುವರು. ಕಮ್ಯೂನಿಸ್ಟ್ ಸ್ಥಾನಬದ್ಧರನ್ನು ಳಿದು ಇತರರನ್ನು ಶಿಕ್ಷೆದಲ್ಲಿ ಬಿಡುಗಡೆ ಮಾಡುವುದಾಗಿ ತಿಳಿದುಬಂದಿದೆ. ಬಿಡುಗಡೆಯಾದ ವರ ಪೈಕಿ ಶ್ರೀ ದೇವಪ್ಪ ಅಳ್ವ, ಶ್ರೀ ಶ್ಯಾಮರಾಯ ನಾಯ್ಕ, ಶ್ರೀ ರಾಜಗೋಪಾಲ ಶೆಟ್ಟಿ ಈ ಮೂವರು ನಮ್ಮ ಜಿಲ್ಲೆಯವರಾಗಿರುತ್ತಾರೆ.

ಹಿಂಡಲಗಿ ಜೈಲಿನಿಂದ ಶ್ರೀ ಎಂ. ಆರ್. ಭಟ್ ಮತ್ತು ಶ್ರೀ ಕೆ. ಪೀನ ಶೆಟ್ಟಿ ಇವರನ್ನು ತಾ. ೮ರಂದು ಬಿಡುಗಡೆ ಮಾಡಿರುವರು.

ಜಿಲ್ಲಾ ಬೋರ್ಡು ಅವಸರದ ಸಭೆ

ಜಿಲ್ಲಾ ಬೋರ್ಡಿನ ಅವಸರದ ಸಭೆಯೊಂದು ಇಲ್ಲಿಗೆ ವಿದ್ಯುಚ್ಛಕ್ತಿ ಸರಬರಾಯಿ ಬಗ್ಗೆ ಫೈಸೂರಿಗೆ ಮದ್ರಾಸು ಸರಕಾರದ ವಿನಂತಿಸಿಕೊಳ್ಳಬೇಕೆಂದು ಸೂಚನೆಯನ್ನು ಆಲೋಚಿಸುವ ಸಲುವಾಗಿ ತಾ ೧೪ರಂದು ಬೆಳಿಗ್ಗೆ ೯½ಗಂಜಕ್ಕೆ ಸೇರುವುದು. ಜಿ. ಬೋ. ಸಾಮಾನ್ಯ ಸಭೆ ಬೆಳಿಗ್ಗೆ ೧೦ ಗಂಟೆಗೆ ಸೇರುವುದು.

ಆರೋಗ್ಯವಾರ. ಶಿಶುಸಪ್ತಾಹ

ಮಂಗಳೂರು ಮುನ್ಸಿಪಲ್ ಹೆಲ್ತ್ ಆಫೀಸಿನ ವತಿಯಿಂದ ತಾ. ೮ರಂದು ಸಂಜೆ ಕ್ಲಾರ್‌ಮೇನ್ ಶ್ರೀ ವೆಂಕಟ್ರಾಯ ಬಾಳಿಗ ಎಂ. ಎಲ್ಲ್. ಎ. ಇವರ ಅಧ್ಯಕ್ಷತೆಯಿಂದ ನೆರವೇರಿತು. ವಿವಿಧ ವಿನೋದ ಪ್ರದರ್ಶನಗಳಿದ್ದುವು. ಶ್ರೀಮತಿ ವೆಂಕಟ್ರಾಯ ಬಾಳಿಗರು ಮಕ್ಕಳಿಗೆ ಬಹುಮಾನನಿಶಾನೆಮಾಡಿದರು.

ಮಹಾಜನ ಅಕ್ಕಿ ಬಂಡಾರದ ವೆರದಿ

ಕಳೆದ ೧೯೦೨ನೆಯಲ್ಲು ಮಂಗಳೂರಲ್ಲಿ ಅಕ್ಕಿಯ ಬೆಲೆಯೇರಿದಾಗ, ಬಡವರಿಗೆ ಸೇರಿಗೆ ೨ ಆಣೆಯಂತೆ ಅಕ್ಕಿ ಒದಗಿಸುವ ಸಲುವಾಗಿ ತೆರೆದ ಶೂಲೆ ಮಹಾಜನ ಅಕ್ಕಿಬಂಡಾರದ ವರದಿ ನಮ್ಮ ಹಸ್ತಗತವಾಗಿದೆ. ಇದರಲ್ಲಿ ದಿನ ಒಂದರ ಸರಾಸರಿ ೪೫॥ ಮುಡಿಗಳಂತೆ ಒಟ್ಟು ಇಂದ ೧೪೪೪ ಮುಡಿ ಅಕ್ಕಿ ಮಾರಾಟವಾಗಿದ್ದು, ೯೦೬.೯.೯ರೂ. ನಷ್ಟವುಂಟಾಗಿದೆ. ನಂತರ ಯಾಗಿ ವಸೂಲಾದ ೧೨೪೫ ರೂಪಾಯಿಗಳಲ್ಲಿ ನಷ್ಟ ತುಂಬಿಸಿ ಮಿಕ್ಕುಳಿದ ಹಣವು ದೇಂಕಿನಲ್ಲಿ ಡಿಪೊಸಿಟ್ ಇಡಲಾಗಿದೆ. ಇಂತಹ ಕಾರ್ಯದಲ್ಲಿ ಮುಡಿದ ಶ್ರೀ ಕೊಂಚಾಡಿ ಕೇಶವ ಶೆಟ್ಟಿಗಳೇ ಮೊದಲಾದ ಉದಾರೀ ಶ್ರೀಮಂತ ಸಹಾಯಕಾರರು ಪುಶಂಸಾರ್ಹರಾಗಿರುವರು.

ಗೀತಾ ಪಾರಿತೋಷಕ

ಗೀತಾಜಯಂತಿಯ ನಿಮಿತ್ತ ಗೀತೆಯ 701 ಶ್ಲೋಕಗಳನ್ನೂ ಪಠಿಸಿ ಹೇಳಿದ್ದಕ್ಕೆ ಕಾರ್ಕಳದಲ್ಲಿ ಶ್ರೀ ಮೊಗವೀರ ಮಾಧವ ಪ್ರಭುಗಳ ಮಗನಾದ ಶ್ರೀ ಸಂಜೀವ ಪ್ರಭುಯು ಚಿಪ್ಪು ಮತ್ತು ಶ್ರೀ ಸ್ವಾಮಿಯವರು ಅಧ್ಯಕ್ಷರಾಗಿದ್ದ ಸಭೆಯಲ್ಲಿ ಬಹುಮಾನ ಕೊಂಡಿರುವುದಕ್ಕೆ, ಮೇಲೆ ಹೇಳಿದ ಕಾರಂತರಲ್ಲಿ ಗೀತಾಪಾಠಪಾಠ ಸ್ಪರ್ಧೆಯ ಪರೀಕ್ಷಣವಲ್ಲಿ ಮಂಗಳೂರಿನಲ್ಲಿ ಸೀತಾನದಿ ಗೋಪಾಲ ನ್ಯಾಯರ ಮಗ ಶ್ರೀ ರಾಮದಾಸ ನ್ಯಾಯಿನಂಬ ವಿದ್ಯಾರ್ಥಿಯು ಇದೇ ಗೀತೆಯನ್ನು ಕಂಠೋಕ್ತ ಮಾಡಿದ್ದ ಸಂಬಂಧ ಶ್ರೀ. ವೆಂಕಟ್ರಮಣ ದೇವಸ್ಥಾನದ ಟ್ರಸ್ಟಿಗಳಿಂದ. 1ನೇ ತರಗತಿಯ ಇನಾಮನ್ನು ಈ ತಿಂಗಳ 3ನೇ ವಾರದಲ್ಲಿ ಪಡೆಯುವನೆಂತ ತೀರ್ಥಬರ್ತಕ್ತದೆ. 7-12-'41ರಲ್ಲು ಮಂಗಳೂರಿನಲ್ಲಿ ಸಿ. ಪಿ. ಸಿ. ಕಂಪೆನಿಯಲ್ಲಿ ಇಲೆಕ್ಟ್ರಿಶಿಯನ್ ವಿ. ಕೇಶವ ಕಮ್ತಿಯರ ಪತ್ನಿ ಶ್ರೀ ನಾರಾಯಣಿ ಬಾಯಿಯವರು 18 ಆಪ್ಯಾಯಗಳನ್ನು ಬಾಯಿಪಾಠ ಹೇಳಿ ದಕ್ಕೆ-ಬಹುಮಾನ ಪಡೆದಿರುತ್ತಾರೆ. ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮೈಸೂರು ಸಂಸ್ಥಾನದ ಪ್ರಥಮ ಮತ್ತು ನಿಖಿಲ ಕರ್ನಾಟಕದ ದ್ವಾದಶ ಆಯುರ್ವೇದ ಸಮ್ಮೇಲನಗಳು

ಇದೇ ತಿಂಗಳ ತಾ. 28, 29, 30ನೇ ದಿನ ಸಗಳಲ್ಲಿ ನೈಸೂರು ರಾಜಧಾನಿಯಲ್ಲಿ ಸಂಸ್ಥಾನ ಮತ್ತು ನಿಖಿಲ ಕರ್ನಾಟಕದ ಪ್ರಥಮ ಮತ್ತು ದ್ವಾದಶ ಸಮ್ಮೇಲನಗಳು ಶ್ರೀ ಆರಬಳಿ ಸುಬ್ರಹ್ಮಣ್ಯ ಅಯ್ಯಂಗ್, ಬಿ. ಎಲ್ಲ್. ಕಮಿಶನರ್, ಈ ಮಹಾಶಯರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟವು. ಸ್ವಾಗತ ಸಮಿತಿಯ ನೇತೃತ್ವದಲ್ಲಿ ನಡಿಯುವುದು. ಸಮ್ಮೇಲನವು ಮಂಡಲದ ಕಾರ್ಯನಿರ್ವಾಹಕ ಅಧಿಕಾರವನ್ನು ಮೂತ್ರವಲ್ಲದೆ, ದೇಶಿಯ ವೈದ್ಯದ ಪ್ರಚಾರ, ಅದರ ಸಾಹಿತ್ಯ ರಕ್ಷಣೆ, ವಿಜ್ಞಾನದ ಅಭಿವೃದ್ಧಿ, ಮತ್ತು ಅದರ ಯೋಗದ ಮಹತ್ವವನ್ನು ಹೆಚ್ಚಿಸುವ ಭಾರವನ್ನು ವಹಿಸಿಕೊಂಡಿದೆ. ಉಭಯ ಸಮ್ಮೇಲನ ಕಾಲದಲ್ಲಿ ವೈದ್ಯಕಕ್ಕೆ ಸಂಬಂಧಪಟ್ಟ ಬೀಜ, ಪ್ರಬಂಧ, ಭಾಷಣ ಮತ್ತು ವಸ್ತುಪ್ರದರ್ಶನಗಳೂ ಅವುಗಳ ವಿಮರ್ಶೆಗಳೂ ನಡೆಯುವವು. ೧. ದೃಷ್ಯ ಸಂಭಾಷಾ ಪರಿಷತ್, ೨. ರಸಸಂಭಾಷಾ ಪರಿಷತ್ ಮತ್ತು ೩ ಚಿಕಿತ್ಸಾಸಂಭಾಷಾ ಪರಿಷತ್ತುಗಳನ್ನು ನಡಿಸುವ ವ್ಯವಸ್ಥೆಯನ್ನೂ ಸ್ವಾಗತ ಸಮಿತಿಯವರು ಮಾಡಿದ್ದಾರೆ ಎಂಬುದಾಗಿ ಆಯುರ್ವೇದ ಭೂಷಣ ಶ್ರೀ. ಎಂ. ವಿ. ಶಾಸ್ತ್ರಿಗಳು ಬರೆದು ತಿಳಿಸುತ್ತಾರೆ.

ಮುಳಿಲಿ

ಅಸುಪಾಸು ಗ್ರಾಮಗಳ ಹಳ್ಳಿಗರು ತಾ. 8-12-'41ರಲ್ಲು ಮಳಿಲ ಶ್ರೀ ವೆಂಕಟ್ರಮಣ ದೇವಾಲಯದ ಗೋಪುರದಲ್ಲಿ ಸಭೆಸೇರಿ, ಒಂಬು ಸಾರ್ವಜನಿಕ ಪಾಠಶಾಲೆಯ ತೆರೆಯುವ ನಿರ್ಣಯಮಾಡಿ ಶ್ರೀ ಕೆ. ಶ್ರೀನಿವಾಸ ಬಲ್ಲಾಳರ ಹಸ್ತದಿಂದ 'ಮಳಿಲ ಪಾಚಶಾಲೆಯ'ದ ಉದ್ಘಾಟನಾ ಸಮಾರಂಭವನ್ನು ಜರಗಿಸಿದರು.

ಇದೇ ಕೆಲದಿನಗಳ ಹಿಂದೆ ಇತ್ತೀಚೆಗೆ ಸ್ಥಾಪಿತವಾಗಿರುವ ಈ ಪ್ರಂಚಾಯತ್ ಬೋರ್ಡಿನವರ ಸಲಹೆಯಂತೆ 'ಆರೋಗ್ಯ ಮತ್ತು ಶಿಶುಸಪ್ತಾಹ' ಸಮಾರಂಭವೂ ಜರಗಿತು.

ಕಾರ್ಕಳ

ಉಪಾಧ್ಯಾಯರ ಸಭೆ

ಈ ತೀರ್ಥದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆಯು ತಾ. ೬ರ ದಿನ ಶ್ರೀಮತಿ ಕೀತಾ ಪಿಂಟೋರವರ ಅಧ್ಯಕ್ಷತೆಯಲ್ಲಿ ಕೂಡಿ, ಶ್ರೀ ಯಂ. ಸರ್ವೋತ್ತಮ ಕಾಮತರು ಮತ್ತು ಶ್ರೀಮತಿ ಇಗ್ನೇಶಿಯಾ ಡಿ. ಸೋಜಾರವರು ನೂತನ ಪಾಠವನ್ನು ಕೊಟ್ಟರು. ಡಿ ಇ ಶ್ರೀ ಯು. ಕೃಷ್ಣರಾಯರು ಹಲವು ಸಲಹೆಗಳನ್ನು ತ್ತರು.

ಬೇಂಕಿನ ಸಭೆ

ಸೆಂಟ್ರಲ್ ಕೋಪರೇಟಿವ್ ಬೇಂಕಿನ ವಾರ್ಷಿಕ ಮಹಾಸಭೆಯು ತಾ. ೭ರ ದಿನ ಇಲ್ಲಿ ಶ್ರೀ ಯಂ. ಶಿವರಾಯರ ಅಧ್ಯಕ್ಷತೆಯಲ್ಲಿ ಕೂಡಿ ಆಡಳಿತ ಮಂಡಳಿಯು ತಾಲಿಬಿದ್ದ ಎರಡು ಸ್ಥಾನಗಳಿಗೆ ಶ್ರೀಗಳಾದ. ಆರ್. ಬಿ. ಸಿ. ಪಿ. ಅಂದ್ರಾದೆ ಮತ್ತು ಯಸ್. ನರ್ಸಪ್ಪಯ್ಯನವರು ರನ್ನು ಆರಿಸಿ, ವಾರ್ಷಿಕ ವರದಿ ಲೆಕ್ಕಪತ್ರ ಮೊದಲಾದವು ೧೦ ವರ್ಷ ಪೂರೈಸಿರುವುದಕ್ಕಾಗಿ ಶೆಟ್ಟರಲ್ಲಿ ಮುಂಜಾಗ್ರತೆಯ

ದಕ್ಷಿಣ ಕನ್ನಡದಲ್ಲಿ ಎರಡು ಪರಿಷತ್ತುಗಳು

ಕಾರ್ಕಳದಲ್ಲಿ ಸಹಕಾರೀ ಪರಿಷತ್ತು

ಮಂಗಳೂರಲ್ಲಿ ಮಹಿಳಾ ಪರಿಷತ್ತು

ಕಳೆದ ವಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಪರಿಷತ್ತುಗಳು ಕೂಡಿದವು. ಕಾರ್ಕಳದ ಬೋರ್ಡ್ ಹೈ ಸ್ಕೂಲ್ ವಠಾರದಲ್ಲಿ ದಕ್ಷಿಣ ಕನ್ನಡ ಸಹಕಾರೀ ದ್ವಿತೀಯ ಪರಿಷತ್ತು ತಾ. ೬, ೭ರಂದು ಸರ್ವೆಂಟ್ಸ್ ಆಫ್ ಇಂಡಿಯಾದ ಸದಸ್ಯರಾದ ಶ್ರೀ ಆರ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಿಂದ ಕೂಡಿತು. ಮಂಗಳೂರು ಜಿಸೆಂಟ್ ಗರ್ಲ್ಸ್ ಹೈಸ್ಕೂಲಲ್ಲಿ ಜಿಲ್ಲಾ ಮ್ಲಹಿಳೆಯರ ತೃತೀಯ ಪರಿಷತ್ತು ತಾ. ೬, ೭ರಂದು ಶ್ರೀಮತಿ ಕೃಷ್ಣಬಾಯಿ ಪಂಜೀಕರರ ಅಧ್ಯಕ್ಷತೆಯಿಂದ ಜರಗಿತು. ಎರಡು ಪರಿಷತ್ತುಗಳಿಗೂ ಬೆಲ್ಲೆಯ ಬೇರೆ ಬೇರೆ ಕಡೆಗಳಿಂದ ಪ್ರತಿನಿಧಿಗಳು ಪ್ರೇಕ್ಷಕರು ತುಂಬಾ ಮಂದಿ ಆಗಮಿಸಿದ್ದರು. ಸಹಕಾರೀ ಪರಿಷತ್ತಿನ ಧ್ವಜಾರೋಹಣ ಶ್ರೀಮತಿ ಎಂ. ಲೀಲಾಬಾಯಿ ಕಾಮತರಿಂದಲೂ, ಮಹಿಳಾ ಪರಿಷತ್ತಿನ ಉದ್ಘಾಟನೆ ಶ್ರೀಮತಿ. ಕಮಲಾಬಾಯಿ ಜೋಂಗರಕೇರಿಯ ನವಿಂದಲೂ ನೆರವೇರಿತು. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಎಂ. ಎಲ್. ಸಿಯವರು ಸಹಕಾರ ಪರಿಷತ್ತಿನ ಉದ್ಘಾಟನೆ ಮಾಡಿದರು.

ಸಹಕಾರೀ ಪರಿಷತ್ತಿನ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶ್ರೀ ಕೆ. ಎಲ್. ಕುಡ್ವರೂ ಮಹಿಳಾ ಪರಿಷತ್ತಿನ ಸ್ವಾಗತಾಧ್ಯಕ್ಷೆಯಾಗಿ ಶ್ರೀಮತಿ ಪಂಡಿತ ರಮಬಾಯಿಯವರೂ ಭಾಷಣ ಮಾಡಿದರು. ಶ್ರೀ ಕುಡ್ವರು ತಮ್ಮ ಸ್ವಾಗತ ಭಾಷಣದಲ್ಲಿ ಕಾರ್ಕಳವು ಜೈನ ಸಂಸ್ಕೃತಿಯ ನೆಲೆಬೀಡೆಂದೂ, ಮುದ್ದಣ್ಣನ ಹುಟ್ಟೂರೆಂದೂ ತಿಳಿಸುತ್ತಾ, ಸಹಕಾರ ತತ್ವವು ಹಳ್ಳಿಯ ಜನರ ಜೀವನವನ್ನು ಹೊಂದಿಕೊಂಡಿರಬೇಕಾದ ವಿಷಯವನ್ನು ಪ್ರಸ್ತಾಪಿಸಿದರು. ಶ್ರೀಮತಿ ರಮಾಬಾಯಿಯವರು ಬೇರೆ ಬೇರೆ ತಾಲೂಕುಗಳಿಂದ ಬಂದ ಮಹಿಳಾ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಭಗಿನೀ ಸಮಾಜದ ಚಟುವಟಿಕೆಗಳನ್ನು ವಿವರಿಸಿದರು.

ಸಹಕಾರೀ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸೂರ್ಯನಾರಾಯಣರಾಯರು ತಮ್ಮ ಭಾಷಣದಲ್ಲಿ, ಕೃಷಿಕರ ಸಮಸ್ಯೆಗಳನ್ನು ವಿವರಿಸುತ್ತಾ, ವಿದೇಶದಲ್ಲಿ ಸಹಕಾರೀ ತತ್ವದಿಂದ ಸಿಕ್ಕ ಪ್ರಯೋಜನವನ್ನು ಹೇಳುತ್ತಾ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರವು ಹೊಂದಿದ ಪ್ರಗತಿಯನ್ನು ಮೆಚ್ಚುತ್ತಾ, ಸಹಕಾರ ಪದ್ಧತಿಯಲ್ಲಿ ಆಗತಕ್ಕ ಸುಧಾರಣೆಗಳನ್ನು ತಿಳಿಸುತ್ತಾ, ಸಹಕಾರದ ಧ್ಯೇಯಗಳು ಜನತೆಯಲ್ಲಿ ಹಬ್ಬಬೇಕಾದ ಅವಶ್ಯಕತೆಯ ವಿಚಾರವಾಗಿ ಹೇಳಿದರು. ಮಹಿಳಾ ಪರಿಷತ್ತಿನ ಅಧ್ಯಕ್ಷೆಯಾದ ಶ್ರೀಮತಿ ಪಂಜೀಕರರು ತಮ್ಮ ಸರ್ವೋದಯಾತ್ಮಕವಾದ ಭಾಷಣದಲ್ಲಿ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ತಿಳಿಸಿ, ಮಹಿಳಾ ಸಮಾಜದಲ್ಲಿ ಆಗತಕ್ಕ ಸುಧಾರಣೆ, ಭಾರತದ ಮಹಿಳಾಮಣಿಯರು, ದೇಶದ ಸ್ವಾತಂತ್ರ್ಯಕ್ಕಾಗಿ ಸಲ್ಲಿಸತಕ್ಕ ಸೇವೆ ಮೊದಲಾದವುಗಳನ್ನು ಹೇಳಿ, ಗ್ರಾಮಸ್ಥ ಸ್ತ್ರೀಯರ ಉನ್ನತಿ ಬಗ್ಗೆ ಮಡಿಯಬೇಕೆಂದೂ ನುಡಿದರು.

ಸಹಕಾರೀ ಪರಿಷತ್ತಿನಲ್ಲಿ, ಜನತಾಭಿಪ್ರಾಯವನ್ನು ತಿಳಿದು ಸಹಕಾರ ಶಾಖೆಯ ಹೊಸ ಕ್ರಮ ನಿಬಂಧನೆಗಳನ್ನು ಸರಕಾರವು ಏರ್ಪಡಿಸಬೇಕೆನ್ನುವ, ೩ ವರ್ಷಗಳ ಅವಧಿಯದ್ದಿನ್ನು ೫ ವರ್ಷಗಳಿಗೇರಿಸಬೇಕೆನ್ನುವ, ಲಿಕ್ವಿಡೇಷನಿಗೆ ಹೋಗಿರುವ ಸಹಕಾರಿ ಸಂಘಗಳಲ್ಲಿ ಉಳಿದ ಹಣವನ್ನು ಆ ಗ್ರಾಮದಲ್ಲಿ ಅಥವಾ ಆ ಜಿಲ್ಲೆಯಲ್ಲಿ ಉಪಯೋಗಿಸಬೇಕೆನ್ನುವ, ಕೆಪ್ಪುಲ್ಡ್ ತರಗತಿಯ ಉನ್ನತಿಗಾಗಿ ಕಾಮಗಾರಿ ಕಂಟ್ರಾಕ್ಟಿನ ಸಂಘಗಳನ್ನೇರ್ಪಡಿಸಬೇಕೆನ್ನುವ, ಮಹಿಳೆಯರ ಕೋಪರೇಟಿವ್ ಸಂಘಗಳೂ, ಅವರ ಸದಸ್ಯತ್ವವೂ ಹೆಚ್ಚಬೇಕೆನ್ನುವ, ವ್ಯವಹಾರ ಸಂಘಗಳ ಕೊರತೆಗಳನ್ನು ವಿಚಾರಿಸಿ ಅವುಗಳನ್ನು ಅಭಿವೃದ್ಧಿಗೊಳಿಸಬೇಕೆನ್ನುವ, ಸರಕಾರವು ಉತ್ಪತ್ತಿಯ ಈದಿನ ಸಾಲಕ್ಕಾಗಿ ಅಧಿಕ ದರದಲ್ಲಿ ಸಾಲಕೊಡುವ, ಆ ಉತ್ಪತ್ತಿಯನ್ನು ಮಾರಲೂ ಸಹಕಾರಿ ಸಂಘಗಳು ಪ್ರಯತ್ನಿಸುವ ಪ್ರಚಾರಕಾರ್ಯಕ್ಕೆ ಸ್ವಾಂತಿಕ ಸರಕಾರ ಹೆಚ್ಚಿನ ಗ್ರಾಂಟ್ ಕೊಡಬೇಕೆನ್ನುವ, ನಿತವ್ಯಯದ ಕಡೆಗೆ ಸಂಘಗಳು ಲಕ್ಷ್ಯಕೊಡಬೇಕೆನ್ನುವ, ಗ್ರಾಮಜೀವನಕ್ಕೆ ತಕ್ಕ ಯೋಜನೆಗಳನ್ನು ಸಹಕಾರಿ ಸಂಘಗಳನ್ನು ಹೊಂದಿಸಿಕೊಳ್ಳಬೇಕೆನ್ನುವ, ಕೈಮಗ್ಗದವರಿಗೆ ಗಿರಣಿ ನೂಲುಗಳು ದೊರೆವಂತೆ ನೂಲಿನ ಬೆಲೆಯನ್ನು ಸರಕಾರ 'ಕಂಟ್ರೋಲ್' ಮಾಡಬೇಕೆನ್ನುವ ಮುಂತಾದ ನಿರ್ಣಯಗಳು ಮಂಜೂರಾದವು.

ಮಹಿಳಾ ಪರಿಷತ್ತಿನಲ್ಲಿ ಭೋಪಾಪದ್ಧತಿಯ ರದ್ದತಿಯಾಗಬೇಕೆನ್ನುವ, ಕಡ್ಡಾಯ ಪ್ರಾಥಮಿಕ ಶಿಕ್ಷಣವಾಗಬೇಕೆನ್ನುವ, ಮಹಿಳೆಯರಿಗೆ ಹಿರಿಯರ ಆಸ್ತಿಯಲ್ಲಿ ಪಕ್ಕಿರಬೇಕೆನ್ನುವ, ಆರತರ್ಜಾತಿಯ ಸಕ್ಕವಿರಬೇಕೆನ್ನುವ, ಹಿಂದಿಯು ರಾಷ್ಟ್ರಭಾಷೆಯಾಗಬೇಕೆನ್ನುವ, ಗುಡಿಕೈಗಾರಿಕೆ ಖಾದಿಪ್ರಚಾರಗಳಾಗಬೇಕೆನ್ನುವ, ಬಹುಪತ್ನಿತ್ವ ನಿರೋಧ, ಅಸ್ಪೃಶ್ಯತಾನಿವಾರಣೆಯಾಗಬೇಕೆನ್ನುವ, ಜಲಚಿತ್ರಗಳ ಅಶ್ಲೀಲತೆ ನಿಷೇಧ, ಅನೇ ತರಗತಿ ಪಾಸಾದವರನ್ನು ಅನೇ ಹಾರ್ಮಿಗೆ ತೆಗೆದುಕೊಳ್ಳಬೇಕೆನ್ನುವ, ವರದಕ್ಷಿಣೆ ನಿಷೇಧ, ಕನ್ನಡ ನುಡಿಯ ಪೋತ್ಸಾಹ ಮುಂತಾದ ನಿರ್ಣಯಗಳಾದುವು. ಮಹಿಳಾ ಪರಿಷತ್ತಿನ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಶೆಟ್ಟಿಯವರು ಕೆರೆದವರಿಗೆ ವಂದನಾರ್ಪಣೆಮಾಡಿದರು

ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆದ

ನವೀನ ಭೂವಿವರಣೆ

ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geogrhpy)
(ಭೂಗೋಳ ಶಾಸ್ತ್ರದಲ್ಲಿ ಡಿಪ್ಲೊಮಾ ಪಡೆದವರು)

ಈ ಪುಸ್ತಕಗಳಲ್ಲಿನ್ನು ವಿದ್ಯಾರ್ಥಿಗಳಿಗೆ ಎಟ್ಲಾಸ್ ಕೊಂಡುಕೊಳ್ಳುವ ಅವಶ್ಯವಿಲ್ಲ.

ಪ್ರತಿ ಪುಸ್ತಕದಲ್ಲಿ ಬಣ್ಣಬಣ್ಣದ ಭೂಪಟಗಳಿವೆ.

ಅನೇಕಾನೇಕ ಚಿತ್ರಪಟಗಳಿಂದ ಕೂಡಿದ್ದು, ಪ್ರತಿ ಪುಸ್ತಕದ ಅಂತ್ಯದಲ್ಲಿ ಅಭ್ಯಾಸಗಳನ್ನು ಮಾಡಲು ಪ್ರಶ್ನೆಗಳನ್ನೂ ಕೊಟ್ಟಿವೆ.

4ನೆಯ ಪುಸ್ತಕ 0 6 0 5ನೆಯ ಪುಸ್ತಕ 0 7 0

6, 7 ಮತ್ತು 8ನೆಯ ಪುಸ್ತಕಗಳು ಅಚ್ಚಿನಲ್ಲಿವೆ.

ಪುಸ್ತಕಗಳು ಬೇಕಾದಲ್ಲಿ ೫ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಧಾಪಖಾನೆ, ರಥಬೀದಿ ಮಂಗಳೂರು.

ಸಿನೆಮಾ ಸುದ್ದಿ

"ನಟ್ಟನಟಿಯರು ಶೀಲ ಸಂಪನ್ನರಾಗಬೇಕು"

ಚಿತ್ರಗಳು ಜೀವನದಲ್ಲಿ ನೆಮ್ಮರಿಯ ನ್ನುಂಟು ಮಾಡಬೇಕು; ವಿನೋದವನ್ನುಂ ಟು ಮಾಡಬೇಕು; ಸಾವಿರಾರು ಕುಲೀನ ಸ್ತ್ರೀಯರು ಚಿತ್ರ ನೋಡುತ್ತಾರೆ; ಅವರ ಜೀವನದಲ್ಲಿ ವಿಕಾರವನ್ನುಂಟು ಮಾಡ ಬಾರದು; ಅಂತಹ ಚಲನ ಚಿತ್ರಗಳನ್ನು ನಿಷೇಧಿಬೇಕು; ನಟನಟಿಯರು ಶೀಲ ಸಂಪನ್ನರಾಗಬೇಕು; ಅಂತಹವರನ್ನೇ ಸಿನೆಮ ನಿರ್ಮಾಪಕರು ನೇಮಿಸಬೇಕು; ಎಂದು ವೈಮಅರೇಬನ ವ್ಯಾಣಯ ವ್ಯವಹಾರದ ಕುರಿತು 'ಚಿತ್ರಪಟ' ಪತ್ರಿ ಕಾ ಸಂಪಾದಕರು ಬರೆಯುತ್ತಾರೆ.

ಮೂರ್ವೀ ಅಥವಾ ಮೇರಿ ಮನಿಯಾ

ನೇಶನಲ್ ನವರ ಮೂರ್ವೀ ಅಥವಾ ಮೇರೀ ದುನಿಯಾ ಚಿತ್ರವು ರಾಷ್ಟ್ರೀಯ ಏಕ್ಯವನ್ನು ಬೋಧಿಸುವ ಕಥೆಯಾಗಿದೆ. ಮಜಾರ್ ಖಾನನ ನಿರ್ದೇಶಕತ್ವ. ಮಜಾರ್ ಖಾನ್, ಮಿಸ್ ಕೌಸಲ್ಯ, ಹರಿಶಿವ ದಾಸಿನಿ, ಮಿಸ್ ಮಿರಾ, ಎ. ಹಸೇನ್, ಮಜೀದ್, ಶಾರದಾರಾಣಿ, ಶಾಮು ದಯಾಭೀವಿ, ನಾಜಿರ್, ಗೋಸೆ ಮೊದ ಲಾದವರು ಪಾತ್ರವರ್ಗದವರು.

'ರೋಟಿ' ತಯಾರಾಗುತ್ತಿದೆ

ನೇಶನಲ್ ನವರ 'ರೋಟಿ' ಚಿತ್ರವು ತಯಾರಾಗುತ್ತಿದೆ. ಚಂದ್ರಮೋಹನ್, ಶೇಕ್ ಮುಕ್ತಾರ್, ಸಿತಾರಾ ಮೊದಲಾ ದವರು ಪಾತ್ರನಿರ್ವಹಿಸಲ್ಲಿ. ಅನಿಲ ವಿಶ್ವಾ ಸರ ನಿರ್ದೇಶಕತ್ವ.

ಹಂಸಾ. ಪ್ರಭಾತದ ನವತಾರೆ

ಹೊಸ ಹೊಸ ಸಿನೆಮಾ ತಾರೆಗಳನ್ನು ಬೆಳಗಿಸುವುದರಲ್ಲಿ ಪ್ರಭಾತ ಕಂಪನಿ ಹೆ ಸರು ಪಡೆದಿದೆ. ಪ್ರಭಾತದ ಇತ್ತೀಚೆಯ ಸಿನೆಮಾ ತಾರೆ ಹಂಸಾ. 'ಸಂತ ಸಖು' ಚಿತ್ರದಲ್ಲಿ ಆಕೆ ಸಖು ನಾತ್ರನಹುಸಿದ್ದಾಳೆ ಹಂಸಾ ಈ ಚಿತ್ರದಲ್ಲಿ ಅತ್ಯಂತ ಸಂಕಷ್ಟ ಕಾಲದ ನಟನೆ ತೋರಿಸುವಲ್ಲಿ ತನ್ನ ಅ ನ್ಯತೆಯ ನಟನಾಶಕ್ತಿಯನ್ನು ಪ್ರದರ್ಶಿಸಿ ದ್ದಾಳೆ.

ಬೊಂಬಯ್ಯಿಯಲ್ಲಿ ಉದಯಶಂಕರ

ಬೊಂಬಯಿಯಲ್ಲಿ ಉದಯಶಂಕರ ನಾಟ್ಯಮಂಡಲವು ಈಗ ನರ್ತನ ಪ್ರದರ್ಶ ನ ನಡಾಯಿಸುತ್ತಿದೆ. ಆಲ್ಮೋರದಿಂದ ಶಂ ಕರ ನರ್ತಕರ ಜೊಟಬಂದಿದೆ. ತಿರಾ ತಾರ್ಜನ, ಕರ್ಬು ಮತ್ತು ಮುಂಕ್ ನೊದಲಾದ ಅಭಿನಯ ಪ್ರದರ್ಶನಗಳು ತೋರಿಸಲ್ಪಡುತ್ತವೆ. ಸಿವ್ಕಿ, ಜೋಶಾ, ಅಮಲಾ, ದೇವೇಂದ್ರ, ರವೀಂದ್ರ ಮೊದ ಲಾದ ನಟ ನಟಿ ಶಿರೋಮಣಿಗಳೂ ಇ ರುವರು.

'ಆಲಜಿ'ಯಲ್ಲಿ ಯಶೋಧರಾ ಕಜ್ಜು

ನೇಶನಲ್ ನವರ 'ಆಲಜಿ' ಚಿತ್ರದಲ್ಲಿ ಮಿಸ್ ಯಶೋಧರಾ ಕಜ್ಜು ಎಂಬ ಹೊ ಸ ನಟಿ ಅಭಿನಯಿಸುವಳು. ಕೃಷ್ಣಕಾಂ ತನು ಯಶೋಧರಳ ಜತೆಗಾರ ನಟನು.

ತಮಾಶಾ

ಸೌಭಾಗ್ಯ ವಿಕ್ಚರ್ಸಿನವರು ತಮಾಶಾ ಎಂಬ ಹಾಸ್ಯ ಚಿತ್ರ ತಯಾರಿಸುವರು. ಸರ್ದಾರ್ ಅಖ್ತರ್, ಊರ್ಮಿಳಾ, ಗೋವೆ, ದೇವಾಸ್ಕರ್, ಡಬ್ಲ್ಯು. ಎ. ಖಾನ್ ಮೊದಲಾದವರು ನಟನಟ ವರ್ಗ ದವರು.

ಡೋಕ್ಟರ್-ನ್ಯೂಥಿಯೇಟರ್ ಚಿತ್ರ

ನ್ಯೂಥಿಯೇಟರ್ಸನವರು ಇತ್ತೀಚೆಗೆ ಹಿಂದುಸ್ತಾನಿಯಲ್ಲಿ ತಯಾರಿಸಿದ ಡೋ ಕ್ಟರ್ ಚಿತ್ರವು ಪ್ರಕಟಣೆಗೆ ಸಿದ್ಧವಾಗಿದೆ. ರಿಳಂರಲ್ಲು ಪ್ರಸಿದ್ಧನಾದ ಅಕ್ಕಿತ್ತವ. ಬಂಗಾಲೀ ಚಿತ್ರವೆಂದು ಕೀರ್ತಿಹೊಂದಿದ ಚಿತ್ರದ ಭಾಷಾಂತರವಿದು. ಪಂಕಜ್, ವನ್ನಾ, ಅಹಿಸ್ ಜೊಥಿ, ಅಮಂಮಲ್ಲಿ ಕ್ ನೇಮೊ ಮೊದಲಾದವರು ಪಾತ್ರ ವರ್ಗದಲ್ಲಿ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticurra Ointment) ಕಸ್ಮವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ವಾಸದಾಯಕವಾಗಿ ವೇದನೆಗೊಳಿಸಿ ಪೀಡಾದಿಸುವ ದೀರ್ಘಕಾಲದ ಕಾಲುಳುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಿಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾಕುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಿಪಟ್ಟಿದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮೊತ್ತವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಳ್ಳುಳ್ಳದ್ದು.

ಕಜ್ಜಿ, ಕುರು, ಕುರಿಕಜ್ಜಿ, ಗಾಯ, ಪೆಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಮನ್ನೇ (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಹುತ ಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು
CUTICURA OINTMENT

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವ್ರ ಪಾಲನೆಯಿಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ನಿಷ್ಠಾಚ್ಛಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮುಂದಿಗೆಲ್ಲ ನಮ್ಮ ವಿನಂತಿ ವಿನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಲೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ಕರುಪಿಸುವುದು.

½ ಸೇರಿಗೆ ರೂ. 4



ಅಷ್ಟಾವಧಾನಿ ಡಾ॥ ಜೋಗೆಪ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್. ಆಯುರ್ವೇದ ಶಾಸ್ತ್ರಿ, (ಆನರರಿ)
ಭೂಗಲ್ಲೂರ ಕಾಲೇಜಿನ ಮಾಜಿ ಕೆಮಿಸ್ಟರ್ ಪ್ರೊಫೆಸರರು.
ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಚಾಪ್ಲೆ, ಮದ್ರಾಸು.

ಶಾಖೆಗಳು ಮತ್ತು ವಿಜಿನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್: ಎ. ಕಂಮೆನ, ಹಂಪನಕಟ್ಟಾ, ಮಂಗಳೂರು

ರೈಲು ಬಂಡಿಗಳ ಸಮಯ

ಇವೇ ಜುಲ್ಯಾ ತಾ. 1ರಂದೆ ಪ್ರಾರಂಭವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತೆ:—

ಗಾಡಿಗಳು ಹೊರಡುವ ಗಂಟೆ ತಲ್ಪುವ ಗಂಟೆ

ಗೂಡ್ಸು ಬಂಡಿ 8.45 ಪ್ರಾತ 9.25 ಪ್ರಾತ
ನೀಲೇಶ್ವರದವರೆಗೆ 7.32 ಬೇಗ್ಗೆ 1.0 ಅಪರಾಹ್ನ
ಮಲಬಾರು ಎಕ್ಸ್ಪ್ರೆಸ್ 9.5 ಬೆಳಿಗ್ಗೆ 5.15 ಸಾಯಂ.
ಪಾಲಾಟ್ ಪೇಟೆ
ಪೆಸೆಂಜರ್ 12.0 ಮಧ್ಯಾಹ್ನ 2.55 ಸಾಯಂ.
ಕೊಯಿಕೋಡು
ವರೆಗೆ 3.25 ಸಾಯಂ. 6.50 ಸಾಯಂ.
ಶ್ಶನ್ನೂರು
ವರೆಗೆ 5.52 ಸಾಯಂ. 9.40 ಪೂರ್ವಾಹ್ನ

ವಿಚಿತ್ರ ಪ್ರಪಂಚ

೧೧೨ ವರ್ಷ ಬದುಕಿದ ಗುಟ್ಟು?

'ಹಕಯೋಗ'ದ ಪ್ರಭಾವ

ಅಲ್ಫ್ರೆಡ್ ಜಾರ್ಲ್ಸ್ ಸುನೇಜ್ ಎಸ್ನೋಲ್ಡ್ ಎಂಬವನು ೧೧೨ ವರ್ಷ ತುಂಬಿ ಕಳೆದ ತಿಂಗಳು ಲಿವರ್‌ಪೂಲಿನ ತನ್ನ ಮನೆಯಲ್ಲಿ ಮರಣಹೊಂದಿದನು. ಆತನು ತನ್ನ ದೀರ್ಘ ಜೀವನವು ಕಾಶಿಯ ಸಾಧುವೊಬ್ಬನಿಂದ ಕಲಿತ 'ಹರಯೋಗ'ದ ಮಹಾತ್ಮೆಯಿಂದ ಎಂಬುದಾಗಿ ಹಿಂದೆ ಟೈಮ್ಸ್ ಪತ್ರಿಕೆಯಲ್ಲಿ ಲೇಖನ ಬರೆದಿದ್ದನು.

ಅಲ್ಫ್ರೆಡ್ ಪತ್ರಿಕಾ ವರದಿಗಾರನಾಗಿ ಕಟ್ಟಡ ಮಹಾ ಯುದ್ಧದ ಕಾಲದಲ್ಲಿ ಕಾಶಿಗೆ ಬಂದವನು ಅಲ್ಲಿ ೧೪೬ ವರ್ಷ ವ್ಯಾಯುದ ಚಿಕಾನಂದ ಸ್ವಾಮಿ ಎಂಬವನಿಂದ ಹರಯೋಗವನ್ನು ಕಲಿತುಕೊಂಡನು.

ನೀಗ್ರೊಗಳಿಗೆ ಕತ್ತಲೆಯಲ್ಲಿ ಹೆಚ್ಚು ದೃಷ್ಟಿ ಶಕ್ತಿಯಿದೆ

ಬಿಳಿ ಜನರಿಗಿಂತ ನೀಗ್ರೊಗಳು ಕತ್ತಲೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣುವರು ಎಂಬುದು ಕೆನಡಾ ಮತ್ತು ಅಮೆರಿಕಗಳಲ್ಲಿ ಮಾಡಿದ ಸಂಶೋಧನೆಗಳಿಂದ ರುಜುವಾಗಿದೆ.

ವಿಮಾನಗಳಲ್ಲಿ ಕುಳಿತು ೫೦೦೦ ಫೀಟು ಎತ್ತರದಿಂದ ಕತ್ತಲೆಯಲ್ಲಿ ೫೦ ನೀಗ್ರೊ ನೌಕಾಸೈನಿಕರಲ್ಲಿ ೩೮ ಮಂದಿಯೂ ತಮ್ಮ ಗುರಿಯನ್ನು ಕಂಡು ಹಿಡಿದರಂತೆ. ಅದರಲ್ಲಿ ಬಿಳಿಯರು ಕೇವಲ ಇಬ್ಬರು ಮಾತ್ರ ನೋಡಲು ಶಕ್ತರಾದರು.

ಖಂಡಗಳು ಹೇಗೆ ವಿಭಾಗವಾದವು

ಆಫ್ರಿಕ ಮತ್ತು ಅಮೆರಿಕ ಖಂಡಗಳು ಒಮ್ಮೆ ಒಂದೇ ಆಗಿದ್ದು ಮತ್ತು ಎರಡಾಗಿ ಪ್ರತ್ಯೇಕವಿ ಭಾಗವಾದವುಗಳೆಂದು ಬ್ರಿಟಿಷ್ ಭೂಗೋಳ ತಜ್ಞರೊಬ್ಬರು ಈಗ ಹೇಳುತ್ತಾರೆ

ಹಿಂದಕ್ಕೆ ಪ್ರಪಂಚದ ಎಲ್ಲಾ ಖಂಡಗಳೂ ಒಂದೇ ದೊಡ್ಡ ಭೂಭಾಗವಾಗಿದ್ದು ಕಾಲಕ್ರಮೇಣ ಒಂದೊಂದೇ ಬೇರೆ ಬೇರೆಯಾದುವೆಂದೂ ಕೆಲವರು ವಾದಿಸುತ್ತಾರೆ. ಗ್ರಹಗಳ ಶಕ್ತಿಯಿಂದ ಹೀಗೆ ವಿಭಾಗವುಂಟಾಯಿತೆಂದು ಹೇಳಲಾಗಿದೆ ಈಗಲೂ ಕೆಲವು ಖಂಡಗಳು ದೂರದೂರ ಹೋಗುತ್ತಿವೆಯಂತೆ. ಗ್ರೀನ್‌ಲೆಂಡ್ ಮತ್ತು ಸ್ಕಾಟ್‌ಲೆಂಡುಗಳು ಈಗ ಮೊದಲಿಗಿಂತ ೬೦ ಫೀಟು ದೂರವಾಗಿರುವಂತೆ.

ವಿಜ್ಞಾನಯುಗ

ಶಿಶುಗಳ ಬುದ್ಧಿವಂತಿಕೆಯ ಪರೀಕ್ಷೆ

ಮಾನಸ ಶಾಸ್ತ್ರಜ್ಞರು ಎಲ್ಲಾ ವ್ಯಾಯುದ ಜನರ ಬುದ್ಧಿವಂತಿಕೆಗಳನ್ನೂ ಪರೀಕ್ಷಿಸುವ ಪ್ರಯೋಗವನ್ನು ಕಂಡು ಹಿಡಿದಿರುವರು. ಮಕ್ಕಳ ಬುದ್ಧಿವಂತಿಕೆಯನ್ನು ಪರೀಕ್ಷಿಸುವ ಒಂದು ವಿಧಾನವು ಮುದ್ಧವನ್ನು ಪ್ರಯೋಗಿಸಿ. ಅದರ ಪರಿಣಾಮವು ಮಗುವಿನ ಮೇಲೆ ಹೇಗಾಗುತ್ತದೆಂದು ನೋಡುವುದರಿಂದ ಗೊತ್ತಾಗುವುದು.

ಇದರಿಂದ ಮಕ್ಕಳಿಗೆ ವಿವರೀತ ಮದ್ಯ ಕುಡಿಸಬೇಕೆಂದಲ್ಲ ಮದ್ಯವನ್ನು ಬೊಟ್ಟಾಗಿ ಮಗುವಿನ ಹೊಟ್ಟೆಗೆ ಚುಮುಕಿಸಬೇಕು. ಮಗು ತನ್ನ ಕಾಲನ್ನೆಳೆದು ಕುಳಿತುವುದಿದ್ದರೆ ಅದು ಬುದ್ಧಿವಂತವಾಗಿರುವುದೆಂದು ತಿಳಿಯಬೇಕು. ಮಗು ಉದಾಸೀನವಿದ್ದರೆ ಮುಂದೆ ಜಡಬುದ್ಧಿಯಾಗುವುದೆಂದು ಊಹಿಸಬೇಕು ಹೀಗೆ ಇನ್ನೂ ಅನೇಕ ಪ್ರಯೋಗಗಳಿವೆಯೆಂದು ಮಾನಸ ಶಾಸ್ತ್ರಜ್ಞರ ಹೇಳಿಕೆ.

◆ ◆ ◆

ಗ್ಲಾಸು ಸಂಕಗಳು ಮತ್ತು ಗ್ಲಾಸು ಟಯರುಗಳು

ಯುದ್ಧ ಕಾಲದಲ್ಲಿ ಕಬ್ಬಿಣ ಉಕ್ಕುಗಳು ಸಿಗುವುದು ದುರ್ಲಭವಾಗುತ್ತಿರುವುದರಿಂದ, ಈಗ ಅವುಗಳ ಬದಲಾಗಿ ಬೇರೆನನ್ನಾದರೂ ಉಪಯೋಗಿಸಲು ಆಗುತ್ತದೆಯೇ ಎಂದು ವೈಜ್ಞಾನಿಕರು ಸಂಶೋಧಿಸಿ ಗ್ಲಾಸನ್ನು ಉಪಯೋಗಿಸಬಹುದೆಂದು ಕಂಡುಹಿಡಿದಿರುವರು.

ಕಟ್ಟಡ, ಸಂಕ, ಟಯರು ಮೊದಲಾದವುಗಳಿಗೆ ಈಗ ಕಬ್ಬಿಣದ ಬದಲು ಗ್ಲಾಸನ್ನು ಉಪಯೋಗಿಸತೊಡಗಿದ್ದಾರೆ. ಸಂಕ, ಕಟ್ಟಡಗಳ ಬಗ್ಗೆ ಗ್ಲಾಸನ್ನು ಉಪಯೋಗಿಸಿ ಕೃತಕೃತ್ಯರಾಗಿರುವರು. ಟಯರಿನ ವಿಷಯದಲ್ಲಿ ಇನ್ನೂ ಹೆಚ್ಚಿದ ಸಂಶೋಧನೆ ನಡೆಯುತ್ತಿದೆ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

YOUR SHARE OF PROSPERITY

Some people, you may have noticed, get more than their share of prosperity while others get less In some cases it is no doubt all a matter of luck But often the difference may be traced to a modest bank account. Are you enjoying your due share of prosperity? If not, opening a bank account may help you to turn the tide of so-called luck

CANARA BANK LIMITED.
Estd: 1906.

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ —
ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಭದ್ರ ಮುಂತಾದುವನ್ನು ಗುಣವಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು
ಪಾರದರ್ಶಕ—ಶುದ್ಧ
ಕೋಮುವಾದ ಪರಿಮಳ

ಪಶ್ಚಿಮ ಕನ್ನಡದ ಡಿಸ್ಟ್ರಿಬ್ಯೂಟರರು—
ಕಾರ್ನೇಶನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

BHUVANENDRA PRODUCTS LTD.,

Head Office and Factory:
KATAPADI S Kanara.

Depots:
1 Maharatha Galli, Hubli.
2 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಆಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ವೀಕಿಸ್ಟರು. —
ಯು ಪಾಂಡುರಂಗ ನಾಯಕ್, ರಥಬೀದಿ.
ಶಾಳವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M B B S L M & S, ಬಲ್ಮಠ

THE PIE-MONEY BANK, LTD.
Maidan Road, MANGALORE.
Undertakes all kinds of Banking Business. Current account at 2½per annum. Savings Bank Deposits at 4½% per annum.
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 un regularly on systematic lines. Unique Banking facilities to Businessmen and interested Public
Apply for particulars–
K. R. GURU, *Managing Director.*

The Bank of Mangalore Limited.
Branches—MOODABIDRI & PADUBIDRI
HEAD OFFICE MANGALORE ESTD 1931
All kinds of Banking Business transacted.
Fixed Deposits received at rates ranging from 3 to 5%.
INTEREST PAYABLE QUARTERLY
Interest on Savings Bank Deposits allowed at at 2½%

ಉಡುಪಿ ಪರ್ಯಾಯ ಮಹೋತ್ಸವ

ಉತ್ಸವಾರಂಭ **8-1-1942** ಸಂಕ್ರಮಣ ಉತ್ಸವ 13–1–1942 ಚೂರ್ಣೋತ್ಸವ 14-1-1942
ಏಳುಪವರ ಉತ್ಸವ **16–1–1942** ಪರ್ಯಾಯ ಪಟ್ಟವೇರುವ
ಶ್ರೀ ಕೃಷ್ಣಾಪುರ ಸ್ವಾಮಿಗಳ ಪರ್ಯಾಯ ಉತ್ಸವ **17-1-1942**

ಪರ್ಯಾಯ ಪಟ್ಟದಿಂದ ಏಳುವವರು:—
ಶ್ರೀ ಅಧಮಾರು ಮಠದ
ಶ್ರೀ ವಿಭುದೇಶಾನ್ಯ ತೀರ್ಥ
ಶ್ರೀಪಾದಂಗಳವರು

ಶ್ರೀ ಕೃಷ್ಣನ ಸನ್ನಿಧಿಯಲ್ಲಿ ನಿಮ್ಮ ಭಕ್ತಿಯನ್ನು ಅರ್ಪಿಸಲು ಅತ್ಯುತ್ತಮ ಸಂದರ್ಭ. ಇಲ್ಲಿ ಸಮಗ್ರ ಕರ್ನಾಟಕದ ಭಕ್ಷ್ಯ ತಿರೋಮಣಿಗಳು ಬಂದು ಸೇರುವರು.

ಪರ್ಯಾಯ ಪಟ್ಟವೇರುವವರು:—
ಶ್ರೀ ಕೃಷ್ಣಾಪುರ ಮಠದ
ಶ್ರೀ ವಿದ್ಯಾರಣ್ಯ ತೀರ್ಥ
ಶ್ರೀಪಾದಂಗಳವರು

ಯಾತ್ರಾರ್ಥಿಗಳಿಗೆ ಸರ್ವಾನುಕೂಲತೆಯ ವ್ಯವಸ್ಥೆಗೊಳಿಸಿಯದೆ
ಉಡುಪಿಯಲ್ಲಿ ಉಳಕೊಳ್ಳಲಿಕ್ಕೆ ನಮ್ಮ ವಿಶ್ರಾಂತಿಗೃಹವಲ್ಲದೆ ಮಠಗಳಲ್ಲಿಯೂ ಉಪಾಸಕರಲ್ಲಿಯೂ ಉಳಕೊಳ್ಳುವ ವ್ಯವಸ್ಥೆ ಮಾಡಲಾಗಿದೆ
ಧರ್ಮಸ್ಥಳ, ಸುಬ್ರಮ್ಮಣ್ಯ, ಕೊಲ್ಲೂರು ಮತ್ತು ಗೋಕರ್ಣಕ್ಕೂ ಒಂದೇ ಬಾರಿ ಅತ್ಯಲ್ಪ ಖರ್ಚಿನಲ್ಲಿ ಯಾತ್ರೆಯನ್ನು ಪೂರೈಸಲಿಕ್ಕೆ
ಅನುಕೂಲವಿದೆ. ಪ್ರಯಾಣಿಕರ ಸೌಕರ್ಯದ ಕಡೆಗೆ ವಿಶೇಷ ಗಮನಕೊಡಲಾಗುವುದು

ಜಾಯಿಂಟ್ ಮೆನೇಜರ್ಸ್
ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು
ಮತ್ತು
ನೆ ಜೊಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಸಿಂ ಸಂಚಿಕೆ ಹೆರೆ ಬಾವಾಣೆ | ವಾರ್ಷಿಕ ಚಂದಾ ರೂ. 3-0-0 | ಅರ್ಧ ವರ್ಷ ಚಂದಾ ರೂ. 2-12-0 | Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 12-12-1941 [ಸಂಚಿಕೆ 49]

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಕಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ನೆಕ್ಕವಾಕ, ಪೊಡಿಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ಕುರ್ಕ, ಕುರಕಜ್ಜಿ, ಹುಳುಕಜ್ಜಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಎಲ್ಲಾ ಔಷಧಿ ಅಂಗಡಿಗಳಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,—MANGALORE,—CALICUT—MADRAS,

TRIVANDRUM,—BANGALORE City,—and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ವಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI



"ರಾತ್ರಿ ಕಾಳಗದ ವಿಮಾನ"

ಅಮೆರಿಕದಿಂದ ಬ್ರಿಟನಿಗೆ ಕಳುಹಿಸಿದ ವಿಮಾನಗಳಲ್ಲಿ ಇದು ಒಂದು ರಾತ್ರಿಕಾಲದ ಕಾಳಗದಲ್ಲಿ ಇದು ಅತ್ಯಂತ ಯಶಸ್ಸು ಪಡೆದಿದೆ ಇದಕ್ಕೆ 'ಅಪಾಯಕಾರಿ' ಎಂಬ ಹೆಸರಾಗಿದೆ

KANNADA ILLUSTRATED WEEKLY

NOTICE

In the Court of 1 District Munsif of Mangalore

S. C. No. 753/1941

Between

P. Vittal Narasimha Pai, H. Vaman Pai, by partner P. Vittal Narasimha Pai. } *Plaintiff*

and

Nileshwar Santhappa Venkatesha Prabhu & another. } **Defendants**

To

1st Defendant:—Nileshwar Santhappa Venkatesha Prabhu son of Venkatesha Prabhu, Merchant, residing at Kasargod.

Please take notice that the plaintiff has filed the above suit for recovery of Rs. 58-1-4 from the defendants being the principal and interest up to 6-10-1941 and cost of registered notice together with future interest and cost of suit with interest in respect of dealings carried on by defendants and that the suit is posted for hearing at 10-30 a. m. on 23-12-1941 in the above court, you may appear in person or by pleader on the said date and contest the suit, failing which the same will be decided exparte.

Mangalore, 14-12-1941 } **H Kashava Kamath** Vakil for Plaintiff.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 252/1939

R. I. A. No. 1269/1941

ಕಾವೇರಿ ಅಮ್ಮ — ವಾದಿಳು ಅರ್ಜಿದಾರಳು

ಮತ್ತು

ಸಂಕಪ್ಪ ನ್ಯಾಕ ಕಾರಿಂ — ರೆಸ್ಪಾಂಡೆಂಟರು

3ನೇ ರೆಸ್ಪಾಂಡೆಟು ದೇವಪ್ಪ ನ್ಯಾಕ ಬಪ್ಪತ್ತಡ್ತು ಲಮುನ್ನ ನ್ಯಾಕರ ಮಗ ಪುತ್ತರು ಅಮಿ ಇದಾಗ ಸಪ್ರ ವ್ಯಾಕ್ಯರಲ್ಲಿ ಆದ ಪ್ರಲಿಮಿನರಿ ಡಿಕ್ರಿಯನ್ನು ವ್ಯಾಸಲ್ ಮಾಡ್ಸಿಕೊಡವೇಕ್ಕಾಗಿ ಸಪ್ರಿ ಅರ್ಜಿದಾರಳು ದಾಕ್ಲು ಮಾಡಿದ ಮೇಲ್ಮಂಡ ಅರ್ಜಿಯು ತಾ. 22-12-1941ಕ್ಕೆ ತ್ಯಾಗಿಟ್ಟಿರುವುದ್ರಿಂದ ಆ ದಿವಸ ಬೆಂಗ್ಳೆ 11 ಗಂಟೆಗೆ ಕೋರ್ಟಿಗೆ ಹಾಜ್ರಾಗಿ ಆಕ್ಷೇಪ ಗಳಿದ್ರೆ ಜ್ಞಾಪನ ಮಾಡತಕ್ಕದ್ದು. ತಪ್ಪಿದ್ದಲ್ಲಿ ಯಕ್ಷ ಪಾರ್ಟಿಯಿಂದ ತೀರ್ಮಾನಿಸಲ್ಪಡುವದು ಎಂ ದಿದಾಗಿ ಈ ಮೂಲಕ ತಿಳಿಸಿಯದೆ.

Puttur 10-12-41 } ಕೆ. ಎನ್. ಮಲ್ಲ, ಅರ್ಜಿದಾರ ಪರ ವಕೀಲರ್.

ಸ್ವದೇಶಭಿಮಾನಿಗೆ ಜಾಹೀರಾತು ಕೊಡಿರಿ



ಮಕ್ಕಳಿಂದ ಹಿಡಿದು ಮುದುಕರ ವರೆಗೆ

ಇಡೀ ಕುಟುಂಬದವರಿಗೆಲ್ಲಾ ಇದು ಉತ್ತಮ ಪಾನೀಯವಾಗಿದೆ. ಆರೋಗ್ಯ — ಶಕ್ತಿ ಮತ್ತು ಧಾತುಪುಷ್ಟಿಕರವಾಗಿದೆ!

ಓವಲ್ಟಿನ್‌ನ್ನು ಪ್ರತಿಯೊಬ್ಬನೂ ಪ್ರೀತಿಸುತ್ತಾನೆ. ಅಜ್ಜ ಅಜ್ಜಿಯರು, ತಂದೆತಾಯಿಯರು ವಿಶೇಷವಾಗಿ ಮಕ್ಕಳಿಗೆ ಇದು ಹಿತಕರವಾಗಿದೆ. ಓವಲ್ಟಿನಲ್ಲಿ ಪೂರ್ಣ ಆರೋಗ್ಯದ ವಸ್ತುಗಳಿರುವುದರಿಂದ ಇದು ಬಾಲಕರಿಂದ ಹಿಡಿದು ಮುದುಕರ ವರೆಗೂ ಪಾನ ಯೋಗ್ಯವಾಗಿಯೂ ಇರುವುದು.

ನಿಮ್ಮ ಕುಟುಂಬದಲ್ಲಿ ಓವಲ್ಟಿನ್‌ನ್ನು ದಿನನಿತ್ಯ ಉಪಯೋಗಿಸಿ ನೋಡಿ -ಪ್ರತಿಯೊಬ್ಬರೂ ಹೇಗೆ ಸಂಪೂರ್ಣ ಆರೋಗ್ಯದಿಂದಿರುವ ರೆಂದು ಮತ್ತೆ ವಿಚಾರಿಸಿರಿ. ಅನಾರೋಗ್ಯದೆದುರು ಓವಲ್ಟಿನ್ ರಕ್ಷಾಕವಚವಾಗಿದ ಮೈಗೆ ಶಕ್ತಿಯನ್ನುತ್ತು ರೋಗಗಳನ್ನು ಅದು ತಡೆಯುತ್ತದೆ

ಓವಲ್ಟಿನ್ನು ಸಂಪೂರ್ಣ ನೈಸರ್ಗಿಕ ಆಹಾರ. ಪಶ್ಚವಾದ ಬಾರ್ಲಿಯಿಂದ ಮತ್ತು ಹೊಸ ದನದ ಹಾಲಿನಿಂದ ಈ ವಿಟಮಿನ್ ಮತ್ತು ಇನ್ನೂ ಅನೇಕ ಇತರ ಆಹಾರ ಸ್ವರ್ಣಗಳಿಂದ ಕೂಡಿದ ಓವಲ್ಟಿನನ್ನು ಮಾಡಿರುವುದಿದೆ ನಿಮ್ಮ ಓವಲ್ಟಿನನ್ನೆ ಕ್ರಯಕೊಳ್ಳಿರಿ.

ಟಕಾರಿಗಳನ್ನು ಕುರಿತು ಜಾಗ್ರತೆಯಿಂದಿರಿ

ಓವಲ್ಟಿನ್ನು ಕುಡಿಯಲು ಹಿತಕರವೂ ಆಗಿದೆ, ಜಿಸಿಯೂ ಆಗಿಯೂ ತಣುಪಾಗಿಯೂ ಇದನ್ನು ತಯಾರಿಸಿಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹಳ ಸುಲಭದ ಕೆಲಸವಾಗಿದೆ. ಪ್ರತಿಯೊಂದು ಡಬ್ಬಿಯಲ್ಲಿಯೂ ತಯಾರಿಸುವ ಕ್ರಮವನ್ನು ಒದಗಿಸಿದೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ಮಾರಾಟಕ್ಕೆ ಇದು ಸಿಗುತ್ತದೆ

'ಗ್ಲೇಹಮ್ಸ್ ಟ್ರೇಡಿಂಗ್' ಕೋ. (ಇಂಡಿಯಾ) ಲಿಮಿಟೆಡ್'

ಕೈತ್ ಸೆಸ್‌ಹೋಲ್ 310/311 ಲಿಂಗಿಚೆಟ್ಟಿ ಸ್ಟ್ರೀಟ್, ಮದರಾಸು ಹಾಗೂ ಕಲ್ಕತ್ತಾ, ಬೊಂಬಾಯಿ ಕರಾಚಿ ಮತ್ತು ರಂಗೂನ್

'ಓವಲ್ಟಿನ್'

OVALTINE ಬಿಡು ಪುಷ್ಟಿಕರವಾದ ಆಹಾರವಾಗಿದೆ

SAVE FOR VICTORY

SAVE FOR VICTORY

—OVI/51/40

ರಷ್ಯದಲ್ಲಿ ಜರ್ಮನ್ ಪರಾಜಯ

ರಷ್ಯದಲ್ಲಿ ಜರ್ಮನರು ಈಗ ಪರಾಜಯ ಹೊಂದುತ್ತಿರುವರು. ಥಳಗಾಲ ನ್ನುಗಿದ ವರೆಗೆ ತಾವು ಮುಂದುವರಿಸು ವುದಿಲ್ಲವಾಗಿ ಜರ್ಮನರು ಹೇಳಿಕೆಯೊಂ ದನ್ನು ರಷ್ಯರು ಪ್ರಕಟಿಸಿರುವರು. ಥಳಗಾಲ ನಡೆಸುವೆವೆಂದು ಟೀನೀ ಘೋಷಣೆಯೊಟ್ಟ ನ ಹೇಳಿಕೆಯಾಗಿದೆ.

"ಕಾಂಗ್ರೆಸ್ ಧೋರಣ ಬದಲಾಯಿಸುವ ಪ್ರಸಂಗ ಬಂದಿಲ್ಲ"

ಅಜಾದರ ಹೇಳಿಕೆ

ನಮ್ಮ ರಾಜಕೀಯ ಧೋರಣವು ಪರಿಸ್ಥಿತಿಗೆ ಸರಿಯಾಗ್ಗಿ ಬದಲಾಗಬಹುದು. ಆದರೆ ಬದಲು ಮಾಡುವ ಸಂದರ್ಭವು ನಮಗೆ ಈಗ ಬಂದಿಲ್ಲ. ಅಂತಹ ಯಾವ ಕ್ರಿಯೆಯನ್ನೂ ಸರಕಾರವು ಮಾ ಡಿಲ್ಲ. ಆದರೂ ವರ್ಕಿಂಗ್ ಕಮಿಟಿ ಸದಸ್ಯರು ನಾವೀಗ ಜೊರಗಿರುವುದರಿಂದ ಪರಿಸ್ಥಿತಿಯನ್ನು ಪುನರಾಲೋಚಿಸಬಹುದು. ಮಹಾರ್ಷ್ಟ್ರದಲ್ಲಿ ಆಲೋಚಿಸಿ ಇದೇ ತಿಂಗಳ ೨೩ಕ್ಕೆ ಬಾರ್ಡೋಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ ಸೇರುವುದು ನಮ್ಮ ಅಭಿಪ್ರಾಯ ವರ್ಕಿಂಗ್ ಕಮಿಟಿಯಲ್ಲಿ ಸ್ಪಷ್ಟವಾಗುವುದು ಎಂದರು ರಾಷ್ಟ್ರಪತಿ ಆಜಾದರು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ತ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟತು.

19—12—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೯—೧೨—೧೯೪೧]

ಸಮರಭೂಮಿಯ ಸಂಚಾರ

The Combined Booking Agency, Mangalore.

ಸಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆಯಲ್ಲಿ ಸಿದ್ಧ ರೂ. 3—13—0 | Regd. No. M 346

ಸ್ವದೇಶಾಭಿಮಾನಿ

[ಸಂಪುಟ 35] ಶುಕ್ರವಾರ 19—12—1941 [ಸಂಚಿಕೆ 50]

(Regd)

ಅಮೃತಾಂಜನ

ತಲೆನೋವನ್ನೆ, ತಿರೋನೋವನ್ನೆ, ಉಳುಕು, ಉತ್ತುಗೆ, ಭುಜ, ಹಲ್ಲುನೋವನಿಗೆಗಳಿಗೂ ಎದೆನೋವು, ಕಾಯುಗಳು, ಬಾತುಕೊಳ್ಳುವಿಕು, ಜೇಳು ವಿಷ ಮುಂತಾದ ಬೇನೆ, ಪಕ್ಕವಾತ, ಪೊಡಿಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಸಜ್ಜಿ, ಕುರಕೆ, ಕುರಚಜ್ಜಿ, ಹುಳುಕಡ್ಡಿ, ವಿಕೃತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ **ಹುಳುಕಡ್ಡಿ ಮುದ್ದು** ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಉಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI.——MANGALORE.——CALICUT——MADRAS

TRIVANDRUM,——BANGALORE City,——and BOMBAY 4.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ಧರ್ಮಪ್ರಕಾಶ ಪ್ರಿಂಟಿಂಗ್ ಪ್ರೆಸ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



ಬ್ರಿಟಿಷರ ವಿಧ್ವಂಸಕ ಫಿರಂಗಿಯೊಂದು!

ಚಿತ್ರದಲ್ಲಿ ಕಂಡುಬರುವ ದೃಶ್ಯದಿಂದಲೇ ಅದರ ಆಕಾರ ಭೀಕರಗಳನ್ನು ಊಹಿಸಬಹುದಾಗಿದೆ. ಶತ್ರುಸೈನ್ಯವನ್ನು ವಿಧ್ವಂಸಮಾಡಲು ಇಂತಹ ಸಾವಿರಾರು ಫಿರಂಗಿಗಳು ಸಿದ್ಧವಾಗಿವೆ!

KANNADA ILLUSTRATED WEEKLY

ಪುಸ್ತಕಾವಲೋಕನ

ಜೈನ ಧರ್ಮ ಸಾಹಿತ್ಯಗಳು

ಕನ್ನಡದಲ್ಲಿ ಜೈನ ಧಾರ್ಮಿಕ ಸಾಹಿತ್ಯಗಳು ವಿಪುಲ. ಕನ್ನಡದ ವ್ಯಾಪಕ ಸಾಹಿತ್ಯವೆನ್ನು ಅಭ್ಯಾಸ ಮಾಡುವುದೆಂದರೆ ಹೆಚ್ಚಾಗಿ ಜೈನ ಧಾರ್ಮಿಕ ಸಾಹಿತ್ಯವನ್ನು ವ್ಯಾಸಂಗಮಾಡುವುದೇ ಆಗಿದೆ. ಹಾಗಾಗಿ ಕನ್ನಡದಲ್ಲಿ ಜೈನೇತರ ಧರ್ಮದವರೂ ಜೈನಧರ್ಮ ಸಾಹಿತ್ಯಗಳನ್ನು ಬಹಳ ಅಧಿಕಾರಯುತ ಶೈಲಿಯಿಂದ ಬರೆಯುತ್ತಿರುವುದನ್ನೂ ಜೈನಧರ್ಮದ ಮಹತ್ತ್ವೇಯರು ಜೈನೇತರ ಕನ್ನಡ ವಿದ್ವಾಂಸರಿಂದ ಜೈನಸಾಹಿತ್ಯ ಪ್ರಬಂಧಗಳನ್ನು ಬರೆಸುತ್ತಿರುವುದನ್ನೂ ನಾವು ಕಾಣಬಹುದು ನಾವೀಗ ವಿಮರ್ಶಿಸಲಿರುವ ಮೂರು ಪುಸ್ತಕಗಳಲ್ಲಿ ಎರಡು ವಣಿವಿಲ ಅರಮನೆಯ ಶ್ರೀಮತಿ ದೇಜಮ್ಮ ಇವರು ಪ್ರಕಾಶಿಸುವ ಶ್ರೀ ಅನಂತ ಕೀರ್ತಿ ಗ್ರಂಥಮಾಲೆಯ ೧೨ನೆಯ ರತ್ನನೆಯ ಪುಷ್ಪಗಳು, ಮೊದಲನೆಯದು 'ಶ್ರೀ ಪಾರ್ಶ್ವನಾಥ ಚಂಪು' ಎರಡನೆಯದು 'ತ್ರಿಪುರದಾಹ' ಮೂರನೆಯ ಪುಸ್ತಕವು ದ ಕ ಶ್ರೀ ವೀರಸೇವಕ ಸಂಸದ ನೃವಸ್ಥಾಪಕ ಮಂಡಳಿಯವರು ಪ್ರಕಾಶಿಸಿದ ಜೈನಧರ್ಮದ ಪ್ರಾಚೀನತೆ ಎಂಬ ಲೋಕಮಾನ್ಯ ತಿಲಕರ ಭಾಷಣಾನುವಾದ ಮೊದಲನೆರಡು ಪುಸ್ತಕಗಳು ಕ್ರಮವಃ ಕ್ರಾನ್ ೧/೮ ಆಕಾರದ ೬೨+೨೮ ಪುಟಗಳಿಂದೊಡಗೂಡಿ, ಅನುಬಂಧ ಚಿತ್ರ ಸಮೇತವಾಗಿದ್ದು ಸದ್ದಿನಿಯೋಗದ ಬೆಲೆಗೆ ಕೊಡಲ್ಪಡುವವು ಮೂರನೆಯದು ಕ್ರಾನ್ ೧/೮ ಆಕಾರದ ೮ ಪುಟಗಳಿಂದ ಕೂಡಿದ್ದು ಅರ್ಧಾಣೆ ಬೆಲೆಯುಳ್ಳದ್ದಾಗಿದೆ.

ಶ್ರೀ ಪಾರ್ಶ್ವನಾಥ ಚಂಪುವನ್ನು ಶ್ರೀ ರಾಜರತ್ನಂರು, ಪಾರ್ಶ್ವನಾಥ ಪುರಾಣ, ಚಾವುಂಡರಾಯ ಪುರಾಣಗಳ ಆಧಾರದಿಂದ ಆಯ್ದಿದ್ದಾರೆ ಇದರೊಡನೆ ಲೇಖಕರು ಜೈನಧಾರ್ಮಿಕ ಗ್ರಂಥಗಳ ಅಭ್ಯಾಸಕ್ಕೆ ತೊಡಗಿದ ತನ್ನ ವಿದ್ವತ್‌ಪೂರ್ಣವೆಳೆ ಎರಡು ಪ್ರಬಂಧಗಳನ್ನೂ ಸೇರಿಸಿ ಪುಸ್ತಕದ ಉಪಯುಕ್ತತೆ ಹೆಚ್ಚಿಸಿದ್ದಾರೆ ಜೈನಧರ್ಮ ಸಾಹಿತ್ಯಗಳನ್ನು ಜೈನೇತರರಿಗೆ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶದಿಂದಾದ ಈ ಲೇಖಕರು ಬರೆದ ಪುಸ್ತಕಗಳಲ್ಲಿ ಇದು ನಾಲ್ಕನೆಯದು. ಈ ಪುಸ್ತಕದಲ್ಲಿ ಭಗವಾನ್ ಪಾರ್ಶ್ವನಾಥನ ದಿಗಂಬರ ಮೂರ್ತಿ ಚಿತ್ರವಿದೆ. ಮೊದಲಲ್ಲಿ ಮಾರುಭೂತಿ ಕವಿರರಭಮಾವಳಿಯೂ ಕೊನೆಯಲ್ಲಿ ಐದು ಅನುಬಂಧಗಳೂ ಕೂಡಿವೆ. ಕನ್ನಡಸಾಹಿತ್ಯ ಸೇವಕರುಗಳಲ್ಲೊಬ್ಬರಾದ ಶ್ರೀ ರಾಜರತ್ನಂರವರು ತಮ್ಮ ಲೇಖನಿಯ ಶಕ್ತಿಯನ್ನು ಈ ಪುಟ್ಟ ಪುಸ್ತಕದಲ್ಲಿಯೂ ಸಾಕಷ್ಟು ತೋರಿಸಿರುವರು.

ತ್ರಿಪುರದಾಹವು ತಿರು ಮಾಯಣ ಕವಿ ರಚಿತವಾದ ತ್ರಿಪುರ ದಹನವೆಂಬ ಸಾಂಗತ್ಯರೂಪ ಕಾವ್ಯದ ಗದ್ಯಾನುವಾದ. ಅನುವಾದ ಮಾಡಿದವರು ಶ್ರೀ ಎಂ. ತಿಮ್ಮಪ್ಪಯ್ಯರು. ಇದರ ಲೇಖಕರು ಪುಸ್ತಕದ ಮುಮ್ಮಾತಿನಲ್ಲಿ ಕೆಲವು ವಿಚಾರಗಳನ್ನೆತ್ತಿ ತರ್ಕಿಸಿದ್ದಾರೆ. ವಿಮರ್ಶಕರು ಅವಗಾಹಿಸತಕ್ಕುದಾಗಿದೆ. ಅನುವಾದಕರು ತಮ್ಮದೇ ಆದ ಗಂಭೀರ ಶೈಲಿಯಲ್ಲಿ ಹಾಡುಗಬ್ಬವನ್ನು ಗದ್ಯರೂಪಕ್ಕೆ ಸುಂದರವಾಗಿ ಮೂರ್ಪಡಿಸಿರುವರು ಕೊನೆಗೆ ಕೆಲವು ವಿಶಿಷ್ಟ ಪದಗಳ ವಿವ್ಯಾಪತಿಯನ್ನೂ ಕೊಟ್ಟಿರುವರು ಕನ್ನಡದ ವ್ಯಾಪೀನ ಗ್ರಂಥಗಳನ್ನು ಆಳವಾಗಿ ಅಭ್ಯಸಿಸಿ ಹೆಸರಾಂತ ಶ್ರೀ. ತಿಮ್ಮಪ್ಪಯ್ಯರು ಪದ್ಯಕಾವ್ಯವನ್ನು ಗದ್ಯರೂಪಕ್ಕೆ ಮೂರ್ಪಡಿಸುವದನ್ನು ಬಹಳ ಲೀಲಾಜಾಲವಾಗಿ ಆದರೂ ವಿಶೇಷ ಸ್ವಾರಸ್ಯ ಪೂರ್ಣವಾಗಿಯೇ ನಿರ್ವಹಿಸಿದ್ದಾರೆ

ಜೈನಧರ್ಮದ ಪ್ರಾಚೀನತೆಯು ೧೯೦೪ನೆಯ ಇಸವಿಯಲ್ಲಿ ಬಡೋದಾ ನಗರದಲ್ಲಿ ನೇರದ ಶ್ರೀ ಜೈನ ಶ್ವೇತಾಂಬರ ಸಮ್ಮೇಳನದ ಅಧಿವೇಶನದಲ್ಲಿ ಲೋಕಮಾನ್ಯ ತಿಲಕರು ಕೊಟ್ಟ ಭಾಷಣದ ಅನುವಾದ. ಅನುವಾದಕ ಶ್ರೀ ನೂರ್ವರ್ಧನೂನ ಹೆಗ್ಗೇರು ವೊದಲಾದ ಇದಕ್ಕೆ ಕೆಲವು ಜೈನಧರ್ಮ ಪುಸ್ತಕಗಳನ್ನು ಅನುವಾದ ಮಾಡಿದ್ದಾರೆ ಜೈನ ಧಾರ್ಮಿಕ ಸಾಹಿತ್ಯ ಪ್ರಚಾರದ ಬಗ್ಗೆ ಅಸಕ್ತಿಯಿಂದ ದುಡಿಯುತ್ತಿದ್ದಾರೆ ಲೋಕಮಾನ್ಯ ತಿಲಕರಂತಹ ಘನ ವಿದ್ವಾಂಸರು ಜೈನಧರ್ಮದ ಕುರಿತು ಹೇಳಿದ ಮಾತುಗಳು ತುಂಬು ವಿಚಾರದಿಂದ ಕೂಡಿವೆಯೆನ್ನುವುದು ಅಪ್ರಸ್ತುತ. ಲೋಕಮಾನ್ಯ ತಿಲಕರು ಜೈನಧರ್ಮದ ಕೆಲವು ಮಹತ್ವದ ಕಡೆಗೆ ಕೈಮೆತ್ತಿ ತೋರಿಸಿದ್ದು ಜೈನೇತರ ಹಿಂದುಗಳಿಗೆ ಬಂದು ಪಾರವಾಗಿದೆ ಜೈನಧರ್ಮ ಸಾಹಿತ್ಯಾಭ್ಯಾಸಿಗಳಿಗೆ ಈ ಮೂರು ಪುಸ್ತಕಗಳೂ ಅವಶ್ಯ ಸಂಗ್ರಹನೀಯವಾಗಿವೆ

—ಕಯ್ಯಾರ

ಮಂಗಳೂರು

ಪಂಪ ಸ್ಮಾರಕ ಸಭೆ

ಯು ಮಿತ್ರ ಮಂಡಳಿ ಮತ್ತು ದ ಕ. ಪಂಡಿತ ಸಂಘಗಳ ಆಶ್ರಯದಲ್ಲಿ ಥಿಯಾಸೆಫಿಕಲ್ ಲಾಜಿನಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಎಂ. ಎಲ್. ಸಿ ಇವರ ಅಧ್ಯಕ್ಷತೆಯಿಂದ ಕೂಡಿತು ೧ೇ ಮು. ತಿಮ್ಮಪ್ಪಯ್ಯ ಮತ್ತು ೧ಸಿ ಎಸ್. ಕೃಷ್ಣ ಭಟ್ಟರು ಪಂಪನ ವಿಷಯ ಮಾತನಾಡಿದರು. ೧ೇ. ಸಿ ಗೋಪಾಲ ಕೃಷ್ಣಯ್ಯರು ಧನ್ಯವಾದ ಹೇಳಿದರು.

ಭಾಗಲ್ಪುರ ದಿನಾಚರಣೆ

ಇದು ಮಂಗಳೂರು ಮೈದಾನದಲ್ಲಿ ತಾ. 14 ರಂದು ೧ೇ. ನಾಗರಾಜಯ್ಯರ ಅಧ್ಯಕ್ಷತೆಯಿಂದ ಕೂಡಿತು. ಶ್ರೀಗಳಾದ ಶೇಷಪ್ಪಯ್ಯ, ಮಂಜುನಾಥ ಶೆಟ್ಟಿ ಮತ್ತು ತಿಮ್ಮಪ್ಪ ಕಾರಂತರು ಭಾಷಣ ಮಾಡಿದರು.

ಎದೆನೋವು ಕಫ ಮತ್ತು ಕೆಮ್ಮನ್ನು ಗುಣಪಡಿಸಿರಿ.

ನೀವು ಕೆಮ್ಮು, ತೀಕ ಮತ್ತು ಕಫ ಬಾಧೆಯಿಂದ ನರಳುವುದಿದ್ದರೆ 'ಪೆಪ್ಸ'ನ್ನು ಕೂಡಲೇ ತೆಗೆದುಕೊಳ್ಳಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಒಳ್ಳೆಯ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಡಿಸುತ್ತದೆ, ಅದು ಶ್ವಾಸವನ್ನು ಎಳೆಯುವಾಗ ಶ್ವಾಸಕೋಶಕ್ಕೆ ಹೋಗುವುದು ಹೀಗೆ ಪೆಪ್ಸು ತೀಕ, ಕಫ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುತ್ತದೆ ಗಂಟಲನ್ನು ಕುಚ್ಚೋಸಿಸುತ್ತದೆ ತೀಕ, ಎದೆನೋವು, ಕಫ, ಕೆಮ್ಮುಗಳಿಗೆ ಇದು ಬಂಡಿತ ಗುಣಕಾರಿಯಾಗಿದೆ ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಬೆಲೆಗೆ ದೊರಕುವುದು

ಏಜ್ಞಂಟರು—

ಮೆಸರ್ಸ್ ದಾಫರ ಎಂಡ್ ಕೊ, ಪಿ ಟಿ ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಕ ಗುಳಿಗೆಗಳು

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ! —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವಕ್ಕೂ ಕಲ್ಪ, ಪಜೆ ಛಿದ್ರ ಮುಂತಾದುವನ್ನು ಗುಣಪಡಿಸುವುದು.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ದಕ್ಷಿಣ ಕನ್ನಡದ ಡಿಸ್ಟ್ರಿಬ್ಯೂಟರ್ಸು—

ಕೊರನೇಶನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—12—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೨೬—೧೨—೧೯೪೧]

ಸಮರಭೂಮಿಯ ಸಂಚಾರ

ಹಿಟ್ಲರನು ಜರ್ಮನ್ ಸೈನ್ಯದ ಯಾವತ್ತೂ ಅಧಿಕಾರವನ್ನು ವಹಿಸಿ ತಾನೇ ದಳಪತಿತ್ವವನ್ನು ಕೈಯಲ್ಲಿ ಕೆಗೆದುಕೊಂಡಿರುವನಾಗಿ ಈಗ ಸುದ್ದಿ ಬಂದಿದೆ. ಜರ್ಮನ್ ಸೇನೆಯು ಹಿಂದಿನ ದಳಪತಿ ಜನರಲ್ ವಾನ್ ಬ್ರಾಶಿಶರನ್ನಿಂದ ಅಧಿಕಾರವೆಲ್ಲವೂ ಹಿಂದಕೆಗೆದುಕೊಂಡನಂತೆ ಹಿಟ್ಲರ್. ಹೀಗೆ ಮಾಡಲು ಕಾರಣವೇನೆಂದು ಇದುವರೆಗೂ ಚೆನ್ನಾಗಿ ತಿಳಿದು ಬಂದಿಲ್ಲ. ಜನರಲ್ ಬ್ರಾಶಿಶರನು ರಷಿಯರಲ್ಲಿ ಜರ್ಮನ್ ದಳಪತಿತ್ವ ವಹಿಸಿದ್ದ. ಇತ್ತೀಚೆಗೆ ಹಿಟ್ಲರ್ ಮತ್ತು ಅವನಲ್ಲಿ ಮತಭೇದವುಂಟಾಗಿತ್ತೆಂದು ಈಗ ಕೇಳಿಬರುತ್ತದೆ. ಅತನು ಪ್ರಸಿದ್ಧ ಯೋಧವರಂಪರೆಯವನಿದ್ದರೂ, ನಾಜೀ ತತ್ವದಲ್ಲಿ ಸಂಪೂರ್ಣ ನೇರಿಕೊಂಡಿಲ್ಲವೆಂದು ಹಿಟ್ಲರನೊಡನೆ ಮತ ಭೇದವಾಯಿತೆಂದು ಸುದ್ದಿ ಹರಡಲಾಗಿದೆ. ಹಿಟ್ಲರನು ತನ್ನ ಹೊಸ ದಳಪತಿತ್ವವನ್ನು ಕೈಗೆ ತೆಗೆದು ಕೊಂಡೊಡನೆಯೇ ಜರ್ಮನರಿಗೆ ಒಂದು ಸಂದೇಶ ಸಾರಿ ಇಂದಿನ ಯುದ್ಧ ಪರಿಸ್ಥಿತಿಯನ್ನು ವಿವರಿಸಿ ಉಜ್ವಲ ಭಾಷಣವನ್ನಿತ್ತನು. ಜರ್ಮನರನ್ನು ತನ್ನ ಭಾಷಣದಲ್ಲಿ ಹುರಿದುಂಬಿಸಿದನು.

ಜಪಾನಿನ ರಣ ನೀತಿ

ಬ್ಯಾಂಕಾಂಗದಲ್ಲಿ ಥಾಯಿಲೆಂಡ್ ಮತ್ತು ಜಪಾನುಗಳ ನಡುವೆ ಒಂದು ಹತ್ತು ವರ್ಷಗಳ ಒಪ್ಪಂದ ನಡೆಯಿತೆಂದು ತಿಳಿದುಬರುತ್ತದೆ. ಒಪ್ಪಂದದಂತೆ ಥಾಯಿಲೆಂಡು ಆರ್ಥಿಕ ರಾಜಕೀಯ ಹಾಗೂ ಯುದ್ಧ ವಿಷಯಕ ವಿಚಾರಗಳಲ್ಲಿ ಜಪಾನಿನೊಡನೆ ಸಹಕರಿಸಬೇಕೆಂದಾಗಿದೆ. ಅಲ್ಲದೆ ಮಿಕ್ಕ ಯಾವ ರಾಷ್ಟ್ರಗಳೊಡನೆಯೂ ಥಾಯಿಲೆಂಡು ಈ ಸಂದರ್ಭದಲ್ಲಿ ಒಪ್ಪಂದವನ್ನಾಡಿಕೊಳ್ಳಬಾರದೆಂದೂ ಶರತ್ತಿದೆ.

ಜಪಾನು ಯುದ್ಧಕ್ಕೆ ಇಳಿದ ಒಂದೆರಡು ವಾರಗಳೊಳಗೆ ಏನೊಂದು ಖುಗ್ರವಾಗಿ ಕೆಲಸಮಾಡಿತೋ ಆವ್ಯು ರಂಗಭೂಮಿಯ ಈಗ ಶಾಂತವಾಯುವುದಿಲ್ಲವೆಂಬುದನ್ನೇ ನಿಜವಾದರೂ, ಜಪಾನು ಮೊತ್ತಮೊದಲೇ ಹಾಕಿದ ಪೆಟ್ಟಿನಿಂದ ಬ್ರಿಟನು ಸಮೀಪಕಗಳಿಗೆ ಸುಧಾರಿಸಿಕೊಳ್ಳುವುದಕ್ಕೆ ಇನ್ನು ಅವಕಾಶವೇಕಾಯಿತೆಂದೂ ಹೇಳುವಂತಿದೆ. ಹವಾಯಿ ಬಂದರಿನ ಮೇಲೆ ಯುದ್ಧಾರಂಭಕಾಲದಲ್ಲಿ, ಜಪಾನು ಧಾಳಿಯಾಡಿದಾಗ ಅಮೆರಿಕದ ನೌಕಾಬಲಕ್ಕೆ ವಿಶೇಷ ಹಾನಿಯೊದಗಿತ್ತೆಂಬುದನ್ನು ಅಮೆರಿಕವೇ ಒಪ್ಪಿಕೊಂಡಿದೆ. ಪ್ರಿನ್ಸ್ ಆಫ್ ವೇಲ್ಸ್ ಮತ್ತು ರಿವಲ್ಸ್ ಹಡಗುಗಳ ಜಲಸಮಾಧಿಯಿಂದ ಬ್ರಿಟನಾದರೂ ಬೇಗನೇ ಕತ್ತರಿಸಿಕೊಳ್ಳುವುದು ಪ್ರಯಾಸವೇ ಇರುವುದು. ಈಗ ಜಪಾನು ಫೆಸಿಫಿಕ್ ಸಾಗರದಲ್ಲಿ ಕೆಲವು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಳ್ಳುವುದು ಮಾತ್ರ ಬೈಯತ್ನವಷ್ಟುವಂತಿದೆ.

ಹಾಂಕಾಂಗ್, ಸಿಲಿಪಾಯಿನ್, ಮಲಯ, ಸಿಂಗಾಪುರ, ಇವಿಷ್ಟು ಸ್ಥಳಗಳಿಗೆ ಗುರಿಯಿಟ್ಟು ಜಪಾನ್ ಹೊಡೆಯುತ್ತಾ ಬರುವುದೆನ್ನು ಈಗ ನಾವು ನಿರೀಕ್ಷಿಸಬಹುದಾಗಿದೆ. ಫಿಲಿಪಯಿನಿನ ಮೇಲೆ ೪೦,೦೦೦ ಜಪಾನಿ ಸೈನಿಕರು ಧಾಳಿಯಾಡಿದರೆಂದೂ, ಲುಝೋನಿಕ್ಕೆ ಸಚ್ಚಿವ ಕರಾವಳಿಯಲ್ಲಿ ಈಟ ಲಿಂಗಾಯನದ ಕಡೆಗೆ ಅವರು ಮುನ್ನಡೆಯುತ್ತಿರುವರೆಂದೂ ಇತ್ತೀಚೆಗೆ ಸುದ್ದಿ ಬಂದಿರುವುದು. ಮಲಯದಲ್ಲಿ ಜಪಾನೀ ಸೈನ್ಯಗಳು ಕೆಡಾದ ಕಡೆಯಿಂದ ಮುಂದೆ ಸುಗ್ಗುತ್ತಿದ್ದುವೆಂದೂ ಮಲಯದಲ್ಲಿರುವ ಬ್ರಿಟಿಷ್ ಬಲವು ಮತ್ತಷ್ಟು ದೂರ ಹಿಂದೆ ಸರಿಯುತೆಂದೂ ಸಾರಲಾಗಿದೆ. ಜಪಾನು ಒಂದೇ ಕಡೆಯಲ್ಲಿ ನಿಂತು ಶತ್ರುವನ್ನು ಎದುರಿಸಿ ಕಾದಾಡುವುದನ್ನು ಬಿಟ್ಟು, ಅಕಸ್ಮಿಕವಾಗಿ ಒಮ್ಮೆಲೇ ಏರಿ ಬಂದು ಶತ್ರುಕ್ಷಣದಲ್ಲಿ ಹಿಡಿತಪ್ಪಿಹೋಗುವಂತಹ ರಣನೀತಿಯನ್ನು ಅನುಸರಿಸಿರುವುದು ಕಂಡು ಬರುವುದು.

ಲಿಬಿಯ ಯುದ್ಧ

ಲಿಬಿಯದ ಯುದ್ಧದಲ್ಲಿ ಈಗ ಕೊನೆಯ ಅಂಕವು ಬಂದೊದಗಿದೆಯೆಂದು ಹೇಳಲಾಗಿದೆ. ಶತ್ರುವಿಗೆ ಬಹಳ ಧಾಸ್ತಿಯೊದಗಿರುವುದಂತೆ. ಧಾಳಿಯಾರಂಭವಾದಂದಿನಿಂದ ಹಾಂಕ್ಕೆ ೨೩೦೦ ಜರ್ಮನರ ವಿಮಾನಗಳು ನಾಶವಾದುವೆಂದು ವಾರ್ತೆ. ಬೆಂಗಾಜಿಯಲ್ಲಿ ಶತ್ರುಗಳು ಜೋರಿನ ಕಾಳಗ ಕೊಡುವ ಸಂಭವವನ್ನು ತೋರುವುದಿಲ್ಲ. ಲಿಬಿಯದಲ್ಲಿ ಮಿಂಚಿನ ವೇಗದಿಂದ ಯುದ್ಧವಾಗುವುದೆಂದು ಮೊದಲೇ ನಾವು ಸೂಚಿಸಿದ್ದರೂ ಶತ್ರುವಿನ ಸಾಮರ್ಥ್ಯವನ್ನು ಸರಿಯಾಗಿ ತಿಳಿಯರಿದ್ದುದರಿಂದ ಹಾಗಾಗಲಿಲ್ಲ; ಮುಂದೆ ಯುದ್ಧ ಭೀಕರವಾಗಿ ಸಾಗಿತು. ಜನರಲ್ ರೊಮೆಲ್ಲನು ಹಿಮ್ಮೆಟ್ಟಿದುದರಿಂದ ಅದೀಗ ಕೊನೆಗೆಂಡಂತಾಯಿತು. ಶತ್ರುವು ಈಗ ಕೊನೆಯ ಯತ್ನ ಮಾಡುತ್ತಿದ್ದಾನೆ. ಶತ್ರುವು ತನ್ನ ಸೈನ್ಯವನ್ನು ಸದ್ಯ ಎರಡು ಭಾಗಮಾಡಿ ಒಂದನ್ನು ಕರಾವಳಿಯ ಸಾಲು ಇಟ್ಟಿದ್ದಾನೆ. ಇನ್ನೊಂದನ್ನು ದಕ್ಷಿಣದಲ್ಲಿ ಮೇಕಲ್ಲೋ ಮಾರ್ಗದಲ್ಲಿಟ್ಟಿರುವನು. ಕೊಮೆಲನು ಈಗ ಹಿಮ್ಮೆಟ್ಟಿರುವುದರಿಂದ ಆತನ ಸೈನ್ಯವು ಹಾಗೂ ಅವನು ನಾಶವಾಗುವ ವರೆಗೂ ನಾವು ಹೋರಾಡಿ ವಿಜಯ ಹೊಂದುವೆವು" ಹೀಗೆಂದು ಲಂಡನ್ ಟಾಯಿಮ್ಸ್ ಪತ್ರಿಕೆಯು ಒಂದು ಅಗ್ರಲೇಖನವನ್ನು ಬರೆದು ಪರಿಸ್ಥಿತಿಯನ್ನು ವಿವರಿಸುತ್ತದೆ.

CHANGE OF OFFICE HOURS

To suit the convenience of our patrons, constituents and friends, hours of business at this Office will be changed on and from 30-12-41 and will be as under. On the same day we are also shifting to new, centrally situated and more spacious premises, near the Bus Stand.

Week days:	**9 30 A. M. to 12 Noon & 1-30 P. M to 4 P. M.**
Saturday:	**9-30 A. M. to 1 P. M.**

CANARA BANK LIMITED, KARKALA.

ವೈದ್ಯರತ್ನ
ಪಂಡಿತ ಡಿ. ಗೋಪಾಲಾಚಾರ್ಯ
ಇವರ
ಅರುಣ
ಸ್ತ್ರೀಯರಿಗಾಗಿ
ಮನಸಿಕೊಂಜರೆಗಳಿಂದ ಪರಿಹಾರ ಹೊಂದಲು, ಆಯಾ ಅತ್ಯುತ್ತಮವಾದ ಹಾಗೂ ಫಲವಾದ ವಿಷಯವೆಂದು ಅನುಭವಸ್ಥಾವಾದ ಸ್ತ್ರೀಯರಿಗೆ ತೋರುತ್ತುಂಟು. ಇದು ಹೆಂಗಸರನ್ನು ಆರೋಗ್ಯವಂತರಾಗಿಯೂ ಸುಖಿಗಳಾಗಿಯೂ ಮಾಡುವುದು.



ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಇದು ದೊರಕುತ್ತದೆ.
ತಯಾರಿಸುವವರು:—
ಆಯುರ್ವೇದಾಶ್ರಮ,
ಮದ್ರಾಸು.
ಸ್ಟೋಕಿಸ್ಟ್ಸ್:—
ವೊಮ್ಮೆಲರ್ ಸ್ಟೋರ್ಸ್
ಮಂಗಳೂರು.

ಸ್ವದೇಶಾಭಿಮಾನಿ

ತಾರೀಖು 26—12—1941

ಆಹಾರ ವಸ್ತುಗಳಿಗೆ ಬೆಲೆಯೇರುವುದು

ವೇಟಿ ಧಾರಣೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಳ ಆಗುತ್ತಿರುವುದನ್ನು ನಾವು ಇತ್ತೀಚೆಗೆ ವಿಶೇಷವಾಗಿ ಕಾಣುತ್ತೇವೆ. ಯುದ್ಧವು ಆರಂಭವಾದಂದಿನಿಂದಲೇ ಪರದೇಶದ ವ್ಯಾಪಾರಕ್ಕೆ ಅತಂಕವುಂಟಾಗಿ ಕಬ್ಬಿಣ, ಕಾಗದ ಬಟ್ಟೆ ಮೊದಲಾದ ವುಗಳಿಗೆ ವಿಶೇಷ ಕ್ರಯವೇರಿದ ವಿಷಯವು ಎಲ್ಲರ ಅನುಭವಕ್ಕೂ ಬಂದಿದೆ. ಅದರಲ್ಲೂ ಜಪಾನು ಯುದ್ಧ ಸಾರಿದ ಬಳಿಕ ಜನರ ನಿತ್ಯ ಜೀವನದ ವಸ್ತುಗಳಿಗೆ ಅಂದರೆ ವಿಶೇಷವಾಗಿ ಆಹಾರ ಸಾಮಗ್ರಿಗಳಿಗೇ ಕ್ರಯವು ಒಂದೇ ಸವನೆ ಏರುತ್ತಾ ಹೋಗಿ ಜನರು ಗಾಬರಿಗೊಳ್ಳುವ ಪರಿಸ್ಥಿತಿಯುಂಟಾಯಿತು. ಇದರಿಂದ ಕೆಲವು ಕಡೆಗಳಲ್ಲಿ ಲೂಟಿಗಳೂ ಆದುವೆಂದು ತಿಳಿದುಬಂದಿತು. ನಮ್ಮ ದೇಶದ ಅನೇಕ ಬೇರೆ ಬೇರೆ ನಗರದಲ್ಲಿ ಲೂಟಿಗಾರರು ಅಂಗಡಿಗಳನ್ನು ನುಗ್ಗಿ ಸಾಮಗ್ರಿಗಳನ್ನು ಸ್ವಾಧೀನ ಪಡಿಸುವ ಧೂರ್ತತನಕ್ಕೂ ಮುಂದುವರಿದಿರುವರೆಂಬ ಸುದ್ದಿಗಳನ್ನು ನಾವು ಓದುತ್ತಿದ್ದಂತೆಯೇ ಕಳದ ವಾರ ನಮ್ಮ ನಗರದಲ್ಲಿಯೂ ಅಕಸ್ಮಿಕವಾಗಿ ಲೂಟಿಯಾಗುತ್ತದೆ, ಲೂಟಿಯಾಗಿದೆ ಎಂಬ ಗಾಬರಿಗೊಳ್ಳುವ ಪರಿಸ್ಥಿತಿಯುಂಟಾದದ್ದು ನಮ್ಮನ್ನು ಈ ವಿಷಯದಲ್ಲಿ ತುಸು ಎಚ್ಚರಿಸುವಂತಿದೆ.

ನಮ್ಮ ಜಿಲ್ಲೆಯ ಪ್ರಧಾನ ಆಹಾರ ಸಾಮಗ್ರಿಯೆಂದರೆ ಅಕ್ಕಿ. ಅಕ್ಕಿಗೆ ಈಗಲೇ ಮುಡಿಯೊಂದರ ಏಳು ರೂಪಾಯಿ ವರೆಗೆ ಕ್ರಯವೇರಿದ್ದು ನಿಜವಾಗಿಯೂ ಅಸಾಧಾರಣ ಪರಿಸ್ಥಿತಿಯೇ ಆಗಿದೆ. ಕೂಲಿಗಾರರ ಜೀವನಕ್ಕೆ ಹಾಗೂ ಮಧ್ಯಮ ತರಗತಿಯ ಜನರ ಜೀವನಕ್ಕೆ ಇದರಿಂದ ಬಹಳ ತೊಡಕುಂಟಾಗದೆ ಇರಲಾರದು. ಈ ಕಾಲದಲ್ಲಿ ಭೀಮ ಮುಡಿಯೊಂದರ ಏಳು ರೂಪಾಯಿಗಳ ಕ್ರಯವೇರಿದ್ದು ನೋಡಿದರೆ, ಮುಂದೆ ಮಳೆಗಾಲದಲ್ಲಿ ಎಷ್ಟರ ಮಟ್ಟಿಗೆ ಬೆಲೆ ನಿಲ್ಲ ಬಹುದೆಂಬ ಭೀತಿ ಸಹಜವಾಗಿ ಕುಂಟುಗದೆ ಇರುವುದಿಲ್ಲ. ಅದಾಗಿ ಬಡಜನರೂ ಮಧ್ಯಮ ತರಗತಿಯವರೂ ಬಹಳ ಗಾಬರಿಗೊಳ್ಳಲು ಕಾರಣವಿದೆ. ಗಾಬರಿಗೊಳ್ಳುವ ಪರಿಸ್ಥಿತಿಯುಂಟಾದರೂ ಲೂಟಿ ಮಾಡುವಂತಹ ನೀಚ ಕೃತ್ಯಕ್ಕೆ, ಧೂರ್ತತನಕ್ಕೆ ಬುದ್ಧಿಯಿದ್ದವರು ಮುಂದಾಗಲಾರರೆಂದು ತಿಳಿಯಬಹುದಾಗಿದೆ. ಎಷ್ಟೆಂದರೂ ಕೆಲವರು ಮಂದ ಜನರು ಈ ಪರಿಸ್ಥಿತಿಯ ದುಷ್ಪ ಯೋಜನವನ್ನು ಪಡೆದುಕೊಂಡು ಲೂಟಿ ಮಾಡುವಂತಹ ಕೆಟ್ಟ ಕೆಲಸಕ್ಕೆ ಮನಮಾಡಿದ್ದರೆ ಅದನ್ನು ಶಾಂತಬುದ್ಧಿಯಿಂದ ವಿಚಾರಿಸಿ ಯೋಗ್ಯ ವ್ಯವಸ್ಥೆಗಳ ನಿರ್ಬಂಧ ಮಾಡುವುದು ಸರಕಾರದ ಹಾಗೂ ನಾಗರಿಕರ ಕರ್ತವ್ಯವಿದೆ.

ಅಕ್ಕಿಗೆ ಕ್ರಯವೇರಿದ್ದಕ್ಕಾಗಿ ಹಾಗೂ ಇತರ ಹಲವು ಮುಖ್ಯ ಆಹಾರ ಸಾಮಗ್ರಿಗಳಿಗೆ ಬೆಲೆಯೇರಿದ್ದಕ್ಕಾಗಿ, ಹಾಗೂ ಲೂಟಿಯಾಗುವುದೆಂದು ಗಾಬರಿಯಾಂಟಾಗಿದ್ದಕ್ಕಾಗಿ ನಾವಿಲ್ಲ. ಯಾರನ್ನೂ ದೂರಲು ಹೋಗುವುದಿಲ್ಲ. ಇಂತಹ ಸಂದರ್ಭದಲ್ಲಿ ಯಾವುದೇ ಒಂದು ವ್ಯಕ್ತಿಗೆ ಪಂಗಡವನ್ನು ಮಾತ್ರ ದೂರುವುದು ನ್ಯಾಯವೂ ಅಲ್ಲ. ಆದರೆ ಇವನ್ನು ಹೇಳದೆ ನಿರ್ವಾಹವಿಲ್ಲ. ಅಕ್ಕಿಯಂತಹ ಪ್ರಾಮುಖ್ಯ ಆಹಾರ ವಸ್ತುವಿಗೆ ಹದಿನೈದು ಬೆಲೆಯೇರಿದಂತೆ ಸರಕಾರದವರು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುವುದು —ನಿರ್ಬಂಧ ಗೈಯ್ಯುವುದು—ಅವರ ಕರ್ತವ್ಯವಿದೆ. ಅತಿಶಯ ಲಾಭದ ಆಶೆಯಿಡದೆ, ಅಕ್ಕಿಉತ್ಪನ್ನಗಾರರು ಹಾಗೂ ವ್ಯಾಪಾರಸ್ಥರು ನ್ಯಾಯವಾದ ಒಂದು ಬೆಲೆಗೆ ಅಕ್ಕಿ ವ್ಯಾಪಾರವಾಗುವಂತೆ ಉದಾರತೆ ತೋರಿಸಿ, ಯುದ್ಧ ಕಾಲದಲ್ಲಿ ಸಹಜವಾಗಿ ಗಾಬರಿಗೊಳ್ಳುವಂತಹ ಜನರನ್ನು ಶಾಂತಗೊಳಿಸುವುದು ಅಕ್ಕಿಉತ್ಪನ್ನಗಾರರ ಹಾಗೂ ವ್ಯಾಪಾರಸ್ಥರ ಹೊಣೆಗಾರಿಕೆಯಿದೆ. ಎಂತಹ ಅವಸ್ಥೆ ಬಂದರೂ ಸ್ವಲ್ಪ ಮಟ್ಟಿಗೆ ವಿವಿಕ್ತಿಗಳನ್ನು ಗಮನಕ್ಕೆ ತಂದುಕೊಂಡು 'ಲೂಟಿ'ಯಂತಹ ಹೀನ ವಕ್ರಕೃತ್ಯಕ್ಕೆ ಯಾರೂ ಇಳಿಯದಂತೆ ಯತ್ನಮಾಡುವುದು ಪ್ರತಿಯೊಬ್ಬ ನಾಗರಿಕನ ಧರ್ಮವೇ ಆಗಿದೆ. ಅಂತೂ ಎಲ್ಲರೂ ಈ ವಿಷಯದಲ್ಲಿ ಸಾಕಷ್ಟು ಸಹಕಾರ ತೋರಿಸಿ ದೇಶದಲ್ಲಿ ಶಾಂತಿ ಹೆಚ್ಚದಂತೆ ನೋಡಿಕೊಳ್ಳುವುದು ಅವಶ್ಯ. ಈ ಸಂದರ್ಭದಲ್ಲಿ ಮುಖ್ಯವಾಗಿ ಸರಕಾರದವರು, ಮತ್ತೆ ಜನತೆಯ ಪ್ರತಿನಿಧಿಗಳು, ಪಂಗಡಗಳ ಮುಂದಾಳುಗಳು ಇವರೆಲ್ಲರೂ ಗಂಭೀರ ವಿಚಾರ ಮಾಡಿ ದೇಶದ, ಜನತೆಯ, ಶಾಂತಿ ಕದಡದಂತೆ ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರವೇರಿಸಲು ಮುಂದೆ ಬರುವರೆಂದು ನಾವು ನಿರೀಕ್ಷಿಸುತ್ತೇವೆ.

1942 ಶಾರದಾ 1942

ಪೊಕೆಟ್ ಡೈರಿಗಳು

ಸಣ್ಣ ಡೈರಿ 0-6-0 ದೊಡ್ಡ ಡೈರಿ 0-12-0
ಮುಚ್ಚಳದ್ದು ,, 0-8-0 ಮುಚ್ಚಳದ್ದು ,, 0-14-0

ಸಿಗುವ ಸ್ಥಳ: ಶಾರದಾ ಭಾವಾಖಾನೆ,
ರಥಬೀದಿ ಮಂಗಳೂರು.

ಮಂಗಳೂರು ಪೇಟೆಯ ದವಸ ಧಾನ್ಯ ವಸ್ತುಗಳ ಧಾರಣೆಗಳು.

(ದ. ಕ. ಜಿಲ್ಲಾ ಪ್ರಿಜರ್ವ್ ಕಲೆಕ್ಟರರಿಂದ ಬಂಧಸ್ಥ.)

	ರಿಂದ	ವರೆಗೆ
1. (a) ಭತ್ತ ಅವ್ವಲ್ ತರದ ಗುಣ್ಣು ಮುಡಿಗೆ	2—14—0	3—0—0
(b) ,, ದುಯಂ ,, ,, ,,	—	—
2. (a) ಅಕ್ಕಿ ಅವ್ವಲ್ ತರದ ಗುಣ್ಣು ಮುಡಿಗೆ	6—6—0	6—10—0
(b) ,, ದುಯಂ ,, ,, ,,	6—2—0	6—4—0
3. (a) ,, ಅನ್ವಲ್ ,, ಸುಗ್ಗಿ ,,	6—4—0	6—8—0
(b) ,, ದುಯಂ ,, ,, ,,	6—4—0	—
4. (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	37—8—0	42—8—0
(b) ,, ಸಿಪ್ಪೆಯುದ್ದದ್ದು ,,	40—0—0	45—0—0
5. (a) ಕೊಬ್ಬರಿ ಅಕ್ಷಿನು ಖಂಡಿಗೆ	66—4—0	—
(b) ,, ದೀವಿ ,,	—	—
(c) ,, ದಿಲ್‌ಪಸಂದ್ ,,	72—8—0	—
6. ತೆಂಗಿನ ಎಣ್ಣೆ ಮಣಕ್ಕೆ	5—2—0	—
7. (a) ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—0—0	3—8—0
(b) ಸುಲಿದ ಅಡಿಕೆ ಖಂಡಿಗೆ (ಹಳ್ಳು)	190—0—0	200—0—0
(ಹೊಸ್ತು)	140—0—0	170—0—0
8. ಗೇರುಬೀಜ ಮುಡಿಗೆ	—	—
9. ಕಪ್ಪನ ಬೆಲ್ಲ ಖಂಡಿಗೆ	32—8—0	37—8—0
10. ಒಣಿ ಮೆಣಸು ಕಂಡ್ಕೆಡ್ಡ ವೇಟಿಗೆ	17—8—0	18—0—0
11. (a) ಕೇರಳದೆಲೆಯ ಹೊಗೆಸೊಪ್ಪು ಮಣಕ್ಕೆ	5—0—0	7—0—0
(b) ಹುಡಿಯ ,, ,,	6—0—0	7—8—0
12. (a) ಮೈಸೂರು ವಿಲ್ಲಿ ಮಣಕ್ಕೆ	58—0—0	63—0—0
(b) ಕೊಡಗಿನ ,, ,,	53—0—0	57—0—0
13. (a) ಉಮಟಿಯ ಮೆಣಸು ಖಂಡಿಗೆ	90—0—0	95—0—0
(b) ಕಾಸರಗೋಡು ,, ಮಣಕ್ಕೆ	—	—
(c) ಊರಿನ ,, ,,	5—0—0	—

ನೋಟುಗಳು

ಹಿಂಸೆ ಮತ್ತು ಅಹಿಂಸೆಗಳ ಕುರಿತು ಬುದ್ಧಿವಂತಿಕೆ ವಿಚ್ಛೇದ ಕರ್ತವ್ಯಮಾಡುತ್ತಾ ರಾಜಾಜಿ ಗಾಂಧಿಜಯವರ ಕೊರಳಲ್ಲಿರುವ ಕಾಂಗ್ರೆಸಿನ ಮುಂದಾಳುತನದ ಮಾಲೆಯನ್ನು ತನ್ನ ಕೊರಳಿಗೆ ಅಹ್ವಾನಿಸುತ್ತಿದ್ದಾರೆ.

ಗಾಂಧಿಜಿಗೆ ಹೀಗೆ ಎದುರು ಮಾತನಾಡಿದರೆಂಬೊಂದು ಕಾರಣದಿಂದ್ದೆ ರಾಜಾಜಿಯನ್ನು ಕಾಂಗ್ರೆಸಿನಲ್ಲಿರುವ ಟೋಸಿಸ್ಟರು, ರಾಯಿಸ್ಟರು, ಸೋಶಿಯಲಿಸ್ಟರು ಎಲ್ಲರೂ ಈಗ ಹೊಗಳಲು ಆರಂಭಿಸಿದ್ದಾರೆ.

"ಹಿಂಸೆ ಮತ್ತು ಅಹಿಂಸೆಗಳ ಕುರಿತು ಕಾಂಗ್ರೆಸಿನವರಲ್ಲಿ ಈಗ ಸಂದೇಹ ಬುದ್ಧಿಯಿಲ್ಲ; ಹಿಂಸೆ ಅಹಿಂಸೆಗಳ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಕಾಂಗ್ರೆಸು ಈ ಮೊದಲೇ ಸ್ಪಷ್ಟಪಡಿಸಿದೆ. ಇಂದಿನ ಬಿಕ್ಕಟ್ಟಿಗೆ ಭಾರತದ ಕುರಿತು ಇರುವ ಬ್ರಿಟಿಷರ ಬುದ್ಧಿಯೇ ಕಾರಣವಲ್ಲದೆ ಬೇರೇನೂ ಇಲ್ಲ" ಹೀಗೆಂದು ರಾಷ್ಟ್ರಪತಿ ಅಜಾದರು ರಾಜಾಜಿಯವರ ತರ್ಕ ಸರಣಿಗೆ ಅಡ್ಡ ಬಂಡೆಯೊಡ್ಡಿದ್ದಾರೆ!

ಗಾಂಧಿಜಿಯವರ ಕೊರಳಿಂದ ಹೊರಟು ಕಾಂಗ್ರೆಸಿನ ಮುಂದಾಳುತನದ ಮಾಲೆ ರಾಜಾಜಿಯ ಕೊರಳ ಕಡೆ ಸರಿಯುತ್ತಿದ್ದಾಗ, ಮೌಲಾನರು ಈ ತರದ ಒಂದು ಮಂತ್ರವಾಡಿ ಅದನ್ನು ಕ್ಷಿಪ್ರಂಕು ಸ್ವರ್ಗದಲ್ಲಿ ಈಗ ನಿಲ್ಲಿಸಿಬಿಟ್ಟಿರುವರು.

ಅತ್ಲಾಂಟಿಕ್ ಶಾಸನವನ್ನು ಭಾರತಕ್ಕೆ ಅನ್ವಯಿಸಲಿಲ್ಲ ಎಂಬುದರಿಂದ, ಅದನ್ನು ಅನ್ವಯಿಸಿದ್ದರೆ ನಮಗೆ ಮಹತ್ವದ ಲಾಭವೇನಾದರೂ ದೊರಕುತ್ತಿದ್ದಿತೆಂದು ಅರ್ಥವಾಗುವುದಿಲ್ಲ. ಅನ್ವಯಿಸಲಿಕ್ಕೂ ಬ್ರಿಟಿಷ್ ಪ್ರಭುತ್ವವು ತಯಾರಿಲ್ಲವೆಂಬುದು ಮಾತ್ರ ಸ್ಪಷ್ಟವಾದಂತಾಯಿತು ಎಂದು ನೆಹರು ಸ್ಪಷ್ಟಪಡಿಸಿದರು.

ಇದರಿಂದ ಅತ್ಲಾಂಟಿಕ್ ಶಾಸನವು ಭಾರತಕ್ಕೆ ಅನ್ವಯಿಸುತ್ತದೆಯೆಂದು ಬ್ರಿಟನು ಇನ್ನು ನಾರದರೊ ಭಾರತೀಯರು ಹಿಗ್ಗಿಕೊಳ್ಳುವುದಿಲ್ಲವೆಂದು ತಿಳಿಸಿದಂತಾಯಿತೆ?

"ಭಾರತದ ಮೇಲೆ ಧಾಳಿಮಾಡುವುದು ಸಾಧ್ಯವಿಲ್ಲ" ಎಂದು ಸೇನಾವತ್ ವೇವಲ್ಲರು ಭರವಸೆ ಹೇಳುತ್ತಾರೆ. ಬಾಂಬು ಬಿದ್ದರೂ ಗಾಬರಿಗೊಳ್ಳಬಾರದೆಂದು ಗಾಂಧಿಜಿಯೂ ಉಪದೇಶಮಾಡುತ್ತಾರೆ.

"ಹಿಂದಿನ ಹಿಂಸಾಮಯರಾದ ಆಕ್ಸ್‌ಮಣಗಾರರನ್ನು ಯಶಸ್ವಿಯಾಗಿ ಎದುರಿಸಬೇಕಾದರೆ, ನಮ್ಮಲ್ಲಿ ಪ್ರಬಲವಾದ ಹಿಂಸಾ ಸಾಧನಗಳು ಇರಬೇಕು; ಅದು ವರಿಷ್ಠತೆಯ ಮೂಲಕ ನಮಗೆ ಸಾಧ್ಯವಾಗಲಿಲ್ಲ, ನಾವು ಅದನ್ನು ಸಾಧಿಸಲೂ ಇಲ್ಲ. ಕಳದ ಮೂಹತ್ವ ವರ್ಷಗಳಿಂದ ಅಹಿಂಸೆಯ ಮೂಲಕ ಸಾಕಷ್ಟು ನಾವು ಬಲಶಾಲಿಗಳಾಗಿದ್ದೆವೆ. ಅದನ್ನೇ ಏಕೆ ನಾವು ಇನ್ನೂ ಮುಂದುವರಿಸಬಾರದು" ವಿನೋಬಾಜಿ ಬೇಡೆಂದು ಸಂದರ್ಭಕ್ಕೆ ಸರಿಯಾಗುವ ಸೂಚನೆ ಕೊಡುತ್ತಾರೆ.

ಬಾಂಬುಧಾಳಿಗೆ ಬೆದರಿ ಗಾಬರಿಗೊಳ್ಳಕೂಡದು

ಜನತೆಗೆ ಕಾಂಗ್ರೆಸಿನವರು ಧೈರ್ಯ ಹೇಳಬೇಕು ಗಾಂಧಿಜಿಯವರ ಸಲಹೆ

ತಮ್ಮೆದುರಿಗೆ ಬಾಂಬಿನ ಧಾಳಿಯಾದರೂ, ಜನರು ಗಾಬರಿಯಾಗದೆ ಗಂಡಾಂತರವನ್ನೆದುರಿಸಬೇಕು. ಅಷ್ಟು ಧೈರ್ಯವಿಲ್ಲದವರು ಸುರಕ್ಷಿತವಲ್ಲದ ಪಟ್ಟಣ ಪ್ರದೇಶಗಳನ್ನು ಬಿಟ್ಟುಹೋಗಬೇಕು. ಅಸಾಮ್ ಮೊದಲಾದ ಗಂಡಾಂತರದ ಪ್ರಾಂತಗಳಲ್ಲಿರುವ ಹೊಣೆಗಾರರಾದ ಕಾಂಗ್ರೆಸಿನವರು ಸತ್ಯಾಗ್ರಹ ಮಾಡದೆ ಜನತೆಗೆ ಧೈರ್ಯಕೊಡುವ ಕೆಲಸ ಮಾಡಬೇಕು. ಎ. ಆರ್. ಪಿ. ಯಲ್ಲಿ ಸೇರದೆ, ಕಾಂಗ್ರೆಸಿನವರು ಪರಿಣಾಮಕಾರಿಯಾದ ಸಹಾಯವನ್ನು ಮಾಡಬಲ್ಲರು.'

—ಹೀಗೆಂದು ಗಾಂಧಿಜಿ ಇತ್ತೀಚೆಯ ಪ್ರಕಟಣೆಯೊಂದರಲ್ಲಿ. ಕಾಂಗ್ರೆಸಿನವರು ಬಾಂಬು ಧಾಳಿಯಾದಾಗ ಮಾಡತಕ್ಕ ಕರ್ತವ್ಯಗಳ ಬಗ್ಗೆ ವಿವರಿಸಿ ತಿಳಿಸಿದ್ದಾರೆ. ಗಾಂಧಿಜಿ ಆ ಪ್ರಕಟಣೆಯಲ್ಲಿ ತಿಳಿಸಿದ ಬೇರೆ ವಿಷಯಗಳು ಇಂತಿವೆ.

'ಯುದ್ಧವು ಭಾರತದ ಗಡಿಗೆ ಬಂದಂತೆ ಜನರು ಗಾಬ್ರಿಗೊಳ್ಳುತ್ತಿದ್ದಾರೆ. ಆ ಸಾಮಿನಿಂದ ಒಂದು ಪತ್ರ ಬಂದಿದೆ. ಬೇರೆ ಕಡೆಗಳಿಂದಲೂ ಇಂತಹ ಪತ್ರಗಳು ಬಂದಿವೆ. ಯುದ್ಧವನ್ನು ವಿರೋಧಿಸುತ್ತಿರುವ ಮತ್ತು ಸತ್ಯಾಗ್ರಹದ ಸಂತಾಲನೆನಾದ ನಾನು, ಅವರಿಗೆ ಈ ವಿಷಯ ಸಲಹೆ ಕೊಡಬೇಕೆಂದು ನನ್ನೊಡನೆ ಅವರು ಕೇಳಿಕೊಳ್ಳುತ್ತಿದ್ದಾರೆ. ಅಸಾಮಿನಂತಹ ಗಂಡಾಂತರ ಪ್ರದೇಶದಲ್ಲಿರುವ ಹೊಣೆಗಾರ ಸತ್ಯಾಗ್ರಹೀ ಕಾಂಗ್ರೆಸಿನವರು, ಸತ್ಯಾಗ್ರಹಮಾಡದೆ, ಜನರಿಗೆ ಧೈರ್ಯ ಕೊಡುವ ಕೆಲಸದಲ್ಲಿ ನಿರತರಾಗಿರಬೇಕು. ಕಾಂಗ್ರೆಸ್ ಇಲ್ಲವೇ ನನ್ನ ದೂತನನ್ನು ಕೇಳಿದವರಿಗೆ ಕೂಡಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಸೂಚನೆಗಳು ಕೊಡಲ್ಪಡುವವು. ನನ್ನ ನುಡಿಗೆ ಹೇಳುವುದಾದರೆ, ನಮ್ಮ ಮುಂದೆಯೇ ಬಾಂಬುಗಳು ಬಿದ್ದರೂ ಜನರು ಗಾಬರಿಯಾಗಬಾರದು.

'ಈಗ ದೊಡ್ಡ ಪಟ್ಟಣಗಳು ಮಾತ್ರ ಗಂಡಾಂತರ ಪ್ರದೇಶಗಳಾಗಿವೆ. ಗಂಡಾಂತರವನ್ನು ಎದುರಿಸಲು ಇಷ್ಟವಿಲ್ಲದವರು ಕೂಡಲೇ ಪಟ್ಟಣಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಬಹುದು. ಆದರೆ ಸಣ್ಣ ಪುಟ್ಟ ಸಂಭವಗಳಿಂದ ಯಾರೂ ಗಾಬರಿಗೊಳ್ಳಬಾರದು. ಗಾಡಿಗಳಲ್ಲಿ ಇಲ್ಲವೇ ರೈಲ್ವೆ ಸ್ಟೇಷನುಗಳಲ್ಲಿ ಗದ್ದಲ ಮಾಡಕೂಡದು. ಅಲ್ಲಿ ಏನಿಲ್ಲವೇ ಗದ್ದಲವಾದರೆ ರೈಲ್ವೆ ಅಧಿಕಾರಿಗಳು ಜೋಗ್ರತೆ ವಹಿಸಿ ಕಾರ್ಯ ಮಾಡುವುದು ಸಾಧ್ಯವಾಗಲಾರದು. ಆತ್ಮರಕ್ಷಣೆಗಾಗಿ ಓಡಿಹೋಗುವುದು ಶೂರರ ಲಕ್ಷಣವಲ್ಲ. ತಿಳಿದವರು ಮತ್ತು ಶೂರ ಜನರು, ವಿಳಿಕ್ಕಿಲ್ಲದೂ ಹೋಗುವ ವರೆಗೆ ಕಾವುಳ್ಳ ಸ್ಥಳಬಿಟ್ಟು ಕದಲಲಾರರು. ನಾನು ಹೇಳಿದ್ದು ಕಾಂಗ್ರೆಸಿನವರಿಗೆ ಮಾತ್ರವಲ್ಲ ಇತರರಿಗೂ ಅನ್ವಯಿಸುವುದು. ಎಂತಹ ಹೀನ ಗಂಡಾಂತರ ಪ್ರಸಂಗ ಬಂದರೂ ಭಾರತೀಯರು ಹುಚ್ಚರಂತೆ ಗಾಬ್ರಿಗೊಂಡು ಓಡಿಹೋಗುತ್ತಿರುವರೆಂಬ ಅಪಕೀರ್ತಿಯನ್ನು ನಾವು ಹೊಂದುವುದು ಬೇಡವೆಂದು ನನಗೆ ತೋರುತ್ತದೆ. ಎಂತಹ ಗಂಡಾಂತರ ಪ್ರಸಂಗ ಬಂದರೂ ನಾವಪದನ್ನು ಧೈರ್ಯದಿಂದ ಎದುರಿಸುವ.

'ಯುದ್ಧವನ್ನು ವಿರೋಧಿಸುತ್ತಿರುವ ಕಾಂಗ್ರೆಸಿನವರು ತಮ್ಮ ಸ್ಥಳದಲ್ಲಿ ಉಳಿದು, ತಮಗೆ ಶಕ್ಯವಿದ್ದಷ್ಟು ಜನತೆಗೆ ಸಹಾಯ ಕೊಡಬೇಕು. ತಮಗೆ ಬರಲಹುದಾದ ಗಂಡಾಂತರಗಳನ್ನೆದುರಿಸಿ ಅವರು ಗಾಯಗೊಂಡವರಿಗೆ ಸಹಾಯನೀಡಬೇಕು. ಕಾಂಗ್ರೆಸಿನವರು ಎ. ಆರ್. ಪಿ. ಯಲ್ಲಿ ಸೇರಬಾರದೆಂದು ನಾನು ಮೊದಲಿಂದ ಹೇಳುತ್ತಿದ್ದು ಈಗಲೂ ಹಾಗೆಯೇ ಅನ್ನುತ್ತೇನೆ. ಕಾಂಗ್ರೆಸಿನವರು ತಮ ಗಂಡಾಂತರ ಸ್ಥಳಗಳನ್ನು ಇಲ್ಲವೇ ಸೇನಾ ಕಾರ್ಯಗಳನ್ನು ಬಿಟ್ಟುಹೋಗಬೇಕೆಂದು ನಾನು ಎಂದಿಗೂ ಹೇಳುವುದಿಲ್ಲ. ಯಾವುದೇ ತರದ ಪಾರಿತೋಷಿಕ ಮತ್ತು ಸ್ವೀಕಾರಗಳನ್ನು ಪಡೆಯದೆ, ಸರಕಾರೀ ಸಂಸ್ಥೆಗೆ ಸೇರಿಕೊಳ್ಳದೆ ಜನತೆಗೆ ಬಳಿಯಲ್ಲೆ ಪರಿಣಾಮಕಾರಿಯಾಗಿ ಸೇವೆಯನ್ನುಸಲ್ಲಿಸಬಹುದು. ಯುದ್ಧವನ್ನು ವಿರೋಧಿಸುವವರೂ, ಶತ್ರುಗಳಿಗೆ ಅಂಜದಿದ್ದವರೂ ಎಂತಹ ಗಂಡಾಂತರ ಪ್ರಸಂಗ ಬಂದರೂ ಯಾವುದೇ ಬಗೆಯಿಂದ ತಲೆಕೆಡಿಸಿಕೊಳ್ಳದೆ ಅತ್ಯಂತ ಶಾಂತರೀತಿಯಿಂದ ಶಾರ್ಯ ಮಾಡುವುದವಶ್ಯ.'

ರೈಲು ಬಂಡಿಗಳ ಸಮಯ

ಇವೆ. ಜುಲ್ಫಾ ತಾ. 16ರಿಂದ ಪ್ರವೃತ್ತಿಸಬಹುದಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತೆ—

ಗಾಡಿಗಳು ಹೊರಡುವ ಗಂಟೆ ತಪ್ಪುವ ಗಂಟೆ ಗೂಡ್ಸು ಬಂಡಿ 8.45 ರಾತ್ರಿ 9.25 ರಾತ್ರಿ
ಸಿಲೇಶ್ವರದವರೆಗೆ 7.32 ಬೆಳಿಗ್ಗೆ 1.0 ಅಪರಾಹ್ನ
ಮೆಲಬಾರು ಎಕ್ಸ್ ಪ್ರೆಸ್ (ಮೈಲ್) 9.5 ಬೆಳಿಗ್ಗೆ 5.15 ಸಾಯಂ.
ಪಾಲಾವ್ ಪೇಟೆ
ಪೆಸೆಂಜರ್ 12.0 ಮಧ್ಯಾಹ್ನ 2.55 ಸಾಯಂ.
ಕಾರಗೋಡು
ವರೆಗೆ 3.35 ಸಾಯಂ. 6.50 ಸಾಯಂ.
ಕಣ್ಣಣ್ಣೂರು
ವರೆಗೆ 5.53 ಸಾಯಂ. 9.40 ಪೂರ್ವಾಹ್ನ

ಸುಕ್ರ ಸಂಜೀವನ

ಭಾರತ ದೇಶವೆಂದು ಪ್ರಾಚೀನ ಮಹರ್ಷಿಗಳ ನಿಯಮುಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವ್ರತ ಪಾಲನೆಯು ಲ್ಲಿಲ್ಲದೆ ಎಂದೋ ನುರಿತು ಹೋಗಿಬಿಟ್ಟದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ'ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಲೆಂಬುದೇ. ಈ ಔಷಧಿಯು ಮಾತ್ರ ಆವನಿಗೆ ಸಂಪೂರ್ಣ ಗುಣವನ್ನು ಪೂರೈಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯಾವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ.4



ಅಸ್ಮತ್ಪ್ರ ಡಾ॥ ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್. (ಅಮೇರಿಕ)
ಆಯುರ್ವೇದ ವಾಸ್ತು
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.
ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜೆನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್: ಪಾ ಕಂಪೆನಿ, ಹಂಪನಕಟ್ಟೆ ಮಂಗಳೂರು.

The Canara Banking Corporation Ltd.

(Incorporated in British India)

Estd. 1906.

With effect from 1—11—1941 the following will be rates of interest on Deposits:

FIXED

3 MONTHS	....	2½% P. A
6 - do -	....	2¾% ,,
9 - do -	....	3% ,,
12 - do -	....	3¼% ,,
24 - do -	....	3¾% ,,
SHORTTERM	....	2% ,,

ಮುತ್ತಿಡಲು ಕೊಂಡರೆಯಾಯಿತೆಂದು ದಾವೆ

ಕನ್ನ ಗಂಡನು ತನಗೆ ಮುತ್ತಿಡಲು ಕೊಂಡರೆಯಾಯಿತೆಂದು ಕೆಲಿಫೋರ್ನಿಯದ ಮಿಸೆಸ್ ಎ. ಕೆ. ಬೆಗ್ಸ್ ಎಂಬವಳು. ಲಿವಾಸ್ಟಿಕಾ ಕೊಟ್ಟ ಅಂಗಡಿಯವನ ಮೇಲೆ ದಾವೆ ಹೂಡಿದ್ದಾಳೆ. ಅದನ್ನು ಉಪಯೋಗಿಸಿದ ಮೇಲೆ ತನ್ನ ಮುಖ ವಿಕೃತವಾಗಿ ಗಂಡನಿಗೆ ಅಪನ್ನು ಮುತ್ತಿಡಲು ಆಗಲಿಲ್ಲವೆಂದು ಅವಳ ವ್ಯಾಜ್ಯ. ಮೆದ್ದಿನ ಚಾರ್ಜು ಕೂಡಿಸಿ ೩೪೦ ಪವನುಗಳಿಗೆ ನಷ್ಟವನ್ನು ಅಕೆ ಅಂಗಡಿಯವನಿಂದ ಕೇಳಿರುವಳು. ಗಂಡನೂ ತನ್ನ ಹೆಂಡತಿಯನ್ನು ಎರಡು ವಾರ ಮುತ್ತಿಡಲು ಸಾಧ್ಯವಿಲ್ಲದಂತೆ ಅದು ಮಾಡಿತೆಂದು ವ್ಯಾಪಾರಿಯ ಮೇಲೆ ೬೦ ಪವನು ದಂಡಕೊಡುವ ವ್ಯಾಜ್ಯ ಹೂಡಿರುವನು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಧಾರಣೆ ಏರಿದ ಬಗ್ಗೆ ಗಲಭೆ

ಅಕ್ಕಿ ಧಾರಣೆ ಏರಿದ ವಿಷಯದಲ್ಲಿ, ಮಂಗಳೂರು ನಾಳಿಕೇರಿಯಲ್ಲಿ ಗಲಭೆಯುಂಟಾಗಿ ಕಳೆದ ಗುರುವಾರ, ಶುಕ್ರವಾರ, ಸಗರದ ಕೆಲವು ಕಡೆಗಳಲ್ಲಿ ಅಶಾಂತಿಯಾದ ಜನತೆಯು ಅಂಗಡಿಗಳನ್ನು ಪುಡಿಪಿಸಿ ಲೂಟಮಾಡುವುದನ್ನೂ ಉಪದ್ರವಮಾಡಿದರೆಂದು ಸುದ್ದಿ ಬಂದುದರಿಂದ ಭಯಭರಿತರಾಗಿದ್ದ ಕೆಲವು ಮಂದಿ ವ್ಯಾಪಾರಸ್ಥರು ಭಂಡಾರಗಳನ್ನು ಮುಚ್ಚಿದರು. ಕಲೆಕ್ಟರರು ಇದಕ್ಕಿಂತ ಮೊದಲೇ ಒಂದು ಆಜ್ಞೆ ಹೊರಡಿಸಿದ್ದು ಅದು ನಗರದಲ್ಲಿ ಟಾಂ ಟಾಂ ಮೂಲಕ ಸಾರಲಾಗಿತ್ತು. ತಾಲೂಕು ಎಡ್ವೈಸರಿ ಕಮಿಟಿಯವರೊಡನೆ ಚರ್ಚಿಸಿದ ಪರಿಣಾಮ ಅಕ್ಕಿಯ ಬೆಲೆಯನ್ನು ಹೆಚ್ಚಿಗೆ ಮಾಡಲಾಗಿದೆ. ಆದರೆ ಗಲಭೆ ಹೆಚ್ಚಿತ್ತಲ್ಲದೆ ಅಂಗಡಿ ಲೂಟ ಆದ ಉಪಾಹಾರಗಳು ಕಂಡುಬಂದಿಲ್ಲ.

'ಅಕ್ಕಿದಾರಣೆ ಇಳಿಸಬೇಕು'

ಅಕ್ಕಿದಾರಣೆ ಹೆಚ್ಚಿರುವ ವಿಷಯ ಜನತೆ ಆಶಾಂತಿಗೊಂಡ ಬಗ್ಗೆ ಮಂಗಳೂರು ಸಾರ್ವಜನಿಕರ ಸಭೆಯೊಂದು ತಾ. 19ರಂದು ಮೈದಾನಲ್ಲಿ ಶ್ರೀ ಪ್ರಾಮೋದರ ಬಾಳಿಗರ ಅಧ್ಯಕ್ಷತೆಯಿಂದ ಕೂಡಿತು. ಶ್ರೀ. ಎಸ್. ಎನ್. ಹೊಳ್ಳರು ಆ ದಿನ ಭಾಷಣಮಾಡಿ, ಸರಕಾರ ಪ್ರಜರು ಕೂಡಲೇ ಆಹಾರ ಸಾಮಗ್ರಿಗಳ ಬೆಲೆಯನ್ನು ಹತೋಟಿಯಲ್ಲಿಗ್ಗಿಟ್ಟುಕೊಳ್ಳಬೇಕೆಂದೂ ಇಲ್ಲವಾದರೆ ಜನತೆಮಾಡುವ ಲೂಟಿಗೆ ಸಾಗರಿಕರು ಜವಾಬ್ದಾರರಾಗಲಾರರೆಂದು ತಿಳಿಸಿ, ಭಾಷಣ ಮಿತ್ತರು. ಅಧ್ಯಕ್ಷರು ಜನರು ಅಶಾಂತರಾಗದೆ, ಸರಕಾರವು ಏನಮಾಡಲಿದೆಯೆಂಬುದನ್ನು ನಿರೀಕ್ಷಿಸಬೇಕೆಂದು ಹೇಳಿದರು.

ಶ್ರೀ ಕೆ. ಆರ್. ಈರಂತರ ಅಧ್ಯಕ್ಷತೆಯಲ್ಲಿ ಮಹಾ ಸಭೆ

ಯೊಂದು ಮಂಗಳೂರು ಮೈದಾನಲ್ಲಿ ತಾ. 21ನೇ ದಿನ ಸಂಜೆ ಅಕ್ಕಿಯ ಬೆಲೆ ಏರಿದ ವಿಷಯದಲ್ಲಿ ಕೂಡಿತ್ತು. ನಾಲ್ಕೈದು ಸಾವಿರಕ್ಕೆ ಮಿಕ್ಕಿ ಜನರು ಸೇರಿದ್ದರು. ಪ್ರಾರಂಭದಲ್ಲಿ ಶ್ರೀ ಎಸ್. ಎನ್. ಹೊಳ್ಳರು ವಿಸ್ತಾರವಾದ ಭಾಷಣ ಮಾಡುತ್ತಾ, ಪರಿಸ್ಥಿತಿಯನ್ನು ವಿವರಿಸಿ ಹೇಳಿ, ಲಾಭಕೊಂಡುವ ದೃಷ್ಟಿಯಿಂದ ವ್ಯಾಪಾರಸ್ಥರಾಲಿ, ಧ್ವನಮಲಿಕರಾಗಲಿ ಅಕ್ಕಿಗೆ ಕೃಯ ಏರಿಸುವುದರಿಂದಬಡಜನರು ಕಂಗಾಲಾಗುವರೆಂದೂ, ಅದನ್ನು ಎದುರಿಸದೆ ನಿರ್ವಾಹವಿಲ್ಲವೆಂದೂ, ಸರಕಾರವು "ಕೂಡಲೇ ಆಹಾರ ಸ್ತಾವನ್ಯಗಳ ವಿಷಯವಾಗಿ ಬೆಲೆಯನ್ನು ನಿರ್ಬಂಧಿಸಬೇಕೆಂದೂ ಹೇಳಿದರು. ಆನಂತರ ಅವರ ಮಾತನ್ನು ಪುಷ್ಟೀಕರಿಸಿ ಶ್ರೀ ನಾಗರಾಜಯ್ಯನವರೂ, ಮಾತನಾಡಿದರು. ಆ ಮೇಲೆ ಶ್ರೀ ಕೇಶವ ಕಾಮತರು, ಅಕ್ಕಿ ಮೊದಲಾದ ಆಹಾರ ಸಾಮಾನ್ಯಗಳಿಗೆ ಕೃಯ ನಿರ್ಬಂಧಿಸಬೇಕೆನ್ನುವ ಯುದ್ಧ ಭತ್ತೆ ಸಿಗಬೇಕೆನ್ನುವ ಠರಾವುಗಳನ್ನು ಸಭೆಯ ಮುಂದಿಟ್ಟು ವಿವರಿಸಿ ಭಾಷಣವಿತ್ತರು. ಶ್ರೀ ಪ್ರಾಮೋದರ ಬಾಳಿಗರು ಅದನ್ನು ಸಮರ್ಥಿಸುವುದಾಗಿ ಹೇಳಿದರು. ಆನಂತರ ಅಧ್ಯಕ್ಷ ಭಾಷಣವಾಗಿ ಠರಾವು ಸರ್ವಾನು ಮತದಿಂದ ಮಂಜೂರಾಯಿತು. ಅಧ್ಯಕ್ಷರಾದ ಶ್ರೀ ಈರಂತರು, ತಾನು ಈ ಜಿಲ್ಲೆಯ ಫ್ರವ್ಹಮಲಿಕರ ಪರವಾಗಿಯೂ ವರ್ತಕರ ಹಿತಚಿಂತಕನಾಗಿಯೂ ಅಕ್ಕಿಗೆ ಅಧಿಕ ಬೆಲೆ ಏರಿಸುವುದು ನ್ಯಾಯವಲ್ಲವೆಂದು ಹೇಳುವುದಾಗಿ ಭಾಷಣಮಾಡಿದರು. ಜನತೆಯು ಈಗಿನ ಪರಿಸ್ಥಿತಿಯನ್ನು ಸರಕಾರವೇ ನಿರ್ವಹಿಸಲಿ ಎಂದು ಹೇಳಿ, ಸಭೆಯನ್ನು ವಿಸರ್ಜಿಸಿದರು.

ಕಿಡುಗೆಡೆ

ಎರಡನೆಯ ಬಾರಿ ಸತ್ಯಾಗ್ರಹ ಮಾಡಿ ಬಂಧಿತರಾಗಿ, ಧಾರವಾಡ ಸರಕಾರಿ ಆಜ್ಞೆಯಂತೆ ಕಿಡುಗೆಡೆ ಹೊಂದಿ ಬಂದ ಶ್ರೀ. ಎಂ. ಧರ್ಮರಾಜ ಅಧಿಕಾರಿಗಳಿಗೆ ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಿಂದ ಮಂಗಳೂರಲ್ಲಿ ಸಾರ್ವಜನಿಕ ಸ್ವಾಗತ ಸಭೆಯಿತ್ತು. ಆ ದಿನ ಶ್ರೀ. ಪ್ರಾಮೋದರ ಭಾಳಿಗರೂ ಮಾತನಾಡಿ ಸತ್ಯಾಗ್ರಹ ಸಮರವು ಈಗ ನಡೆಯುತ್ತಿರಬೇಕೆಂದು ಹೇಳಿದರು.

ಗವರ್ನರು ಬಂದಿದ್ದಾಗ

ಈ ಜಿಲ್ಲೆಯಿಂದ ಯುದ್ಧ ನಿಧಿಗೆ ರೂ. 2556 ಸಂಗ್ರಹಿಸಿ ಕೊಡಲ್ಪಟ್ಟಿತೆಂದು ತಿಳಿದಿದೆ.

ಶ್ರೀ ಎ. ಕೆ. ಪಿಳ್ಳೆಯವರ ಭಾಷಣ

'ರಶ್ಮಿ ಪದ್ಧತಿಯ ವೇದಾಂತವೇನು?' ಎಂಬ ವಿಷಯ ಸ್ಥಳೀಯ ಥಿಯಾ ಸಬಿಕಲ್ ಲಾಜಿನಲ್ಲಿ ಕಳೆದ ವಾರ ಶ್ರೀ. ಎ. ಕೆ. ಪಿಳ್ಳೆ ಬಾರ್. ಎಟ್-ಲಾ ಇವರು ಭಾಷಣವಿತ್ತರು.

ಜಿಲ್ಲಾ ಹರಿಜನ ಸೇವಕ ಸಂಘದ ವರದಿ

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಕ ಸಂಘದ 1941ನೆಯ ಇಸವಿಗೆ ಅಂತ್ಯವಾಗುವ ನವಮ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಡಾ॥ ಯಚ್. ವಿ. ಆಡಪ್ಪರು ಅಧ್ಯಕ್ಷರಾಗಿ ಶ್ರೀ. ಎಸ್. ಎಸ್. ಶಿಲ್ಲಯವರು ಸೇವಕರಾಗಿ, ಸಮರ್ಥ ಆಡಳಿತ ಮಂಡಳಿಯಿಂದ ಕೂಡಿರುವ ನಮ್ಮ ಜಿಲ್ಲೆಯ ಹರಿಜನ ಸೇವಕ ಸಂಘವು, ಜಿಲ್ಲೆಯಲ್ಲಿ ಎಂಟು ಉಪ ಸಂಘಗಳನ್ನು ಸ್ಥಾಪಿಸಿಕೊಂಡು, ಹರಿಜನರ ಬಗ್ಗೆ ಅನೇಕ ಉಪಯುಕ್ತ ಕಾರ್ಯಗಳನ್ನು ಮಾಡುತ್ತಿರುವುದು ಹೆಮ್ಮೆಯ ಪ್ರಶಂಸನೀಯವಿದೆ. ಹರಿಜನ ವಿದ್ಯಾರ್ಥಿಗಳಿಗೆ ಧನ ಸಹಾಯಕೊಡುವುದು, ಹರಿಜನರಿಗೆ ಬಾವಿಗಳನ್ನೊದಗಿಸುವುದು, ಗೀತಾ ತರಗತಿ, ವೈದ್ಯಕೀಯ ಸಹಾಯ, ಕೋಳೂರು ಸ್ಥಾಪಿಸುವುದು, ಮೊದಲಾದ ಕಾರ್ಯಗಳನ್ನು ಸಂಘವು ಕೈಕೊಂಡಿದೆ. ಆರ್ಥಿಕ ದುಸ್ಥಿತಿಯಿಂದ ಹೆಚ್ಚಿನ ಕಾರ್ಯ ಮಾಡಲಾಗಲಿಲ್ಲವೆಂದು ವರದಿಯಲ್ಲಿ ಹೇಳಲಾದ್ದುದನ್ನು ಜಿಲ್ಲೆಯ ಮಹಾ ಜನರು ಅವಶ್ಯಗಮನಿಸಬೇಕು. ಜಿಲ್ಲಾ ಸಂಘವು ಈ ವರ್ಷ ರಜಸ್ವರ್ಣ ಮಹೋತ್ಸವಾಗಿದೆ. ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರು ಚಾಲ್ತಿ ವರ್ಷದ ಅಧ್ಯಕ್ಷರಾಗಿದ್ದು ಅವರ ಅಧಕರ್ ನೇತೃತ್ವದಲ್ಲಿ ಜಿಲ್ಲೆಯ ಹರಿಜನಸೇವಾ ಕಾರ್ಯವು ಅತಿಶಯ ಉರ್ಜಿತವಾಗುವುದೆಂದು ನ್ಲಾವು ಹಾರೈಸುತ್ತೇವೆ.

ದ. ಕ. ಹರಿಜನ ಸೇವಕ ಸಂಘ

ಇದರ ಕಾರ್ಯ ನಿರ್ವಾಹಕ ಮಂಡಳಿ ಸಭೆಯು 8ನೇ ತಾರೀಕು ಆದಿತ್ಯವಾರ ಅಧ್ಯಕ್ಷರಾದ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿ ಎಂ.ಹಾಲಿನಲ್ಲಿ ಜರಗಿತು. ಶ್ರೀಯುತರುಗಳಾದ ಡಾ॥ ಯು. ಪಿ. ಮಲ್ಲಯ್ಯ ಉಪಾಧ್ಯಕ್ಷರಾಗಿಯೂ, ಬಿ. ಅನಂತ ರಾವ್ ಬಿ. ಎ. ಬಿ. ಎಲ್. ಇವರು ಕಾರ್ಯದರ್ಶಿಯಾಗಿಯೂ ಚುನಾಯಿತರಾದರು. ಸಂಘದ ಆಫೀಸು ಪುತ್ತೂರ ಆತ್ತಾವರದಲ್ಲಿ ಅಧ್ಯಕ್ಷರ ಮನೆಯಲ್ಲಿ ಯೇ ಇರಬೇಕೆಂದು ನಿರ್ಧರಿಸಲಾಯಿತು. ಆಫೀಸು ಕಾರ್ಕರಿಗೆ ತಿಂಗಳೊಂದರ ರೂ. ೮ ರಂತೆ ಕೊಡಬೇಕೆಂದು ನಿರ್ಣಯಿಸಲಾಯಿತು.

ಪ್ರಥಮ ಗೌಡಸಾರಸ್ವತ ಬ್ರಾಹ್ಮಣ ಪರಿಷತ್ತು

ತಾ. 21 ಮತ್ತು 22ರಂದು ಕನರ ಹೈಸ್ಕೂಲ್ ಸ್ವಾಮ್ಯದ ಸಾರ್ವಕ ಸಭಾದಲ್ಲಿ ನೇರುವ ಪರಿಷದ್ಸಭೆಗೆ ಸ್ವಾಗತಸಮಿತಿ ಅಧ್ಯಕ್ಷರೂ ಆದ ಶ್ರೀ ಎ. ಶ್ರೀನಿವಾಸ ಪೈಗಳು ಸ್ವಾಗತ ಭಾಷಣದಲ್ಲಿ, ಗೌಡಸಾರಸ್ವತ ಬ್ರಾಹ್ಮಣ ಸಂಘವು 1908ರಿಂದಲೇ ಪರಿಷದ್ಸೂಪದಲ್ಲಿ ಅನೇಕ ಬಾರಿ ಸೇರಿ ಅವುಗಳಿಂದ ಭಿನ್ನಮತ ವುಂಟಾಗಿ ಕೊನೆಗೊಂದ ವಿಷಯವನ್ನು ವಿವರಿಸಿ, ಶ್ರೀ ಸಂ 1939ರಲ್ಲಿ ಸಂಘವು ಸ್ಥಾಪಿತವಾಗಿ ಕಾರ್ಯರೂಪದಲ್ಲಿ ಹಲವು ಜಾತೀಯ ಉಪಯುಕ್ತ ಕಾರ್ಯಗಳನ್ನು ಮಾಡಿರುವುದನ್ನು ತಿಳಿಸಿದರು. ಆಗಮು ಪಾಠ ಶಾಲೆಯು ಆರಂಭ, ವೇದಾಂತ ಪಾಠ ಶಾಲೆಯು ಉದ್ದೇಶ ಮತ್ತು ಜಾತಿ ಸದಸ್ಯರೊಳಗಿನ ಜಗಳ, ಹಿಂದೂ ಅನಾಥ ಬಾಲಕಾಶ್ರಮದ ಸ್ಥಾಪನೆ ಮೊದಲಾದ ವಿಷಯಗಳನ್ನು ಆದರಲ್ಲಿ ತಿಳಿಸಿದರು. ಸ್ವಾಮೀಜಿಯವರು ಪ್ರಾಚೀನ ವಿದ್ಯೆಯಲ್ಲಿ ಅಧುನಿಕ ಕಾಲದ ವಿದ್ಯಾರ್ಜನರು ಆಸಕ್ತಿ ಪಡುಸುತ್ತಿರುವ ಬಗ್ಗೆ ಸಂತೋಷವನ್ನು ತೋರ್ಪಡಿಸಿ, ಮನೆ ಮತ್ತು ಜಾತಿ ಸದಸ್ಯರಲ್ಲಿ ಶಿಕ್ಷಣ ಪಕ್ಷದ ವಿಷಯವಾಗಿ ಒತ್ತಿ ಹೇಳಿದರು. ಹಲವು ಮಂದಿ ಜಾತೀಯ ಗೃಹಸ್ಥರು ಮಹಿಳೆಯರು ಪ್ರತಿನಿಧಿಗಳಾಗಿಯೂ ಪ್ರೇಕ್ಷಕಾಗಿಯೂ ಬೇರೆ ಕಡೆಗಳಿಂದ ಬಂದು ಪಾಲ್ಗೊತ್ತಲ್ಲಿ ಭಾಗವಹಿಸಿದ್ದರು.

ಜಿಲ್ಲೆಯ ಕೊಂಗ್ರೆಸಿಗರ ಮಹಾ ಸಭೆ

ಕೇಂದ್ರ ಎಸೆಂಬ್ಲಿ ಕೊಂಗ್ರೆಸ್ ಪಾರ್ಟಿಯ ಡಿಪ್ಟಿಲೀಡರಾದ ಶ್ರೀ. ಯಸ್. ಸತ್ಯಮೂರ್ತಿಯವರು ಮಂಗಳೂರಿಗೆ ಬಂದಾಗ ಇಂದಿನ ಪರಿಸ್ಥಿತಿ ಮತ್ತು ಕೊಂಗ್ರೆಸಿನ ಧೋರಣೆಯ ಕುರಿತು ಕೊಂಗ್ರೆಸ್ ಸಭಾಸದರ ಹಾಗೂ ಕೆಲಪಾರರೊಡನೆ ವಿಚಾರವಿನಿಮಯ ನಡೆಸಲಿರುವರು. ಇದೇ ತಾರೀಕು 29ನೇ ಸೋಮವಾರ ಬೆಳಗ್ಗೆ ಗಂಟೆ 9ಕ್ಕೆ ಕೊಂಗ್ರೆಸ್ ಆಫೀಸಿಯಲ್ಲಿ ಜಿಲ್ಲೆಯ ಯಾವತ್ತು ಕೊಂಗ್ರೆಸಿಗರ ಮಹಾ ಸಭೆಯು ಜರಗಲಿರುವುದು. ಇಂದಿನ ಸಂದಿಗ್ಧ ಪ್ರಸಂಗದಲ್ಲಿ ಕೊಂಗ್ರೆಸು ತೊಡಬೇಕಾದ ಧೋರಣೆಯ ಮತ್ತು ಇತರ ಚಟುವಟಿಕೆಗಳ ಕುರಿತು ಚರ್ಚೆ ನಡೆದು ಮಹತ್ವದ ಠರಾವುಗಳು ಸಭೆಯ ಮುಂದೆ ಬರಲಿರುವುವು. ಕಾದುದರಿಂದ ಎಲ್ಲ ಕಾಂಗ್ರೆಸಿಗರಿಗೆ ಪ್ರತ್ಯೇಕ ನೋಟೀಸು ಕಳುಹಿಸಿಕೊಡಲು ಸಮಯ ಸಂಭೋಕವಾದ ಕಾರಣ ಸಕಲರೂ ಈ ಜಾಹೀರಾತನ್ನೇ ಆಮಂತ್ರಣವೆಂದು ಸ್ವೀಕರಿಸಿ ಈ ಸಭೆಗೆ ಬಹುಸಂಖ್ಯೆಯಲ್ಲಿ ಬರಬೇಕೆಂದು ಆಧ್ಯಕ್ಷ ಶ್ರೀ. ದಾಮೋದರ ಬಾಳಿಗರ ವಿನಂತಿ.

ಹಿಂದೂ ಬಾಲಕಾಶ್ರಮ

ಮಂಗಳೂರಿಲ್ಲಿ ಹಿಂದೂ ಅನಾಥ ಬಾಲಕರಿಗಾಗಿ (೫ ವರ್ಷದಿಂದ ೧೧ ವರ್ಷವರೆಗಿನ) ಒಂದು ಬಾಲಾಶ್ರಮವು ಇಲ್ಲಿನ ಉದಾರೀ ಹಿಂದೂ ಶ್ರೀಮಂತ, ಸಾಹುಕಾರ ಸಹಾಯದಿಂದ ತೆರೆಯಲಾಗಿದೆ. ಸಾಹುಕಾರ್ ವೆಂಕಟೇಶ ಪೈ, ಡಾ॥ ಕೇಶವ ಪೈ ಮೊದಲಾದ ಮಹನೀಯರು ಇದರ ಕುರಿತು ಸುಮಾರು ೫೦ ಸಾವಿರ ರೂಪಾಯಿಗೆ ಮಿಕ್ಕಿದ ನಿಧಿ ಕೂಡಿಸುವುದೆಂದು ತಿಳಿದಿದೆ. ಎಲ್ಲ ಜಾತೀಯ ಅನಾಥ ಹಿಂದೂ ಬಾಲಕರಿಗೆ ಇಲ್ಲಿ ಉಟ ವಸತಿ, ವಿದ್ಯೆ ಕೈಗಾರಿಕೆಗಳನ್ನು ಕಲಿಸಲಾಗುವುದೆಂದು, ತಿಳಿಯುತ್ತೇವೆ.

ಹೊಸ ಜಿಲ್ಲಾ ಜಡ್ಜರು

ಹೊಸ ಜಿಲ್ಲಾ ಜಡ್ಜರಾಗಿ ಶ್ರೀ. ಗಣೇಶ ಅಯ್ಯರ್ ಬೇಗನೇ ನಮ್ಮ ಜಿಲ್ಲೆಗೆ ವರ್ಗಾಯಿಸಲ್ಪಡುವರೆಂದು ತಿಳಿದಿದೆ. ಕಯ್ಯೂರು ಕೇಸಿನ ನಿಮಿತ್ತ ಈಗಿರುವ ಜಿಲ್ಲಾ ಜಡ್ಜರಾದ ಶ್ರೀ. ಪಾರ್ಥಸಾರಥಿ ಅಯ್ಯರೂ ಉಳಿಯುವರೆಂದೂ, ಹೀಗೆ ಉಭಯ ಜಡ್ಜರಿದ್ದರೆ ವಿಚಾರಕೆ ನಡೆಸಲ್ಪಡುವ ಬಗ್ಗೆಯೂ ಮಾತು.

ಮಹಾಜನ ಬಡವರ ವಸ್ತ್ರ ಭಂಡಾರ

ಯೊಂದು ಕಡಿಮೆ ಕ್ರಯದಲ್ಲಿ ವಸ್ತ್ರಗಳನ್ನು ಒದಗಿಸುವರ್ಕೆ ಮಂಗಳೂರಿನ ಕೆಲವರ್ಕರಿಂದ ಮಂಗಳೂರು ಕಲಿಕ್ಟ್ ಸೈ ಬಜಾರಿನಲ್ಲಿ ತೆರೆಯಲ್ಪಟ್ಟಿತು. ಜಿಲ್ಲಾ ಕಲೆಕ್ಟರರ ಶ್ರೀ. ಸುಬ್ರಹ್ಮಣ್ಯ ಇವರು ಇದರ ಉದ್ಘಾಟನೆಯನ್ನು ತಾ. 24ರಂದು ನೆರವೇರಿಸಿದರು.

ವರ್ಧಂತಿ

ಕಾರ್ಕಳದಿ ಹಿಂದೂ ಹಾ. ಶಾಲೆಯ 19ನೇ ವರ್ಷದ ವರ್ಧಂತಿ ಸವಾರಂಭವನ್ನು ತಾ. 21ನೇ ಆದಿತ್ಯವಾರ ಶ್ರೀ. ಬಿ. ಗಂಗಾಧರ ದಾನ ಎಡ್ವೋಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತ ಕೆ. ಸದಾಶಿವ ರಾಯರ ಭಾವ ಚಿತ್ರವನ್ನು ಡಾಕ್ಟರ್ ಕೆ. ಗಿರಿಧರ ರಾವ್ ಇವರು ಅನಾವರಣ ಮಾಡಿದರು. ಶಾಲೆಯ ಮಕ್ಕಳು ಕನ್ನಡ ತುಳು ನಾಟಕಗಳನ್ನೂ ಹಾಸ್ಯ ವಿನೋದ ಗೀತೆಗಳನ್ನೂ ಪ್ರದರ್ಶಿಸಿದರು. ಹಿಂದೂ ಶಾಲೆಗೆ ಯೊಂದು ಪಾರಿ ಉಪಕರಣಗಳನ್ನು ಒದಗಿಸಿ ಕೊಡುವರೆ ಕಮಿಟಿಯನ್ನು ಸ್ಥಾಪಿಸಲಾಯಿತು.

ವಿನಂತಿ

ಬರುವ 1942ನೇ ಇಸವಿ ಜನವರಿ ತಿಂಗಳ ತಾ. 1ರಲ್ಲು ಇಡೀ ಜಿಲ್ಲೆಯಲ್ಲಿ 11 ಲೇಬರ್ ಶಾಲೆಗಳನ್ನು ಮುಚ್ಚುವ ಒಂದು ಸೂಚನೆಯನ್ನು ಸರಕಾರದ ಮುಂದಕ್ಕೆ ನಮ್ಮ ಜಿಲ್ಲೆಯ ಎಜ್ಯುಕೇಶನಲ್ ಆಫೀಸರರು ಸಿದ್ಧರಾಸು ಮಾಡಿದ್ದಾರೆಂದು ತಿಳಿದು ಬರುತ್ತದೆ. ಈ ವಿಷಯವನ್ನು ನೋಡುವಾಗ ದುಃಖವಡಬೇಕಾಗಿದೆ. ಇದರಿಂದ ಹರಿಜನರ ಉದ್ಧಾರ ಕೆಲಸಕ್ಕೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ದೊಂಪ ಕಲ್ಲು ಇಟ್ಟಂತಾಗುವುದು. ಹಳ್ಳಿಗಳಲ್ಲಿರುವ ಬಡ ಮಕ್ಕಳಿಗೆ ವಿದ್ಯಾಭ್ಯಾಸದ ಗಾಳಿಯೂ ಸ್ವಲ್ಪವಾದರೂ ಬೀಸುತ್ತಿದ್ದುದೂ ಇಲ್ಲದಂತಾಗುವುದು. ಆದುದರಿಂದ ಈ ವಿಷಯದಲ್ಲಿ ಪ್ರತಿ ಒಬ್ಬರು, ತಮ್ಮ ತಮ್ಮ ಗ್ರಾಮಗಳಲ್ಲಿ ಹರಿಜನರ ಸಭೆಗಳನ್ನು ಮಾಡಿ, ನಮ್ಮ ಬಡ ಮಕ್ಕಳ ಮತ್ತು ಜನಾಂಗದ ಕಡೆಗೆ ದೃಷ್ಟಿ ಇಟ್ಟು ಈ ಶಾಲೆಗಳನ್ನು ಉಳಿಸುವ ಠರಾವುಗಳನ್ನು ಮಾಡಿ, ಜಿಲ್ಲಾ ಕಲೆಕ್ಟರ್ ದೊರೆಗಳಿಗೆ ಪ್ರತಿ ಗ್ರಾಮಗಳಿಂದಲೂ ಕಳುಹಿಸಿಕೊಡಬೇಕಾಗಿ ಶ್ರೀ ಈಶ್ವರ ಎ.ಎಲ್.ಎ. ಇವರ ವಿನಂತಿ.

ಕೆನರಾ ಚೇಂಬರ್ ಆಫ್ ಕಾಮರ್ಸ್

ಇವರ ವಾರ್ಷಿಕೋತ್ಸವವು ಕೆನರಾ ಹೈಸ್ಕೂಲಲ್ಲಿ ಬರುವ ಆದಿತ್ಯವಾರ ಶ್ರೀ. ಸಾಮಿ ವೆಂಕಟೇಶಲಂಬೆಟ್ಟಿ, ಎಂ.ಎಲ್.ಎ. (ಕೇಂದ್ರ) ಇವರ ಅಧ್ಯಕ್ಷತೆಯಿಂದ ಜರಗುವುದು.

(ಅನೇ ಪುಟಕ್ಕೆ ಮುಂದುವರಿದಿದೆ)

ನೋಟೀಸು

ಪುತ್ತೂರು ಡಿ. ಮು—ಕೋರ್ಟಿನಲ್ಲಿ
ಕ್ರ. ನಂ. 230/1941

ಪ್ಲೋರಿನ್ ರೇಗೋ —ವಾದಿ.

೨. ಕೊಲ್ಪೆ ಅಮೃತ ಶೆಣೈ—1ನೇ ಪ್ರತಿವಾದಿ ಕೊಲ್ಪೆ ಲಕ್ಷ್ಮಣ ರಾವ್ ಮಗ. 3. ಕೊಲ್ಪೆ ಬಾಸ್ಕರ್ ರಾವ್—1ನೇ ಪ್ರತಿವಾದಿ ಕೊಲ್ಪೆ ಲಕ್ಷ್ಮಣ ಪ್ರಾವ್‌ರ ಮಗ. 4. ಕಲ್ಯಾಣಿ ಯಾನೆ ಲಕ್ಷ್ಮಿ ಬ್ಯಾ—ಕೊಲ್ಪೆ ಸುಂದರ ರಾಯರ ವಿಧವೆ. ೫. ಕೊಲ್ಪೆ ಭವಾನಿಶಂಕರ ರಾವ್. ೬. ಕೊಲ್ಪೆ ವೇಣುಗೋಪಾಲ ರಾವ್. ಕೊಲ್ಪೆ ಸುಂದರ ರಾಯರ ಮಕ್ಕಳು. 8. ಮಂಗೇಶ ಮಹಾಲಕ್ಷ್ಮಿ ದೇವರ ಪ್ರತಿನಿಧಿ 4ನೇ ಪ್ರತಿವಾದಿ ಕಲ್ಯಾಣಿ ಯಾನೆ ಲಕ್ಷ್ಮಿ ಬ್ಯಾ. 10. ರಾಧಾಬ್ಯಾ —ಪಣಂಬೂರು ಭವಾನಿ ರಾಯರ ಕೆಂಡ್ತಿ ವ ನಿಜಾಜ ಬ್ಯಾ ಮಗಳು. 11. ಕುರಿಡ್ಡ ಸುಬ್ಬಪ್ಪ ರೈ—ಕೋಜಪ್ಪ ರೈ ಅಳಿಯ.

—ಎದ್ರಿ ಪ್ರತಿವಾದಿರು.

ಈ ಮೂಲಕ ಮೇಲೆ ವಿವರಿಸಿದ ಪ್ರತಿವಾದಿರಿಗೆ ತಿಳಿಸುವುದೇನೆಂದರೆ:—

ಮೇಲಿನ ವ್ಯಾಜ್ಯದಲ್ಲಿ ಅನೇಕ ಸಾರಿ ನಿಮಗೆ ಪ್ರತಿವಾದಿಸಮನ್ಸ್ ಕಳುಹಿಸಿದರೂ ಕಾಯಂಗದೆ ವ್ಯಾಜ್ಯ ಬಂದಿರುತ್ತದೆ. ಆದಕಾರಣ ಮೇಲಿನ ವ್ಯಾಜ್ಯದಲ್ಲಿ ನಿಮಗೆ ಏನಾದರೂ ಉದ್ದೇರಾನವಿದ್ದರೆ ನೀವು ಸ್ವತಃ ವ ವಕೀಲರ ಮುಖಾಂತರ ಹಾಜರಾಗಿ ಉದಹರಿಸುವರೆ ಕೋರ್ಟಿನವರು ತಾ. 9-1-1942ರ 11ಗಂಟೆ ಎಂತ ನಿಗದಿಯಾಗಿದ್ದಾರೆ. ಆ ದಿನಕೆ ನೀವು ಹಾಜರಾಗದಿದ್ದಲ್ಲಿ ನಿಮ್ಮ ವ್ಯಾಜ್ಯವು ಮುಂದೆಸಲಾಗುವುದು. ಈ ರೀತಿ ನಿಮಗೆ ತಿಳಿಸುವರೆ R. I. A. No. 1484/1941ನೇ ಆರ್ಡರಯಮೇಲೆ ಕೋರ್ಟು ಹುಕುಂ ಆಗಿರುತ್ತದೆ.

18-12-'41 H. Ganapathi Rao
Pleader for plaintiff

ಸಾವರ್ಕಾರ್ ಮುಂಜೆ ಚಟರ್ಜಿಯವರ ಬಂಧನ!

ಭಾಗಲ್ಪುರ ಅಧಿವೇಶನಕ್ಕೆ ಸರಕಾರದ ನಿಷೇಧ

ಬಂಗಾಳಕ್ಕೆ ಧಾಳಿಯ ಬೆದರಿಕೆಯಿದೆ

ಬಾಡ್ರೋಲಿಯಲ್ಲಿ ಕಾಂಗ್ರೆಸ್ ಮುಖಂಡರು ಕೂಡಿರುವರು

ಭಾಗಲ್ಪುರ ಹಿಂದೂ ಮಹಾ ಸಭಾಧಿವೇಶನಕ್ಕೆ ತೆರಳಿದ ಸಾ ವರ್ಕಾರ್, ಮುಂಜೆ, ಚಿಟರ್ಜಿ ಇವರೆನ್ನು ಹಾದಿಯಲ್ಲಿಯೇ ಬಂಧಿ ಸಿರುವರು. ಬೇರೆ ಅನೇಕ ಪ್ರತಿನಿಧಿ ಗಳ ಸೆರೆಯಾಗಿದೆ. ಹಿಂದುಗಳಲ್ಲಿ ದೇಶ, ಸರ್ವತ್ರ ಕಳವಳ ಹೆಚ್ಚಿದೆ. ಬಂಗಾಳವು ಜಪಾನ್ ಬಾಂಬು ಧಾಳಿಯ ಗಂಡಾಂತರ ಪ್ರದೇಶ ವೆಂದು ಸಾರಲಾಗಿದೆ.

'ಕನಸಿನ ಕ್ರೊಪ್ಪರಿಗೆಯ ಆಶ್ವಾಸನ ಬೇಡ'

ಹಿಂದುಸ್ಥಾನ ಪೂರ್ಣ ಸ್ವಾತಂತ್ರ್ಯ ಕೊಡಬೇಕು

ನೆಹರುಗಳ ಸ್ಪಷ್ಟ ಹೇಳಿಕೆ

'ಬ್ರಿಟಿಷ್ ಸರಕಾರವು ಭಾರತದ ಬ ಗ್ಗೆ ತೋರಿಸಿದ ಅಲಕ್ಷ್ಯದ ವಿಷಯ ಎ ಲ್ಲಾ ವಂಗಡದವರಿಗೂ ಅಸಮಾಧಾನ ವಿದೆಯೆಂದು ಎದ್ದು ಕಾಣುತ್ತದೆ ಇದ ಕ್ಕೆ ಅವರ ಹಿಂದಿನ ಮೂರು ಇಪ್ಪತ್ತು ವರ್ಷಗಳ ಘೋ ಷಣೆಯೇ ಕಾರಣ ಯುದ್ಧ ಕಾಲದಲ್ಲಿ ಅವರು ಮಾಡಿದ ಘೋಷಣೆಗಳಿಂದ ಅಸ ಮಾಧಾನವು ಮತ್ತಷ್ಟು ಹೆಚ್ಚಿತು. ವರ ಕೀಯ ಸರಕಾರವು ನಮ್ಮ ಮೇಲೆ ಮತ್ತಷ್ಟು ದಬ್ಬಾಳಿಕೆ ನಡೆಸಿತು. ಆಗ ಬೇರೆ ಮಾರ್ಗವಿಲ್ಲದೆ ಅಸಹಕಾರ ಮಾಡುವ ಪ್ರಸಂಗವು ನಮಗೆ ಬಂತು. ಇಲ್ಲಿರುವ ಸರಕಾರದ ಹಾಗೂ ಬ್ರಿಟಿಷ್ ಸರಕಾರದ ಧೋರಣೆಯಲ್ಲಿ ವ್ಯತ್ಯಾಸವಾಗದ ಹೊರ ತು ಜನರ ಅಂತರಂಗದಲ್ಲಿ ಬೇರೂರಿದ ವೈಷಮ್ಯವನ್ನು ಳಿತ್ತುಹಾಕುವುದು ಶಕ್ಯ ವಿಲ್ಲ. ಮೊತ್ತಮೊದಲು ಭಾರತದ ಸ್ವಾ ತಂತ್ರ್ಯವನ್ನು ಅಂಗೀಕರಿಸಬೇಕು ಹೀನ ವಾದ ಅಗಸ್ಟ್ ಘೋಷಣೆಯನ್ನು ಕಿತ್ತೊ ಗೆಯಬೇಕು ಬ್ರಿಟಿಷ್ ಸರಕಾರದ ಯಾ ವುದೇ ಘೋಷಣೆಯು ಪ್ರಯೋಜನಕಾರಿ ಯಲ್ಲ, ಅದನ್ನು ವಿರೋಧಿಸಿ ಬಿಡಬೇಕು. "ಯುದ್ಧವನ್ನು ಗೆಲ್ಲುವುದು ನಮಗೆ ಮುಖ್ಯವಲ್ಲ, ಅದರ ಗೊತ್ತುಗುರಿಗಳನ್ನು ತಿಳಿಯುವುದು ನಮಗೆ ಮುಖ್ಯ" ಎಂದು ನೆಹರುಗಳು ಹೇಳಿಕೆಕೊಟ್ಟಿರುವರು

ಬ್ರಿಟಿಷ್ ಧೋರಣವೇ ಈ ಪರಿಸ್ಥಿತಿಗೆ ಕಾರಣ

ಹಿಂಸೆ ಅಹಿಂಸೆಯ ಮತಭೇದವಲ್ಲ

ರಾಷ್ಟ್ರಪತಿ ಅಜಾದರ ಹೇಳಿಕೆ

ಬ್ರಿಟಿಷರ ಯುದ್ಧಪ್ರಯತ್ನಕ್ಕೆ ಕಾಂಗ್ರೆಸಿನವರು ಸಹಾಯಮಾಡದಿರಲು, ಹಿಂಸೆ ಅಹಿಂಸೆಗಳ ಮತಭೇದವು ಕಾರಣವಲ್ಲ, ಭಾರತದ ಕುರಿತು ಬ್ರಿಟಿಷರು ವಹಿಸಿದ ಧೋರಣವೇ ಕಾರಣವೆಂದು ರಾಷ್ಟ್ರಪತಿ ಅಜಾದರು ಸ್ಪಷ್ಟ ಹೇಳಿದರು.

'ಅಮೆರಿಕವು ಯುದ್ಧಕ್ಕೆ ಪ್ರವೇ ಶಿಸಿದ್ದನ್ನು ನಾನು ಅಭಿ ನಂದಿಸಲಾರೆ"

"ಅದು ಸಂಧಾನಮಾಡಬೇಕಿತ್ತು" ಗಾಂಧಿಜಿ ಹೇಳಿಕೆ

ಅಮೆರಿಕವು ಯುದ್ಧಕ್ಕೆ ಸೇರಿದ ಒಗ್ಗೆ ನಾನು ಅಭಿನಂದಿಸಲಾರೆ. ಪ್ರಚಲಿತ ಅಭಿವ್ಯಾಯದೊಟ್ಟಿಗೆ ನನ್ನ ದನಗೂಡಿಸು ವುದು ನನಗೆ ಸಾಧ್ಯವಿಲ್ಲ ಯುದ್ಧ ಮಾಡುತ್ತಿರುವ ರಾಷ್ಟ್ರಗಳೊಳಗೆ ಮಧ್ಯಸ್ಥಿ ಕೆ ಮಾಡಿ ಯುದ್ಧವನ್ನು ಬಗೆಹರಿಸು ವುದು ಎಂದಿನಿಂದಲೂ ಅಮೆರಿಕದ ಸಂ ಪ್ರದಾಯವಿತ್ತು ಈ ಸಲವೂ ಅದು ಅದನ್ನೇ ಮಾಡಬೇಕಾಗಿತ್ತು ಅಮೆರಿಕವು ತನ್ನ ವಿಸ್ತೀರ್ಣ ದೇಶ, ಅಗಾಧ ಸಂಪತ್ತು, ಅಪ್ರತಿನು ಉತ್ಸಾಹ ಇವುಗಳಿಂದಾಗಿ, ಈಗ ಹಿಂಸಾಸಕ್ತರಾಷ್ಟ್ರಗಳನ್ನು ಸಂಹಾ ರಕಾರ್ಯದಿಂದ ಧಿಕ್ಷಿಸುವ ಸಾವರ್ಥ್ಯ ವುಳ್ಳದ್ದಾಗಿದೆ. ಅಮೆರಿಕವು ಯುದ್ಧಕ್ಕೆ ಸೇರದಿರುವುದು ಶಕ್ಯವಿರಲಿಲ್ಲವೋ ನಾನು ಹೇಳಲಾರೆ. ಈ ಸಂಘರ್ಷದಲ್ಲಿ ಅದಕ್ಕೆ ಕ್ಷಾಟಸ್ಥ್ಯ ವಹಿಸುವುದು ಸಾಧ್ಯವಿತ್ತು ಎಂದು ನನ್ನ ಇಚ್ಛೆ. ಅಮೆರಿಕವು ಈಗ ಯುದ್ಧಕ್ಕೆ ಸೇರಿದ್ದರಿಂದ ಇನ್ನು ಮುಂದೆ ಮಧ್ಯಸ್ಥಿತಿಕೆ ನಡಾಲು ಯಾವ ಪ್ರಬಲ ರಾಷ್ಟ್ರವೂ ಉಳಿದಂತಾಗಲಿಲ್ಲ. ಜಗತ್ತಿನ ಎಲ್ಲ ರಾಷ್ಟ್ರದವರೂ ಶಾಂತಿಗೆಗಾಗಿ ಹಾ ಕೊರೆಯುತ್ತಿದ್ದಾರೆ ಆದರೆ ಯುದ್ಧದ ದ್ವೇಷವು ಹರಡಿ ಮಾನವನ ಇಚ್ಛೆಯನ್ನು ತಗ್ಗಿಸುತ್ತಿರುವುದು. ಆಶ್ಚರ್ಯವಾದ ಸೂ ಚನೆಯಾಗಿದೆ ಹೀಗೆಂದು ಗಾಂಧಿಜಿ ಹೇಳಿ ದರು

ನನಯುಗ ಚಿತ್ರಪಟದ 'ಅಮ್ಮ' ಚಿತ್ರದಲ್ಲಿ ನಾ ನಾಕ್ಕಿ ಸೆಂಬ್ರಲ್‌ಟೋ ಕೀಸಿಗೆ ಬೇ ನೇ ಒರುವ್ರದು

ಅಹಿಂಸೆಯ ಶಕ್ತಿ

ವಿನೋಬಾಜಿ ಭಾಷಣ

"ಸತ್ಯಾಗ್ರಹಿಗಳನ್ನು ಜಿಟ್ಟಿದ್ದರಿಂದ, ನಮ್ಮ ಬಂಧನವನ್ನು ಹೆಚ್ಚಿಸಿದಂತಾಗಲಿ, ಅಥವಾ ಸರ ಕಾರದ ಹೃದಯದಲ್ಲಿ ಪರಿವರ್ತನೆಯಾಗಿದೆ ಯೆಂದಾಗಲಿ ಆಗಿದ್ದರೆ ನಿಜವಾಗಿ ನಾವು ಸಂತೋಷಪಡಬೇಕಾಗಿತ್ತು. ಆದರೆ ಸರಕಾರದ ಪ್ರಕಟಣೆಯಲ್ಲಿಯೂ, ಅಮೆರಿಯವರ ಮಾತಿ ನಲ್ಲಿಯೂ ಆ ಅರ್ಥವಾವುದೂ ಆಗುವುದಿಲ್ಲ. ಅಹಿಂಸಾಮಯ ಭಾಷಣ ಸ್ವಾತಂತ್ರ್ಯದ ಹಕ್ಕನ್ನು ಒಳಗೊಂಡಿರದ, ಸತ್ಯಾಗ್ರಹಿಗಳ ಬಿಡುಗಡೆಯು ನಮ್ಮಲ್ಲಿ ಉತ್ಸಾಹವನ್ನು ಹೆಚ್ಚಿಸಲಿಲ್ಲ ನಮ್ಮ ಹೋರಾಟವನ್ನೂ, ನಮ್ಮ ಜನರನ್ನೂ ವಂಚಿಸಲು ಅಧಿಕಾರಿಗಳು ಹೂಡಿದ ತಳತಂತ್ರವೆಂದು ಮಾತ್ರ ಯಾರಾದರೂ ಇದಕ್ಕೆ ಅರ್ಥವನ್ನಿದಿ ಕೊಳ್ಳಬಹುದು. ಇಂದೀ ಯುದ್ಧವನ್ನು ಸೇರಿಸಿಕೊಂಡು, ಎಲ್ಲಾ ಯುದ್ಧಗಳನ್ನು ನಿಷೇ ಧಿಸಲು ಹೂಡಿದ ನಮ್ಮ ಹೋರಾಟವು ಅಹಿಂಸೆ ಯವನ ಮಾತ್ರ ಹಕ್ಕಲ್ಲ ಯಾವನೇ ಒಬ್ಬನಾ ದರೂ ಅದನ್ನು ಯಾರೊಬ್ಬನ ಒತ್ತಾಯದಿಂದ ಹಿಂದೆತೆಗೆದುಕೊಳ್ಳುವಂತಹುದಿಲ್ಲ ಆದ್ದರಿಂದ ಈ ನಮ್ಮ ಹಕ್ಕನ್ನು ಸಂಪೂರ್ಣವಾಗಿ, ನ್ಯಾಯವಾಗಿ ಕೊಡಲ್ಪಡದ ವಿನಾ ನಮ್ಮ ಹೋರಾಟವು ನಿಲ್ಲಲು ಸಾಧ್ಯವೂ ಇಲ್ಲ ನಿಲ್ಲುವುದೂ ಇಲ್ಲ ಸಂಘರ್ಷ ಬಿದ್ದಾಗ ಅದು ಇನ್ನೂ ಹೆಚ್ಚಿಸಲ್ಪಡುವುದು."

ಹೀಗೆಂದು ವರ್ಧಾದಲ್ಲಿ ಕೂಡಿದ ಸಭೆಯಲ್ಲಿ ಬಿರುಗಡೆ ಹೊಂದಿ ಬಂಧ ಮೇಲೆ ಪ್ರಥಮ ಸತ್ಯಾ ಗ್ರಹಿ ಆಚಾರ್ಯ ವಿನೋಬಾ ಭಾವೆಯವರು ತಮ್ಮ ಮೊದಲನೆಯ ಭಾಷಣಮಾಡಿದರು. ರಾಜೇಂದ್ರ ಪ್ರಸಾದರು ಆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸಿನ ವರ್ಕಿಂಗ್ ಕಮಿಟಿ ಸದಸ್ಯರೂ ಕೆಲವರು ಬಂದಿದ್ದರು. ಅವರು ಹೇಳಿದ ಇನ್ನು ಕೆಲವು ವಿಷಯಗಳು ಇಂತಿವೆ:

"ಕ್ಷಣ ಯುದ್ಧದಲ್ಲಿ ಸಮರವನ್ನು ಹೆಚ್ಚಿಸು ವುದೆಂದರೆ ಶತ್ರುಗಳ ವಿನಾಶ ಕಾರಕ ಕ್ರಿಯೆಗೆ ಗುರಿಯಾಗಿ ಮರುಜಗಳನ್ನು ಹೆಚ್ಚಿಸುವುದೊಂದೆ ರ್ಥ. ಆದರೆ ಅಹಿಂಸಾ ಸಮರದ ಹೆಚ್ಚಳೆ ಮೊದಲೆ, ಆತ್ಮ ಆಧ್ಯಾತ್ಮಿಕ ಶುದ್ಧಿಯಿಂದ ಮಾತ್ರ ಆಗಬಕ್ಕಿದ್ದಿದೆ. ನಮ್ಮ ಆತ್ಮ ಶುದ್ಧಿ ದ್ಧರೂ, ನಮಗೆ ಅಹಿಂಸೆಯಿಲ್ಲದೆ ಬೇರೆ ಕಾರ್ಯ ಸಿದ್ಧಿಯ ಸಾಧನವಿಲ್ಲ ನಮಗಿದುವ ಶಕ್ತಿ ಯೆಲ್ಲವೂ ಆದರ ಮೂಲಕ ಬಂದಿದೆ ಇಂದೀ ಪ್ರಚಂಡ ಯುದ್ಧ ಕಾಲದಲ್ಲಿ ಯಾವುವಾದರೂ ದೇಶವು ಹಿಂಸೆಯನ್ನು ಅಂಗೀಕರಿಸಿದರೆ ಒಡನೇ ಅದು ಪೂರ್ಣ ದೊಡ್ಡ ಪ್ರಮಾಣದಲ್ಲಿ ಮರಣ ಕಾಲದ ಅಸ್ತ್ರಸಾಧನಗಳನ್ನು ಸಜ್ಜುಗೊಳಿಸಬೇಕ್ಕು. ಇಲ್ಲವೇ ಮೂಕ ಶರಣಾಗಬೇಕು ಪರಿಸ್ಥಿತಿ ಗನುಸರಿಸಿ ನಮಗೆ ದೊಡ್ಡ ಪ್ರಮಾಣದ ಶಸ್ತ್ರ ಸಿದ್ಧತೆ ಸಾಧ್ಯವಿಲ್ಲ, ಸಾಧ್ಯವಿಲ್ಲದೇ ಇರುವುದ ರಿಂದ ನಿಮಗೂ ಜಗತ್ತಿಗೂ ಅತ್ಯಂತ ಅಪಾಯವೇನೇ ಜಗತ್ತಿತ್ತು. ಆದರೆ, ಇಂದಿಗೂ ನಾವು ಅಸ ಹ್ಯಾಯರೆಂಯ ತಿಳಿಯದಂತೆ, ನಮಗೆ ಅನುಪ ಮವಾದ ಅಹಿಂಸಾ ಶಸ್ತ್ರವನ್ನಿತ್ತ ಗಾಂಧಿಜಿಗೆ ನಾವು ಕೃತಜ್ಞರಾಗಿರಬೇಕ್ಕು. ಬಹಳ ದೀನ ಮಾನವರಾಗಿದ್ದು ಮೂವತ್ತು ವರ್ಷಗಳ ಹಿಂದೆ 'ವಂದೇ ಮಾತರಂ' ಹಾಡು ಹೇಳಲೂ ಪೆದರು ತ್ತಿದ್ದ ನಾವು ಇಂದಿಗೆ, ಜಗತ್ತಿನಲ್ಲಿಯೇ ಅತ್ಯಂತ ಪ್ರಬಲವೆನಿಸಿದ ಒಂದು ಸಾಮ್ರಾಜ್ಯದೆದುರು ಧೀರ ವಾಗಿ ಆತ್ಮ ಶುದ್ಧವಾಗಿ ಎದುನಾಡಲು ಸಮರ್ಥ ರಾಗಿದ್ದೇವೆ ಇಂದೀ ನಮ್ಮ ಪರೀಕ್ಷಾ ಕಾಲ ದಲ್ಲಿ, ಇಂದಿನ ಸಂಕಷ್ಟ ಕಾಲದಲ್ಲಿ ನಾವು ಕಾರ್ಯರೂಪದಿಂದ ಅಹಿಂಸೆಯಲ್ಲಿ ವಿಶ್ವಾಸ ತೋರಿದರೆ, ಇಡೀ ಜಗತ್ತನ್ನೇ ಕೊಚ್ಚಿ ಕೆಡಿಯು ತ್ತಿರುವ ಹಿಂಸೆಯಿಂದ ಕೊಚ್ಚಿ ಹೋಗಲು ನಮ್ಮ ನ್ನು ಸಮ್ಮತಿಸಿಕೊಂಡರೆ, ನಾವು ಅಹಿಂಸೆಯಿಂದ ಪಡೆದುಕೊಳ್ಳಬಹುದಾದಂತಹ ಕುದ್ದ ಶಕ್ತಿ ಯನ್ನು ಕಳೆದುಕೊಂಡು, ಇಡೀ ರಾಷ್ಟ್ರವೇ ನಾವು ಅಪಾರ ನಷ್ಟವೊಂದುವೆವೆಂಬುದನ್ನು ಕೆಲವರು ಗೆಳೆಯರು ತಿಳುಕೊಳ್ಳುವುದಿಲ್ಲ. ಇಂದಿನ ಭಾಷಣ ಸ್ವಾತಂತ್ರ ಹಕ್ಕು ಅದ್ದರಿಂದ, ನಮಗೆ ಇಂದು ಯುದ್ಧದಲ್ಲಿ ಸೇರದೆ ಇರಲು ಸಾರುವ ಸಂದೇಶವಿದ್ದರೂ ಇದು ಕಡೆಗೆ ಅತ್ಯಂತ ಅವಶ್ಯವಾದ ಪ್ರಾಮುಖ್ಯವಾದ ವಿಷಯ ವಾಗಿರುತ್ತದೆ."

ರಷ್ಯವು ಯುದ್ಧಕ್ಕೆ ಸೇರಿದ್ದರಿಂದ ಇಂದಿನ ಬ್ರಿಟನಿನ ಯುದ್ಧವು ಸಾಮ್ರಾಜ್ಯ ಶಾಹೀ ಯುದ್ಧ ವಾಗಲಿಲ್ಲವೆಂದು ಹೇಳುವುದು ತನಗೆ ಅರ್ಥ ವಾಗುವುದಿಲ್ಲವೆಂದು ಹೇಳುತ್ತಾ, ರಷ್ಯ ಮೊತ್ತ ಬ್ರಿಟನುಗಳು ತಮ್ಮ ತತ್ವಜಲ್ಲಿ ಏನಾದರೂ ಬದ ಲಾವಣೆ ಮಾಡಿವೆಯೇ ಎಂಬು ಪ್ರಶ್ನಿಸಿ, ಬದ ಲಾವಣೆ ಮಾಡಿದ್ದರೆ ಅದರ ಸೂಚನೆಗಳಾವುವು ಎಂದು ಕೇಳಿ, ಹೀಗಿದ್ದರೂ ರಷ್ಯವ್ಯ ಯುದ್ಧ ದಲ್ಲಿ ಸೇರಿದ್ದರಿಂದ ಜಗತ್ತಿನ ಹಿಂಸೆಯು ಶಕ್ತಿ ಕಡಿಮೆ ಮಾಡಿದಂತಾಯಿತೇ ಏಂದು ಪ್ರಶ್ನಿಸಿ ಅಹಿಂಸೆಯನ್ನು ತತ್ವವಾಗಿ ಅಂಗೀಕರಿಸಿದವರು ಆದರ ವಿರುದ್ಧ ಹೇಗೆ ಕೆಲಸಮಾಡಬಲ್ಲರು ಏಂದು ಕೇಳಿದರು

ಪಾರ್ಲಿಮೆಂಟರಿ ಕಾರ್ಯಕ್ರಮ ವಿಷಯ ಮಾತನಾಡುತ್ತಾ, ಇಂದು ನಾವು ಅದನ್ನು ಅಂಗೀಕರಿಸಿದರೆ ಯುದ್ಧಕ್ಕೆ ಬೆಂಬಲಕೊಡಬೇ ಕಾಗುವುದೆಂದೂ, ಹಾಗೆ ಮಾಡಿದರೆ ಸ್ವರಾಜ್ಯ ಪಡೆಯಲು ಆಹಿಂಸೆಯು ಸಾಧನವೆಂಬ ನಮ್ಮ ವಿಶ್ವಾಸವನ್ನು ಕಳಕೊಂಡಂತಾಗುತ್ತೇವೆಂದೂ, ಹಾಗಾದರೆ ಕಾಂಗ್ರೆಸು ಮೊದಲು ಆದರ ತತ್ವ ವನ್ನು ಬದಲಾಯಿಸುವಂತೆ ನಾವು ಮಾಡಬೇಕೆಂ ದೂ ಹೇಳುತ್ತಾ, ಗಾಂಧಿಜಿಯ ಅಭಿಪ್ರಾಯದಂತೆ ಜನತೆಗೆ ಸ್ವರಾಜ್ಯವು ಅಹಿಂಸೆಯಿಂದ ದೊರಕುವು ದೆಂದು ನಂಬುವವರೆಲ್ಲರೂ ದ್ವಿಗುಣ ಉತ್ಸಾಹ ದಿಂದ ಸತ್ಯಾಗ್ರಹವನ್ನು ಮುಂಯವರಿಸಬೇಕೆಂದೂ ತಿಳಿಸಿದರು.

ಸತ್ಯಾಗ್ರಹದಲ್ಲಿ ಕೆಲ ಜನರೇ ಹೋಗುತ್ತಿದ್ದ ರೂ ಅವರಿಗೆ ಪ್ರಾತಿನಿಧ್ಯ ಬರುವುದು ಜನತೆಯು ನಮ್ಮಿಂದ ದಜಾತ್ಮಕ ಕಾರ್ಯದೊಪಗಳು ಹೆಚ್ಚಳದಿಂದ ಎಂದರು. ಹೆಣ್ಣಜೆ ಪುತಿಯೊಬ್ಬ ಹೆಂಗಸು ಗಂಡಸು, ಬಾಲಕ ಬಾಲಕಿಯರೂ ಜಾದಿಯಲ್ಲಿ ಜಾಗ್ರತಿಯುಂಟಾಗುವುದೇ ಸತ್ಯಾಗ್ರಹವನ್ನು ಬಲಗೊಳಿಸುವುದೆಂದು ಸಾರಿ ತಿಳಿಸಿದರು.

ಚರ್ಚಿಲ್, ರೂಸ್‌ವೆಲರು ವಾಶಿಂಗ್‌ಟನ್ನಿನಲ್ಲಿ ಸೇರಿರುವರು

ಹಿಟ್ಲರ್ ಶಾಹಿಯನ್ನು ಕೊನೆಗಾಣಿಸಲಂತೆ

ವಾಶಿಂಗ್‌ಟನಿನಲ್ಲಿ ರೂಸ್‌ವೆಲ್ಟ್ ರವರು ಚರ್ಚಿಲ್ಲರೂ ಸಭೆ ಕೂಡಿ ಹಿಟ್ಲರ್ ಶಾಹಿಯನ್ನು ನಿರ್ನಾಮ ಮಾಡಲು ಉಪಾಯ ಮಾಡುತ್ತಿರುವರಂತೆ. ರಂಗೂನಿಗೂ ಜಪಾನರ ಧಾಳಿಯಾಗಿರುತ್ತದೆ. ಪಿಲಿಪಯಿನಿನಲ್ಲಿ ಲಕ್ಷಾಂತರ ಜಪಾನರು ಬಂದಿಳಿದರು ಜಪಾನರ ಧಾಳಿ ಈಗ ಉಗ್ರವಾಗುತ್ತಿದೆ.

ಹಿಟ್ಲರ್ ಶಾಹಿಯನ್ನು ನಾಶ ಮಾಡುವೆವು
ಚರ್ಚಿಲ್ಲರ ಹೇಳಿಕೆ

ಪತ್ರಿಕಾ ಪ್ರತಿನಿಧಿಗಳಿಗೆ ವಾಶಿಂಗ್‌ಟನಿನಲ್ಲಿ ಒಂದು ಹೇಳಿಕೆ ಕೊಡುತ್ತಾ ಚರ್ಚಿಲ್ಲರು ಸಿಂಗಾಪುರವನ್ನು ಭದ್ರವಾಗಿ ರಕ್ಷಿಸಲಾಗುವುದೆಂದೂ ಮತ್ತೆ ಪೂರ್ವಾಂಕ್ಯದಲ್ಲಿ ಧಾಳಿ ಹೆಚ್ಚಿಸಲಾಗುವುದೆಂದೂ ಸದ್ಯ ಹಿಟ್ಲರನ ಆಕ್ರಮಣವನ್ನು ಬಲವಂತವಾಗಿ ಎದುರಿಸುವ ಹಿಂಚಿಕೆ ಮಾಡುತ್ತಿರುವುದಾಗಿಯೂ ಹೇಳಿದರು.

ಚರ್ಚಿಲ್ ರೂಸ್‌ವೆಲ್ಟರ ಮಾತುಕತೆ

ಚರ್ಚಿಲ್ ರೂಸ್‌ವೆಲ್ಟರು ಭೇಟಿಯಾಗಿ ಅಮೆರಿಕದಲ್ಲಿ ಮಹತ್ವದ ಮಾತುಕತೆ ಮಾಡುತ್ತಿರುವರು. ಇನ್ನೂ ಹಲವರನ್ನು ಕರೆದು ಮಾತುಕತೆ ಮುಂದುವರಿಸಲಾಗುವುದೆಂದು ಹೇಳಲಾಗಿದೆ. ಹಿಟ್ಲರ್ ಶಾಹಿಯ ನಾಶವೇ ಮಾತುಕತೆಯ ಗುರಿಯೆಂದ ಸಾರಲಾಗಿದೆ. ಅನೇಕ ಸಮರ ಶಾಸ್ತ್ರ ನಿಪುಣರು ಇಲ್ಲಿ ಸೇರಿರುವರು

ರಂಗೂನಿನ ಮೇಲೆ ಜಪಾನ್ ಧಾಳಿ

ಜಪಾನು ವಿಮಾನಗಳು ರಂಗೂನಿನ ಮೇಲೆ ಧಾಳಿ ಮಾಡಿದವು. ಬಾಂಬು ನಿಂದ ಅಲ್ಲಲ್ಲಿ ಬೆಂಕಿಯೆದ್ದ ಸುದ್ದಿ ಬಂದಿದೆ.

ಈ ಹೊತ್ತು ನಿಮ್ಮ ಹಲ್ಲುಗಳನ್ನು ಮ್ಯಾಕ್ಲೀನ್ ಮಾಡಿದಿರಾ?

ಆಹಾ! ಅಂದವಾದ ಹಲ್ಲುಗಳನ್ನು ಹೊಂದುವುದು ಹೇಗೆ ಎನ್ನುವುದು ನಿಮಗೆ ತಿಳಿದಿದೆ.

ಹೌದು ಹಲ್ಲುಗಳು ಶಾಂತಿಯತವಾಗಿರುವುದಕ್ಕೆ ಮ್ಯಾಕ್ಲೀನ್ ಟೂತ್‌ಪೇಸ್ಟನ್ನೇ ಉಪಯೋಗಿಸಬೇಕು. ಯಾಕೆಂದರೆ ಅದು ಜಾಗ್ರತ್ತಿಯಾಗಿ ಕಲೆಗಳನ್ನು ತೆಗೆದುಹಾಕಿ ಹಲ್ಲುಗಳನ್ನು ಬೆಳ್ಳಗೂ ಥಳಥಳ ಹೊಳೆಯುವಂತೆಯೂ ಮಾಡುತ್ತದೆ ನೀವೂ ಆರೋಗ್ಯಯುತವಾದ ಮತ್ತು ಅಂದವಾದ ಹಲ್ಲುಗಳನ್ನು ಮ್ಯಾಕ್ಲೀನ್ ಉಪಯೋಗಿಸುವುದರಿಂದ ಹೊಂದಬಹುದು.



ಜಿಲ್ಲಾ ಬೋರ್ಡಿನ ಬಜೆಟ್

(ಕಳದ ಸಂಚಿಕೆಯಿಂದ ಮುಂದುವರಿದುದು)

ಬೋರ್ಡಿನ 1940–41ರ ವಾರ್ಷಿಕ ಆದಾಯವು ರೂ. 6,84,773 ಕಳದ ವರ್ಷಕ್ಕಿಂತ ರೂ 7,597 ಕಡಿಮೆ ಬೋರ್ಡಿನ ಒಟ್ಟು 1940–41ರ ವರ್ಷ ವೆಚ್ಚವು ರೂ 623803 ಕಳದ ವರ್ಷಕ್ಕಿಂತ ರೂ 38837 ಕಡಿಮೆ 1940–41ನೆಯ ವರ್ಷವು ರೂ. 49,550ರ ಉಳಿತಾಯದಿಂದ ಮುಕ್ತಾಯವಾಗಿದೆ ಹಿಂದಿನ ವರ್ಷದ ಉಳಿತಾಯ ರೂ. 17,890 ಮಾತ್ರ

1941–42ರ ಬಜೆಟು 1941 ಮಾರ್ಚಿಯಲ್ಲಿ ಸರಕಾರಕ್ಕೆ ಕಳುಹಿಸಿದಾಗ ರೂ 18,940ರಷ್ಟು ಸಾಮಾನ್ಯ ಲೆಕ್ಕದಲ್ಲಿಯೂ ರೂ. 11,070 ಮೂಲ ಧನ ಲೆಕ್ಕದಲ್ಲಿಯೂ ಕಡಿಮೆ ಆದಾಯ ಸೂಚಿಸಲಾಗಿತ್ತು ಸರಕಾರವು ತನ್ನ ಅರ್ಜಿಯನ್ನಲ್ಲಿ ಬೋರ್ಡು ಖರ್ಚನ್ನು ಕಡಿಮೆ ಮಾಡಲು ನೂಚನೆಕೊಟ್ಟಿತು ಅದೆಂದರೆ ಸೆಕೆಂಡರಿ ವಿದ್ಯಾಭ್ಯಾಸ ಖಾತೆಯಲ್ಲಿ ರೂ 5000 ಕಡಿತ, ಸಾರ್ವಜನಿಕ ಆರೋಗ್ಯ ಖಾತೆಯಲ್ಲಿ ರೂ 15,000 ಕಡಿತ ಉಳಿತಾಯದ ಸಲುವಾಗಿ ಒಜೆಟ್ ಕಮಿಟಿ ವಹಿಸಿದ ಸೂಚನೆಯಂತೆ ಬೋರ್ಡು ಪ್ರೆಸಿಡೆಂಟರ್ನ ಮೆಂಬರರ, ಆರೋಗ್ಯಖಾತೆಯ, ಭತ್ತೆ ಮೊದಲಾದ ಕಡಿತದಿಂದ ಆರ್ಥಿಕ ಸ್ಥಿತಿ ಸರಿಗೊಳಿಸಿತು

1941–42 ವರ್ಷಕ್ಕೆ ಒಟ್ಟು ವಾರ್ಷಿಕ ಆದಾಯ ರೂ 7,10,940 ಅದರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಮೂಲ ಧನ ಲೆಕ್ಕ ಪತ್ರದ ಪಟ್ಟಿಯ ಎಸ್ಟಿಮೇಜನ್ನು ಕಳದು ರೂ 6,64,360 ಉತ್ಪತ್ತಿ ಈ ವರ್ಷದ ಒಟ್ಟು ಖರ್ಚು ರೂ 6,94,040 ಆಂದಾಜುಮಾಡಿದ್ದೆ, ಇದರಲ್ಲಿ ಕಳದ ವರ್ಷಕ್ಕಿಂತ ರೂ. 28,210 ಜಾಸ್ತಿಗಿರುವುದು. ಇದು 1941 ಫೆಬ್ರವರಿಯಲ್ಲಿ ಆಗುವ ದಿ ಬ್ಲೋ ಚುನಾವಣೆ, ಮುಖ್ಯ ರಸ್ತೆ ಮೊದಲಾದವುಗಳ ಖರ್ಚು, ರೋಡ್ ರೊಲ್ಲರ್ ತೆಕ್ಕೊಳ್ಳೋಣ ಮೊದಲಾದವುಗಳಿಗಾಗಿ. ಇತರ ಭಾಗಗಳಲ್ಲಿ ಹಲವು ಕಡಿತ ಮಾಡಿದ್ದರೂ ಈ ವರ್ಷದ ಒಜೆಟು ರೂ. 10,120ರ ಕಡಿಮೆಯಿಂದ ಮುಕ್ತಾಯವಾಗಿದೆ.

1942–43ರ ಬಜೆಟ್ ಪಟ್ಟಿಯು ರೂ. 18,600ರ ಕಡಿಮೆಯಿಂದ ಮುಕ್ತಾಯವಾಗಲಿದೆ. 7,15,840, ಖರ್ಚು ರೂ 6,88,870 ಕಳದ ವರ್ಷಕ್ಕಿಂತ ಮಾರ್ಗ ಖಾತೆಯಲ್ಲಿ ರೂ. 5,200ರಷ್ಟು ಹೆಚ್ಚಿದೆ. ಸೆಕೆಂಡರಿ ಎಜುಕೇಶನ್ ಬಗ್ಗೆ 1942–43 ರೂ. 39,940ರ ಖರ್ಚು ರುಜು ಮಾಡಲಾಗಿದೆ. ಸಾರ್ವಜನಿಕ ಆರೋಗ್ಯಖಾತೆಯಲ್ಲಿ ಕಳದ ವರ್ಷಕ್ಕಿಂದ ರೂ. 3,730ರಷ್ಟು ಖರ್ಚು ಕಡಿಮೆಮಾಡಲಾಗಿದೆ.

ಬೋರ್ಡಿಗೆ ಒಪ್ಪಿಸಿರುವ ಪ್ರಾಥಮಿಕ ಶಾಲೆಗಳ ಸರಕಾರವು ಹುಂಚದ ಮೊದಲ ನಿಮಿತ್ತ ಕಿಟಲ್ ಎಜುಕೇಶನ್‌ಗೆ ರೂ. 1,78,890ರ ಆದಾಯ ಕಡಿಮೆಯಾಗಿದೆ.

(೬ನೇ ಪುಟದಿಂದ ಮುಂದುವರಿದುದು)

ಕೆನರಾಹೈಸ್ಕೂಲ್ ಸುವರ್ಣೋತ್ಸವ

ಇದು ತಾ. 26, 27, 30ರಂದು ಮೂರು ದಿನಜರಗಲಿದೆ. 26ರಂದು ಹಳೆ ವಿದ್ಯಾರ್ಥಿಗಳ ಕಲಾ ಕೌಶಲಾರಿಕ ಪ್ರದರ್ಶನವು ಕಾಶಿ ಮಠದ ಸ್ವಾಮಿಜಿಯವರ ಹಸ್ತದಿಂದ ನಿರವೇರುವುದು 27ರಂದು ಕೆನರಾ ಹೈಸ್ಕೂಲ್ ದಿನಾಚರಣೆಯೂ, ತಾ 30ರಂದು ಸುವರ್ಣ ಮಹೋತ್ಸವ ದಿನಾಚರಣೆಯೂ ಜರಗಲಿದೆ. ತಾ 30ರಂದು ಸ್ಥಳೀಕ ಬಾಲಮಾರುತಿ ವ್ಯಾಯಾಮ ಶಾಲಾ ವ್ಯಾಯಾಮಪ್ರದರ್ಶನವೂ ಇದೆ.

ಬೇಂಕಿನ ಸಭೆ

ಮಂಗಳೂರು ಟೌನ್ ಬೇಂಕಿನ 1940–41 ನೇ ವರ್ಷದ ಮಹಾ ಸಭೆಯು 1942ನೇ ಇಸ್ವಿ ಜನವರಿ ತಾ 4ರಂದು ಮಧ್ಯಾಹ್ನ 3ಕ್ಕೆ ಬೇಂಕಿನ ಆಫೀಸಿನಲ್ಲಿ ಕೂಡುವದರಿಂದ ಎಲ್ಲಾ ಮೆಂಬರರು ಬರುವಂತೆ ಅಪೇಕ್ಷಿಸೋಣಾಗಿದೆ

ಕಯ್ಯೂರು ಮೊಕದ್ದಮೆ ವಿಚಾರಣೆ

ಇದು ಸೆಶನ್ ಕೋರ್ಟಿನಲ್ಲಿ ತಾ 1 ರಿಂದ ನಡೆಯುತ್ತಿದೆ ೬ನೇ ಸಾಕ್ಷಿಯು, ಪೋಲೀಸ ಕಾನ್‌ಸ್ಟೇಬಲ್ ಸುಬ್ರಾಯನು ಕರ್ಷಕ ಸಂಘದವರಿಂದಹೊಡೆಯಲ್ಪಟ್ಟನೆಂದೂ ಮಡಿತ್ತಿಲ್ ಅಪ್ಪು ಎಂಬವನು ಹೊಡೆದದ್ದನ್ನು ತಾನು ಕಂಡೆನೆಂಬೂ ಹೇಳಿದನು 'ಮಡಿತ್ತಿಲ್ ಅಪ್ಪುವನ್ನು ನೀನು ಹೇಗೆ ಗುರುತಿಸಿದೆ?' ಎಂದು ಪ್ರಶ್ನಿಸಿದಾಗ, 'ಪೋಲೀಸರು ನನಗೆ ಅವನನ್ನು ತೋರಿಸಿಕೊಟ್ಟರು' ಎಂದು ಸಾಕ್ಷಿಯು ನುಡಿದನು. ೩ನೆಯ ಸಾಕ್ಷಿ ತಾನೊಬ್ಬ ಟೆಲ್ಲರಿ ವ್ಯಾಪಾರಿಯೆಂದೂ, ಜೊತೆ ವ್ಯಾಪಾರಿಯೊಬ್ಬ ನೊಡನೆ ಆದಿಕೆ ಬಾಳೆಗೊನೆ ವ್ಯಾಪಾರಕ್ಕೆ ಕಯ್ಯೂರು ಗ್ರಾಮಕ್ಕೆ ಹೋದಾಗ ಸುಬ್ರಾಯನ ಕೊಲೆಯಾದುದನ್ನೂ ಕಂಡುದಾಗಿಯೂ ಹೇಳಿದನು. ೨ನೆಯ ಸಾಕ್ಷಿ ಹೊಸ ದುರ್ಗ ಸಬ್ ಮೇಜಿಸ್ಟ್ರೇಟ್ ಕೋರ್ಟಿನ ಕ್ಲಾರ್ಕರೊಬ್ಬರು ಲೈಸನ್ಸ್ ಇಲ್ಲದೆ ಕಾಕಿ ಹೋಟೇಲು ನಡೆಸುತ್ತಿದ್ದ ಕುಂಞಂಬು ಕೋರ್ಟಿನಲ್ಲಿ ಹಾಜರಾಗಿದುದರಿಂದ ಫೆಬ್ರವರಿ 23ರಂದು ವಾರಂಟು ಕೊಟ್ಟು ದಾಗಿಯೂ ಸುಬ್ರಾಯನು ಆದನ್ನೊಯ್ದುದಾಗಿಯೂ ಹೇಳಿದರು. ೨ನೆಯ ಸಾಕ್ಷಿಯು, ೧ನೆಯ ಮತ್ತು ೩ನೆಯು ಅಪಾದಿತರು, (ಮಡತ್ತಿಲ್ ಅಪ್ಪು ಮತ್ತು ಅಪೋಕರೆ) ಸುಬ್ರಾಯನನ್ನು ಹೊಡೆದಿರುವುದನ್ನು ಕಂಡಿರುವೆನೆಂದನು.

ತಾ. 24ರ ಪ್ರಕಟಿಸಿ 44 ಸಾಕ್ಷಿಗಳ ವಿಚಾರಣೆಯಾಗಿದೆ. 42ನೆಯಸಾಕ್ಷಿಕೃಷ್ಣಸಾಯಿಸ್ಸನು ಅಪಾದಿತರನ್ನು ಕೋರ್ಟಿನಲ್ಲಿ ತೋರಿಸಿಕೊಡುವಾಗ್ಗೆ 39ನೇ ಅಪಾದಿತನೆಂದು 58ನೇ ಅಪಾದಿತನನ್ನು 1ನೇ ಅಪಾದಿತನ ಬದಲು 29ನೇ ಅಪಾದಿತನನ್ನೂ ತೋರಿಸಿದನು ಆದ್ದ ಸವಾಲಿನಲ್ಲಿ, 1ನೇ ಅಪಾದಿತನು 51ನೇ ಅಪಾದಿತರನ್ನು ನೋಡಿಮಾತ್ರ ಬಿಟ್ಟೆಸಿದ್ದಕ್ಕೆ ಅವರ ಪರವಕೀಲರು ಆಕ್ಷೇಪಣೆ ಎತ್ತಿದರು. ಆಗ ಸಾಕ್ಷಿಯು ಅಪಾದಿತರನ್ನು ಸರಿಯಾಗಿ ತೋರಿಸಿದನು. ಆಗ ಅಪಾದಿತರ ಪರವಕೀಲರು ಸಾಕ್ಷಿಯು ಅಪಾದಿತರನ್ನು ಸರಿಯಾಗಿ ತೋರಿಸಿದ್ದಾನೆಂದು ಒಪ್ಪಿಕೊಂಡರು. ಆದರೆ

ಸಿನೆಮಾ ಸುದ್ದಿ

ಕಾನನ್ ಮತ್ತು ಜಮುನಾ

ಇಂದ್ರ ಮೂವಿಟೋನ್ ಸ್ಟುಡಿಯೋದವರ ಸಲುವಾಗಿ ಬರುವಾರವರು ನಿರ್ದೇಶಿಸುವ ಹಿಂದುಸ್ತಾನೀ ಸಿನೆಮಾ 'ಜವಾಬ್' (ಇದಕ್ಕೆ ಬಂಗಾಳಿಯಲ್ಲಿ ಶೇಶ್-ಉತ್ತರ್ ಎಂಬ ಹೆಸರು) ಎಂಬುದು ಒಂದು ಸಾಮಾಜಿಕ ಚಿತ್ರ. ಬರುವಾರವರು ನ್ಯೂಥಿಯೇಟರ್ಸ್‌ನಿಂದ ಹೊರಗೆ ಕೆಗೆನ ಮೊಟ್ಟಮೊದಲನೆಯ ಚಿತ್ರವಿದು. ಮೂಲ ಕಥೆಗಾರರು ಶಶಧರ ದತ್ತರು.

ಒಬ್ಬ ಧನಿಕ-ವಿದ್ಯಾವಂತ ತರುಣ, ಆಡಾಗ ತನ್ನ ಸುತ್ತಮುತ್ತಲಿನ ಪರಿಸ್ಥಿತಿಗಳನ್ನು ಮರೆತು ಬಿಡುತ್ತಾನೆ. ಈತನು ಒಮ್ಮೆ ದಾಂತಪ್ಪ ಸ್ಟೇಶನ್ನೊಂದರಲ್ಲಿ ಒಂದು ಹುಡುಗಿಯನ್ನು ಕಂಡನು. ಆ ಹುಡುಗಿಯೇ ಕಾನನ್‌ಬಾಲಾ. ಧನಿಕ—ವಿದ್ಯಾವಂತನ ಪಾತ್ರವನ್ನು ಬರುವಾ ವಹಿಸುತ್ತಾರೆ. ಈ ಕತೆಯಲ್ಲಿ ಇನ್ನೊಬ್ಬ ಹುಡುಗಿಯ ಪಾತ್ರವನ್ನು ಜಮುನಾ ವಹಿಸುವಳು.

'ನೆಯತಾರಣ' ನವಯುಗ ಚಿತ್ರ

ವಿನಾಯಕರಿಂದ ನಿರ್ದೇಶಿಸಲ್ಪಡುವ ನವಯುಗ ಚಿತ್ರಪಟದವರ ಮುಂದಿನ ಸಿನೆಮಾ 'ನ ಯ ತಾ ರ ಣ' ಎಂಬುದರ ಕಥೆಯನ್ನು ಬರೆದವರು ಪ್ರಸಿದ್ಧ ಸಿನೆಮಾ ಕಥಾಲೇಖಕರಾದ ಅಹಮ್ಮದ್ ಅಬ್ಬಾಸ್ ಇವರು.

ನರ್ತಕಿಯನ್ನು ಕದ್ದೊಯ್ದರು

ಹೈದರಾಬಾದಿನಲ್ಲಿ, ವರ್ಸಿಯನ್ ಪಾರ್ಕಿನಲ್ಲಿ ನರ್ತನ ಮಾಡುತಿದ್ದ, ಬೊಂಬಯಿಯ ಕಮ್ಲಾಕುಮಾರಿ ಎಂಬ ನರ್ತಕಿಯನ್ನು ಯಾರೋ ಧೂರ್ತರು ಸೊತ್ತಿಲ್ಲದ ಸ್ಥಳಕ್ಕೆ ಕದ್ದೊಯ್ದಿರುವರಾಗಿ ಈಗ ಪೋಲೀಸರು ಪತ್ತೆ ಹಚ್ಚುತ್ತಿದ್ದಾರೆ. ಕಮಲಾ ಕುಮಾರಿ ತನ್ನ ಮೊದಲಿನ ನರ್ತನ ಮುಗಿಸಿ ಮುಂದಿನ ನರ್ತನದ ಆರಂಭದ ಮಧ್ಯಕಾಲದಲ್ಲಿ ವಿಶ್ರಾಂತಿ ತೆಗೆದು ಕೊಳ್ಳುತ್ತಿದ್ದಾಗ, ಧೂರ್ತರು ಯಾರೋ, ಯಾವುದೋ ನೂಯಾಜಾಲದಿಂದ ಕದ್ದೊಯ್ದರೆಂದು ಹೇಳಲಾಗಿದೆ.

ದಿವಂಗತಾ ಗಂಗೂಬಾಯಿ ಗುಳೇದಗುದ್ದ

ಮೊನ್ನೆ ಮೊನ್ನೆ ನಮ್ಮ ಊರ ಚಿತ್ರ ಮಂದಿರದಲ್ಲಿ ಪ್ರದರ್ಶಿತವಾದ ಸುಭದ್ರಾ ಕನ್ನಡ ಚಿತ್ರದಲ್ಲಿ ರುಕ್ಮಿಣಿ ಪಾತ್ರವಹಿಸಿ ನಟಿಸಿದ ಗಾನರತ್ನ ಗಂಗೂಬಾಯಿ ಗುಳೇದಗುದ್ದ—ಈಕೆಯ ಹೆಸರನ್ನು ಕಲಾಪ್ರೇಮಿಗಳು ಮರೆತಿರಲು ಸಾಧ್ಯವಿಲ್ಲ. ಆಕ ತಾ. ೧೦-೧೨-೪೧ನೆಯ ದಿನ ಬೆಂಗೇರಿಯಲ್ಲಿ ದಿವಂಗತೆಯಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರು ೧೯೧೫ರಿಂದ ೧೯೩೭ರ ವರೆಗೆ ವಾಮನ ರಾವ್ ಮಾಸ್ತರರ ನಾಟಕ ಕಂಪೆನಿಯಲ್ಲಿ ಮುಖ್ಯ ನಟಿಯಾಗಿದ್ದು ಪ್ರಸಿದ್ಧಿ ಪಡೆದಿದ್ದರು. ಸಂಗೀತ ಸುಧಾ ಕರ್ನಾಟಕ ಕೋಕಿಲಾ ಮುಂತಾದ ಬಿರುದುಗಳನ್ನು ಪಡೆದಿದ್ದರು. ಶ್ರೀ ಕೃಷ್ಣ ನಾಟಕ ಕಂಪೆನಿಯಲ್ಲಿ ಕೆಲಕಾಲ ನಟಿಸಿದ್ದರು. ಕನ್ನಡ ನಾಡಿನ ಒಬ್ಬ ಉತ್ತಮ ನಟಿ ಮತ್ತು ಹಾಡುಗಾರ್ತಿಯಾಗಿ ಹೆಸರಾಗಿದ್ದರು. ಗುಬ್ಬಿ ಬಾಲಾಜಿ ಕಂಪೆನಿಯ ಸುಭದ್ರಾ ಚಿತ್ರದಲ್ಲಿ ರುಕ್ಮಿಣಿ ಪಾತ್ರವಹಿಸಿ ನಟಿಸಿದುದೇ ಅವರ ಕೊನೆಯ ನಟನೆಯಾಯಿತು. ಅವರ ನಿಧನದಿಂದ ಕರ್ನಾಟಕದ ರಂಗಭೂಮಿಗೆ, ಲಲಿತಕಲೆಗೆ ಅಪಾರ ನಷ್ಟವಾಗಿದೆ. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯಿಯಲಿ!

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮುಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನು-(Cuticura Toilet Medicaetd Soap) ಹೆಚ್ಚಿನ ಮನ್ನೆಣೆಯ ಸಂರಕ್ಷಣೆಯ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಆದರೆ ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣವಿದೆ. ಇಂಥ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಮೈಯನ್ನು ಕಂವಾಗಿರಿಸುರಿಸುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powd)ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್
CUTICURA SOAP

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ತೆಗೆದುಕೊಳ್ಳಿರಿ
ಎಂದು ನಂಬಿಗೆಯಿಂದ ಹೇಳಿಬರುವ
ದಮ್ಮಿಗೆ ಬಂದೇಬಂದು ಉಪಾಯ



ದಮ್ಮು ಒನ್ನೆಲೇ ನೆಟ್ಟಗಾಗಬೇಕು ಎಂಬ ಆಶೆಯಿಂದ ಅನೇಕರು ಕ್ಷಣಿಕಗುಣಕೊಡುವ ಔಷಧ ತೆಗೆದುಕೊಂಡು ಸತ್ತು ಹೋಗಿದ್ದಾರೆ. ಪುರೋಹಿತ ಶ್ವಾಸಹಾರೀಯು ಇಂಥದಲ್ಲ; ಆದರೆ ದಮ್ಮನ್ನು ಒಂದೆರಡು ದಿನ ನೊಂದಿಸದೆ ಮೆಲ್ಲಮೆಲ್ಲಗೆ ಸ್ವಮೂಲವಾಗಿ ಗುಣವಾಗುವ ಉತ್ಕೃಷ್ಟಶಾಸ್ತ್ರೀಯ ಉಪಾಯವು ಅದನ್ನು ತೆಗೆದುಕೊಳ್ಳಲು ಆರಂಭಿಸಿದ ಕೂಡಲೇ ದಮ್ಮು ಹೋಗುವುದು, ತೇಕು ಕಡಿಮೆಯಾಗುವುದು, ಶಾಂತಿಯ ತೊಂದರೆ ಉಳಿಯುವುದಿಲ್ಲ. ಪಚನಕ್ರಿಯೆಯು ತಿದ್ದುವುದು, ಸಾವಕಾಶವಾಗಿ ಶಕ್ತಿ ಹೆಚ್ಚಾಗಿ ಪುಷ್ಟಿಸ ಗಟ್ಟಮುಟ್ಟಾಗಿ ಕೊನೆಗೆ ದಮ್ಮು ಪೂರ್ಣವಾಗಿ ಗುಣವಾಗುವುದು.

ದಮ್ಮು, ತೇಕು, ಛೇಕಾಗೆ ಗಂಟಲು ಉರಿಯುವಂಥದು ಮತ್ತೂ ಪುಪ್ಪುಸದ ಎಲ್ಲಾ ವಿಕಾರಗಳಿಗೆ ಪುರೋಹಿತ ಶ್ವಾಸಹಾರಿ ಫ್ಲೂಡ್ (ನೀಲಿ ಸ್ಟಾಪರಿಂಗ್) ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತೂ ಅಮ್ಲಪಿತ್ತ ಹೆಚ್ಚಾಗಿ ದಮ್ಮು ಹತ್ತಿದವರು ಶ್ವಾಸಹಾರಿ ಕಂಪೌಂಡ್ (ಕೆಂಪು ಸ್ಟಾಪರಿಂಗ್) ತೆಗೆದುಕೊಂಡರೆ ಹೆಚ್ಚು ಗುಣ. ರೂ. ೨-೬; ರೂ. ೪-೭ ಕಿಮ್ಮತ್ತಿನಲ್ಲಿ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಕಡೆ ಸಿಗುವವು. ತರಿಸಿಕೊಳ್ಳುವ ವಿಳಾಸ:—

- ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ.

ಇಲ್ಲವೇ—ಮೆ॥ ವನಮಾಳೀ-ಭೀಮಾ ಮತ್ತು-ಕಂ., ಪ್ರಿನ್ಸೆಸ್‌ಸ್ಟ್ರೀಟ್, ಮುಂಬಯಿ.

ಪುರೋಹಿತ ಶ್ವಾಸಹಾರಿ

ವಿಚಿತ್ರ ಪ್ರಪಂಚ

ಕುರುಡರ ಷಷ್ಠೇಂದ್ರಿಯ

ಕುರುಡರಿಗೆ ತಮ್ಮ ಸುತ್ತಮುತ್ತಲಿನ ಅಸಾಮಾನ್ಯ ಪರಿಸ್ಥಿತಿಯನ್ನು ತಿಳಿದು ಕೊಳ್ಳುವರೆ ಒಂದು ಹೊಸ ಇಂದ್ರಿಯವಿರುವುದಾಗಿ ಇತ್ತೀಚೆಗೆ ಸಂಶೋಧಕರು ಹೇಳುತ್ತಾರೆ. ಅವರ ಕಿವಿಗೆ ಸಾಮಾನ್ಯವಲ್ಲದ ಒಂದು ಶಕ್ತಿಯಿದೆ, ಅವರು ಅದರ ಮೂಲಕ ಸುತ್ತಮುತ್ತಲಿನ ವಸ್ತುಗಳ ಅನುಭವ ಮಾಡಿಕೊಳ್ಳುವರು. ಅದು 'ಷಷ್ಠೇಂದ್ರಿಯ'ದ ಮೂಲಕ ಎಂದು ಹೇಳಬಹುದಾಗಿದೆ. ಈ ಇಂದ್ರಿಯ ಕುರುಡರಿಗಲ್ಲದೆ ಇತರರಿಗೆ ಇಲ್ಲ. ತಮ್ಮ ಮುಂದಿರುವ ಗೋಡೆ ಮೊದಲಾದ ತಡೆಗಳನ್ನು ಅವರು ಈ 'ವಿಶೇಷ' ಶಕ್ತಿಯ ಮೂಲಕ ಕಂಡುಕೊಳ್ಳುತ್ತಾರಂತೆ!

ನ್ಯೂಯಾರ್ಕನ್ನು ೬ ಪವನಿಗೆ ಪಡಕೊಂಡದ್ದು

೩೦೦ ವರ್ಷಗಳ ಹಿಂದೆ, ನ್ಯೂಯಾರ್ಕ್ ನಗರವನ್ನು, ಸುಮಾರು ಮೂವತ್ತು ಮೈಲು ಒಂದುವರೆ ಮೈಲು ವಿಸ್ತಾರದ ಪ್ರದೇಶವನ್ನು ಇರಾಕಿನ ಮುಖ್ಯಸ್ಥನಿಂದ ಕೇವಲ ಆರು ಪವನು ಬೆಲೆಗೆ ಪಡಕೊಂಡರಂತೆ. ಇಂದಿಗೆ ಅದರ ಕ್ರಯ ಎಕ್ಕೆಗೆ ೨೫೦,೦೦೦ ಪವನುಗಳು! ಆ ದಿನಗಳಲ್ಲಿ ಅಲ್ಲಿ ಕೆಲವು ಸಣ್ಣ ಗುಡಿಸಲುಗಳು ಮಾತ್ರವಿದ್ದು, ಮೈಲುಗಟ್ಟಲೆ ಸ್ಥಳಗಳು ಬೇಟೆಯಾಡುವ ಗುಡ್ಡಗಳಾಗಿದ್ದುವು ನ್ಯೂಯಾರ್ಕ್ ನಗರವು ಕೇವಲ ಇತ್ತೀಚೆಗೆ ಅಷ್ಟೊಂದು ಜನವಸತಿಯ ಪ್ರಸಿದ್ಧ ನಗರವಾಯಿತು

೫೪ ಸಲ ಮದುವೆಯಾದವಳು

೮೦ ವರ್ಷ ವ್ಯಾಯದಲ್ಲಿ ಲಂಡನಿನಲ್ಲಿ ಇತ್ತೀಚೆಗೆ ಸತ್ತುಹೋದ ಸಾರಾಹಿಸೋನಳ ಕಥೆಯಿದು. ಆಕೆಯ ಕೋಷ್ಠಿಯಲ್ಲಿ ೫೪ ಸಲ ಮದುವೆ ಗಮನಗಳು ಪ್ರತಿಯೊಂದು ಗವನಿಗೆ ಒಂದೊಂದು ಪ್ರೇಮಿಯು ಪಟ ತೂಗಾಡಿಸಿಕೊಂಡ ಸಾಲಾಗಿ ಇಡಲ್ಪಟ್ಟಿದ್ದುವಂತೆ. ಆಕೆ ಒಬ್ಬಾತನನ್ನು ಅತಿಯಾಗಿ ಪ್ರೇಮಿಸಿದ್ದಳು. ಆತನು ತನ್ನ ಪ್ರೇಮಭಂಗ ಮಾಡಲು ಮತ್ತೆ ಆಕೆ ಪುರುಷ ಜಾತಿಯ ಮೇಲೆಯೇ ಪ್ರತೀಕಾರಕ್ಕಾಗಿ ವಿವಾಹಕ್ಕೆ ತೊಡಗಿದಳಂತೆ. ಆಕೆ ಪ್ರತಿಯೊಂದು ಸಲವೂ ವಿವಾಹ ಸಿದ್ಧಳಾಗಿ ಪ್ರೇಮಿಯನ್ನು ಬರುವಂತೆ ಮಾಡುತಳು. ವಿವಾಹ ಮಂಟಪಕ್ಕೆ ಆತನು ಬಂದುಸಿದ್ಧನಾಗಿದ್ದರೆ ಆಕೆ ಬರಲಾತಳು. ಆ ಪ್ರೇಮಿಯು ಅವಳ ವಿರಹದಿಂದ ನರಳಿ ಮತ್ತೆ ಇದೇ ಜೀವನದಲ್ಲಿ ಅಸುಖಿಯಾಗುವನು. ಆಕೆಗೆ ರೂಪ ಸೌಂದರ್ಯ ಲಾವಣ್ಯಗಳಿದ್ದುದರಿಂದ ಅನೇಕ ಮಂದಿ ವೀರಾಹಿ ಹೀಗೆ ನುರಿಯಾದರು. ಮೊದಲೊಬ್ಬ ಗಂಡನು ಆಕೆಯ ಪ್ರೇಮವನ್ನು ಭಗ್ನ ಮಾಡಿದನೆಂದು ಮತೆ ಆಕೆ ಪುರುಷಜಾತಿಯ ಮೇಲೆಯೇ ಪ್ರತೀಕಾರಕ್ಕಾಗಿ ಮದುವೆಯ ಆಟ ಆಡುತ್ತಿದ್ದಳಂತೆ.

ವಿಜ್ಞಾನಯುಗ

ಬೊಂಬು ತಡೆವ ಕೊಡೆ

ವಿದ್ಯುತ್ ಕಾಲುವೆಯನ್ನು ಕಾಪಾಡುವ ಸಲುವಾಗಿ, ಒಬ್ಬ ವಿಜ್ಞಾನಿಯು ಬೊಂಬು ನೃತಿಲಂಘಿಸುವ ಕೊಡೆಯೊಂದನ್ನು ಕಂಡು ಹುಡುಕಿರುತ್ತಾನೆ. ಈ ಕೊಡೆಯು ಉಕ್ಕಿನ ತಂತಿಗಳಿಂದ ಕೂಡಿರುತ್ತದೆ. ೧೫೦ ಫೀಟು ಮೇಲ್ಗಡೆಯಲ್ಲಿ ಉಕ್ಕಿನ ಟವರಿನಲ್ಲಿ ಕೊಡೆ ಬಿಡಿಸಲಾಗುತ್ತದೆ. ಅದು ಟವರಿನ ಮೇಲೆ ೫೦೦ ಫೀಟು ಸುತ್ತುಮುತ್ತಲಿನ ಪ್ರದೇಶದಲ್ಲಿ ಅತ್ಯಂತ ತೀವ್ರ ವೇಗದಿಂದ ಚಲಿಸುತ್ತಾ ಇರುವುದು. ಈ ಪ್ರದೇಶದಲ್ಲಿ ಬಿದ್ದ ಬಾಂಬುಗಳು ಕೆಳಗೆ ಬೀಳದೆ ಈ ಕೊಡೆಯ ಮೇಲ್ಗಡೆಯಿಂದಲೇ ಹತ್ತಾರು ದೂರ ಸಿಡಿವುವು ಹಾಗಾಗಿ ಅದರೊಳಗಿನ ಪ್ರದೇಶಕ್ಕೆ ಬಾಂಬಿನ ಹೊಡೆತದ ಭಯವಿರುವುದಿಲ್ಲ.

ಮರಮೆನ್ನು ಆಹಾರವಾಗಿ ಉಪಯೋಗಿಸಲು

ಒಬ್ಬ ವಿಜ್ಞಾನಿಯು ಈಗ ಹೊಸ ಕೊಂದು ಯಂತ್ರವನ್ನು ತಯಾರಿಸಿದ್ದಾನೆ. ಡಾ। ಬ್ಲೆಗಿಟ್ಸ್ ಎಂಬ ಜರ್ಮನಿಯ ಕೆಮಿಸ್ಟನು ಮರವನ್ನು ಕರಗಿಸಿ, ಮನುಷ್ಯನ ಆಹಾರದ ಪಾಕಕ್ಕೆ ಒದಗಿಸುವ ಒಂದು ಯಾಂತ್ರಿಕ ಹೊಟ್ಟೆಯನ್ನು ನಿರ್ಮಿಸಿರುತ್ತಾನೆ. ಮರದ ತುಂಡನ್ನು ಈ ಯಂತ್ರದ ಹೊಟ್ಟೆಯಲ್ಲಿ ಕೊಟ್ಟರೆ ಅದು ತಕ್ಕಷ್ಟು ಬಿಳಿಯಷ್ಟು ಗುಣವುಳ್ಳ ಆಹಾರ ವಸ್ತುವನ್ನು ಹೊರಗೆಹಾಕುವುದಂತೆ. ಈ ಪ್ರಯೋಗದಿಂದ ವಸ್ತುಗಳನ್ನು ತಯಾರಿಸಲು ಈಗಾಗಲೇ 'ಮೆಟ್ಟಿಮ್' ನಲ್ಲಿ 'ವರ್ಕ್ ಶಾಪು' ಇಡಲಾಗಿದೆಯೆಂದೂ ತಿಳಿಯುತ್ತದೆ.

HALFTONE & LINE
BLOCK MAKING
UNDERTAKEN
Sharada Press.
MANGALORE


ಯೋಧನೇ ಜಯಶೀಲನಾಗು
ಬಂದಕ್ಕೆ ರೂ. ೧೦/-
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್
೪/೯/- ಲಾಭ ಕೊಡ್ಡುತ್ತೆ
ಪೋಸ್ಟ್ ಆಫೀಸ್ ನಲ್ಲಿ ವಿವರಗಳನ್ನು ತಿಳಿಯಿರಿ
ಕೊಳ್ಳಿರಿ
ಹೌದು, ಪುಟ್ಟ ಹುಡುಗನೇ, ಈ ವೀರಯೋಧನು ರತ್ನವಿನ್ನೊಂದಿಗೆ ಕಾದಾಡಲು ಹೊರಟಿದ್ದಾನೆ ಮತ್ತು, ನೀನು ಸುಖವಾಗಿರುವಂತೆ ಇಂಡಿಯಾವನ್ನು ರಕ್ಷಿಸುತ್ತಾನೆ ಯೋಧನಾಗಲು ನೀನು ತೀರಾ ಚಿಕ್ಕವನಿರುವೆ, ಆದರೆ ನೀನು ನುತ್ತು ನಿನ್ನ ತಂದೆ ಮತ್ತು ತಾಯಿ, ನಿನ್ನೋದರರು ಮತ್ತು ಸಹೋದರಿಯರು ನಿನ್ನ ಆಜ್ಞೆಗಳನ್ನು ಕೂಡಿಟ್ಟು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಮತ್ತು ಸರ್ಟಿಫಿಕೇಟ್‌ಗಳನ್ನು ಕೊಂಡುಕೊಂಡು ಇಂಡಿಯಾ ಬಲಗೊಳ್ಳಲು ಸಹಾಯಕರಾಗಬಹುದು
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು
GI-49 Kn

BHUVANENDRA PRODUCTS LTD.,

Head Office and Factory:
KATAPADI S Kanara

Depots:
1 Maharatha Galli, Hubli
2. 57 Big street, Triplicane, Madras

"BHUVANENDRA"

Danthadavan Choorna

Economical in use. Cheapest in value Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

– ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಆಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು –
ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್ ಲಿಮಿಟೆಡ್, ಕದ್ರಿ.
ರಾಘವೇಂದ್ರ ರಂಗಸ್ವೈ, ಮರ್ಚಂಟ್, ಪದುಬಿದ್ರಿ
ಡಾ। ಎಮ್. ಎಸ್. ಪ್ರಭು, M B B S D P H (Lond.)

THE PIE-MONEY BANK, LTD.
Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs 5000 on regularly on systematic lines Unique Banking facilities to Businessmen and interested Public

Apply for particulars –

K. R. GURU, *Managing Director*

The Bank of Mangalore Limited.

Branches —MOODABIDRI & PADUBIDRI

HEAD OFFICE MANGALORE ESTD 1931

All kinds of Banking Business transacted.

Fixed Deposits received at rates ranging from 3 to 5%.

INTEREST PAYABLE QUARTERLY

Interest on Savings Bank Deposits allowed at at 2½

THE

Combined Booking Agency, Mangalore.

Our Present Timing Lists

ARE

Available for sale

Price 0–2–0 per Copy

For Particulars Apply to:–

THE JOINT MANAGERS,

The Combined Booking Agency, Mangalore.

Regd. No. M 3460

ಸ್ವದೇಶಾಭಿಮಾನಿ

[ಸಂಪುಟ 35] ತಾರೀಖು 26—12—1941 [ಸಂಚಿಕೆ 52]

(Regd)

ಅಮೃತಾಂಜನ

ತಲೆನೋವು, ತಿರೋನೋವು, ಉಳುಕು, ಉತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಕಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಚಜ್ಜಿ, ಹುಳುಕಡ್ಡಿ, ವಿಕೃತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ತ್ರಿಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

CONFIDENCE

IS A GREAT ASSET IN BUILDING BUSINESS.

The Bombay Life Assurance Co. Ltd.

Has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India Including Indian States

UDIPI,——MANGALORE,——CALICUT——MADRAS,
TRIVANDRUM,——BANGALORE City,——and BOMBAY 4.

ಇಂದು ನೀವು ಯಾರಿಗೂ ಏನೂ ಕೊಡದಿದ್ದರೂ
ಉಡುಗೊರೆಗಳನ್ನು ಪಡೆಯುವವರು ಯಾರೂ ಇರುವುದಿಲ್ಲ

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!